ವಿಶ್ವವಾಣಿ
ವಿಶ್ವಾಸವೇ ವಿಶ್ವ

ಸುಪ್ರೀಂ ಕೋರ್ಟ್‌ನ ಮಾಜಿ ನ್ಯಾಯಮೂರ್ತಿ **ಬಿ.ಸುದರ್ಶನ್ ರೆಡ್ಡಿ** ಅವರು ಸೆಪ್ಟೆಂಬರ್ 9ರಂದು ನಡೆಯಲಿರುವ ಉಪರಾಷ್ಟ್ರಪತಿ ಚುನಾವಣೆಗೆ ಇಂಡಿಯಾ ಬಣದ ನಾಮನಿರ್ದೇಶಿತ ಅಭ್ಯರ್ಥಿಯಾಗಿ ಗುರುವಾರ ನಾಮಪತ್ರ ಸಲ್ಲಿಸಿದರು. ಕಾಂಗ್ರೆಸ್ ನಾಯಕರಾದ ಸೋನಿಯಾ ಗಾಂಧಿ, ರಾಹುಲ್ ಗಾಂಧಿ, ಮಲ್ಲಿಕಾರ್ಜುನ ಖರ್ಗೆ, ಎನ್‌ಸಿಪಿ ನಾಯಕ ಶರದ್ ಪವಾರ್ ಮತ್ತಿತರರು ಹಾಜರಿದ್ದರು.

ಬಿಜೆಪಿ ನಾಯಕ ಬಿ.ಎಲ್.ಸಂತೋಷ್ ಅವಹೇಳನ ಪ್ರಕರಣ
ಉಜಿರೆ, ಬ್ರಹ್ಮಾವರದಲ್ಲಿ ಹೈಡ್ರಾಮ | ಸಮೀರ್‌ಗೆ ಜಾಮೀನು

ತಿಮರೋಡಿ ಸೆರೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು/ಮಂಗಳೂರು

ಬಿಜೆಪಿ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಬಿ.ಎಲ್ ಸಂತೋಷ್ ವಿರುದ್ಧ ಅವಹೇಳನಕಾರಿ ಹೇಳಿಕೆ ನೀಡಿದ ಆರೋಪದ ಮೇಲೆ ಸಾಮಾಜಿಕ ಕಾರ್ಯಕರ್ತ ಮಹೇಶ್ ಶೆಟ್ಟಿ ತಿಮರೋಡಿ ಅವರನ್ನು ಬ್ರಹ್ಮಾವರ ಪೊಲೀಸರು ಬಂಧಿಸಿದ್ದಾರೆ. ಇನ್ನೊಂದೆಡೆ ಧರ್ಮಸ್ಥಳ ಪೊಲೀಸರು ಯೂಟ್ಯೂಬರ್ ಸಮೀರ್ ಎಂ.ಡಿ ಬಂಧನಕ್ಕೆ ಬಲೆ ಬೀಸಿದ ಬೆನ್ನಲ್ಲೇ ಮಂಗಳೂರಿನ ನ್ಯಾಯಾಲಯ ನಿರೀಕ್ಷಣಾ ಜಾಮೀನು ಮಂಜೂರು ಮಾಡುವ ಮೂಲಕ ತಾತ್ಕಾಲಿಕ ರಿಲೀಫ್ ನೀಡಿದೆ.

ಫೇಸ್‌ಬುಕ್‌ನಲ್ಲಿ ವಿಡಿಯೋವೊಂದನ್ನು ಹಂಚಿಕೊಂಡಿದ್ದ ತಿಮರೋಡಿ ಬಿ.ಎಲ್ ಸಂತೋಷ್ ಅವರನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿದ್ದರು. ಈ ಕುರಿತು ರಾಜೀವ್ ಕುಲಾಲ್ ಅವರು ನೀಡಿದ ದೂರಿನ ಮೇರೆಗೆ ಬ್ರಹ್ಮಾವರ ಠಾಣೆಯಲ್ಲಿ ಭಾರತೀಯ ಕಾನೂನು ಸಂಹಿತೆಯ ಬಿಎನ್‌ಎಸ್ ಸೆಕ್ಷನ್ 196(1), 352, ಮತ್ತು 353(2) ಅಡಿಯಲ್ಲಿ ಪ್ರಕರಣ ದಾಖಲಾಗಿತ್ತು.

ಬೆಳ್ತಂಗಡಿ ಠಾಣೆಗೆ ಪತ್ರ ಬರೆದ ಸಮೀರ್

ಇದೇ ವೇಳೆ ಧರ್ಮಸ್ಥಳದಲ್ಲಿ ದಾಖಲಾದ ಪ್ರಕರಣಕ್ಕೆ ಸಂಬಂಧಿಸಿ ಯೂಟ್ಯೂಬರ್ ಸಮೀರ್ ಬೆಳ್ತಂಗಡಿ ಸರ್ಕಲ್ ಇನ್‌ಸ್ಪೆಕ್ಟರ್‌ಗೆ ಪತ್ರ ಬರೆದಿದ್ದು, ಒಂದು ವೇಳೆ ನನಗೆ ರಕ್ಷಣೆ ನೀಡಿದರೆ ಧರ್ಮಸ್ಥಳ ಪೊಲೀಸ್ ಠಾಣೆಗೆ ಬಂದು ವಿಚಾರಣೆಗೆ ಸಹಕರಿಸುತ್ತೇನೆ. 15 ದಿನಗಳ ಕಾಲಾವಕಾಶದ ಒಳಗಡೆ ನಿಮ್ಮ ಮುಂದೆ ಹಾಜರಾಗುತ್ತೇನೆ. ದಯವಿಟ್ಟು ನನಗೆ ರಕ್ಷಣೆ ನೀಡಿ ಎಂದು ಬರೆದಿದ್ದಾನೆ.

ಉಡುಪಿ ಎಎಸ್ಪಿ ಸುಧಾಕರ್ ನಾಯಕ್ ನೇತೃತ್ವದ ಪೊಲೀಸ್ ತಂಡ ಮಹೇಶ್ ಶೆಟ್ಟಿ ತಿಮರೋಡಿ ಅವರನ್ನು ಉಜಿರೆಯ ನಿವಾಸದಲ್ಲೇ ಗುರುವಾರ ಬೆಳಗ್ಗೆ ವಶಕ್ಕೆ ಪಡೆಯಿತು. 8 ವಾಹನಗಳಲ್ಲಿ ತಿಮರೋಡಿ ನಿವಾಸಕ್ಕೆ ತೆರಳಿದ್ದ ಸುಮಾರು 30 ಪೊಲೀಸರ ತಂಡ ತಿಮರೋಡಿ ಅವರನ್ನು ಬಂಧನಕ್ಕೆ ತೆರಳಿದಾಗ ನೂರಾರು ಬೆಂಬಲಿಗರು ಏನೇ ವಿಚಾರಣೆ ಇದ್ದರೂ ಇಲ್ಲೇ ನಡೆಸಿ ಎಂದು ಪಟ್ಟು ಹಿಡಿದರು. ಜಸ್ಟೀಸ್ ಫಾರ್ ಸೌಜನ್ಯ ಎಂದು ಘೋಷಣೆ ಕೂಗಿದರು. ಗಿರೀಶ್ ಮಟ್ಟಣ್ಣನವರ್ ಕೂಡ ಕಾರಣ ಕೇಳಿ ಪೊಲೀಸರೊಂದಿಗೆ ವಾಗ್ವಾದ ನಡೆಸಿದರು. → 4

ಬುರುಡೆ ರಹಸ್ಯ

ನಾಳೆ ಜಾಮೀನು ವಿಚಾರಣೆ

ತಿಮರೋಡಿಯವರ ಮಧ್ಯಂತರ ಜಾಮೀನು ಅರ್ಜಿಯನ್ನು ಹೆಚ್ಚುವರಿ ಸಿವಿಲ್ ನ್ಯಾಯಾಲಯದ ನ್ಯಾಯಾಧೀಶ ನಾಗೇಶ್ ಎನ್. ಎ. ತಿರಸ್ಕರಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದರು. ಮುಂದಿನ ವಿಚಾರಣೆಯನ್ನು ಸೆ.23ಕ್ಕೆ ನಿಗದಿಪಡಿಸಿದರು. ಕೋರ್ಟ್‌ನಿಂದ ಮಹೇಶ್ ಶೆಟ್ಟಿ ಹೊರಬರುತ್ತಿದ್ದಂತೆ ಸಾವಿರಾರು ಬೆಂಬಲಿಗರು ಜೈಕಾರ ಹಾಕಿದರು. ಬ್ರಹ್ಮಾವರ ಬಸ್ ನಿಲ್ದಾಣದಲ್ಲಿ ಗುಂಪು ಸೇರಿದ ಧರ್ಮಸ್ಥಳ ಭಕ್ತರು ತಿಮರೋಡಿ ವಿರುದ್ಧ ಧಿಕ್ಕಾರ ಕೂಗಿದರು.

ಮೂವರು ಬೆಂಬಲಿಗರ ಬಂಧನ

ಉಡುಪಿ: ಮಹೇಶ್ ಶೆಟ್ಟಿ ತಿಮರೋಡಿಯನ್ನು ಬಂಧಿಸಿ ಕರೆದುಕೊಂಡು ಹೋಗುತ್ತಿದ್ದ ವೇಳೆ ಎಎಸ್ಪಿ ಕಾರಿಗೆ ಹಿಂದಿನಿಂದ ಗುದ್ದಿ ಕರ್ತವ್ಯಕ್ಕೆ ಅಡ್ಡಿಪಡಿಸಿದ ಆರೋಪದಲ್ಲಿ ತಿಮರೋಡಿಯ ಮೂವರು ಬೆಂಬಲಿಗರನ್ನು ಬಂಧಿಸಲಾಗಿದೆ. ಕಾರಿನಲ್ಲಿದ್ದ ಸೃಜನ್, ಹಿತೇಶ್ ಹಾಗೂ ಸಹನ್‌ನನ್ನು ಪೊಲೀಸರು ಬಂಧಿಸಿದ್ದಾರೆ.

ಬೆಂಗಳೂರಲ್ಲಿ ಎಡ ಚಿಂತಕರ ಸಭೆ

ಧರ್ಮಸ್ಥಳ ಪ್ರಕರಣದಲ್ಲಿ ದಿನದಿಂದ ದಿನಕ್ಕೆ ವೀರೇಂದ್ರ ಹೆಗ್ಗಡೆ ಪರವಾಗಿ ಘಟನಾವಳಿ ನಡೆಯುತ್ತಿರುವ ಬೆನ್ನಲ್ಲೇ ಬೆಂಗಳೂರಿನಲ್ಲಿ ಎಡಪಂಥೀಯ ಸಾಹಿತಿಗಳು, ಚಿಂತಕರು ಸಭೆ ಸೇರಿ ಮುಂದಿನ ಹೋರಾಟ ಸಂಬಂಧ ಚರ್ಚಿಸಿದ್ದಾರೆ. ಚಿಂತಕರಾದ ಶಿವಶಂಕರ್, ಹಿಂದುಳಿದ ವರ್ಗಗಳ ಆಯೋಗದ ಮಾಜಿ ಅಧ್ಯಕ್ಷ ಸಿ.ಎಸ್. ದ್ವಾರಕನಾಥ್, ನಟ ಚೇತನ್ ಅಹಿಂಸಾ ಮತ್ತಿತರರು ಭಾಗಿಯಾಗಿದ್ದರು.

ಒಂದು ವಾರ ರಾಜ್ಯವ್ಯಾಪಿ ಧರ್ಮಕ್ಕಾಗಿ ಧರ್ಮಯುದ್ಧ ಅಭಿಯಾನ
ಧರ್ಮಸ್ಥಳ ವಿರುದ್ಧದ ಅಪಪ್ರಚಾರ ತಡೆಗೆ ಕೇಸರಿ ಪಕ್ಷ ಹೋರಾಟ

ಬಿಜೆಪಿ ಧರ್ಮ ಯುದ್ಧ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಜ್ಯದಲ್ಲಿ ದಿನದಿಂದ ದಿನಕ್ಕೆ ಧರ್ಮಸ್ಥಳ ಪರ ಹೋರಾಟಗಳು ಹೆಚ್ಚಾಗುತ್ತಿರುವ ಬೆನ್ನಲ್ಲೇ ಎಚ್ಚೆತ್ತಿರುವ ರಾಜ್ಯ ಬಿಜೆಪಿ ಘಟಕ ಒಂದು ವಾರಗಳ ಕಾಲ ರಾಜ್ಯಾದ್ಯಂತ 'ಧರ್ಮಕ್ಕಾಗಿ ಧರ್ಮಯುದ್ಧ' ಎನ್ನುವ ಹೆಸರಲ್ಲಿ ಹೋರಾಟ ನಡೆಸಲು ತೀರ್ಮಾನಿಸಲಾಗಿದೆ.

ಬುರುಡೆ ಪ್ರಕರಣದಲ್ಲಿ ಅನಾಮಧೇಯ ವ್ಯಕ್ತಿ ಮಾಡಿರುವ ಆರೋಪಗಳು ಬಹುತೇಕ 'ಸುಳ್ಳು' ಎನ್ನುವುದು ಮೇಲ್ನೋಟಕ್ಕೆ ಸಾಬೀತಾದ ಬೆನ್ನಲ್ಲೇ, ಬಿಜೆಪಿ ರಾಜ್ಯಾದ್ಯಂತ ಹೋರಾಟ ನಡೆಸಲು ತೀರ್ಮಾನಿಸಿದೆ. ಎಸ್‌ಐಟಿ ರಚನೆಯ ಹಿಂದಿರುವ ಹಾಗೂ ಅನಾಮಧೇಯ ವ್ಯಕ್ತಿಯ ಬೆನ್ನಿಗಿರುವ ಶಕ್ತಿಯ ವಿರುದ್ಧ ಮುಂದಿನ ಒಂದು ವಾರಗಳ ಕಾಲ ಹೋರಾಟ ನಡೆಸಲು ಬಿಜೆಪಿ ತೀರ್ಮಾನಿಸಿದೆ. ಮೊದಲಿಗೆ ಯಶವಂತಪುರ ಶಾಸಕ ಎಸ್.ಆರ್. ವಿಶ್ವನಾಥ್ ನೇತೃತ್ವದಲ್ಲಿ ಧರ್ಮಸ್ಥಳ ಚಲೋ ಆರಂಭಿಸಲಾಯಿತು. ಇದಕ್ಕೆ ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಹಾಗೂ ಬಿಜೆಪಿ ನಾಯಕರು ಸೇರಿಕೊಂಡು ಧರ್ಮಸ್ಥಳ ಹಾಗೂ ವೀರೇಂದ್ರ ಹೆಗ್ಗಡೆ ಅವರಿಗೆ ನೈತಿಕ ಬೆಂಬಲವನ್ನು ಘೋಷಿಸಿದ್ದರು. ಇದಾದ ಬಳಿಕ ರಾಜ್ಯದ ಹಲವು ಭಾಗದಿಂದ ತಂಡೋಪತಂಡವಾಗಿ ಧರ್ಮಸ್ಥಳಕ್ಕೆ ಹೋಗಲು ಆರಂಭಿಸಿದ್ದಾರೆ. ಇದರ ಬೆನ್ನಲ್ಲೇ, ರಾಜ್ಯಾದ್ಯಂತ ಹೋರಾಟ ನಡೆಸಲು ಬಿಜೆಪಿ ಮುಂದಾಗಿದೆ. → 4

ಧರ್ಮಸ್ಥಳ ರ‍್ಯಾಲಿ ಹೊಸ ಕ್ರೇಜ್

ಧರ್ಮಸ್ಥಳಕ್ಕೆ ಬೆಂಬಲಿಸಿ ವಿಶ್ವನಾಥ್ ಅವರು ಆರಂಭಿಸಿದ ಧರ್ಮಸ್ಥಳ ರ‍್ಯಾಲಿಯ ಬೆನ್ನಲ್ಲೇ, ಇದೀಗ ಹಲವು ನಾಯಕರು ತಮ್ಮ ಬೆಂಬಲವನ್ನು ವ್ಯಕ್ತಪಡಿಸಲು ಬೆಂಗಳೂರಿನಿಂದ ಧರ್ಮಸ್ಥಳಕ್ಕೆ ರ‍್ಯಾಲಿ ಆರಂಭಿಸಿದ್ದಾರೆ. ಗುರುವಾರ ಹೂಡಿ ವಿಜಯ್ ಕುಮಾರ್ ನೇತೃತ್ವದಲ್ಲಿ ಸುಮಾರು 4500 ಮಂದಿ ಕಾರು, ಬಸ್‌ಗಳಲ್ಲಿ ರ‍್ಯಾಲಿ ಮಾಡಿದ್ದರೆ, ತಮ್ಮೇಶ್ ಗೌಡ ಅವರ ನೇತೃತ್ವದಲ್ಲಿ ಐದು ಸಾವಿರಕ್ಕೂ ಹೆಚ್ಚು ಕಾರ್ಯಕರ್ತರು ರ‍್ಯಾಲಿ ನಡೆಸಿದರು.

ಧರ್ಮಸ್ಥಳ ಬೆಂಬಲಿಸಿ ಬಿಜೆಪಿ ರಾಜ್ಯಕಾರ್ಯದರ್ಶಿ ಎಚ್.ಸಿ. ತಮ್ಮೇಶ್‌ಗೌಡ ನೇತೃತ್ವದಲ್ಲಿ ಗುರುವಾರ ರ‍್ಯಾಲಿ ನಡೆಯಿತು.

ಅಪಪ್ರಚಾರಗಳನ್ನು ರಾಜ್ಯ ಸರಕಾರ ತಡೆಯುವ ಕೆಲಸ ಮಾಡಲಿಲ್ಲ. ಇದು ವ್ಯವಸ್ಥಿತ ಷಡ್ಯಂತ್ರ. ಈ ಅಪಪ್ರಚಾರ ತಡೆಯುವ ಇಚ್ಛಾಶಕ್ತಿ ರಾಜ್ಯ ಸರ್ಕಾರಕ್ಕೆ ಇರಲಿಲ್ಲವೇ? ಅಥವಾ ರಾಜ್ಯ ಸರಕಾರವೇ ಈ ಅಪಪ್ರಚಾರಕ್ಕೆ ಕುಮ್ಮಕ್ಕು ನೀಡುತ್ತಿದೆಯೇ ಎಂದು ಪ್ರಶ್ನಿಸಿದರಲ್ಲದೆ, ಅಪಪ್ರಚಾರದ ಹಿಂದೆ ಯಾವ ಸಂಘಟನೆಗಳು ಇದಕ್ಕೆ ಶಕ್ತಿ ತುಂಬುವ ಕೆಲಸ ಮಾಡುತ್ತಿವೆ? ಇದನ್ನು ತಡೆಯುವ ಕೆಲಸ ರಾಜ್ಯ ಸರಕಾರ ಮಾಡದಿರುವುದು ದುರಾದೃಷ್ಟಕರ.

-ಬಿ.ವೈ. ವಿಜಯೇಂದ್ರ, ಬಿಜೆಪಿ ರಾಜ್ಯಾಧ್ಯಕ್ಷ

ಸೊಂಪಾದ ಪುಟಗಳು

ಇಲ್ಲಿ ನ್ಯಾಯಾಧೀಶ ಆಗಬೇಕೆಂದರೆ ಚುನಾವಣೆಯಲ್ಲಿ ಗೆಲ್ಲಬೇಕು!
ಶಿಶಿರಕಾಲ
ಶಿಶಿರ್ ಹೆಗಡೆ
6



ಮಕ್ಕಳೇ ಮಣ್ಣು ಹೊತ್ತ ಆಟದ ಮೈದಾನ!
ಶಶಾಂಕಣ
ಶಶಿಧರ ಹಾಲಾಡಿ
7

ದಾರಿದೀಪೋಕ್ತಿ



ನಿಮಗೆ ಶಾಂತಿ ಬೇಕಿದ್ದರೆ ಕಡಿಮೆ ಮಾತಾಡಬೇಕು. ವಿವೇಕ ಬೇಕು ಅಂತ ಅನಿಸಿದರೆ ಹೆಚ್ಚು ಕೇಳಬೇಕು. ಜಗಳವೇ ಬೇಡ ಅಂತ ನಿರ್ಧರಿಸಿದರೆ, ಮೌನವಹಿಸಬೇಕು. ನೆಮ್ಮದಿಯಾಗಿರಬೇಕೆಂದು ತೀರ್ಮಾನಿಸಿದರೆ ಯಾರಿಂದಲೂ ಏನನ್ನೂ ನಿರೀಕ್ಷಿಸಬಾರದು.

ವಕ್ರತುಂಡೋಕ್ತಿ

ಮದುವೆಗೆ ಮುನ್ನ ಲೈಂಗಿಕ ಕ್ರಿಯೆ ಬೇಡ' ಅನ್ನೋದರಲ್ಲಿರುವ ಬೇಸರದ ವಿಷಯ ಎಂದರೆ, ಮಕ್ಕಳಿಗೆ ತಮ್ಮ ಹೆತ್ತವರ ಮದುವೆಗೆ ಎಂದಿಗೂ ಹೋಗಲು ಆಗದಿರುವುದು.

ಟ್ರಾಫಿಕ್ ದಂಡಕ್ಕೆ 50% ರಿಯಾಯಿತಿ

ಬೆಂಗಳೂರು: ಸಿಗ್ನಲ್ ಜಂಪ್, ಝೀಬ್ರಾ ಲೈನ್ ಕ್ರಾಸಿಂಗ್, ಹೆಲ್ಮೆಟ್, ನಂಬರ್ ಪ್ಲೇಟ್ , ನೋ ಪಾರ್ಕಿಂಗ್ ಸೇರಿದಂತೆ ಸಂಚಾರ ನಿಯಮ ಉಲ್ಲಂಘಿಸಿದವರಿಗೆ ದಂಡ ಪಾವತಿಸಲು ಸಾರಿಗೆ ಇಲಾಖೆ ಮತ್ತೊಮ್ಮೆ ರಿಯಾಯಿತಿ ಘೋಷಿಸಿದೆ. ಸಂಚಾರಿ ನಿಯಮ ಉಲ್ಲಂಘಿಸಿ ದಂಡ ಕಟ್ಟದ ವಾಹನ ಮಾಲೀಕರಿಗೆ ಬರೋಬ್ಬರಿ ಶೇ.50ರಷ್ಟು ರಿಯಾಯಿತಿ ನೀಡಲಾಗಿದೆ.

ವಿಧೇಯಕ ಜಂಟಿ ಸದನ ಸಮಿತಿ ಪರಿಶೀಲನೆಗೆ

ಜನಸಂದಣಿಗೆ ಸದನ ಬ್ರೇಕ್

ವಿಧಾನಸಭೆ: ಆರ್‌ಸಿಬಿ ಕಾಲ್ತುಳಿತ ಪ್ರಕರಣದಿಂದ ಎಚ್ಚೆತ್ತ ರಾಜ್ಯ ಸರಕಾರ ಜಾರಿಗೊಳಿಸಲು ಮುಂದಾದ 'ಜನಸಂದಣಿ ನಿಯಂತ್ರಣ' ವಿಧೇಯಕಕ್ಕೆ ಪ್ರತಿಪಕ್ಷಗಳ ತೀವ್ರ ವಿರೋಧ ಹಾಗೂ ಆಕ್ಷೇಪ ವ್ಯಕ್ತವಾದ ಹಿನ್ನಲೆಯಲ್ಲಿ ಸುದೀರ್ಘ ಚರ್ಚೆಗೆ ಅವಕಾಶ ನೀಡಲು ವಿಧೇಯಕವನ್ನು ಜಂಟಿ ಸದನ ಸಮಿತಿಯ ಪರಿಶೀಲನೆಗೆ ಒಪ್ಪಿಸಲಾಗಿದೆ.

ಈ ವಿಧೇಯಕವನ್ನು ಪ್ರತಿಪಕ್ಷದ ಕೆಲ ನಾಯಕರು ಸ್ವಾಗತಿಸಿದರೂ, ಇದರಿಂದ ಭವಿಷ್ಯದಲ್ಲಿ ರಾಜಕೀಯ ಪ್ರೇರಿತ ಹಾಗೂ ದುರುದ್ದೇಶ ಪೂರಿತವಾದ ಕ್ರಮಗಳಾಗುವ ಸಾಧ್ಯತೆಯಿರುತ್ತದೆ. ಆದ್ದರಿಂದ ಈ ಕಾನೂನು ಜಾರಿಗೊಳಿಸುವ ಮೊದಲು ಚರ್ಚೆಯಾಗಬೇಕು ಎಂದು ಪ್ರತಿಪಕ್ಷ ಸದಸ್ಯರು ಪಟ್ಟು ಹಿಡಿದರು. ಪ್ರತಿಪಕ್ಷದ ಆಗ್ರಹವನ್ನು ಸ್ಪೀಕರ್ ಯು.ಟಿ. ಖಾದರ್ ಪುರಸ್ಕರಿಸಿದ ನಂತರ ಜಂಟಿ ಸದನ ಸಮಿತಿಯ ಪರಿಶೀಲನೆಗೆ ತೀರ್ಮಾನಿಸಿದರು.

ಬುಧವಾರ ಈ ವಿಧೇಯಕವನ್ನು ಗೃಹ ಸಚಿವ ಡಾ.ಜಿ.ಪರಮೇಶ್ವರ ಮಂಡಿಸುತ್ತಿದ್ದಂತೆ, ಪ್ರತಿಪಕ್ಷ ಸದಸ್ಯರು ವಿರೋಧಿಸಿದರು. ರಾಜ್ಯ ಸರಕಾರ ಜಾರಿ ಮಾಡಲು ಮುಂದಾಗಿರುವ ಕರ್ನಾಟಕ ಜನಸಂದಣಿ ನಿಯಂತ್ರಣ ವಿಧೇಯಕ ಜನ ವಿರೋಧಿ ಯಾಗಿದೆ. ಹೋರಾಟಗಳನ್ನು ಹತ್ತಿಕ್ಕುವ ವಿಧೇಯಕ. ಈ ವಿಧೇಯಕ ಜಾರಿ ಬೇಡ, ವಿಧೇಯಕದಲ್ಲಿರುವ ಕೆಲ ಅಂಶಗಳು ದುರ್ಬಳಕೆಯಾಗುವ ಸಾಧ್ಯತೆಯಿದೆ. → 4

ಪ್ರಮುಖಾಂಶ

- ಎಷ್ಟು ಜನ ಸೇರಬಹುದು ಎನ್ನುವುದರ ಮೇಲೆ ಅನುಮತಿ ಯಾರಿಂದ ಪಡೆಯಬೇಕು ಎನ್ನುವ ಪ್ರಸ್ತಾಪ
- 50ಸಾವಿರಕ್ಕಿಂತ ಹೆಚ್ಚು ಜನ ಸೇರುವ ಸಮಯ ದಲ್ಲಿ ಕೋಟಿ ಮೊತ್ತ ಬಾಂಡ್‌ನ್ನು ಆಯೋಜಕರು ಸಲ್ಲಿಸಬೇಕು
- ಅನುಮತಿ ಪಡೆಯದೇ ಕಾರ್ಯಕ್ರಮ ಆಯೋಜಿಸಿದರೆ ಕಠಿಣ ಕ್ರಮ
- ಅನುಮತಿ ರಹಿತ ಪ್ರತಿಭಟನೆಗೆ ಆಯೋಜಕರ ವಿರುದ್ಧ 10 ವರ್ಷ ಜೈಲು, 1 ಕೋಟಿ ದಂಡ

90% ಸರಕು ಅಗ್ಗ, 12%, 28% ಸ್ಲ್ಯಾಬ್ ರದ್ದು

ಜಿಎಸ್‌ಟಿ ಕಡಿತಕ್ಕೆ ಅಸ್ತು

ದೆಹಲಿ: ಮಧ್ಯಮ ಮತ್ತು ಕಡಿಮೆ ಆದಾಯ ಹೊಂದಿರುವ ಜನರಿಗೆ ಮತ್ತಷ್ಟು ರಿಲೀಫ್ ನೀಡುವ ನಿಟ್ಟಿನಲ್ಲಿ ಸರಕು ಮತ್ತು ಸೇವಾ ತೆರಿಗೆ ಸ್ಲ್ಯಾಬ್ ನಲ್ಲಿ ಭಾರೀ ಕಡಿತ ಮಾಡಲು ಜಿಎಸ್ ಟಿ ಕೌನ್ಸಿಲ್ ಸಭೆ ಅನುಮೋದನೆ ನೀಡಿದೆ. ಗುರುವಾರ ನಡೆದ ರಾಜ್ಯ ಸಚಿವರನ್ನೊಳಗೊಂಡ ಸಮಿತಿ ಸಭೆಯಲ್ಲಿ ನಾಲ್ಕು ದರಗಳ ವ್ಯವಸ್ಥೆಯನ್ನು ಎರಡು ಪ್ರಮುಖ ಸ್ಲ್ಯಾಬ್ ಗಳಾದ ಶೇ. 5 ಮತ್ತು ಶೇ. 18 ಕ್ಕೆ ಇಳಿಕೆ ಮಾಡಲು ಅನುಮೋದನೆ ನೀಡಿದೆ. ಜಿಎಸ್‌ಟಿ 2.0 ಎಂದು ಕರೆಯಲಾಗುವ ಈ ಕ್ರಮದಿಂದಾಗಿ ಹಲವು ಅಗತ್ಯ ವಸ್ತುಗಳ ಬೆಲೆಯಲ್ಲಿ ಇಳಿಕೆಯಾಗಲಿದೆ. → 4

ಸ್ಲ್ಯಾಬ್ 3ಕ್ಕೆ ಸೀಮಿತ

ಸದ್ಯ ಶೇ.5, ಶೇ. 12, ಶೇ.18 ಮತ್ತು ಶೇ. 28 ರಂತೆ ನಾಲ್ಕು ವಿಭಿನ್ನ ದರಗಳಲ್ಲಿ ಜಿಎಸ್ ಟಿಯನ್ನು ಹಾಕಲಾಗುತ್ತಿದೆ. ನೂತನ ವ್ಯವಸ್ಥೆಯಡಿ ಶೇ. 12 ಮತ್ತು ಶೇ. 28 ರಷ್ಟು ಸ್ಲ್ಯಾಬ್‌ಗಳನ್ನು ರದ್ದುಗೊಳಿಸಲಾಗುತ್ತದೆ. ಇದರಿಂದಾಗಿ ಸರಕು ಮತ್ತು ಸೇವೆಗಳಿಗೆ ಶೇ. 5ರಷ್ಟು ಮತ್ತು ಶೇ. 18 ರಷ್ಟು ತೆರಿಗೆ ನೀಡಬೇಕಾಗುತ್ತದೆ.

ಫನ್‌ತರಂಗ
- ರಘುಪತಿ ಶೃಂಗೇರಿ -

ಬಡವರ ಜೇಬಿಗೆ 1 ಲಕ್ಷ ಕೋಟಿ – ಡಿಸಿಎಂ
ಸುದ್ದಿ

ಕಿರುಕುಳ ಸಾವಿಗೂ ₹5 ಲಕ್ಷ ಪರಿಹಾರ

ವಿಧಾನ ಪರಿಷತ್: ಮೈಕ್ರೋ ಫೈನಾನ್ಸಿಯರ್‌ಗಳ ಕಿರುಕುಳಕ್ಕೆ ಒಳಗಾಗಿ ರಾಜ್ಯದಲ್ಲಿ ಆತ್ಮಹತ್ಯೆ ಮೃತಪಟ್ಟ ವ್ಯಕ್ತಿಯ ಕುಟುಂಬಕ್ಕೆ 5 ಲಕ್ಷ ರು.ಪರಿಹಾರ ನೀಡಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ವಿಧಾನಪರಿಷತ್‌ನಲ್ಲಿ ಘೋಷಿಸಿದ್ದಾರೆ. ಸಾಲಬಾಧೆಗೆ ತತ್ತರಿಸಿ ರೈತರು ಆತ್ಮಹತ್ಯೆ ಮಾಡಿ ಕೊಳ್ಳುತ್ತಿದ್ದಾರೆ. ಅವರ ಕುಟುಂಬಕ್ಕೆ ನೀಡಲಾಗುವ ಪರಿಹಾರ ಮಾದರಿಯಲ್ಲಿ ಮೈಕ್ರೊ ಫೈನಾನ್ಸ್‌ಗಳ ಹಾವಳಿಗೆ ಆತ್ಮಹತ್ಯೆ ಮಾಡಿಕೊಂಡಿರುವ ವ್ಯಕ್ತಿಗಳ ಕುಟುಂಬಕ್ಕೂ 5 ಲಕ್ಷ ನೀಡಲಾಗುವುದು. ಈ ಬಗ್ಗೆ ಹಣಕಾಸು ಇಲಾಖೆ ಜತೆ ಮಾತುಕತೆ ನಡೆಸಿ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಬಿಜೆಪಿ ಸದಸ್ಯ ಸಿ.ಎನ್.ಮಂಜೇಗೌಡ ಅವರ ಪ್ರಶ್ನೆಗೆ ಸಿಎಂ ತಿಳಿಸಿದ್ದಾರೆ.

ಒಂದೇ ಕುಟುಂಬದ ಐವರು ಆತ್ಮಹತ್ಯೆ

ಕಲಬುರಗಿ: ಹೈದರಾಬಾದ್‌ನ ಮಿಯಾಪುರದಲ್ಲಿ ಕಲಬುರಗಿ ಮೂಲದ ಒಂದೇ ಕುಟುಂಬದ ಐವರು ಸಾವನ್ನಪ್ಪಿರುವ ದಾರುಣ ಘಟನೆ ನಡೆದಿದ್ದು, ಆತ್ಮಹತ್ಯೆ ಶಂಕೆ ವ್ಯಕ್ತವಾಗಿದೆ. ಮೃತರನ್ನು ಕಲಬುರಗಿಯ ನರಸಿಂಹ (60), ಪತ್ನಿ ವೆಂಕಟಮ್ಮ (55), ಮಗ ಅನಿಲ್ (32), ಮಗಳು ಕವಿತಾ (24) ಹಾಗೂ ಮೊಮ್ಮಗ ಅಪ್ಪು (2) ಎಂದು ಗುರುತಿಸಲಾಗಿದೆ. ಮೃತರಾದ ನರಸಿಂಹ ಅವರ ಕುಟುಂಬವು ಮೂಲತಃ ಕಲಬುರಗಿಯವರಾಗಿದ್ದು, ಕೆಲ ವರ್ಷಗಳಿಂದ ಹೈದರಾಬಾದ್‌ನಲ್ಲಿ ನೆಲೆಸಿದ್ದಾರೆ. ನರಸಿಂಹ ದಂಪತಿ ತಮ್ಮ ಎರಡನೇ ಮಗಳು, ಅಳಿಯ ಹಾಗೂ ಮೊಮ್ಮಗನೊಂದಿಗೆ ವಾಸಿಸುತ್ತಿದ್ದರು. ಇಡೀ ಕುಟುಂಬ ಕೂಲಿ ಕೆಲಸಗಳ ಮೂಲಕ ಜೀವನ ಸಾಗಿಸುತ್ತಿತ್ತು.

ಮತಗಳವು ಪ್ರಕರಣ ಸುಪ್ರೀಂಗೆ ದೂರು

ದೆಹಲಿ: ಬೆಂಗಳೂರು ಕೇಂದ್ರ ಸೇರಿದಂತೆ ದೇಶದ ವಿವಿಧ ಲೋಕಸಭಾ ಕ್ಷೇತ್ರಗಳಲ್ಲಿ ಮತಗಳ್ಳತನ ನಡೆದಿದೆ ಎಂಬ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿಯವರ ಆರೋಪದ ಕುರಿತು ತನಿಖೆಗೆ ವಿಶೇಷ ತನಿಖಾ ತಂಡ ರಚಿಸುವಂತೆ ಕೋರಿ ಸುಪ್ರೀಂ ಕೋರ್ಟ್‌ಗೆ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಕೆಯಾಗಿದೆ. ಮತದಾರರ ಪಟ್ಟಿಯ ತಯಾರಿಕೆ, ನಿರ್ವಹಣೆ ಮತ್ತು ಪ್ರಕಟಣೆಯಲ್ಲಿ ಪಾರದರ್ಶಕತೆ, ಹೊಣೆಗಾರಿಕೆ ಮತ್ತು ಸಮಗ್ರತೆಯನ್ನು ಖಚಿತಪಡಿಸಿಕೊಳ್ಳಲು ಚೌಕಟ್ಟಿಗೆ ನಿರ್ದೇಶನಗಳನ್ನು ನೀಡುವಂತೆ ಮತ್ತು ನಕಲಿ ಅಥವಾ ಕಾಲ್ಪನಿಕ ನಮೂದುಗಳನ್ನು ಪತ್ತೆಹಚ್ಚುವ ಮತ್ತು ತಡೆಗಟ್ಟುವ ಕಾರ್ಯವಿಧಾನಗಳನ್ನು ಒಳಗೊಂಡಂತೆ ಆಯೋಗಕ್ಕೆ ಮಾರ್ಗಸೂಚಿಗಳನ್ನು ಹೊರಡಿಸಲು ಕೋರಲಾಗಿದೆ.

ವಿಶ್ವವಾಣಿ ಪುಸ್ತಕ
ವಿಶ್ವವಾಣಿ ಪುಸ್ತಕ ಪ್ರಕಾಶನದ
ಹೊಸ ಕೃತಿ



₹250
₹225
10% ಕಡಿತ
QR CODE ಸ್ಕ್ಯಾನ್ ಮಾಡಿ, ಫೋನ್ ಪೇ / ಗೂಗಲ್ ಪೇ ಮಾಡಿದ ಸ್ಕ್ರೀನ್ ಶಾಟ್‌ನೊಂದಿಗೆ ನಿಮ್ಮ ವಿಳಾಸವನ್ನು ಕೆಳಗಿನ ನಂಬರ್‌ಗೆ ಕಳುಹಿಸಿ. ನಿಮ್ಮ ಮನೆ ಬಾಗಿಲಿಗೆ ಪುಸ್ತಕ ತಲುಪಿಸುತ್ತೇವೆ.
63623 93966
amazon ನಲ್ಲೂ ಈಗ ಲಭ್ಯ
ಎಲ್ಲ ಪುಸ್ತಕ ಮಳಿಗೆಗಳಲ್ಲಿ ಲಭ್ಯ

- ರ‍್ಯಾಪಿಡೋ ಮೋಸದ ಜಾಹೀರಾತಿಗೆ ಚಾಟಿ
- ಸಚಿವ ಪ್ರಲ್ಹಾದ ಜೋಶಿ ಸೂಚನೆ ಮೇರೆಗೆ ಕ್ರಮ

5 ನಿಮಿಷದ ಆಟೋಗೆ ಹತ್ತು ಲಕ್ಷ ರು. ದಂಡ

'ಐದೇ ನಿಮಿಷದಲ್ಲಿ ಆಟೋ ಅಥವಾ ಪಡೆಯಿರಿ 50 ರು.' ಆಫರ್ ನೀಡಿ ಗ್ರಾಹಕರನ್ನು ವಂಚಿಸಿದ್ದ ರ‍್ಯಾಪಿಡೋ ಸಂಸ್ಥೆಗೆ ಕೇಂದ್ರ ಗ್ರಾಹಕ ರಕ್ಷಣಾ ಪ್ರಾಧಿಕಾರ ಬರೋಬ್ಬರಿ 10 ಲಕ್ಷ ರು. ದಂಡ ವಿಧಿಸುವ ಮೂಲಕ ಕಠಿಣ ಕ್ರಮ ಕೈಗೊಂಡಿದೆ. ಗ್ರಾಹಕರ ದಾರಿ ತಪ್ಪಿಸುವ ಜಾಹೀರಾತು ನೀಡಿ ವಂಚಿಸುತ್ತಿದ್ದ ಕಾರಣಕ್ಕೆ ರ‍್ಯಾಪಿಡೋ ಸಂಸ್ಥೆ ವಿರುದ್ಧ ಅತ್ಯಧಿಕ ದೂರುಗಳು ಬಂದಿದ್ದರಿಂದ ಕೇಂದ್ರ ಗ್ರಾಹಕ ವ್ಯವಹಾರಗಳ ಇಲಾಖೆ ಸಚಿವ ಪ್ರಲ್ಹಾದ ಜೋಶಿ ಕಟ್ಟುನಿಟ್ಟಿನ ಕ್ರಮಕ್ಕೆ ಸೂಚಿಸಿದ್ದರು. ಸಿಸಿಪಿಎ ಕಠಿಣ ಕ್ರಮ ಕೈಗೊಂಡಿದೆ.

ಮಾರ್ಗಸೂಚಿ ರೂಪಿಸಲು ರಾಜ್ಯ ಸರಕಾರಕ್ಕೆ ಹೈಕೋರ್ಟ್ ಸೂಚನೆ

ಬೈಕ್ ಟ್ಯಾಕ್ಸಿ ಪುನರಾರಂಭಕ್ಕೆ ಗ್ರೀನ್ ಸಿಗ್ನಲ್

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಎರಡು ತಿಂಗಳ ಹಿಂದೆ ಸ್ಥಗಿತಗೊಂಡಿದ್ದ ಬೈಕ್ ಟ್ಯಾಕ್ಸಿ ಸೇವೆಯು ಬೆಂಗಳೂರು ಸೇರಿದಂತೆ ರಾಜ್ಯದ್ಯಂತ ಪುನರಾರಂಭಗೊಂಡಿದ್ದು, ಓಲಾ ಹೊರತುಪಡಿಸಿ ಉಬರ್ ಮತ್ತು ರ‍್ಯಾಪಿಡೋ ಆ್ಯಪ್‌ಗಳಲ್ಲಿ ಬೈಕ್ ಟ್ಯಾಕ್ಸಿ ಸೇವೆಯನ್ನು ಪುನರಾರಂಭಿಸಲಾಗಿದೆ.

ಸುರಕ್ಷತಾ ಕಾರಣಕ್ಕೆ ಜೂನ್ 16ರಿಂದ ಸ್ಥಗಿತಗೊಳಿಸಲಾಗಿದ್ದ ಬೈಕ್ ಟ್ಯಾಕ್ಸಿ ಸೇವೆಯನ್ನು ಹೈಕೋರ್ಟ್‌ನ ನಿರ್ದೇಶನದ ಮೇರೆಗೆ ಮತ್ತೆ ಆರಂಭಿಸಲಾಗಿದ್ದು, ಈ ಮೂಲಕ ಆಟೋ ಹಾಗೂ ಕ್ಯಾಬ್‌ಗಳಿಗೆ ದುಬಾರಿ ಹಣ ಪಾವತಿಸುತ್ತಿದ್ದ ಪ್ರಯಾಣಿಕರಿಗೆ ಸ್ವಲ್ಪ ಮಟ್ಟಿನ ನೆಮ್ಮದಿ ದೊರೆಯಲಿದೆ. ಜೂನ್ 16ರಂದು ರಾಜ್ಯ ಸರಕಾರ ವಿಧಿಸಿದ 2 ತಿಂಗಳ ನಿಷೇಧದ ನಂತರ ಬೆಂಗಳೂರಿನಲ್ಲಿ ಉಬರ್ ಮತ್ತು ರ‍್ಯಾಪಿಡೊ ಬೈಕ್ ಟ್ಯಾಕ್ಸಿ ಸೇವೆಗಳನ್ನು ಪುನರಾರಂಭಗೊಂಡಿದ್ದು, ಈ ಕುರಿತು ಸರಕಾರವು ಸವಾರರ ಜೀವನೋಪಾಯದ ಮೇಲಿನ ಪರಿಣಾಮವನ್ನು ಪರಿಗಣಿಸುವಂತೆ ಬೈಕ್ ಟ್ಯಾಕ್ಸಿ ಚಾಲಕರ ಸಂಘಟನೆ ಒತ್ತಾಯಿಸಿತ್ತು. → 4



- ಆಟೋ ವಸೂಲಿಯಿಂದ ಬೇಸತ್ತ ಗ್ರಾಹಕರಿಗೆ ರಿಲೀಫ್
- ಉಬರ್, ರ‍್ಯಾಪಿಡೋ ಬೈಕ್ ಟ್ಯಾಕ್ಸಿ ಸೇವೆ ಪುನರಾರಂಭ.
- ಸೆಪ್ಟೆಂಬರ್ 22ಕ್ಕೆ ಹೈಕೋರ್ಟ್ ವಿಚಾರಣೆ ಮುಂದೂಡಿಕೆ



ಕರ್ನಾಟಕ ಹೈಕೋರ್ಟ್ ಬೈಕ್ ಟ್ಯಾಕ್ಸಿ ವಿಚಾರಣೆಯನ್ನು ಒಂದು ತಿಂಗಳ ಕಾಲ ಮುಂದೂಡಿದೆ. ಬೇರೆ ರಾಜ್ಯಗಳಲ್ಲಿ ಬೈಕ್ ಟ್ಯಾಕ್ಸಿಗಳು ಕಾರ್ಯ ನಿರ್ವಹಿಸುತ್ತಿವೆ. ಹೀಗಾಗಿ, ರಾಜ್ಯ ಸರ್ಕಾರವು ತನ್ನ ನೀತಿ ಚೌಕಟ್ಟನ್ನು ಸ್ಪಷ್ಟಪಡಿಸಬೇಕು ಎಂದು ಹೇಳಿದೆ. ಆದರೆ, ಟ್ಯಾಕ್ಸಿ ಸೇವೆ ಒದಗಿಸುವ ಕಂಪನಿಗಳು ತಮ್ಮ ಕಾರ್ಯಾಚರಣೆಯನ್ನು ಪುನರಾರಂಭಿಸಲು ನ್ಯಾಯಾಲಯ ಅನುಮತಿ ನೀಡಿಲ್ಲ. ನಾನು ಈ ಸಂಬಂಧ ಅಡ್ವೊಕೇಟ್ ಜನರಲ್ ಅವರೊಂದಿಗೆ ಮಾತನಾಡುತ್ತೇನೆ

-ರಾಮಲಿಂಗಾ ರೆಡ್ಡಿ, ಸಾರಿಗೆ ಸಚಿವ

ಪ್ರತಿಪಕ್ಷ ನಾಯಕರ ತೀವ್ರ ವಿರೋಧ | ಜೀವಾವಧಿ ಶಿಕ್ಷೆ ಅವಕಾಶಕ್ಕೆ ಆಕ್ಷೇಪ | ಆರ್‌ಸಿಬಿ ಕಾಲ್ತುಳಿತ ಪ್ರಕರಣದ ಬಳಿಕ ಹೊಸ ಮಸೂದೆಗೆ ಚರ್ಚೆ

ಸದನ ಸಮಿತಿ ಹೆಗಲಿಗೆ ಜನಸಂದಣಿ ನಿಯಂತ್ರಣ ವಿಧೇಯಕ

ವಿಶ್ವವಾಣಿ ಸುದ್ದಿಮನೆ ವಿಧಾನಸಭೆ

ರಾಜ್ಯದಲ್ಲಿ ಭಾರೀ ವಿವಾದಕ್ಕೆ ಕಾರಣವಾಗಿದ್ದ ಆರ್‌ಸಿಬಿ ವಿಜಯೋತ್ಸವದ ವೇಳೆ ಸಂಭವಿಸಿದ ಕಾಲ್ತುಳಿತ ಪ್ರಕರಣದಿಂದ ಎಚ್ಚೆತ್ತು, ಜಾರಿಗೊಳಿಸಲು ಮುಂದಾಗಿದ್ದ ಜನಸಂದಣಿ ನಿಯಂತ್ರಣ ವಿಧೇಯಕಕ್ಕೆ ಪ್ರತಿಪಕ್ಷಗಳ ತೀವ್ರ ವಿರೋಧ, ಗೊಂದಲಗಳಿಗೆ ಸ್ಪಷ್ಟನೆ ಆಗ್ರಹಿಸಿದ್ದರಿಂದ ವಿಧೇಯಕವನ್ನು ಪರಿಶೀಲಿಸಲು ಸದನ ಸಮಿತಿಗೆ ಒಪ್ಪಿಸಲು ವಿಧಾನಸಭೆ ಸಮ್ಮತಿಸಿತು.

ಗುರುವಾರ ಬೆಳಗ್ಗೆ ಗೃಹ ಸಚಿವ ಡಾ.ಜಿ. ಪರಮೇಶ್ವರ ಅವರು ಸದನದಲ್ಲಿ ಜನಸಂದಣಿ ನಿಯಂತ್ರಣ ವಿಧೇಯಕವನ್ನು ಮಂಡಿಸಿ, ರಾಜಕೀಯ ಸಭೆ ಸೇರಿದಂತೆ ದೊಡ್ಡ ದೊಡ್ಡ ಕಾರ್ಯಕ್ರಮಗಳಲ್ಲಿ ಅವಘಡಗಳಾದರೆ ಅದಕ್ಕೆ ಜೈಲು ಶಿಕ್ಷೆ ಮತ್ತು ದಂಡ ವಿಧಿಸುವ ಅಂಶಗಳನ್ನು ಪ್ರಸ್ತಾಪಿಸಿದರು. ಆಗ ಪ್ರತಿಪಕ್ಷಗಳ ಬಹುತೇಕ ಸದಸ್ಯರು, ಈ ವಿಧೇಯಕ ಜನವಿರೋಧಿ, ಹೋರಾಟ ಹತ್ತಿಕ್ಕುವ ಸಲುವಾಗಿಯೇ ಇದನ್ನು ಸರಕಾರ ತರಲು ಹೊರಟಿದೆ. ವಿಧೇಯಕದ ಬಗ್ಗೆ ಹಲವು ಸ್ಪಷ್ಟನೆಗಳು ಬೇಕಿವೆ. ತಕ್ಷಣಕ್ಕೆ ವಿಧೇಯಕ ಜಾರಿ ಮಾಡುವುದು ಬೇಡ, ಸದನ ಸಮಿತಿಗೆ ವಹಿಸಿ, ಮುಂದಿನ ಅಧಿವೇಶನದಲ್ಲಿ ವಿಧೇಯಕದ ಬಗ್ಗೆ ಚರ್ಚೆ ನಡೆಸಿ ತೀರ್ಮಾನ ಮಾಡೋಣ ಎಂದು ಪಟ್ಟುಹಿಡಿದರು.

ಪ್ರತಿಪಕ್ಷಗಳ ಆಗ್ರಹ, ಒತ್ತಡಕ್ಕೆ ಮಣಿದ ಗೃಹ ಸಚಿವರು, ಈ ವಿಧೇಯಕ ಜಾರಿ ಅವಶ್ಯವಿದೆ. ಆದರೆ, ಪ್ರತಿಪಕ್ಷಗಳು ಸದನ ಸಮಿತಿಗೆ ಒಪ್ಪಿಸುವಂತೆ ಒತ್ತಾಯಿಸುತ್ತಿವೆ. ಹಾಗೆಯೇ ಆಗಲಿ, ಸದನ ಸಮಿತಿ ಮಾಡೋಣ ಎಂದು ಹೇಳಿದಾಗ ಪ್ರತಿಪಕ್ಷ ಸದಸ್ಯರು ಹರ್ಷ ವ್ಯಕ್ತಪಡಿಸಿದರು. ಈ ವಿಧೇಯಕ ಈಗಿನಿಂದಲೇ ಜಾರಿ ಮಾಡಬೇಕು ಎನ್ನುವ ಸರಕಾರದ ಆಶಯಕ್ಕೆ ಸ್ವಲ್ಪ ಹಿನ್ನಡೆಯಾಗಿದ್ದು, ಸದನ ಸಮಿತಿ ಪರಿಶೀಲನೆ ನಂತರ ಮುಂದಿನ ಅಧಿವೇಶನದಲ್ಲಿ ವಿಧೇಯಕ ಚರ್ಚೆಗೆ ಬರುವ ಸಾಧ್ಯತೆಗಳಿವೆ.

ಸ್ಪೀಕರ್ ವಿರುದ್ಧ ಶಾಸಕರು ಗರಂ: ಜನಸಂದಣಿ ನಿಯಂತ್ರಣ ವಿಧೇಯಕದ ಕುರಿತು ಮಾತನಾಡುವಾಗ ಕಲಾಪದಲ್ಲಿ ಅನಗತ್ಯವಾಗಿ ಚರ್ಚೆ ಮಾಡಬೇಡಿ, ಕಾಯ್ದೆಗೆ ಸೀಮಿತವಾಗಿ ಮಾತ್ರ ಪರ, ವಿರೋಧ ಅಭಿಪ್ರಾಯ ತಿಳಿಸಿ ಎಂದು ಸ್ಪೀಕರ್ ನೀಡಿದ ಸಲಹೆಯಿಂದ ಸಿಟ್ಟಾದ ಜೆಡಿಎಸ್ ಶಾಸಕ ಶರಣುಗೌಡ ಕಂದಕೂರು ಕಲಾಪದಿಂದ ಹೊರನಡೆಯಲು ಮುಂದಾದ ಪ್ರಸಂಗ ವಿಧಾನಸಭೆಯಲ್ಲಿ ನಡೆಯಿತು.

ವಿಧೇಯಕ ಕುರಿತ ಚರ್ಚೆಯಲ್ಲಿ ಭಾಗವಹಿಸಿದ್ದ ಶರಣಗೌಡ ಕಂದಕೂರು, ತಮ್ಮ ಭಾಗದಲ್ಲಿನ ಜಾತ್ರೆಗಳಲ್ಲಿ ಸೇರುವ ಜನ ಹಾಗೂ ಅದರ ಪರಿಣಾಮಗಳ ಬಗ್ಗೆ ವಿವರಣೆ ನೀಡಿ, ಈ ಕಾಯಿದೆಯಲ್ಲಿ ಅಂತಹ ಕಾರ್ಯಕ್ರಮಗಳಿಗೆ ಯಾವ ರೀತಿ ಅಡಚಣೆ ಉಂಟುಮಾಡುತ್ತದೆ ಎಂದು ವಿವರಿಸುತ್ತಿದ್ದರು.

ಈ ಹಂತದಲ್ಲಿ ಸ್ಪೀಕರ್ ಯು.ಟಿ. ಖಾದರ್, ಕಾಯಿದೆಗೆ ಸೀಮಿತವಾಗಿ ಮಾತನಾಡಿ, ಭಾಷಣ ಮಾಡ ಬೇಡಿ. ಬೇರೆಯವರಿಗೂ ಮಾತನಾಡಲು ಅವಕಾಶ ನೀಡಬೇಕು ಎಂದು ಹೇಳಿದರು. ಇದಕ್ಕೆ ಸಿಟ್ಟಾದ ಶರಣಗೌಡ ಕಂದಕೂರ್ ನನಗೆ ಮಾತನಾಡಲು ಪ್ರತಿಬಾರಿಯೂ ಅಡ್ಡಿಪಡಿಸಲಾಗುತ್ತಿದೆ. ನನ್ನನ್ನೆ ಗುರಿ ಮಾಡಿ ಅಡಚಣೆ ಮಾಡುವಂತೆ ಕಂಡು ಬರುತ್ತಿದೆ. ನಾನು ಮಾತನಾಡುವುದು ಬೇಡ ಎಂದಾದರೆ ಹೊರಹೋಗುತ್ತೇನೆ ಎಂದು ಸಿಡಿಮಿಡಿಗೊಂಡರು.

ಹೆಚ್ಚು ಜನರು ಬಂದರೆ ಏನು ಮಾಡಬೇಕು?

ಆಡಳಿತ-ಪ್ರತಿಪಕ್ಷ ಶಾಸಕರ ವಾಕ್ಸಮರ ನಡುವೆ ಮಧ್ಯಪ್ರವೇಶಿಸಿದ ಸ್ಪೀಕರ್ ಯು.ಟಿ. ಖಾದರ್, ಕಾರ್ಯಕ್ರಮಕ್ಕೆ 3 ಸಾವಿರ ಜನ ಬರುತ್ತಾರೆ ಎಂದು ನಿರೀಕ್ಷಿಸಿರುತ್ತಾರೆ. ಆ ಮೇಲೆ ಹೆಚ್ಚು ಜನ ಸೇರುತ್ತಾರೆ. ಏನಾದರೂ ಆದರೆ ಯಾರು ಜವಾಬ್ದಾರಿ ಎಂದು ಪ್ರಶ್ನಿಸಿದರು. ಸಭಾಧ್ಯಕ್ಷರ ಮಾತಿಗೆ ಬಿಜೆಪಿ ಸದಸ್ಯರು ಸಹಮತ ವ್ಯಕ್ತಪಡಿಸಿದರು. ಈ ಕಾಯಿದೆ ಜಾರಿ ಬೇಡ, ಇದು ಜನವಿರೋಧಿ. ಜನಪರ ಹೋರಾಟಗಳನ್ನು ಹತ್ತಿಕ್ಕುವ ಕಾಯ್ದೆ. ಇದನ್ನು ನನ್ನ ವಿರೋಧವಿದೆ ಎಂದು ಸದಸ್ಯ ಬಸನಗೌಡ ಪಾಟೀಲ್ ಯತ್ನಾಳ್ ಹೇಳಿ, ಸದನ ಸಮಿತಿಗೆ ಒಪ್ಪಿಸುವಂತೆ ಆಗ್ರಹಿಸಿದರು. ಈ ವೇಳೆ ಮಾತನಾಡಿದ ಅಶೋಕ್, ನಾವು ಸದನದಲ್ಲಿ 40 ವಿಧೇಯಕಗಳನ್ನು ಅಂಗೀಕಾರ ಮಾಡಿಕೊಟ್ಟಿದ್ದೇವೆ. ಈ ಒಂದು ವಿಧೇಯಕ ಬೇಡ. ಸದನ ಸಮಿತಿಗೆ ಒಪ್ಪಿಸಿ, ಮಹಾಭಾರತದಲ್ಲಿ ಕೃಷ್ಣ 5 ಗ್ರಾಮಗಳನ್ನು ಕೇಳಿದಂತೆ ನಾವು ಈ ಒಂದು ವಿಧೇಯಕವನ್ನು ಸದನ ಸಮಿತಿಗೆ ಒಪ್ಪಿಸುವಂತೆ ಕೋರುತ್ತಿದ್ದೇವೆ. ಸರಕಾರ ಇದನ್ನು ಒಪ್ಪಿಕೊಳ್ಳಬೇಕು ಎಂದು ಒತ್ತಾಯಿಸಿದರು.

ಕಾರ್ಯಕ್ರಮ ಅನುಮತಿಗೆ ಮಾನದಂಡ

- ಯಾವುದೇ ಕಾರ್ಯಕ್ರಮ ಅಥವಾ ಸಮಾರಂಭದ ಆಯೋಜನೆಗೂ ಮುನ್ನ 10 ದಿನ ಮೊದಲು ಅನುಮತಿ ಪಡೆಯಬೇಕು.
- 7 ಸಾವಿರಕ್ಕೂ ಹೆಚ್ಚು ಜನ ಸೇರುವ ಸಮಾರಂಭಗಳಿಗೆ ಅನುಮತಿ ಕಡ್ಡಾಯ.
- 7 ಸಾವಿರದೊಳಗಿನ ಜನ ಸೇರುವ ಕಾರ್ಯಕ್ರಮಗಳಿಗೆ ಅನುಮತಿ ಬೇಕಿಲ್ಲ.
- ಸಮಾರಂಭದ ವೇಳೆ ಸಾರ್ವಜನಿಕ ಹಾಗೂ ಖಾಸಗಿ ಸ್ವತ್ತಿಗೆ ಹಾನಿಯಾದರೆ ಆ ನಷ್ಟವನ್ನು ಆಯೋಜಕರೆ ಭರಿಸಬೇಕು.
- ಜೀವ ಹಾನಿಯಾದರೆ ಜೈಲು ಶಿಕ್ಷೆ, ದಂಡವನ್ನು ವಿಧಿಸಲಾಗುತ್ತದೆ ಹಾಗೂ ಒಂದು ಕೋಟಿವರೆಗೆ ದಂಡ ವಿಧಿಸಲು ಅವಕಾಶ

ಉದ್ದೇಶಿತ ವಿಧೇಯಕದಿಂದ ಧಾರ್ಮಿಕ, ಕೌಟುಂಬಿಕ ಹಾಗೂ ಶೈಕ್ಷಣಿಕ, ಸರಕಾರಿ ಸಮಾರಂಭಗಳಿಗೆ ವಿನಾಯಿತಿ ನೀಡಲಾಗಿದೆ. ಆದರೆ ರಾಜಕೀಯ ಸಭೆ, ಪ್ರತಿಭಟನೆಗಳು ಹಾಗೂ ದೊಡ್ಡ ದೊಡ್ಡ ಸಮಾರಂಭಗಳು ಈ ಕಾಯ್ದೆಯ ವ್ಯಾಪ್ತಿಗೆ ಬರುತ್ತದೆ. ದೊಡ್ಡ ದೊಡ್ಡ ಸಮಾರಂಭ ನಡೆದ ಸಂದರ್ಭದಲ್ಲಿ ಜೀವಹಾನಿಯಾದರೆ ಸಮಾರಂಭ, ಸಭೆಯ ಆಯೋಜಕರಿಗೆ ಜೀವಾವಧಿ ಸೇರಿದಂತೆ ಜೈಲು ಶಿಕ್ಷೆ, ಭಾರಿ ದಂಡ ವಿಧಿಸಲು ಅವಕಾಶವಿದೆ.

– ಡಾ.ಜಿ. ಪರಮೇಶ್ವರ, ಗೃಹ ಸಚಿವ

ಕೆಟ್ಟಮೇಲೆ ಸರಕಾರಕ್ಕೆ ಬುದ್ಧಿ ಬಂದಿದೆ



ಈ ವೇಳೆ ಬಿಜೆಪಿ ಶಾಸಕ ಸುರೇಶ್ ಕುಮಾರ್ ಮಾತನಾಡಿ, ಸರಕಾರಕ್ಕೆ ಕೆಟ್ಟ ಮೇಲೆ ಬುದ್ಧಿ ಬಂತು ಎಂಬಂತೆ ಈ ಕಾನೂನು ತರುತ್ತಿದೆ. ಕೆಡಿಸಿದ ಮೇಲೆ ಬುದ್ಧಿ ಬಂತು ಎಂದು ನಾವು ಹೇಳಬಹುದು. ದೇಶದಲ್ಲಿ ದೊಡ್ಡ ದೊಡ್ಡ ಸಮಾರಂಭಗಳು ನಡೆಯುತ್ತವೆ. ಪುರಿ ಜಗನ್ನಾಥ ರಥೋತ್ಸವದಲ್ಲಿ ಲಕ್ಷಾಂತರ ಜನ ಸೇರುತ್ತಾರೆ. ಅಲ್ಲೆಲ್ಲಾ ಹೇಗೆ ಜನರನ್ನು ನಿಯಂತ್ರಿಸುತ್ತಾರೆ. ಅದು ಕನ್ನಡಿಗರ ಪಾಲಿಗೆ ಕಪ್ಪು ಗುರುವಾರ ಎಂದು ವ್ಯಾಖ್ಯಾನಿಸಿ, ಅವಘಡಗಳಿಗೆ ಪ್ರಚೋದನೆ ನೀಡುವವರ ವಿರುದ್ಧವೂ ಕ್ರಮ ಕೈಗೊಳ್ಳುವ ಅಂಶವನ್ನು ಕಾಯ್ದೆಯಲ್ಲಿ ಸೇರಿಸಿ, ಈ ಬಿಲ್‌ನ್ನು ನಾನು ಸ್ವಾಗತಿಸುತ್ತೇನೆ. ಆದರೆ 11 ಅಮಾಯಕರು ಬಲಿಯಾದ ಮೇಲೆ ಈ ವಿಧೇಯಕವನ್ನು ತಂದಿರುವುದು ನೋವಿನ ಸಂಗತಿ ಎಂದು ಹೇಳಿದರು. ಹೋರಾಟಗಳನ್ನು ಹತ್ತಿಕ್ಕುವ ಕಾಯ್ದೆ ಯಾಗಿದೆ ಎಂದ ಬಿಜೆಪಿ ಸದಸ್ಯರಾದ ಸುನೀಲ್ ಕುಮಾರ್, ಹರೀಶ್ ಪೂಂಜ, ಸುರೇಶ್ ಗೌಡ, ಉಮನಾಥ್ ಕೋಟ್ಯನ್, ಸಿ.ಸಿ. ಪಾಟೀಲ್, ಬಿ.ವೈ.ವಿಜಯೇಂದ್ರ ಅವರು ಸದನ ಸಮಿತಿಗೆ ಒಪ್ಪಿಸಬೇಕು ಎಂದು ಆಗ್ರಹಿಸಿದರು. ಗೃಹ ಸಚಿವ ಡಾ. ಜಿ. ಪರಮೇಶ್ವರ್ ಅವರು ಮಾತನಾಡಿ, ರಾಜಕೀಯ ಸಭೆಗಳಿಗೂ ಈ ಕಾಯ್ದೆ ಅನ್ವಯವಾಗುತ್ತದೆ. ಜಾತ್ರೆ, ಧಾರ್ಮಿಕ ಸಮಾರಂಭ, ಮದುವೆ ಮತ್ತಿತರ ಕೌಟುಂಬಿಕ ಸಮಾರಂಭಗಳಿಗೆ ಈ ಕಾಯ್ದೆ ಅನ್ವಯವಾಗಲ್ಲ. ಹಾಗೆಯೇ ಸರಕಾರಿ ಕಾರ್ಯಕ್ರಮಗಳಿಗೂ ಅನ್ವಯವಾಗಲ್ಲ. ಅನುಮತಿಗೆ ಇರುವ 10 ದಿನಗಳನ್ನು 5 ದಿನಕ್ಕೆ ಇಳಿಸೋಣ, ವಿಧೇಯಕಕ್ಕೆ ಅನುಮತಿ ಕೊಡಿ ಎಂದು ಮನವಿ ಮಾಡಿದರು.

ರಾಜಕೀಯ ಸಭೆಗಳಲ್ಲಿ ಅವಘಡಗಳಾದರೆ ಅದಕ್ಕೆ ರಾಜಕೀಯ ನಾಯಕರನ್ನು ಹೊಣೆ ಮಾಡುವುದು ಸರಿಯಲ್ಲ. ಏನೋ ನಾವು ರಾಜಕೀಯಕ್ಕೆ ಬಂದಿದ್ದೇವೆ. ರಾಜಕೀಯ ಸಭೆಗಳಲ್ಲಿ ಅವಘಡಗಳಾದರೆ ಕೊನೆಗಾಲದಲ್ಲಿ ಜೈಲಿನಲ್ಲಿ ಇರಬೇಕಾದಂತಹ ಪರಿಸ್ಥಿತಿ ಸೃಷ್ಟಿಯಾಗುತ್ತದೆ. ಈ ಕಾಯಿದೆಯನ್ನು ವಾಣಿಜ್ಯ ಮತ್ತು ವಾಣಿಜ್ಯೇತರ ಎಂದು ವಿಭಜಿಸಿ. ವಾಣಿಜ್ಯ ಕಾರ್ಯಕ್ರಮಗಳಿಗೆ ಈ ಕಾಯ್ದೆಯನ್ನು ಅನ್ವಯಿಸಿ. ವಾಣಿಜ್ಯೇತರ ಕಾರ್ಯಕ್ರಮಗಳಿಗೆ ಈ ಕಾಯ್ದೆ ಬೇಡ.

– ಆರ್.ಅಶೋಕ್, ಪ್ರತಿಪಕ್ಷ ನಾಯಕ

ಇದು ಹೋರಾಟವನ್ನು ಹತ್ತಿಕ್ಕುವ ಕಾಯ್ದೆಯಾಗಿದೆ. ದಿಢೀರ್ ಎಂದು ಹೋರಾಟ ಮಾಡಲು ಈ ಕಾಯ್ದೆಯಿಂದ ತೊಂದರೆಯಾಗುತ್ತದೆ. ಕೆಳ ಹಂತದ ಪೊಲೀಸ್ ಅಧಿಕಾರಿಗಳು ಈ ಕಾಯ್ದೆಯನ್ನು ದುರ್ಬಳಕೆ ಮಾಡಿಕೊಳ್ಳುವ ಸಾಧ್ಯತೆಯಿದೆ. ಇದು ವಿರೋಧ ಪಕ್ಷಗಳನ್ನು ಹತ್ತಿಕ್ಕಲು ಅಸ್ತ್ರವಾಗುತ್ತದೆ. ಈ ಕಾಯ್ದೆಯಿಂದ ನಮಗೂ, ನಿಮಗೂ ಇಬ್ಬರಿಗೂ ತೊಂದರೆಯಾಗಲಿದೆ. ಈ ಕಾಯ್ದೆ ಜಾರಿ ಬೇಡ.

–ಬಸನಗೌಡ ಪಾಟೀಲ್ ಯತ್ನಾಳ್, ಶಾಸಕ

ಎಕ್ಸಿಸ್ ಬ್ಯಾಂಕ್ ಪ್ಲಾಟ್ ಸಂಖ್ಯೆ 41, ಶೇಷಾದ್ರಿ ರಸ್ತೆ, ಆನಂದ್ ರಾವ್ ಸರ್ಕಲ್, ಬೆಂಗಳೂರು –560009

ತಗಾದೆ ಸೂಚನೆ

ಈ ಕೆಳಗಿನ ಸಾಲಗಾರರು ಬ್ಯಾಂಕಿನಿಂದ ಪಡೆದ ಸಾಲ ಸೌಲಭ್ಯಗಳ ಮೇಲಿನ ಅಸಲು ಮತ್ತು ಬಡ್ಡಿಯನ್ನು ಹಿಂಪಾವತಿಸುವಲ್ಲಿ ವಿಫಲರಾಗಿರುವುದರಿಂದ ಆ ಸೌಲಭ್ಯಗಳು ನಿರ್ವಹಣಾರಹಿತ ಸ್ವತ್ತುಗಳಾಗಿ ಪರಿವರ್ತಿತವಾಗಿವೆ ಎಂದು ಈ ಸೂಚನೆಯ ಮೂಲಕ ತಿಳಿಸಲಾಗಿದೆ. 2002ರ ಹಣಕಾಸು ಆಸ್ತಿಗಳ ಖಾತರೀಕರಣ ಮತ್ತು ಪುನರ್ನಿರ್ಮಾಣ ಹಾಗೂ ಭದ್ರತಾ ಹಿತಾಸಕ್ತಿ ಜಾರಿ ಕಾಯ್ದೆ ವಿಭಾಗ 13(2)ರ ಅಡಿಯಲ್ಲಿ, ಅವರು ಕೊನೆಯದಾಗಿ ತಿಳಿಸಲಾಗಿರುವಂತಹ ತಮ್ಮ ವಿಳಾಸಗಳಿಗೆ ಸೂಚನೆಗಳನ್ನು ಕಳುಹಿಸಲಾಯಿತಾದರೂ, ಅವು ಸ್ವೀಕೃತಗೊಳ್ಳದೇ ಹಿಂದಿರುಗಿರುವುದರಿಂದ ಸಾರ್ವಜನಿಕ ಪ್ರಕಟಣೆಯ ಮೂಲಕ ಅವರಿಗೆ ಈ ಕುರಿತು ತಿಳಿಸಲಾಗುತ್ತಿದೆ.

<table>
<tr><th>ಕ್ರ ಸಂ</th><th>ಸಾಲಗಾರರ ಹೆಸರು ಮತ್ತು ವಿಳಾಸ</th><th>ಸಾಲಗಾರರು ಅಡಮಾನ ಮಾಡಿರುವ ಆಸ್ತಿಯ ವಿವರ</th><th>ನೋಟೀಸ್ ದಿನಾಂಕ</th><th>ಬರಬೇಕಾದ ಬಾಕಿ (ರೂ.ಗಳಲ್ಲಿ)</th></tr>
<tr><td>1.</td><td>(1) ಶ್ರೀ ತುಕಾರಾಂ ಬಿನ್ ಶ್ರೀ ತನಿಯಪ್ಪ, ಡೋರ್ ನಂ. 5–29/1, ಮಹಾಕಾಳಿ ದೇವಸ್ಥಾನದ ಹತ್ತಿರ, ಚಿತ್ರಾಪುರ, ಕುಳಾಯಿ, ಮಂಗಳೂರು–575019. ಮತ್ತೊಂದು ವಿಳಾಸ: ಪ್ಲಾಟ್ ಜೊತೆಗೆ ನಿರ್ಮಾಣ ನಿವೇಶನ ನಂ.3, ನಿವೇಶನ ನಂ. 70/19(ಪಿ), 52, ಕುಲ್ಶೈ ಗ್ರಾಮ ಮತ್ತು ಪೋಸ್ಟ್ ಮೂಡಬೆಟ್ಟು ಬಸ್ ನಿಲ್ದಾಣದ ಹಿಂಭಾಗ, Msez ಕಾಲೋನಿ ಮಂಗಳೂರು–575019. (2) ಶ್ರೀ ಅಕ್ಷಯ ಕುಮಾರ್ ಕೆ ಬಿನ್ ಶ್ರೀ ತುಕಾರಾಂ ನಂ.94, 2 ನಂ, ಮುಖ್ಯ ರಸ್ತೆ ಶಿವನಗರ, ರಾಜಾಜಿ ನಗರ, ಬೆಂಗಳೂರು–560010. ಮತ್ತೊಂದು ವಿಳಾಸ: ನಂ. 5–29/1, ಮಹಾಕಾಳಿ ದೇವಸ್ಥಾನದ ಹತ್ತಿರ, ಚಿತ್ರಾಪುರ, ಕುಳಾಯಿ, ಮಂಗಳೂರು, ಕರ್ನಾಟಕ–575019. ಮತ್ತೊಂದು ವಿಳಾಸ: ಪ್ಲಾಟ್ ಮತ್ತು ನಿರ್ಮಾಣ, ನಿವೇಶನ ನಂ. 3, ನಿವೇಶನ ನಂ. 70/19(ಪಿ), 52, ಕುಲ್ಶೈ ಗ್ರಾಮ ಮತ್ತು ಪೋಸ್ಟ್ ಮೂಡಬೆಟ್ಟು ಬಸ್ ನಿಲ್ದಾಣದ ಹಿಂಭಾಗ, ಎಂಸೆಜ್ ಕಾಲೋನಿ ಮಂಗಳೂರು–575019. (3) ಶ್ರೀಮತಿ ಶಶಿಕಲಾ ಟಿ ಕೋಟ್ಯಾನ್ ಕೋಂ. ಶ್ರೀ. ತುಕಾರಾಂ, ನಂ. 5–29/1, ಮಹಾಕಾಳಿ ದೇವಸ್ಥಾನದ ಹತ್ತಿರ, ಚಿತ್ರಾಪುರ, ಕುಳಾಯಿ, ಮಂಗಳೂರು, ಕರ್ನಾಟಕ–575019. ಮತ್ತೊಂದು ವಿಳಾಸ: ಪ್ಲಾಟ್ ಮತ್ತು ನಿರ್ಮಾಣ, ನಿವೇಶನ ನಂ.3, ನಿವೇಶನ ನಂ.70/19(ಪಿ), 52, ಕುಲ್ಶೈ ಗ್ರಾಮ ಮತ್ತು ಪೋಸ್ಟ್ ಮೂಡಬೆಟ್ಟು ಬಸ್ ನಿಲ್ದಾಣದ ಹಿಂಭಾಗ, Msez ಕಾಲೋನಿ ಮಂಗಳೂರು–575019.</td><td>ಶ್ರೀ ತುಕಾರಾಮ್‌ರವರಿಗೆ ಸೇರಿದ ಆಸ್ತಿಯ ವಿವರ ಷೆಡ್ಯೂಲ್ ಆಸ್ತಿಯು ವಾರ್ಡ್ ನಂ.9 (ಕುಲ್ಶೈ) ಬ್ಲಾಕ್ ನಂ.4, ಥೋಕೂರ್ ರಸ್ತೆ – ಅಡ್ಡ ರಸ್ತೆ (ಸ್ಟ್ರೀಟ್ ನಂ.615) ಕುಲ್ಶೈ, ಮಂಗಳೂರು ತಾಲ್ಲೂಕು, ಕೃಷಿಯೇತರ ಸ್ಥಿರಾಸ್ತಿಯ ಮನೆಯ ನಿವೇಶನವು 52, ಕುಲ್ಶೈ ಗ್ರಾಮ, ಮಂಗಳೂರು ತಾಲ್ಲೂಕು ಮತ್ತು ಮಂಗಳೂರು ತಾಲ್ಲೂಕಿನ ನೋಂದಣಿ ಉಪಜಿಲ್ಲೆಯ ವ್ಯಾಪ್ತಿ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿದೆ ಮತ್ತು ಸಂಯೋಜಿತ ಸರ್ವೆ ನಂ.70/19(ಪಿ), Kissam : ಮನೆಯ ನಿವೇಶ, ವಿಸ್ತೀರ್ಣ: 0.036ಎ.ಸಿ.[148.085 ಚದರ ಮೀಟರ್], ಎಂಸಿಸಿ ಖಾತಾ ನಂ.3669, ಬಿಲ್ಟ್‌ಅಪ್ ಪ್ರದೇಶ: 1594 ಚದರ ಅಡಿ, UPOR Nun:ಎಸ್27–2098/. ಚಕ್ಕುಬಂದಿ: ಪೂರ್ವಕ್ಕೆ: ರಸ್ತೆ, ಪಶ್ಚಿಮಕ್ಕೆ: ಖಾಲಿ ಪ್ಲಾಟ್, ದಕ್ಷಿಣಕ್ಕೆ: ರಸ್ತೆ, ಉತ್ತರಕ್ಕೆ: ನಿರ್ಮಾಣ ಹಂತದಲ್ಲಿದೆ.
ಯಾವುದೇ ಮಾಹಿತಿಗಾಗಿ ಶ್ರೀ ಪ್ರೇಮ್, 8880041234 ರವರನ್ನು ಸಂಪರ್ಕಿಸಿ.</td><td>22.07.2025
ಎನ್‌ಪಿಎ ದಿನಾಂಕ: 09.07.2025</td><td>POWER HOME BRE
Loan A/c No. PHR0077 04938206
Amount : Rs. 24 ,83,563/-
ಒಟ್ಟು ಬಾಕಿ ಮೊತ್ತ ರೂ. 16,72,545/–
ದಿನಾಂಕ: 19.07.2025 ರಂದು ಇದ್ದಂತೆ</td></tr>
<tr><td>2</td><td>(1) ಶ್ರೀ ಅನಿಲ್ ಕುಮಾರ್ ಬಿನ್. ಶ್ರೀ ಬಸವ ಶೆಟ್ಟಿಗಾರ್, (2) ಶ್ರೀಮತಿ ಆಶಾ ಕೋಂ. ಶ್ರೀ ಅನಿಲ್ ಕುಮಾರ್, ಇವರಿಬ್ಬರ ವಿಳಾಸ: ಫ್ಲಾಟ್ ನಂ.207, ದಿವ್ಯಶ್ರೀ ಅಪಾರ್ಟ್‌ಮೆಂಟ್ ಕಾಪಿಕಾಡ್ ಬೆಜೈ ಮಂಗಳೂರು–575001. ಮತ್ತೊಂದು ವಿಳಾಸ: ಎಂಎಕೆ ಗ್ರ್ಯಾಂಡ್ಸ್ ಅಪಾರ್ಟ್‌ಮೆಂಟ್, ಅಪಾರ್ಟ್‌ಮೆಂಟ್ ನಂ. 103, 1ನೇ ಮಹಡಿ, ಕಂಕನಾಡಿ ಮಂಗಳೂರು–575001. ಮತ್ತೊಂದು ವಿಳಾಸ: ಶ್ರೀ ಅನಿಲ್ ಕುಮಾರ್ ಬಿನ್. ಶ್ರೀ ಬಸವ ಶೆಟ್ಟಿಗಾರ್, 8–3, ರಾಘವೇಣೋರ ನೀಲವ ಮೂಡ್ಕೇರಿ ರಸ್ತೆ, ಕುಂದಾಪುರ, ಉಡುಪಿ ಬಸ್ರೂರು, ಮೂಕೇರಿ ರಸ್ತೆ ಹತ್ತಿರ, ಉಡುಪಿ–576211. ಮತ್ತೊಂದು ವಿಳಾಸ: ಶ್ರೀಮತಿ ಆಶಾ ಕೋಂ. ಶ್ರೀ ಅನಿಲ್ ಕುಮಾರ್, 2/91ಎ, ಹಕ್ಲಾಡಿ ಕುಂದಾಪುರ ತಾಲೂಕು, ಹಕ್ಲಾಡಿ, ಎಸ್‌ಬಿಐ ಎಟಿಎಂ, ಉಡುಪಿ–576235.</td><td>ಶ್ರೀ ಅನಿಲ್ ಕುಮಾರ್‌ರವರಿಗೆ ಸೇರಿದ ಆಸ್ತಿಯ ವಿವರ ಎಲ್ಲಾ ಹಕ್ಕು ಬಾಧ್ಯತೆಗಳನ್ನೊಳಗೊಂಡಿರುವ ಕೃಷಿಯೇತರ ಆಸ್ತಿಯು 87ಎ ಗ್ರಾಮ ಮಂಗಳೂರು ತಾಲ್ಲೂಕು, 16ನೇ ಕೋರ್ಟ್ ವಾರ್ಡ್ & ಕದ್ರಿ ವಾರ್ಡ್, ಮಂಗಳೂರು ಸಿಟಿ ಕಾರ್ಪೋರೇಷನ್ ಮತ್ತು ರಿಜಿಸ್ಟರ್ ಉಪ–ವಿಭಾಗ ಮಂಗಳೂರು ಸಿಟಿ, ದಕ್ಷಿಣ ಕನ್ನಡ ಜಿಲ್ಲೆ & ಇದರಲ್ಲಿ ಸಂಯೋಜಿತಗೊಂಡಿದೆ:
<table>
<tr><th>Item No.</th><th>R.S. No.</th><th>T.S. No.</th><th>Kissam</th><th>Extent A-C</th><th>Portion</th></tr>
<tr><td>1</td><td>123</td><td>743/14</td><td>Converted</td><td>0-14</td><td>Whole</td></tr>
<tr><td>2</td><td>123</td><td>743/15</td><td>Converted</td><td>0-02</td><td>Whole</td></tr>
<tr><td>3</td><td>123</td><td>743/16</td><td>Converted</td><td>0-02</td><td>Whole</td></tr>
<tr><td>4</td><td>123</td><td>743/17</td><td>Converted</td><td>0-02</td><td>Whole</td></tr>
<tr><td>5</td><td>123</td><td>743/18</td><td>Converted</td><td>0-02</td><td>Whole</td></tr>
<tr><td>6</td><td>123</td><td>743/19</td><td>Converted</td><td>0-07</td><td>Whole</td></tr>
<tr><td>7</td><td>123</td><td>743/ 3B3B</td><td>Converted</td><td>0-15</td><td>Whole</td></tr>
<tr><td></td><td></td><td>Total</td><td></td><td>0-44</td><td></td></tr>
</table>
ಜೊತೆಗೆ ಎಲ್ಲಾ ಹಕ್ಕು ಬಾಧ್ಯತೆಗಳನ್ನೊಳಗೊಂಡಿದೆ. ಚಕ್ಕುಬಂದಿ: ಉತ್ತರಕ್ಕೆ: ಸರ್ವೆ ಲೇನ್, ದಕ್ಷಿಣಕ್ಕೆ: ಮುನಿಸಿಪಲ್ ರಸ್ತೆ, ಪೂರ್ವಕ್ಕೆ: ಸರ್ವೆ ಲೇನ್, ಪಶ್ಚಿಮಕ್ಕೆ: ಸರ್ವೆ ಲೇನ್. ಷೆಡ್ಯೂಲ್ 'ಬಿ' : (ಅಪಾರ್ಟ್‌ಮೆಂಟ್‌ನ ವಿವರ) ಎರಡು ಬೆಡ್‌ರೂಮ್‌ಗಳನ್ನೊಳಗೊಂಡಿರುವ ವಾಸಯೋಗ್ಯ ಅಪಾರ್ಟ್‌ಮೆಂಟ್ ನಂ.103 MAK GRANDS ಎಂದು ಕರೆಯಲ್ಪಡುವ ಅಪಾರ್ಟ್‌ಮೆಂಟ್ ಕಟ್ಟಡದ ಮೊದಲನೇ ಮಹಡಿಯಲ್ಲೊಳಗೊಂಡಿದ್ದು, ವಿಸ್ತೀರ್ಣ 1330 ಚದರ ಅಡಿ ಸೂಪರ್ ಬಿಲ್ಟ್‌ಅಪ್ ಪ್ರದೇಶ ಜೊತೆಗೆ 3.09% ಅವಿಭಾಜಿತ ಭಾಗವನ್ನು ಕೃಷಿಯೇತರ ಸ್ಥಿರಾಸ್ತಿಯಲ್ಲಿ ಒಳಗೊಂಡಿದೆ ಅಂದರೆ ಷೆಡ್ಯೂಲ್ 'ಎ' ಆಸ್ತಿಯಲ್ಲಿ ಒಳಗೊಂಡಿದೆ ಮತ್ತು ಎಲ್ಲಾ ಹಕ್ಕು ಬಾಧ್ಯತೆಗಳು ಜೊತೆಗೆ ನಂ.10ರಲ್ಲಿ ಕಾರು ನಿಲ್ಲಿಸುವ ಸ್ಥಳವನ್ನೊಳಗೊಂಡಿದೆ.
ಯಾವುದೇ ಮಾಹಿತಿಗಾಗಿ ಶ್ರೀ ಸುದರ್ಶನ್, 9611067929 ರವರನ್ನು ಸಂಪರ್ಕಿಸಿ.</td><td>06.02.2025
ಎನ್‌ಪಿಎ ದಿನಾಂಕ: 11.01.2025</td><td>POWER HOME VANILLA BRE
Loan A/c No. PHR0077 06992299
Amount : Rs. 49,04,982/-
ಒಟ್ಟು ಬಾಕಿ ಮೊತ್ತ ರೂ.48,96,598/–
ದಿನಾಂಕ : 03.02.2025 ರಂದು ಇದ್ದಂತೆ</td></tr>
<tr><td>3.</td><td>(1) ಶ್ರೀ ಮಹದೇವ ಎಂ. ಬಿನ್. ಮರಚಿಕೊಂಡ ಮಹದೇವಪ್ಪ, (2) ಶ್ರೀ ವಿಶ್ವನಾಥ್ ಆರ್ ಬಿನ್. ಶ್ರೀ ರಘು, ಇವರಿಬ್ಬರ ವಿಳಾಸ: ನಂ.2272, 4ನೇ ಕ್ರಾಸ್, 5ನೇ ಮೇನ್, ವಿನಾಯಕನಗರ, ಜಯಲಕ್ಷ್ಮೀಪುರಂ, ಮೈಸೂರು–570017. ಮತ್ತೊಂದು ವಿಳಾಸ: 10502, 2ನೇ ಹಂತ, 4ನೇ ಹಂತ, ವಿಜಯನಗರ, ಮೈಸೂರು, ಕರ್ನಾಟಕ, 570017. (3) ಶ್ರೀಮತಿ. ಶುಭಾ ಎಸ್ ಕೋಂ. ಶ್ರೀ. ಮಹಾದೇವ ಎಂ, ನಂ. 233/ಸಿ, 3ನೇ ಮೇನ್, ಜಯಲಕ್ಷ್ಮೀಪುರಂ, ಮೈಸೂರು–570012. ಮತ್ತೊಂದು ವಿಳಾಸ: 4ನೇ ಹಂತ, ವಿಜಯನಗರ, ಮೈಸೂರು ಕರ್ನಾಟಕ, 570017.</td><td>ಶ್ರೀ ಮಹಾದೇವ ಎಂ ರವರಿಗೆ ಸೇರಿದ ಆಸ್ತಿಯ ವಿವರ ಎಲ್ಲಾ ಹಕ್ಕು ಬಾಧ್ಯತೆಗಳನ್ನೊಳಗೊಂಡಿರುವ ನಿರ್ಮಿತ ಮನೆಯ ಆಸ್ತಿಯ ನಿವೇಶನ ನಂ.10502, ಈ ಆಸ್ತಿಯು 2ನೇ ಪೇಸ್, 4ನೇ ಹಂತ, ವಿಜಯನಗರ, ದೇವರಾಜ ಮೊಹಲ್ಲಾ, ಮೈಸೂರಿನಲ್ಲಿದೆ, ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 12.00 ಮೀಟರ್‌ಗಳು ಮತ್ತು ಉತ್ತರದಿಂದ ದಕ್ಷಿಣಕ್ಕೆ: 09.00 ಮೀಟರ್‌ಗಳು, ಚಕ್ಕುಬಂದಿ: ಪೂರ್ವಕ್ಕೆ: ರಸ್ತೆ, ಪಶ್ಚಿಮಕ್ಕೆ: ಆಸ್ತಿಯ ನಿವೇಶನ ನಂ.10508, ಉತ್ತರಕ್ಕೆ: ಆಸ್ತಿಯ ನಿವೇಶನ ನಂ.10501, ದಕ್ಷಿಣಕ್ಕೆ: ಆಸ್ತಿಯ ನಿವೇಶನ ನಂ.10502/ಎ.
ಯಾವುದೇ ಮಾಹಿತಿಗಾಗಿ ಶ್ರೀ ಪ್ರೇಮ್, 8880041234 ರವರನ್ನು ಸಂಪರ್ಕಿಸಿ.</td><td>22.07.2025
ಎನ್‌ಪಿಎ ದಿನಾಂಕ: 09.07.2025</td><td>POWER HOME
Loan A/c No. PHR0151 01432689
Amount : Rs.35,00,000/-
ಒಟ್ಟು ಬಾಕಿ ಮೊತ್ತ ರೂ.1,37,668/–
ದಿನಾಂಕ : 19.07.2025 ರಂದು ಇದ್ದಂತೆ</td></tr>
<tr><td>4.</td><td>(1) ಮೆ॥ ಶ್ರೀ ಸಾಯಿ ಟ್ರೇಡರ್ಸ್ ಇದನ್ನು ಪ್ರತಿನಿಧಿಸುವ ಮಾಲೀಕರು ಶ್ರೀ ಎನ್ ಮೋಹನ್ ಕುಮಾರ್, ಡೋರ್ ನಂ.114, ರಥನಪುರಿ ರಸ್ತೆ ಸಿಬಿಟಿ ಕಾಲೋನಿ ಕರ್ನಾಟಕ, ರತ್ನಪುರಿ ಕಾಲೋನಿ ಮೈಸೂರು–571189.
(2) ಶ್ರೀ ಎನ್ ಮೋಹನ್‌ಕುಮಾರ್ ಬಿನ್. ಶ್ರೀ ನಾಚಿಮುತ್ತು, ಸಿಬಿಟಿ ಕಾಲೋನಿ ಪೋಸ್ಟ್ ಹುಣಸೂರು ತಾಲ್ಲೂಕು, ಮೈಸೂರು–571189.</td><td>ಶ್ರೀ ಎನ್ ಮೋಹನ್ ಕುಮಾರ್ ರವರಿಗೆ ಸೇರಿದ ಆಸ್ತಿಯ ವಿವರ ಆಸ್ತಿಯ ವಿವರ: ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಆಸ್ತಿಯ ಪಂಚಾಯತ್ ಖಾತಾ ನಂ.114, ಯೂನಿಕ್ ನಂ.152200202303400167, ಈ ಆಸ್ತಿಯು ಕೊಯಮತ್ತೂರು ಕಾಲೋನಿ, ಆಸ್ಪತ್ರೆಕಾವಲ್ ಗ್ರಾಮ, ಕಸಬಾ ಹೋಬಳಿ, ಹುಣಸೂರು ತಾಲ್ಲೂಕು, ಮೈಸೂರು ಜಿಲ್ಲೆಯಲ್ಲಿದೆ. ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 36.576 ಮೀಟರ್‌ಗಳು ಮತ್ತು ಉತ್ತರದಿಂದ ದಕ್ಷಿಣಕ್ಕೆ: 9.144 ಮೀಟರ್‌ಗಳು, ಒಟ್ಟು ವಿಸ್ತೀರ್ಣ 334.45 ಚದರ ಮೀಟರ್‌ಗಳು, ಚಕ್ಕುಬಂದಿ: ಪೂರ್ವಕ್ಕೆ: ಹುಣಸೂರು ಧರ್ಮಪುರ ರಸ್ತೆ, ಪಶ್ಚಿಮಕ್ಕೆ: ದೇವಿ ಲೇಕ್ ವಾಟರ್ ಚಾನಲ್, ಉತ್ತರಕ್ಕೆ: ಬಿ. ನಂಜಪ್ಪರವರ ಮನೆ, ದಕ್ಷಿಣಕ್ಕೆ: ಆರ್ ರಾಮಕೃಷ್ಣರವರ ಆಸ್ತಿ.
ಯಾವುದೇ ಮಾಹಿತಿಗಾಗಿ ಶ್ರೀ ಪ್ರಕಾಶ್, 9986316545 ರವರನ್ನು ಸಂಪರ್ಕಿಸಿ.</td><td>17.07.2025
ಎನ್‌ಪಿಎ ದಿನಾಂಕ: 24.06.2025</td><td>SBB OVER DRAFT
Loan A/c No. 92303000 8569386
Amount : Rs.35,00,000/-
ಒಟ್ಟು ಬಾಕಿ ಮೊತ್ತ ರೂ.34,59,934/–
ದಿನಾಂಕ : 18.07.2025 ರಂದು ಇದ್ದಂತೆ</td></tr>
<tr><td>5.</td><td>(1) ಮೆ॥ ಎಸ್ ಕೆ ಇಂಡಸ್ಟ್ರೀಸ್ ಇದನ್ನು ಪ್ರತಿನಿಧಿಸುವ ಜಾಮೀನುದಾರರು ಶ್ರೀ. ಇರ್ಫಾನ್ ಖಾನ್ ಮತ್ತು ಶ್ರೀ. ಅಮ್ಜದುಲ್ಲಾ ಖಾನ್, ನಾಗೇನಹಳ್ಳಿ ಗ್ರಾಮ, ನಿವೇಶನ ನಂ.43,2ಬಿ, 43,2ಸಿ, ನಾಗವಲ್ಲಿ ಅಂಚೆ, ಗಂಗೋನಹಳ್ಳಿ ಗ್ರಾಮಪಂಚಾಯತ್, ಹೆಬ್ಬೂರು ಹೋಬಳಿ, ತುಮಕೂರು–572120.
(2) ಶ್ರೀ. ಇರ್ಫಾನ್ ಖಾನ್ ಬಿನ್. ಅಮ್ಜದುಲ್ಲಾ ಖಾನ್ ನಂ.501, 5ನೇ ಮಹಡಿ, ಪ್ಯಾರಾಡಿಗ್ಮ್ ಪ್ರಿಸ್ಟಿಮೆಸಕಮ್ಮ ಲೇಔಟ್, ಲಿಂಗರಾಜಪುರಂ ಬೆಂಗಳೂರು–560084.
(3) ಶ್ರೀ ಅಮ್ಜದುಲ್ಲಾ ಖಾನ್ ಬಿನ್. ಶ್ರೀ ಚಾಂದಪೀರ್ ಖಾನ್, ಚಾಂದಪೀರ್ ಖಾನ್, ಕುಂಬಿಪಾಳ್ಯ ಹೆಬ್ಬೂರು ಹೋಬಳಿ, ನಾಗವಲ್ಲಿ ಅಂಚೆ, ನಾಗವಲ್ಲಿ, ತುಮಕೂರು, ಕರ್ನಾಟಕ–572118.</td><td>ಶ್ರೀ ಅಮ್ಜದುಲ್ಲಾ ಖಾನ್‌ರವರಿಗೆ ಸೇರಿದ ಆಸ್ತಿಯ ವಿವರ ಆಸ್ತಿಯ ವಿವರ: ಹಕ್ಕು ಪತ್ರಗಳ ಕಾನೂನು ಪರಿಶೀಲನಾ ವರದಿ ಮತ್ತು ಸಂಬಂಧಿಸಿದ ದಾಖಲೆಗಳ ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಆಸ್ತಿಯ ಖಾತಾ ನಂ.29, ಆಸ್ತಿಯ ಐಡಿ ನಂ.152500903300920440, ಸರ್ವೆ ನಂ.43/2ಬಿ ಮತ್ತು ಸರ್ವೆ ನಂ.43/2ಸಿ ರಲ್ಲಿ ನಿರ್ಮಿಸಲಾಗಿದೆ, ವಿಸ್ತೀರ್ಣ 0–15 ಗುಂಟೆಗಳು, ಈ ಆಸ್ತಿಯು ನಾಗೇನಹಳ್ಳಿ ಗ್ರಾಮ, ಗಂಗೋನಹಳ್ಳಿ ಗ್ರಾಮ ಪಂಚಾಯತ್, ಹೆಬ್ಬೂರು ಹೋಬಳಿ, ತುಮಕೂರು ತಾಲ್ಲೂಕಿನಲ್ಲಿದೆ, ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 44.50 ಮೀಟರ್‌ಗಳು ಮತ್ತು ಉತ್ತರದಿಂದ ದಕ್ಷಿಣಕ್ಕೆ: 65.95 ಮೀಟರ್‌ಗಳು, ಒಟ್ಟು ವಿಸ್ತೀರ್ಣ 2934.77 ಚದರ ಮೀಟರ್‌ಗಳು ಮತ್ತು ಚಕ್ಕುಬಂದಿ: ಪೂರ್ವಕ್ಕೆ: ರಸ್ತೆ, ಪಶ್ಚಿಮಕ್ಕೆ: ಗಂಗೋನಹಳ್ಳಿ ಗೇಟ್, ಉತ್ತರಕ್ಕೆ: ಸರ್ವೆ ನಂ.43/2ಎ, ದಕ್ಷಿಣಕ್ಕೆ: ಸರ್ವೆ ನಂ.42.
ಯಾವುದೇ ಮಾಹಿತಿಗಾಗಿ ಶ್ರೀ ಪ್ರೇಮ್, 8880051234 ರವರನ್ನು ಸಂಪರ್ಕಿಸಿ.</td><td>17.07.2025
ಎನ್‌ಪಿಎ ದಿನಾಂಕ: 10.06.2025</td><td>SBB OVER DRAFT
Loan A/c No. 92303004 1206800
Amount : Rs.1,00,000/-
ಒಟ್ಟು ಬಾಕಿ ಮೊತ್ತ ರೂ.96,96,481/–
ದಿನಾಂಕ : 18.07.2025 ರಂದು ಇದ್ದಂತೆ</td></tr>
<tr><td>6.</td><td>(1) ಮೆ॥ ಎಸಿಇ ಇನ್‌ಫ್ರಾನೆಟ್ ಸೊಲ್ಯೂಷನ್ಸ್ ಇದನ್ನು ಪ್ರತಿನಿಧಿಸುವ ಮಾಲೀಕರು ಶ್ರೀ. ಪವೀಂದ್ರ ಕೂಪಾದಿರ ಮುತ್ತಪ್ಪ, ಮತ್ತು ಇದನ್ನು ಪ್ರತಿನಿಧಿಸುವ ಜಾಮೀನುದಾರರು: ಶ್ರೀ ಯತೀಶ್ ಕೂಪಾದಿರ ಮುತ್ತಪ್ಪ, 2ನೇ, ಮಹಡಿ ನಂ.36, ಸೆಕ್ಟರ್ ಎ, 1ನೇ ಕ್ರಾಸ್, 3ನೇ ಮೇನ್ ಅಮೃತನಗರ ಸಹಕಾರನಗರ ಪೋಸ್ಟ್ ಶಾರದ ವಿದ್ಯಾಲಯ, ಬ್ಯಾಟರಾಯನಪುರ, ಬೆಂಗಳೂರು–560092.</td><td>1. ಆಸ್ತಿಯ ವಿವರ: ಆಸ್ತಿಯ ವಾಸಯೋಗ್ಯ ಫ್ಲಾಟ್ ನಂ.309, ಕಾಫಿ ಬೋರ್ಡ್ ಲೇಔಟ್, ಕೆಂಪಾಪುರ, ವಿನ್ಸ್ಟ ಸಾಯಿ ಕಲ್ಯಾಣ್ ಬಿಲ್ಡರ್ಸ್, ಬೆಂಗಳೂರು ಜಿಲ್ಲೆ, ಕರ್ನಾಟಕ ಸ್ಟೇಟ್, ಪಿನ್ ಕೋಡ್–560024. ಫ್ಲಾಟ್ ಚಕ್ಕುಬಂದಿ: ಪೂರ್ವಕ್ಕೆ: ಬುಚಿರಾಜುರವರ ಆಸ್ತಿ, ಪಶ್ಚಿಮಕ್ಕೆ: ಸಾಯಿ ಕಲ್ಯಾಣ್ ಕಟ್ಟಡದ ಆಸ್ತಿ, ಉತ್ತರಕ್ಕೆ: ರಸ್ತೆ, ದಕ್ಷಿಣಕ್ಕೆ: ಸರ್ವೆ ನಂ.21/3 ರಲ್ಲಿ ಜವಾಹರಲಾಲ್ 9 ಅಡಿ ರಸ್ತೆ.
2. ಆಸ್ತಿಯ ವಿವರ: ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಸರ್ವೆ ನಂ.28/10 ಬ್ಲಾಕ್–23, ಈ ಆಸ್ತಿಯು ಬ್ಲಾಕ್ 23, ಕನ್ನಡಬಾಣೆ, ನಗರ ಪುರಸಭೆ, ಮಡಿಕೇರಿ, ಕೊಡಗು ಜಿಲ್ಲೆಯಲ್ಲಿದೆ ಮತ್ತು ಚಕ್ಕುಬಂದಿ: ಪೂರ್ವಕ್ಕೆ: ನಾರಾಯಣ ಮತ್ತು ಮೀನಾಕ್ಷಿರವರ ಆಸ್ತಿ, ಪಶ್ಚಿಮಕ್ಕೆ: ಫೂಟ್‌ಪಾತ್ ಮತ್ತು ಮುತ್ತಪ್ಪರವರ ಆಸ್ತಿ, ಉತ್ತರಕ್ಕೆ: ಮುನಿಸಿಪಲ್ ರಸ್ತೆ, ದಕ್ಷಿಣಕ್ಕೆ: ಕಣಿವೆ ಮತ್ತು ಜೌಗು ಪ್ರದೇಶ, ವಿಸ್ತೀರ್ಣ 15 ಎಕರೆ (15 ಸೆಂಟ್ಸ್).
ಯಾವುದೇ ಮಾಹಿತಿಗಾಗಿ ಶ್ರೀ ಪ್ರಕಾಶ್, 9986316545 ರವರನ್ನು ಸಂಪರ್ಕಿಸಿ.</td><td>14.07.2025
ಎನ್‌ಪಿಎ ದಿನಾಂಕ: 31.03.2025</td><td>SBB CASH CREDIT
Loan A/c No. 92003005 8035803
Amount : Rs. 66,66,660/-
ಒಟ್ಟು ಬಾಕಿ ಮೊತ್ತ ರೂ.63,72,370/–
ದಿನಾಂಕ : 14.07.2025 ರಂದು ಇದ್ದಂತೆ</td></tr>
<tr><td>7.</td><td>(1) ಶ್ರೀ.ಶ್ರೀಧರ್ ಬಿ ಎಸ್ ಬಿನ್. ಶ್ರೀ ಎಸ್ ಸುಬ್ರಾಯ ಶೆಟ್ಟಿ, (2) ಶ್ರೀಮತಿ ಚಂದನಾ ಶ್ರೀಧರ್ ಕೋಂ ಶ್ರೀ ಶ್ರೀಧರ್ ಬಿ ಎಸ್, ಇವರಿಬ್ಬರ ವಿಳಾಸ: 74, ಅನನ್ಯ, 11ನೇ ಮುಖ್ಯ, 14ನೇ ಕ್ರಾಸ್ ಪದ್ಮನಾಭ ನಗರ, ಬೆಂಗಳೂರು, ಕರ್ನಾಟಕ–560070. ಮತ್ತೊಂದು ವಿಳಾಸ: 195, ಬಿಇಎಂಎಲ್ 7ನೇ ಹಂತ, ಮೈಲಸಂದ್ರ, ಕೆಂಗೇರಿ, ಬೆಂಗಳೂರು, ಕರ್ನಾಟಕ–560078. ಮತ್ತೊಂದು ವಿಳಾಸ: ಶ್ರೀ ಶ್ರೀಧರ್ ಬಿ ಎಸ್ ಬಿನ್ ಶ್ರೀ ಎಸ್ ಸುಬ್ರಾಯ ಶೆಟ್ಟಿ ಹಸ್ಮಿತ ರೆಸಿಡೆನ್ಸಿ ಎಸ್‌ಎಫ್–4 11ನೇ ಮುಖ್ಯ ಕೊನೆ ರಸ್ತೆ, ಪದ್ಮನಾಭ ನಗರ, ಬೆಂಗಳೂರು–560070. ಮತ್ತೊಂದು ವಿಳಾಸ: ಶ್ರೀಮತಿ ಚಂದನಾ ಶ್ರೀಧರ್ ಕೋಂ. ಶ್ರೀ. ಶ್ರೀಧರ್ ಬಿ ಎಸ್ ಎಐಜಿ 77, ಶಿವಸದನ 3ನೇ ಹಂತ, ಕುವೆಂಪು ನಗರ, ಮೈಸೂರು–570023.</td><td>ಶ್ರೀ ಶ್ರೀಧರ್ ಬಿ ಎಸ್ ಮತ್ತು ಶ್ರೀ ಚಂದನ್ ಶ್ರೀಧರ್‌ರವರಿಗೆ ಸೇರಿದ ಆಸ್ತಿಯ ವಿವರ: ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಖಾಲಿ ನಿವೇಶನ ನಂ.195, ಈ ಆಸ್ತಿಯು ಸರ್ವೆ ನಂ.20/3, ಬಿಬಿಎಂಪಿ ಖಾತಾ ನಂ.1554/195/20/3/1468/1534, ಈ ಆಸ್ತಿಯು ಬಿ.ಇ.ಎಂ.ಎಲ್. ಲೇಔಟ್, 7ನೇ ಹಂತ, ಮೈಲಸಂದ್ರ ಗ್ರಾಮ, ಕೆಂಗೇರಿ ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕು, ದಿನಾಂಕ 06/01/2003ರಂದು ಪರಿವರ್ತಿತ ಆದೇಶ ನಂ.BDS/ALN/SR (S) 277/2002-03 ರ ಪ್ರಕಾರ ಇದನ್ನು ಪರಿವರ್ತಿಸಲಾಗಿದೆ. ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 40 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ: 60 ಅಡಿ, ಒಟ್ಟು ವಿಸ್ತೀರ್ಣ 2400 ಚದರ ಅಡಿ, ಜೊತೆಗೆ ಎಲ್ಲಾ ಹಕ್ಕು ಬಾಧ್ಯತೆಗಳನ್ನೊಳಗೊಂಡಿದೆ ಮತ್ತು ಚಕ್ಕುಬಂದಿ: ಪೂರ್ವಕ್ಕೆ: ನಿವೇಶನ ನಂ.194, ಪಶ್ಚಿಮಕ್ಕೆ: ನಿವೇಶನ ನಂ.196, ಉತ್ತರಕ್ಕೆ: ರಸ್ತೆ, ದಕ್ಷಿಣಕ್ಕೆ: ಖಾಸಗಿ ಆಸ್ತಿ.
ಯಾವುದೇ ಮಾಹಿತಿಗಾಗಿ ಶ್ರೀ ಸಂಜಯ್ ಪ್ರಸಾದ್, 9916566630 ರವರನ್ನು ಸಂಪರ್ಕಿಸಿ.</td><td>22.07.2025
ಎನ್‌ಪಿಎ ದಿನಾಂಕ: 09.07.2025</td><td>POWER HOME
Loan A/c No. PHR02270 2043232
Amount : Rs.60,00,000/-
ಒಟ್ಟು ಬಾಕಿ ಮೊತ್ತ ರೂ.20,45,209/–
ದಿನಾಂಕ : 19.07.2025 ರಂದು ಇದ್ದಂತೆ</td></tr>
<tr><td>8.</td><td>(1) ಶ್ರೀ ಶಕ್ತಿ ಹಾರ್ಡ್‌ವೇರ್ ಇದನ್ನು ಪ್ರತಿನಿಧಿಸುವ ಮಾಲೀಕರು ಶ್ರೀ ಆರ್ ಕೃಷ್ಣಸಾ ಮತ್ತು ಜಾಮೀನುದಾರರು ಶ್ರೀ ಆರ್ ಶಂಕರ್‌ಸಾ ರಂಗ್ರೇಜ್ ಮತ್ತು ಶ್ರೀ ಭೀಮಸಾ ರಂಗ್ರೇಜ್, ಡೋರ್ ನಂ.331, 31ನೇ ವಾರ್ಡ್, ವಾಲ್ಮೀಕಿ ಸರ್ಕಲ್, ಅಣೆಕಟ್ಟು ರಸ್ತೆ ಹೊಸಪೇಟೆ ಬಳ್ಳಾರಿ–583201.
ಮತ್ತೊಂದು ವಿಳಾಸ: ಡೋರ್ ನಂ.563/1, 31 ನೇ ವಾರ್ಡ್ ವಾಲ್ಮೀಕಿ ಸರ್ಕಲ್ ಅಣೆಕಟ್ಟು ರಸ್ತೆ ಹೊಸಪೇಟೆ ಬಳ್ಳಾರಿ–583201.
(2) ಶ್ರೀ ಆರ್ ಕೃಷ್ಣಸಾ ಬಿನ್. ಶ್ರೀ ನಾರಾಯಣಸಾ ರಂಗ್ರೇಜ್, ಮನೆ ನಂ.224, 16ನೇ ವಾರ್ಡ್ ಅಣೆಕಟ್ಟು ರಸ್ತೆ, ವಾಲ್ಮೀಕಿ ಸರ್ಕಲ್ ಹೊಸಪೇಟೆ, ಬಳ್ಳಾರಿ–583201. (3) ಶ್ರೀ ಆರ್ ಶಂಕರ್‌ಸಾ ರಂಗ್ರೇಜ್ ಬಿನ್ ಶ್ರೀ ಕೃಷ್ಣಸಾ ರಂಗ್ರೇಜ್, ಮನೆ ನಂ.224, 16ನೇ ವಾರ್ಡ್ ಅಣೆಕಟ್ಟು ರಸ್ತೆ, ವಾಲ್ಮೀಕಿ ವೃತ್ತ ಹೊಸಪೇಟೆ, ಬಳ್ಳಾರಿ–583201.
(4) ಶ್ರೀ ಭೀಮಸಾ ರಂಗ್ರೇಜ್ ಬಿನ್. ಶ್ರೀ ಕೃಷ್ಣಸಾ ರಂಗ್ರೇಜ್, ಮನೆ ನಂ.224, 16ನೇ ವಾರ್ಡ್ ಅಣೆಕಟ್ಟು ರಸ್ತೆ, ವಾಲ್ಮೀಕಿ ವೃತ್ತ ಹೊಸಪೇಟೆ, ಬಳ್ಳಾರಿ–583201.</td><td>ಶ್ರೀ ಆರ್ ಶಂಕರ್ ಸಾ ರಂಗ್ರೇಜ್‌ರವರ ಆಸ್ತಿಯ ವಿವರ ಆಸ್ತಿ ನಂ.1 : ವಾರ್ಡ್ ನಂ. 15, ಹೊಸ ವಾರ್ಡ್ ನಂ. 31, ಡೋರ್ ನಂ. 145, ಹೊಸ ಡೋರ್ ನಂ. 197, ಹಳೆ ಡೋರ್ ನಂ. 145, ಹಳೆ ಅಸೆಸ್‌ಮೆಂಟ್ ನಂ. 9834, ಹೊಸ ಅಸೆಸ್‌ಮೆಂಟ್ ನಂ. 254 ಪಿಕ್, ಫಾರಂ ನಂ.3 ರ ಪ್ರಕಾರ ಸ್ವತ್ತಿನ ನಂ. 31–1–3–73, ವಾರ್ಡ್ ನಂ. ಹರಿಹರ ರಸ್ತೆ, ನೆಹರೂ ಕಾಲೋನಿ ಡ್ಯಾಂ ರಸ್ತೆ, ಹೊಸಪೇಟೆ ಮತ್ತು ಎಸ್‌ಆರ್‌ಓ ಹೊಸಪೇಟೆ, ಹೊಸಪೇಟೆ ತಾಲ್ಲೂಕು, ವಿಜಯನಗರ (ಹಿಂದಿನ ಬಳ್ಳಾರಿ) ಜಿಲ್ಲೆಯಲ್ಲಿ ನೋಂದಣಿಯಾಗಿರುತ್ತದೆ. ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ : 22 ಅಡಿ (6.70613 ಮೀಟರ್), ಉತ್ತರದಿಂದ ದಕ್ಷಿಣಕ್ಕೆ : 35.00 ಅಡಿ (10.668021 ಮೀಟರ್) ಒಟ್ಟು=770 ಚದರ ಅಡಿ (71.53531 ಚದರ ಮೀಟರ್) ನೆಲಮಹಡಿ = 71.53531 ಚದರ ಮೀಟರ್, ಕಮರ್ಷಿಯಲ್, ಮೊದಲನೇ ಮಹಡಿ=71.53531 ಚದರ ಮೀಟರ್, ಕಮರ್ಷಿಯಲ್, ಚಕ್ಕುಬಂದಿ : ಪೂರ್ವಕ್ಕೆ : ಕೊಟ್ರಮ್ಮ ರವರ ಮನೆ, ಪಶ್ಚಿಮಕ್ಕೆ : ಬಾಬು ರವರ ಶೆಟ್, ಉತ್ತರಕ್ಕೆ : ರಸ್ತೆ, ದಕ್ಷಿಣಕ್ಕೆ : ಹೊಸಪೇಟೆ ಸಂಕಪ್ಪ ದೇವಸ್ಥಾನ.ಆಸ್ತಿ ನಂ. 2 : ಹಳೆ ವಾರ್ಡ್ ನಂ.19, ಹೊಸ ವಾರ್ಡ್ ನಂ. 24, ಸರ್ವೆ ನಂ. 134/ಬಿ4/ಬಿ, ಜಗದಾಂಬ ದೇವಸ್ಥಾನ, ಹೆಚ್‌ಎಲ್‌ಸಿ ಎಕ್ಸ್‌ಟೆನ್ಷನ್ ಪ್ರದೇಶ, ಹೊಸಪೇಟೆ, ಹೊಸಪೇಟೆ ತಾಲ್ಲೂಕು, ವಿಜಯನಗರ (ಹಿಂದಿನ ಬಳ್ಳಾರಿ) ಜಿಲ್ಲೆ, ವಿಜಯನಗರ (ಹಿಂದಿನ ಬಳ್ಳಾರಿ) ಜಿಲ್ಲೆ, ಕರ್ನಾಟಕ. ಪ್ಲಾಟ್ ನಂ. 23, ಅಸೆಸ್‌ಮೆಂಟ್ ನಂ. 18772 ಹಳೆ ವಾರ್ಡ್ ನಂ. 19, ಹೊಸ ವಾರ್ಡ್ ನಂ. 24, ಸರ್ವೆ ನಂ. 134/ಬಿ4/ಬಿ, ಫಾರಂ. 3 ರ ಪ್ರಕಾರ ಸ್ವತ್ತಿನ ನಂ. 24–1–534/158, ಜಗದಾಂಬ ದೇವಸ್ಥಾನ ಹೆಚ್‌ಎಲ್‌ಸಿ ಎಕ್ಸ್‌ಟೆನ್ಷನ್ ಪ್ರದೇಶ ಹೊಸಪೇಟೆ ಮತ್ತು ಎಸ್‌ಆರ್‌ಓ ಹೊಸಪೇಟೆಯಲ್ಲಿ ನೋಂದಣಿಯಾಗಿರುತ್ತದೆ. ಸ್ವತ್ತಿನ ವಿಸ್ತೀರ್ಣ ಪೂರ್ವ–ಪಶ್ಚಿಮ : 40 ಅಡಿ (12.192024 ಮೀಟರ್), ದಕ್ಷಿಣ–ಉತ್ತರ : 30–00 ಅಡಿ (9.14836 ಮೀಟರ್) ಒಟ್ಟು=1200 ಚದರ ಅಡಿ (111.4836 ಚದರ ಮೀಟರ್] ನೆಲಮಹಡಿ 65.130809 ಚದರ ಮೀಟರ್, ಮೊದಲನೇ ಮಹಡಿ : 65.310809 ಚದರ ಮೀಟರ್, ಎರಡನೇ ಮಹಡಿ – 34.839625 ಚದರ ಮೀಟರ್, ಚಕ್ಕುಬಂದಿ : ಪೂರ್ವಕ್ಕೆ : ಉಪ ರಸ್ತೆ, ಪಶ್ಚಿಮಕ್ಕೆ : ಪ್ಲಾಟ್ ನಂ. 20, ಉತ್ತರಕ್ಕೆ : ಪ್ಲಾಟ್ ನಂ. 22, ದಕ್ಷಿಣಕ್ಕೆ : ಪ್ಲಾಟ್ ನಂ. 24.
ಯಾವುದೇ ಮಾಹಿತಿಗಾಗಿ ಶ್ರೀ ಸಂಜಯ್ ಪ್ರಸಾದ್, 9916566630 ರವರನ್ನು ಸಂಪರ್ಕಿಸಿ.</td><td>17.07.2025
ಎನ್‌ಪಿಎ ದಿನಾಂಕ: 23.06.2025</td><td>SBB CASH CREDIT
Loan A/c No. 923030015097702 / 923060050719675
Amount : Rs.48,00,000/-
ಒಟ್ಟು ಬಾಕಿ ಮೊತ್ತ ರೂ.43,70,721/– ಮತ್ತು ರೂ. 52,20,649/–
ದಿನಾಂಕ : 18.07.2025 ರಂದು ಇದ್ದಂತೆ</td></tr>
<tr><td>9.</td><td>(1) ಶ್ರೀ ಬಿ ಎಸ್ ಭರತ್ ಬಿನ್ ಶಾಂತರಾಜು ಶಿವಶಂಕರ್, (2) ಶ್ರೀ ಬಿ ಶಿವಶಂಕರ್ ಶಾಂತರಾಜು ಬಿನ್ ಶಾಂತರಾಜು, (3) ಶ್ರೀ ಸತೀಶ್ ಶಿವಶಂಕರ್ ಬಿನ್ ಶಿವಶಂಕರ್, (4) ಶ್ರೀ ದೀಪಕ್ ಎಸ್ ಬಿನ್ ಶಿವಶಂಕರ್, ಇವರೆಲ್ಲರ ವಿಳಾಸ: ನಂ.74, ಹೊಸ ನಂ.525/74/515, 3ನೇ ಮುಖ್ಯ ರಸ್ತೆ, ಪ್ರಶಾಂತಿ ನಗರ ವಿಸ್ತರಣೆ, ಇಸ್ರೋ ಲೇಔಟ್, ಬೆಂಗಳೂರು–560078. ಮತ್ತೊಂದು ವಿಳಾಸ: # 967, 45 ನೇ ಕ್ರಾಸ್, ಕುಮಾರ ಸ್ವಾಮಿ ಲೇಔಟ್, 2 ನೇ ಹಂತ ಜೆಪಿ ನಗರ, ಬೆಂಗಳೂರು–560078.
ಮತ್ತೊಂದು ವಿಳಾಸ: ಶ್ರೀ ಬಿ ಎಸ್ ಭರತ್ ಬಿನ್ ಶಾಂತರಾಜು ಶಿವಶಂಕರ್ ಉಪ ವ್ಯವಸ್ಥಾಪಕ ಎಸ್ ಬ್ರೈಟ್ ಫಾರ್ಮಾ ಪ್ರೈವೇಟ್ ಲಿಮಿಟೆಡ್ 77ಡಿ & # 116/117 ಕೆಐಎಡಿಬಿ ಕೈಗಾರಿಕಾ ಪ್ರದೇಶ ಜಿಗಣಿ ಬೆಂಗಳೂರು 560105.</td><td>ಷೆಡ್ಯೂಲ್ ಆಸ್ತಿ : ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಆಸ್ತಿಯ ನಂ.967, 2ನೇ ಹಂತ, ಕುಮಾರಸ್ವಾಮಿ ಲೇಔಟ್, ಬೆಂಗಳೂರಿನಲ್ಲಿದೆ. ವಿಸ್ತೀರ್ಣ 125.13 ಜೊತೆಗೆ ಕಟ್ಟಡವನ್ನೊಳಗೊಂಡಿದೆ ಮತ್ತು ಅವುಗಳ ಮೇಲಿನ ರಚನೆಗಳು ನೆಲವಸ್ತುಗಳ ಫಿಟ್ಟಿಂಗ್‌ಗಳು ಮತ್ತು ಭೂಮಿಗೆ ಶಾಶ್ವತವಾಗಿ ಜೋಡಿಸಲಾದ ಸ್ಥಾವರ ಮತ್ತು ಯಂತ್ರಗಳು ಮತ್ತು ಭವಿಷ್ಯಗಳನ್ನೊಳಗೊಂಡಿವೆ ಮತ್ತು ಚಕ್ಕುಬಂದಿ: ಪೂರ್ವಕ್ಕೆ: ಇಡಬ್ಲ್ಯೂಎಸ್ ಮನೆ ನಂ.968, ಪಶ್ಚಿಮಕ್ಕೆ: ಇಡಬ್ಲ್ಯೂಎಸ್ ಮನೆ ನಂ.966, ಉತ್ತರಕ್ಕೆ: ಡ್ರೈನ್, ದಕ್ಷಿಣಕ್ಕೆ: ರಸ್ತೆ.
ಯಾವುದೇ ಮಾಹಿತಿಗಾಗಿ ಶ್ರೀ ಪ್ರೇಮ್, 8880041234 ರವರನ್ನು ಸಂಪರ್ಕಿಸಿ.</td><td>24.06.2025
ಎನ್‌ಪಿಎ ದಿನಾಂಕ: 08.06.2025</td><td>Asset Power BRE
Loan A/c No. LPR05140 5630767
Amount : Rs.33,00,000/-
ಒಟ್ಟು ಬಾಕಿ ಮೊತ್ತ ರೂ.33,26,532/–
ದಿನಾಂಕ : 24.06.2025 ರಂದು ಇದ್ದಂತೆ</td></tr>
<tr><td>10.</td><td>(1) ಶ್ರೀ ಮೊಹಮ್ಮದ್ ಅಬ್ದುಲ್ ಸಫೀ ಬಿನ್ ಶ್ರೀ ಅಬ್ದುಲ್ ಸಮೀ, (2) ಶ್ರೀಮತಿ ಮಸ್ರತ್ ಸುಲ್ತಾನ ಕೋಂ ಶ್ರೀ ಮೊಹಮ್ಮದ್ ಅಬ್ದುಲ್ ಸಫೀ, ಇವರಿಬ್ಬರ ವಿಳಾಸ: ಮನೆ ನಂ.5/15, 28ನೇ ವಾರ್ಡ್, 1ನೇ ಕ್ರಾಸ್, 1ನೇ ಮೇನ್, ರಾಜ್ಯ ಸಭಾ ಮನೆ ಎದುರು, 100 ಬೆಡ್ ಆಸ್ಪತ್ರೆ ರಸ್ತೆ ಎಂಜೆ ನಗರ, ಹೊಸಪೇಟೆ–583201. ಮತ್ತೊಂದು ವಿಳಾಸ: ನಿವೇಶನ ನಂ.6, ಅಸೆಸ್ಟ್ ನಂ. 20697, ಸರ್ವೆ ನಂ. 202ಊ, ಏರಿಯಾ ಹಳೆಯ 15ನೇ ವಾರ್ಡ್, ಹೊಸ 29ನೇ ವಾರ್ಡ್ ಎಪಿಎಂಸಿ ಹಿಂಭಾಗ, ಎಂ ಜೆ ನಗರ, ಕರ್ನಾಟಕ–583201.</td><td>ಶ್ರೀ ಮೊಹಮ್ಮದ್ ಅಬ್ದುಲ್ ಸಫೀ ರವರ ಆಸ್ತಿಯ ವಿವರ: ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ವಾಸಯೋಗ್ಯ ಆಸ್ತಿಯ ಪ್ಲಾಟ್ ನಂ.6, ಅಸೆಸ್‌ಮೆಂಟ್ ನಂ.20697, ರೀ–ಸರ್ವೆ ನಂ.202ಹೆಚ್, ವಿಸ್ತೀರ್ಣ 30'X60', ಈ ಆಸ್ತಿಯು 29ನೇ ವಾರ್ಡ್, ಹಳೆ ನಂ.15ನೇ ವಾರ್ಡ್, ಎಪಿಎಂಸಿ ಸಬ್ ರಸ್ತೆ ಹಿಂಭಾಗ, ಹೊಸಪೇಟೆ. ಚಕ್ಕುಬಂದಿ: ಪೂರ್ವಕ್ಕೆ: ಬಶಿರುನ್ನೀಸಾರವರ ಮನೆಯ ಪ್ಲಾಟ್ ನಂ.6, ಪಶ್ಚಿಮಕ್ಕೆ: ಬಶಿರುನ್ನೀಸಾರವರ ಮನೆಯ ಪ್ಲಾಟ್ ನಂ.5, ಉತ್ತರಕ್ಕೆ: ರಸ್ತೆ, ದಕ್ಷಿಣಕ್ಕೆ: ಎಪಿಎಂಸಿ ಯಾರ್ಡ್.
ಯಾವುದೇ ಮಾಹಿತಿಗಾಗಿ ಶ್ರೀ ಸಂಜಯ್ ಪ್ರಸಾದ್, 9916566630 ರವರನ್ನು ಸಂಪರ್ಕಿಸಿ.</td><td>22.07.2025
ಎನ್‌ಪಿಎ ದಿನಾಂಕ: 09.07.2025</td><td>POWER HOME VANILIA BRE
Loan A/c No. PHR0225 03776598
Amount : Rs. 52,92,595/-
ಒಟ್ಟು ಬಾಕಿ ಮೊತ್ತ ರೂ.43,87,160/–
ದಿನಾಂಕ : 19.07.2025 ರಂದು ಇದ್ದಂತೆ</td></tr>
</table>

ದಯವಿಟ್ಟು ಗಮನಿಸಿ, ಮೇಲೆ ತಿಳಿಸಿದ ಕಾಯಿದೆಯ ಸೆಕ್ಷನ್–13 ರ ಉಪ–ಸೆಕ್ಷನ್ 13 ರಲ್ಲಿ ಉಲ್ಲೇಖಿಸಿರುವಂತೆ, ಈ ಸೂಚನೆಯಲ್ಲಿ ಉಲ್ಲೇಖಿಸಲಾದ ಭದ್ರತೆಯ ಅಡಿಯಲ್ಲಿ ಹೇಳಲಾದ ಯಾವುದೇ ಸ್ವತ್ತುಗಳನ್ನು ನಮ್ಮ ಬ್ಯಾಂಕಿನ ಪೂರ್ವ ಲಿಖಿತ ಅನುಮತಿಯಿಲ್ಲದೆ ನೀವು ಮಾರಾಟ, ಗುತ್ತಿಗೆ ಅಥವಾ ಇತರ ರೀತಿಯಲ್ಲಿ ವರ್ಗಾಯಿಸಬಾರದು.

ಸೆಕ್ಯೂರಿಟೈಜೇಷನ್ ಅಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಸಿಯಲ್ ಅಸೆಟ್ಸ್ ಅಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ ಆಕ್ಟ್ 2002ರ ಸೂಚನೆಯ ಆದೇಶಾನುಸಾರವಾಗಿ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ ಮೇಲೆ ಉಲ್ಲೇಖಿಸಲಾದ ಸಾಲಗಾರರು ಮತ್ತು/ಅಥವಾ ಖಾತರಿದಾರರು (ಎಲ್ಲೆಲ್ಲಿ ಅನ್ವಯವಾಗುತ್ತದೆಯೋ) ಈ ಮೇಲೆ ತಿಳಿಸಲಾದ ಬಾಕಿ ಉಳಿದಿರುವ ಮೊತ್ತವನ್ನು ಭವಿಷ್ಯದ ಬಡ್ಡಿ ಮತ್ತು ಅನ್ವಯವಾಗುವ ಶುಲ್ಕಗಳೊಂದಿಗೆ, ಈ ಸೂಚನೆ ಪ್ರಕಟಣೆಗೊಂಡ ದಿನಾಂಕದಿಂದ 60 ದಿನಗಳೊಳಗಾಗಿ ಪಾವತಿಸುವಂತೆ ಸಲಹೆ ನೀಡಲಾಗಿದ್ದು, ವಿಫಲವಾದಲ್ಲಿ ಸೂಚನಾ ತಾರೀಖಿನಿಂದ 60 ದಿನಗಳ ಅವಧಿ ಮುಕ್ತಾಯದ ನಂತರ, 2002ರ ಹಣಕಾಸು ಆಸ್ತಿಗಳ ಖಾತರೀಕರಣ ಮತ್ತು ಪುನರ್ನಿರ್ಮಾಣ ಹಾಗೂ ಭದ್ರತಾ ಹಿತಾಸಕ್ತಿ ಜಾರಿ ಕಾಯ್ದೆಯ ನಿಬಂಧನೆಗನುಸಾರವಾಗಿ, ಮುಂದಿನ ಕ್ರಮಗಳನ್ನು ಕೈಗೊಳ್ಳಲಾಗುವುದು.
ಮೇಲೆ ತಿಳಿಸಲಾದ ಕಾಯ್ದೆಯ ವಿಭಾಗ 13(13), ಉಪ–ವಿಭಾಗ(2)ರ ಅಡಿಯಲ್ಲಿ ಉಲ್ಲೇಖಿಸಿರುವಂತೆ, ಯಾವುದೇ ಒಬ್ಬ ಸಾಲಗಾರ ಈ ಸೂಚನೆಯು ತಲುಪಿದ ನಂತರ, ಭದ್ರತಾ ಸಾಲ ನೀಡಿದವರ ಲಿಖಿತ ಪೂರ್ವಾನುಮತಿ ಪಡೆಯದೇ, ಸೂಚನೆಯಲ್ಲಿ ಪ್ರಸ್ತಾಪಿಸಲಾಗಿರುವ ಭದತಾ ಆಸ್ತಿಗಳನ್ನು ಮಾರಾಟದ ಮೂಲಕ ವರ್ಗಾಯಿಸುವುದಾಗಲಿ, ಭೋಗ್ಯಕ್ಕೆ ನೀಡುವುದಾಗಲಿ ಅಥವಾ ಬೇರೆ ರೀತಿಯಲ್ಲಿ ಬಳಸಿಕೊಳ್ಳುವುದಾಗಲಿ ಮಾಡುವಂತಿಲ್ಲ ಎಂಬುದನ್ನು ದಯವಿಟ್ಟು ಗಮನಿಸತಕ್ಕದ್ದು.
ಆಕ್ಟ್‌ನ ಸೆಕ್ಷನ್ 13ರ ಸಬ್ ಸೆಕ್ಷನ್ (8)ರಲ್ಲಿನ ನಿಯಮಗಳ ಅನುಸಾರ ಭದ್ರತಾ ಸ್ವತ್ತುಗಳನ್ನು ಹಿಂದಕ್ಕೆ ಪಡೆದುಕೊಳ್ಳಲು ಕಾಲಾವಕಾಶವನ್ನು ನೀಡಲಾಗುವುದು ಎಂದು ಈ ಮೂಲಕ ಸಾಲಗಾರರ ಗಮನಕ್ಕೆ ತರಲಾಗುವುದು. ಸಾರ್ವಜನಿಕ ಹರಾಜಿಗಾಗಿ ಅಥವಾ ಭೋಗ್ಯ, ಹಂಚಿಕೆ ಅಥವಾ ಮಾರಾಟದ ಮೂಲಕ ಭದ್ರತಾ ಸ್ವತ್ತುಗಳ ವರ್ಗಾವಣೆಗಾಗಿ ಸಾರ್ವಜನಿಕ ಅಥವಾ ಖಾಸಗಿ ಒಪ್ಪಂದಕ್ಕೆ ಉಲ್ಲೇಖಗಳನ್ನು ಅಥವಾ ಟೆಂಡರ್ ಆಹ್ವಾನಿಸುವ ಸೂಚನಾ ಪ್ರಕಟಣೆಯ ದಿನಾಂಕಕ್ಕಿಂತ ಮೊದಲು ಯಾವುದೇ ಸಮಯದಲ್ಲಿ ಸಾಲಗಾರರು, ಸುರಕ್ಷಿತ ಸಾಲದಾತರ ಖರ್ಚು, ವೆಚ್ಚ ಮತ್ತು ಶುಲ್ಕಗಳನ್ನು ಒಳಗೊಂಡಂತೆ ಎಲ್ಲಾ ಬಾಕಿಯನ್ನು ಪಾವತಿಸಿ, ಭದ್ರತಾ ಸ್ವತ್ತುಗಳನ್ನು ಬಿಡಿಸಿಕೊಳ್ಳಬಹುದು.

ದಿನಾಂಕ : 21.08.2025
ಸ್ಥಳ : ಬೆಂಗಳೂರು

ಸಹಿ/– ಅಧಿಕೃತ ಅಧಿಕಾರಿ
ಎಕ್ಸಿಸ್ ಬ್ಯಾಂಕ್ ಲಿಮಿಟೆಡ್

ಕೆಎಸ್‌ಆರ್‌ಟಿಸಿ ಚಾಲಕ, ನಿರ್ವಾಹಕ ಹುದ್ದೆಗಳ 2ನೇ ಆಯ್ಕೆ ಪಟ್ಟಿ ಪ್ರಕಟ

ಬೆಂಗಳೂರು: ಕೆಎಸ್‌ಆರ್‌ಟಿಸಿಯು ಚಾಲಕ ಕಂ ನಿರ್ವಾಹಕ ಹುದ್ದೆಗಳ ಹೆಚ್ಚುವರಿ 2ನೇ ಆಯ್ಕೆಪಟ್ಟಿ ಪ್ರಕಟಿಸಲಾಗಿದ್ದು, ಅಂತಿಮ ಆಯ್ಕೆಪಟ್ಟಿಯನ್ನು ಜೂ.12ರಂದು ಪ್ರಕಟಿಸಲಾಗಿತ್ತು. ಜಾಹೀರಾತು ಸಂ.1/2020 14–ಫೆ–2020 ಜಾಹೀರಾತಿನನ್ವಯ ಚಾಲಕ–ಕಂ–ನಿರ್ವಾಹಕ ಹುದ್ದೆಗೆ ಉಲ್ಲೇಖ–01 ರನ್ವಯ ಪ್ರಕಟಿಸಲಾದ ಅಂತಿಮ ಆಯ್ಕೆ ಪಟ್ಟಿಯಲ್ಲಿ ಸ್ಥಾನ ಪಡೆದು ಕೌನ್ಸಲಿಂಗ್ ಮೂಲಕ ವಿಭಾಗಗಳಿಗೆ ನಿಯೋಜಿತ ರಾಗಿದ್ದ ಅಭ್ಯರ್ಥಿಗಳಲ್ಲಿ ವರದಿ ಮಾಡಿಕೊಳ್ಳದ 143 ಅಭ್ಯರ್ಥಿಗಳ ಸ್ಥಾನದಲ್ಲಿ ಹೆಚ್ಚುವರಿ ಆಯ್ಕೆಪಟ್ಟಿಯನ್ನು ಸಿದ್ಧಪಡಿಸಿ ನಿಗಮದ ಕೇಂದ್ರ ಕಚೇರಿ ಶಾಂತಿ ನಗರದ ಸೂಚನಾ ಫಲಕದಲ್ಲಿ ಮತ್ತು ನಿಗಮದ ವೆಬ್–ಸೈಟ್ www.ksrtcjobs.Karnataka.gov.in ನಲ್ಲಿ ಪ್ರಕಟಿಸಲಾಗಿದೆ. ಹೆಚ್ಚುವರಿ ಆಯ್ಕೆಪಟ್ಟಿಯಲ್ಲಿ ಸ್ಥಾನ ಪಡೆದ ಅಭ್ಯರ್ಥಿಗಳಿಗೆ ಆ.23ರಂದು ಬೆಳಗ್ಗೆ 10.00 ಗಂಟೆಗೆ ನಿಗಮದ ಕೇಂದ್ರ ಕಚೇರಿಯಲ್ಲಿ ಗಣಕೀಕೃತ ಕೌನ್ಸಲಿಂಗ್ ಮೂಲಕ ಮೆರಿಟ್ ಆಧಾರದ ಮೇಲೆ ವಿಭಾಗ /ಘಟಕಗಳಿಗೆ ನೇರವಾಗಿ ನಿಯೋಜನೆ ಮಾಡಲಾಗು ವುದು. ಸಂಬಂಧಪಟ್ಟ ಅಭ್ಯರ್ಥಿಗಳಿಗೆ ಎಸ್.ಎಂ.ಎಸ್ ಕಳುಹಿಸಲಾಗಿದ್ದು, ಕೌನ್ಸಲಿಂಗ್‌ಗೆ ಹಾಜರಾಗದ ಅಭ್ಯರ್ಥಿಗಳನ್ನು ಖಾಲಿ ಉಳಿದ ಸ್ಥಾನಗಳಿಗೆ ನಿಗಮದ ವತಿಯಿಂದ ಸ್ಥಳ ನಿಯೋಜನೆ ಮಾಡಲಾಗುವುದು. ಸ್ಥಳ ನಿಯೋಜನೆಯು ಗಣಕೀಕೃತವಾಗಿದ್ದು, ಸಂಪೂರ್ಣ ಪಾರದರ್ಶಕತೆಯಿಂದ ಕೂಡಿದ್ದು, ಯಾವುದೇ ಆಮಿಷ/ಅವ್ಯವಹಾರದಲ್ಲಿ ತೊಡಗಬಾರದು ಎಂದು ತಿಳಿಸಿದೆ.

ಹಲಸೂರು ಕೆರೆಯಲ್ಲಿ ಗಣೇಶ ವಿಸರ್ಜನೆ

ಬೆಂಗಳೂರು: ಪೂರ್ವ ವಲಯ ವ್ಯಾಪ್ತಿಯಲ್ಲಿ ಗೌರಿ – ಗಣೇಶ ಹಬ್ಬದ ಪ್ರಯುಕ್ತ ಪಿಒಪಿ, ಥರ್ಮಾಕೋಲ್ ಹಾಗೂ ರಾಸಾಯನಿಕ ಬಣ್ಣಗಳನ್ನು ಬಳಸಿದ ಗಣೇಶ ಮೂರ್ತಿಗಳ ತಯಾರಿಕೆ, ಮಾರಾಟ ಹಾಗೂ ವಿಸರ್ಜನೆಯನ್ನು ಸಂಪೂರ್ಣವಾಗಿ ನಿರ್ಬಂಧಿಸಲಾಗಿದೆ ಎಂದು ವಲಯ ಆಯುಕ್ತೆ ಸ್ನೇಹಲ್ ತಿಳಿಸಿದ್ದಾರೆ. ಹಲಸೂರು ಕೆರೆಯ ಕಲ್ಯಾಣಿಯಲ್ಲಿ ಆ.27ರಿಂದ ಸೆ.30ರ ವರೆಗೆ ಪರಿಸರ ಸ್ನೇಹಿ ಮೂರ್ತಿಗಳನ್ನು ಮಾತ್ರ ವಿಸರ್ಜನೆ ಮಾಡಲು ಅವಕಾಶ ಕಲ್ಪಿಸಲಾಗಿದ್ದು, ಸೆ.1 ಮತ್ತು 2 ಹಾಗೂ ಸೆ.8 ಮತ್ತು 9ರಂದು ಹಲಸೂರು ಕೆರೆಯ ಕಲ್ಯಾಣಿಯಲ್ಲಿ ಹೂಳೆತ್ತುವ ಕಾರ್ಯ ನಡೆಯುವ ಹಿನ್ನೆಲೆಯಲ್ಲಿ, ಯಾವುದೇ ರೀತಿಯ ಮೂರ್ತಿ ವಿಸರ್ಜನೆಗೆ ಅವಕಾಶ ಇರುವುದಿಲ್ಲ. ಪರಿಸರ ಸಂರಕ್ಷಣೆಯ ದೃಷ್ಟಿಯಿಂದ ಮತ್ತು ನೀರಿನ ಮೂಲಗಳ ಶುದ್ಧತೆಯನ್ನು ಕಾಯ್ದುಕೊಳ್ಳಲು ಸಾರ್ವಜನಿಕರಿಂದ ಸಹಕಾರವನ್ನು ಕೋರಲಾಗಿದೆ. ಎಲ್ಲರೂ ಪರಿಸರ ಸ್ನೇಹಿ ಮೂರ್ತಿಗಳನ್ನು ಬಳಸಿ ಹಬ್ಬವನ್ನು ಸಂಭ್ರಮದಿಂದ ಮತ್ತು ಜವಾಬ್ದಾರಿಯಿಂದ ಆಚರಿಸಬೇಕು ಎಂದು ಹೇಳಿದ್ದಾರೆ.

ಸಾಲ ಮಾಡದೆ ಬಜೆಟ್ ಮಾಡಲು ಸಾಧ್ಯವಿಲ್ಲ

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜ್ಯ ಸರಕಾರದ 3,352 ಕೋಟಿ ರು.ಗಳ ಪೂರಕ ಅಂದಾಜು ಆಯವ್ಯಯ ಮಂಡಿಸಿ, ಅನುಮೋದನೆ ಪಡೆದು ಕೊಂಡರು. ಇದೇ ವೇಳೆ ಬಿಜೆಪಿ ಸದಸ್ಯರು ಕೆಲವು ಸ್ಪಷ್ಟನೆಗಳನ್ನು ಕೇಳುತ್ತಾ, ಪರಿಶಿಷ್ಟರ ಹಣ ಗ್ಯಾರಂಟಿ ಯೋಜನೆಗಳಿಗೆ ಬಳಕೆ ಮಾಡುತ್ತಿರುವುದು ಸರಿಯೇ ಎಂದು ಎಂದು ಪ್ರಶ್ನಿಸಿದರು. ನಾವು ಮಾಡಿದ ಸಾಧನೆಯನ್ನು ಜನರಿಗೆ ತಲುಪಿಸಲು ಸಮಾವೇಶವನ್ನು ಮಾಡಿದ್ದೇವೆ. ಸರಕಾರದ ಸಾಧನೆಯನ್ನು ಜನರಿಗೆ ತಲುಪಿಸು ತ್ತಿದ್ದೇವೆ. ಕೇಂದ್ರ ಸರಕಾರ ಜಾಹೀರಾತಿಗೆ ಹಣ ಖರ್ಚು ಮಾಡುತ್ತಿಲ್ಲವೇ ಎಂದು ಪ್ರಶ್ನಿಸಿದರು. ನಾವು ವಿತ್ತೀಯ ಶಿಸ್ತನ್ನು ಸದಾ ಪಾಲಿಸುತ್ತ ಬಂದಿದ್ದೇವೆ. ಕೇಂದ್ರ ಸರಕಾರ 130 ಲಕ್ಷ ಕೋಟಿ ರು. ಸಾಲ ಮಾಡಿದೆ. ಕೇಂದ್ರ ಸರಕಾರ 12 ಲಕ್ಷ ಕೋಟಿ ರು.ವರೆಗೆ ಬಡ್ಡಿ ಕಟ್ಟುತ್ತದೆ. ಹಾಗೂ ಸುಮಾರು 4 ಲಕ್ಷ ಕೋಟಿ ರು. ಅಸಲು ತೀರಿಸುತ್ತದೆ. ಯಾವುದೇ ಸರಕಾರವಿದ್ದರೂ ಸಾಲ ಮಾಡದೆ ಬಜೆಟ್ ಮಾಡಲು ಸಾಧ್ಯವಿಲ್ಲ ಎಂದು ಹೇಳಿದರು. ನಾವು ಮಾಡಿದಂತೆ ಕೇಂದ್ರ ಸರಕಾರವೂ ಸಹ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಅವುಗಳ ಜನಸಂಖ್ಯೆಗೆ ತಕ್ಕಂತೆ ಅನುದಾನ ನೀಡಲಿ ಎಂದು ಸಿದ್ದರಾಮಯ್ಯ ಸವಾಲೆಸೆದರು. ನೀವು ಪರಿಶಿಷ್ಟರ ವಿರೋಧಿಗಳು ಎಂದು ವಿಪಕ್ಷಗಳನ್ನು ತರಾಟೆಗೆ ತೆಗೆದುಕೊಂಡರು. ಈ ಮಾತು ಬಿಜೆಪಿ ಸದಸ್ಯರನ್ನು ಕೆರಳಿಸಿತು. ಆಡಳಿತ ಮತ್ತು ಪ್ರತಿಪಕ್ಷಗಳ ಸದಸ್ಯರ ನಡುವೆ ಮಾತಿನ ಚಕಮಕಿ ನಡೆಯಿತು. ಈ ಗಲಾಟೆ ಮಧ್ಯೆಯೇ ಧ್ವನಿಮತಕ್ಕೆ ಹಾಕಿ ಅಂಗೀಕಾರವಾಗಿದೆ ಎಂದು ಪ್ರಕಟಿಸಿದರು.

ಬಸ್ ಡಿಕ್ಕಿ: 10 ಮಂದಿಗೆ ಗಾಯ

ಆನೇಕಲ್: ಟೈರ್ ಬ್ಲಾಸ್ಟ್ ಆದ ಪರಿಣಾಮ ನಿಯಂತ್ರಣ ತಪ್ಪಿ ಖಾಸಗಿ ಕಂಪನಿಯ ಕಾಂಪೌಂಡ್ ಗೋಡೆಗೆ ಖಾಸಗಿ ಬಸ್ ಡಿಕ್ಕಿಯಾಗಿ 10 ಮಂದಿ ಗಂಭೀರ ಗಾಯಗೊಂಡ ಘಟನೆ ತಮಿಳುನಾಡಿನ ಹೊಸೂರಿನ ದರ್ಗಾ ಎಂಬಲ್ಲಿ ನಡೆದಿದೆ.

ಬೆಂಗಳೂರು–ಹೊಸೂರು ಹೆದ್ದಾರಿಯ ಹೊಸೂರಿನಲ್ಲಿ ಚಲಿಸುತ್ತಿದ್ದ ಬಸ್ಸಿನ ಟೈರ್ ಬ್ಲಾಸ್ಟ್ ಆಗಿ ಚಾಲಕನ ನಿಯಂತ್ರಣ ತಪ್ಪಿ ಅಪಘಾತ ಸಂಭವಿಸಿದೆ.

ಘಟನೆ ಸಂಭವಿಸಿದ ವೇಳೆ ಬಸ್ಸಿನಲ್ಲಿ 25ಕ್ಕೂ ಹೆಚ್ಚು ಪ್ರಯಾಣಿಕರಿದ್ದರು. ಈ ಪೈಕಿ 10 ಮಂದಿ ಗಂಭೀರ ಗಾಯಗೊಂಡಿದ್ದಾರೆ. ಗಾಯಾಳುಗಳನ್ನು ಹೊಸೂರಿನ ಸರಕಾರಿ ಆಸ್ಪತ್ರೆಗೆ ರವಾನಿಸಲಾಗಿದೆ. ಘಟನಾ ಸ್ಥಳಕ್ಕೆ ಸಿಪ್ಕಾಟ್ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ಸಮಾಚಾರ ಸಣ್ಣದಲ್ಲ

ತಿದ್ದುಪಡಿ ಇಲ್ಲದೆ ವಿಧೇಯಕ ಅಂಗೀಕಾರ

ವಿಧಾನಪರಿಷತ್: ಸರಕಾರಿ ವ್ಯಾಜ್ಯಗಳನ್ನು ಸಮರ್ಥವಾಗಿ ನಿರ್ವಹಿಸಲು ಮತ್ತು ಪರಿಹರಿಸಲು ರೂಪಿಸಲಾಗಿರುವ ಕರ್ನಾಟಕ ಸರಕಾರಿ ವ್ಯಾಜ್ಯ ನಿರ್ವಹಣೆ ವಿಧೇಯಕ ವಿಧಾನಪರಿಷತ್‌ನಲ್ಲಿ ಯಾವುದೇ ತಿದ್ದುಪಡಿ ಇಲ್ಲದೆ ಅಂಗೀಕರಿಸಲಾಯಿತು. ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ.ಪಾಟೀಲ್ ಅವರು ವಿಧೇಯಕ ಮಂಡಿಸಿ ಸರಕಾರಿ ಇಲಾಖೆಗಳು ಮತ್ತು ಅಧಿಕಾರಿಗಳು ಭಾಗಿಯಾಗಿರುವ ವ್ಯಾಜ್ಯಗಳನ್ನು ತ್ವರಿತವಾಗಿ ಮತ್ತು ಪರಿಣಾಮಕಾರಿಯಾಗಿ ಇತ್ಯರ್ಥಪಡಿಸುವುದು ಈ ವಿಧೇಯಕದ ಮುಖ್ಯ ಉದ್ದೇಶ. ಅಲ್ಲದೆ ಈ ವಿಧೇಯಕವು ರಾಜ್ಯದಲ್ಲಿ ವಾಜ್ಯಗಳ ಸಂಖ್ಯೆ ಕಡಿಮೆ ಮಾಡಲು ಹಾಗೂ ಸಾರ್ವಜನಿಕರಿಗೆ ತ್ವರಿತ ನ್ಯಾಯ ಒದಗಿಸಲು ಸಹಾಯ ಮಾಡುತ್ತದೆ. ರಾಜ್ಯದ ನ್ಯಾಯಾಲಯ ಮತ್ತು ಶಾಸನಬದ್ಧ ನ್ಯಾಯ ಮಂಡಳಿಗಳ ಮುಂದೆ ಸರಕಾರಿ ವ್ಯಾಜ್ಯಗಳ ನಡೆಸುವ ಕುರಿತಂತೆ ನಿಯಮ, ಆದೇಶ, ಅಧಿಸೂಚನೆ, ಸುತ್ತೋಲೆ ಮುಂತಾದವುಗಳಿವೆ. ರಾಜ್ಯದಲ್ಲಿ ಪರಿಣಾಮಕಾರಿ ವ್ಯಾಜ್ಯ ನಿರ್ವಹಣಾ ಕಾರ್ಯ ವ್ಯವಸ್ಥೆ ಇಲ್ಲದಿರುವುದರಿಂದಾಗಿ ರಾಜ್ಯವು ಅನೇಕ ಮಹತ್ವದ ದಾವೆಗಳಲ್ಲಿ ವಿಫಲಗೊಂಡಿರುವುದನ್ನು ಗಮನಿಸಲಾಗಿದೆ. ಈ ನಿಟ್ಟಿನಲ್ಲಿ ಸರಕಾರಿ ವ್ಯಾಜ್ಯ ನಿರ್ವಹಣೆಯ ವಿಷಯದಲ್ಲಿ ದಕ್ಷತೆ ಮತ್ತು ಜವಾಬ್ದಾರಿಯುತ ನಿರ್ವಹಣೆ ಖಚಿತಪಡಿಸಿಕೊಳ್ಳಲು ಪರಿಣಾಮಕಾರಿ ಕಾನೂನನ್ನು ಅಧಿನಿಯಮಿತಗೊಳಿಸುವುದು ಅಗತ್ಯವೆಂದು ಈ ವಿಧೇಯಕ ಜಾರಿಗೊಳಿಸಲಾಗಿದೆ. ವಿಧೇಯಕದ ಮೇಲೆ ಬಿಜೆಪಿ ಸದಸ್ಯರು ಮಾತನಾಡಿ, ಸರಕಾರಕ್ಕೆ ಕೆಲವು ಸಲಹೆ ನೀಡಿದರು.

ವಸ್ತುಪ್ರದರ್ಶನ ವಿಧೇಯಕಕ್ಕೆ ಅಸ್ತು

ವಿಧಾನಪರಿಷತ್: ಗದಗ ಬೆಟ್ಟಗೇರಿ ಸಾಂಸ್ಕೃತಿಕ ಮತ್ತು ವಸ್ತುಪ್ರದರ್ಶನ ಪ್ರಾಧಿಕಾರದ ವಿಧೇಯಕಕ್ಕೆ ಬಿಜೆಪಿ ಸದಸ್ಯರ ವಿರೋಧದ ನಡುವೆಯೂ ವಿಧಾನಪರಿಷತ್‌ನಲ್ಲಿ ಅಂಗೀಕಾರ ದೊರೆಯಿತು. ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ.ಪಾಟೀಲ್ ಅವರು ಮಂಡಿಸಿದ ವಿಧೇಯಕಕ್ಕೆ ಬಿಜೆಪಿ ಸದಸ್ಯ ಸಂಕನೂರ ಅವರು ಪ್ರಬಲವಾಗಿ ವಿರೋಧಿಸಿ, ರಾಜ್ಯಪಾಲರು ಈ ವಿಧೇಯಕ ಎರಡು ಬಾರಿ ಸರಕಾರಕ್ಕೆ ಹಿಂದಿರುಗಿಸಿದ್ದಾರೆ. ನಿಮಗೆ ಅಧಿಕಾರಿಗಳು ತಪ್ಪು ಮಾಹಿತಿ ನೀಡಿದ್ದಾರೆ. ಒಂದು ಸರಕಾರಕ್ಕೆ ಘನತೆ, ಗೌರವ ಇರಬೇಕು. ಎರಡು ಬಾರಿ ಏಕೆ ವಾಪಸ್ ಕಳುಹಿಸಿದ್ದಾರೆ ಎಂದು ಪ್ರಶ್ನಿಸಿದರು. ಇದನ್ನು ಅಲ್ಲಗೆಳೆಯದ ಎಚ್.ಕೆ.ಪಾಟೀಲ್, ಕೆಲವು ಸ್ಪಷ್ಟನೆ ಕೇಳಿ ರಾಜ್ಯಪಾಲರು ಸರಕಾರದಿಂದ ಉತ್ತರ ಬಯಸಿದ್ದರು. ನಾವು ಸ್ಪಷ್ಟನೆ ನೀಡಿದ ಮೇಲೆ ಇದಕ್ಕೆ ಅಂಕಿತ ಹಾಕಿದ್ದಾರೆ. ಇದಕ್ಕಾಗಿ ನಾನು ಅವರನ್ನು ಅಭಿನಂದಿಸುತ್ತೇನೆ. ಸರಕಾರ ಎಲ್ಲಿಯೂ ನಿಯಮ ಉಲ್ಲಂಘನೆ ಮಾಡಿಲ್ಲ ಎಂದು ಸ್ಪಷ್ಟಪಡಿಸಿದರು. ಅಲ್ಲದೆ, ಗದಗ ಬೆಟ್ಟಗೇರಿ ಅವಳಿನಗರದ ಹೃದಯ ಭಾಗದಲ್ಲಿರುವ 34 ಎಕರೆ ವ್ಯಾಪ್ತಿಯ ಅಭಿವೃದ್ಧಿಗಾಗಿ ರೂಪಿಸಲಾದ ವ್ಯಾಪಾರ ಸಾಂಸ್ಕೃತಿಕ ಮತ್ತು ವಸ್ತುಪ್ರದರ್ಶನ ವಿಧೇಯಕದಿಂದ ಜನಪ್ರತಿನಿಧಿಗಳಿಗೆ ಭಾಗವಹಿಸಲು ಅವಕಾಶ ಸಿಗುತ್ತದೆ ಎಂದರು. ನಗರಸಭೆಯ ಎಲ್ಲಾ ಸ್ಥಾಯಿ ಸಮಿತಿಗಳ ಅಧ್ಯಕ್ಷರು, ಗದಗ ಎಂಬ ಪದಗಳ ಬದಲಾಗಿ ನಗರಸಭೆಯ ಸ್ಥಾಯಿ ಸಮಿತಿ ಅಧ್ಯಕ್ಷರು, ಗದಗ ಎಂಬ ಮಾರ್ಪಾಡಿನೊಂದಿಗೆ ಕೆಲವು ತಿದ್ದುಪಡಿ ಮಾಡಲಾಗಿತ್ತು. ಚರ್ಚೆಯ ನಂತರ ವಿಧೇಯಕ ಮಂಡನೆ ಮಾಡಲಾಯಿತು.

ಕಸದ ಸೆಸ್ ಶೇ. 25ರಷ್ಟು ಮಾತ್ರ ಅಳವಡಿಕೆ | ಕಸ ವಿಲೇವಾರಿಗೆ ಆಧುನಿಕ ತಂತ್ರಜ್ಞಾನ ಅಧ್ಯಯನ: ಡಿಸಿಎಂ ಡಿ.ಕೆ.ಶಿವಕುಮಾರ್

ಬೆಂಗಳೂರು ಕಸ ವಿಲೇವಾರಿಗೆ 33 ಪ್ಯಾಕೇಜ್ ಟೆಂಡರ್

ವಿಶ್ವವಾಣಿ ಸುದ್ದಿಮನೆ ವಿಧಾನ ಪರಿಷತ್

ನಗರದ ಕಸ ವಿಲೇವಾರಿಗೆ 28 ವಿಧಾನಸಭಾ ಕ್ಷೇತ್ರಗಳಲ್ಲಿ 33 ಪ್ಯಾಕೇಜ್‌ಗಳಾಗಿ ವಿಂಗಡಿಸಿ ಟೆಂಡರ್ ಕರೆಯಲಾಗಿದೆ. ನಾಲ್ಕು ಜಾಗಗಳಲ್ಲಿ ತ್ಯಾಜ್ಯದಿಂದ ಗ್ಯಾಸ್, ವಿದ್ಯುತ್ ಉತ್ಪಾದಿಸುವ ಯೋಜನೆ ರೂಪಿಸಲಾಗಿದೆ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ತಿಳಿಸಿದರು.

ವಿಧಾನ ಪರಿಷತ್ ಪ್ರಶ್ನೋತ್ತರ ಕಲಾಪದಲ್ಲಿ ಕೇಶವ ಪ್ರಸಾದ್ ಅವರು ಬೆಂಗಳೂರಿನ ಕಸ ವಿಲೇವಾರಿ ಹಾಗೂ ಕಸದ ಸೆಸ್ ವಿಚಾರವಾಗಿ ಕೇಳಿದ ಪ್ರಶ್ನೆಗೆ ಬೆಂಗಳೂರು ನಗರಾಭಿವೃದ್ಧಿ ಸಚಿವರಾದ ಶಿವಕುಮಾರ್ ಗುರುವಾರ ಉತ್ತರಿಸಿದರು. ಕಸ ವಿಲೇವಾರಿಗೆ ನೈಸ್ ಸಂಸ್ಥೆಗೆ ಸೇರಿದ ಜಾಗ ಪಡೆಯಲಾಗಿದೆ. ದೊಡ್ಡಬಳ್ಳಾಪುರ ಬಳಿಯ ಜಾಗಕ್ಕೆ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಅನುಮತಿ ಬಾಕಿಯಿತ್ತು. ಕ್ಯಾಬಿನೆಟ್ ಅನುಮತಿ ಪಡೆದು ಮುಂದುವರಿದಿದ್ದೇವೆ. ಕಸ ವಿಲೇವಾರಿಗೆಂದು ಆಧುನಿಕ ತಂತ್ರಜ್ಞಾನದ ಬಗ್ಗೆ ಅಧ್ಯಯನ ಮಾಡಲಾಗುತ್ತಿದೆ. ಇದನ್ನು ಗುತ್ತಿಗೆ ಆಧಾರದ ಮೇಲೆ ನಿರ್ವಹಣೆ ಮಾಡಬೇಕು ಎನ್ನುವ ಆಲೋಚನೆಯಿದೆ ಎಂದರು.

ಬೆಂಗಳೂರಿನ ಕಸದ ಮಾಫಿಯಾ ಅಷ್ಟು ಸುಲಭದಲ್ಲಿ ಭೇದಿಸಲು ಆಗುವುದಿಲ್ಲ. ನಿಮ್ಮ ಬಿಜೆಪಿ ಸರಕಾರ ಅಧಿಕಾರದಲ್ಲಿದ್ದಾಗಲೂ 98 ವಾರ್ಡ್‌ಗಳಿಗೆ ಟೆಂಡರ್ ಕರೆದಾಗ ಅದನ್ನೂ ಮಾಡಲು ಬಿಡಲಿಲ್ಲ. ಕಸ ವಿಲೇವಾರಿ ವಿಚಾರಕ್ಕೆ ನಾನೂ ಸಹ ದೊಡ್ಡ ಹೋರಾಟ ಮಾಡಿದೆ. ಈ ಹಿಂದಿನ ಟೆಂಡರ್ ವ್ಯವಸ್ಥೆ ರದ್ದುಗೊಳಿಸಿ ಹೊಸ ಟೆಂಡರ್ ಕರೆಯಬೇಕು ಎಂದು ನ್ಯಾಯಲಯ ನಮ್ಮಿಂದ ಅಫಿಡವಿಟ್ ಬರೆಸಿಕೊಂಡಿದೆ. ಟೆಂಡರ್‌ನಲ್ಲಿ ಅಕ್ರಮ ನಡೆದಿದೆ ಎಂದು ವರದಿ ಬಂದ ಮೇಲೆ ತನಿಖೆ ನಡೆಸಿ ರದ್ದುಗೊಳಿಸಲಾಗಿದೆ. ಕಸ ವಿಲೇವಾರಿ ಘಟಕಗಳನ್ನು ಸಹ ತೆರೆಯಲಾಗಿದೆ ಎಂದರು.

> ದೆಹಲಿ, ಹೈದರಾಬಾದ್, ಚೆನ್ನೈ ನಗರಗಳಿಗೆ ಹೋಗಿ ಕಸ ವಿಲೇವಾರಿ ಮಾದರಿ ನೋಡಿಕೊಂಡು ಬಂದಿದ್ದೇನೆ. ನಾನು ಈ ಹಿಂದೆ ಇಂಧನ ಸಚಿವನಾಗಿದ್ದಾಗ 9 ಕಡೆ ಕಸ ಆಧಾರಿತ ಇಂಧನ ತಯಾರಿಕೆ ಘಟಕಗಳನ್ನು ಸ್ಥಾಪಿಸಲಾಗಿತ್ತು. ಆದರೆ ಒಂದೇ ಒಂದು ಸಹ ಯಶಸ್ವಿಯಾಗಿಲ್ಲ. ಪ್ರಸ್ತುತ ಬಿಡದಿಯಲ್ಲಿ ಒಂದು ಘಟಕ ಮಾತ್ರ ಕಾರ್ಯಾಚರಣೆ ನಡೆಸುತ್ತಿದೆ.
>
> -ಡಿ.ಕೆ.ಶಿವಕುಮಾರ್, ಡಿಸಿಎಂ

ದೊಡ್ಡ ಮಾಲ್‌ಗಳು ತಮ್ಮ ಉತ್ಪಾದಿತ ಕಸವನ್ನು ತಾವೇ ವಿಲೇವಾರಿ ಮಾಡಿಕೊಳ್ಳುತ್ತೇವೆ ಎಂದು ಘೋಷಣೆ ಮಾಡಿಕೊಂಡಿವೆ. ಅದಕ್ಕೆ ನಾವು ಸಹ ಬೆಂಬಲ ನೀಡುತ್ತೇವೆ. ಖಾಲಿ ನಿವೇಶನಗಳು ಸ್ವಚ್ಛವಾಗಿಟ್ಟುಕೊಳ್ಳಬೇಕು ಎಂದು ಹೊಸ ಕಾನೂನು ಮಾಡಲು ಮುಂದಾಗಿದ್ದೇವೆ. ಇತ್ತೀಚೆಗೆ ಪ್ರಧಾನಿಯವರು ನಗರಕ್ಕೆ ಬಂದಾಗ ಅರಮನೆ ರಸ್ತೆಯಲ್ಲಿ ಹಸಿರು ಪರದೆ ಕಟ್ಟಲಾಯಿತು. ಅಲ್ಲಿಜಾಗ ಖಾಲಿಯಿದೆ ಎಂದು ಜನರು ಕಸ ಎಸೆಯುತ್ತಿದ್ದಾರೆ. ಯಾವ ರೀತಿಯ ಕಸ ಉತ್ಪಾದನೆಯಾಗುತ್ತದೆ ಎಂದು ನಾಗರೀಕರು ಸ್ವತಃ ಘೋಷಿಸಲು ಅವಕಾಶ ನೀಡಲಾಗಿದೆ. ಇದರ ಅನ್ವಯ 35 ಸಾವಿರ ಜನರು ಸ್ವಯಂ ಘೋಷಣೆ ಮಾಡಿದ್ದಾರೆ. ಇವರುಗಳೇ ಕಸ ವಿಲೇವಾರಿ ಮಾಡಿಕೊಳ್ಳುತ್ತಾರೆ. ಕಟ್ಟಡ ತ್ಯಾಜ್ಯಗಳನ್ನು ಎಲ್ಲೆಂದರಲ್ಲಿ ಸುರಿಯುವವರನ್ನು ಗುರುತಿಸಿ ಪ್ರಕರಣ ದಾಖಲಿಸಬೇಕು ಎಂದು ಪೊಲೀಸರಿಗೆ ಸೂಚಿಸಿದ್ದೇನೆ. ಇದರ ಬಗ್ಗೆಯೂ ಟೆಂಡರ್ ಕರೆಯಲಾಗಿದೆ. ಅಲ್ಲಲ್ಲಿ ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಲಾಗವುದು ಎಂದರು.

- ಎಲ್ಲೆಂದರಲ್ಲಿ ಕಟ್ಟಡ ತ್ಯಾಜ್ಯ ಹಾಕಿದರೆ ಪ್ರಕರಣ ದಾಖಲು
- ಖಾಲಿ ನಿವೇಶನಗಳ ಸ್ವಚ್ಛತೆ ಬಗ್ಗೆ ಹೊಸ ಕಾನೂನಿಗೆ ಚಿಂತನೆ
- ಬೃಹತ್ ಮಾಲ್‌ಗಳು ತಮ್ಮ ಉತ್ಪಾದಿತ ಕಸ ತಾವೇ ವಿಲೇವಾರಿ
- 4 ಕಡೆ ತ್ಯಾಜ್ಯದಿಂದ ಗ್ಯಾಸ್, ವಿದ್ಯುತ್ ಉತ್ಪಾದಿಸುವ ಯೋಜನೆ

ಚುನಾವಣೆಗೆ ಸಿದ್ಧತೆ ಬಗ್ಗೆ ಚುನಾವಣಾ ಆಯೋಗಕ್ಕೆ ಪತ್ರ

ಪಾಲಿಕೆ ಚುನಾವಣೆಗೆ ಸಿದ್ಧತೆ ಬಗ್ಗೆ ಚುನಾವಣಾ ಆಯೋಗಕ್ಕೆ ಪತ್ರ ಬರೆಯಲಾಗಿದೆ. ನವೆಂಬರ್ 1ರ ವೇಳೆಗೆ ವಾರ್ಡ್ ಮರುವಿಂಗಡಣೆ ಪ್ರಕ್ರಿಯೆ ನಡೆಯಲಿದೆ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ತಿಳಿಸಿದರು. ವಿಧಾನ ಪರಿಷತ್ ಪ್ರಶ್ನೋತ್ತರ ಕಲಾಪದಲ್ಲಿ ಸದಸ್ಯ ಟಿ.ಎನ್. ಜವರಾಯಿ ಗೌಡ ಅವರು ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆ 2024ರ ಜಾರಿ ವಿಚಾರವಾಗಿ ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, ಮೇ 15ಕ್ಕೆ ಜಿಬಿಎ ಕಾಯ್ದೆ ಜಾರಿ ಮಾಡಲಾಗಿದ್ದು, ಬಿಬಿಎಂಪಿ ವ್ಯಾಪ್ತಿ ಪ್ರದೇಶ ಗ್ರೇಟರ್ ಬೆಂಗಳೂರು ಪ್ರಾಧಿಕಾರದ ವ್ಯಾಪ್ತಿ ಎಂದು ಘೋಷಣೆ ಮಾಡಿದ್ದು, ಜುಲೈ 19ಕ್ಕೆ ಐದು ಪಾಲಿಕೆ ರಚಿಸಲಾಗಿದೆ. ಆ.18 ವರೆಗೂ ಒಂದು ತಿಂಗಳ ಕಾಲ ಆಕ್ಷೇಪ ಸಲ್ಲಿಕೆಗೆ ಅವಕಾಶ ನೀಡಲಾಗಿದೆ. ದಾಸರಹಳ್ಳಿ, ಆರ್‌ಆರ್ ನಗರ, ಪದ್ಮನಾಭ ನಗರ, ಮಹದೇವಪುರ, ಯಶವಂತಪುರ ಕೆಲವು ವಿಧಾನಸಭಾ ಕ್ಷೇತ್ರಗಳು ಭಾಗ ಆಗಿವೆ ನಿಜ. ಇನ್ನು ಕೆಲವು ಪ್ರದೇಶಗಳನ್ನು ಮುಂದಿನ ದಿನಗಳಲ್ಲಿ ಸೇರಿಸಬೇಕಿದೆ ಎಂದರು.

ವಾರ್ಡ್‌ಗಳ ಪುನರ್ ವಿಂಗಡಣೆ ನವೆಂಬರ್ 1ಕ್ಕೆ ನಡೆಯಲಿದೆ. ಇದಕ್ಕಾಗಿ ಪಾಲಿಕೆಯಲ್ಲಿ ಆಯುಕ್ತರ ನೇತೃತ್ವದ ಪ್ರತ್ಯೇಕ ತಂಡ ಇದೆ. ನಾವು ನ್ಯಾಯಾಲಯಕ್ಕೆ ಕಾಲ ಮಿತಿಯಲ್ಲಿ ಅಫಿಡವಿಟ್ ಸಲ್ಲಿಸಿದ್ದೇವೆ. ಇನ್ನು ವಾರ್ಡ್ ಗಳ ರಚನೆ ಬಗ್ಗೆ ಪುನರ್ ವಿಂಗಡಣೆ ಬಳಿಕ ಅಧಿಸೂಚನೆ ಹೊರಡಿಸಲಾಗುವುದು. ಆದಷ್ಟು ಬೇಗ ಚುನಾವಣೆ ನಡೆಸಿ ಎಂದು ಸದಸ್ಯರ ಮನವಿಗೆ ಸ್ಪಂದಿಸಿದ ಸಚಿವರು, ಮಾನ್ಯ ಸದಸ್ಯರ ಸಲಹೆ ಸಂಪೂರ್ಣವಾಗಿ ಒಪ್ಪಿಕೊಳ್ಳುತ್ತೇವೆ ಎಂದರು.

ಕಸದ ಮೇಲಿನ ಸೆಸ್ ಅಳವಡಿಸಿದ್ದು ಬಿಜೆಪಿ

ಕಸದ ಮೇಲಿನ ಸೆಸ್ ವಿಚಾರವಾಗಿ ಉತ್ತರಿಸಿದ ಡಿಸಿಎಂ ಅವರು, 2016 ರಲ್ಲಿ ಕೇಂದ್ರ ಸರಕಾರದ ಘನತ್ಯಾಜ್ಯ ನಿರ್ವಹಣಾ ನಿಯಮದ ಪ್ರಕಾರ ನೂತನ ಆದೇಶ ನೀಡಿತು. 2020ರಲ್ಲಿ ರಾಜ್ಯದಲ್ಲಿ ಅಧಿಕಾರದಲ್ಲಿದ್ದ ಬಿಜೆಪಿ ಸರಕಾರ ಕೇಂದ್ರ ಸರಕಾರ ಕಳುಹಿಸಿದ ಕಸ ಸಂಗ್ರಹ ದರಪಟ್ಟಿ ಅಳವಡಿಸಿಕೊಂಡಿತು ಎಂದು ಗೆಜೆಟ್ ಪ್ರತಿಯ ವಿವರ ಸದನಕ್ಕೆ ಓದಿ ತಿಳಿಸಿದರು. ಈ ಗೆಜೆಟ್ ಪ್ರತಿಯಲ್ಲಿ ಐದು ಕೆಜಿಗೆ 500ರು., ಹತ್ತು ಕೆಜಿಗೆ 1,400 ರು., 25 ಕೆಜಿಗೆ 3,400, ಐವತ್ತು ಕೆಜಿಗೆ 7000, ನೂರು ಕೆಜಿಗೆ 14,000 ರು. ಶುಲ್ಕ ವಿಧಿಸಬೇಕು ಎಂದು ಹೇಳಲಾಗಿದೆ. ಇದನ್ನು ನೋಡಿ ನನಗೂ ಆಶ್ಚರ್ಯವಾಯಿತು. ಅಲ್ಲದೇ ಖಾಲಿ ಇರುವ ನಿವೇಶನಗಳಿಗೆ ಪ್ರತಿ ಚದರ ಅಡಿಗೆ 20 ರು. ಶುಲ್ಕ ವಿಧಿಸಬೇಕು ಎಂದಿದೆ. ಈ ದರಗಳು ಹೆಚ್ಚಾಯಿತು ಎಂದು ಅದರಲ್ಲಿ ಕೇವಲ ಶೇ. 25ರಷ್ಟು ಮಾತ್ರ ಸಂಗ್ರಹ ಮಾಡುತ್ತಿದ್ದೇವೆ. ಒಂದು ನಿವೇಶನಕ್ಕೆ ಪ್ರತಿ ಚದರ ಅಡಿಗೆ 2.40 ರು. ಸಂಗ್ರಹ ಮಾಡುವಂತೆ ತೀರ್ಮಾನ ಮಾಡಲಾಗಿದೆ ಎಂದರು.

ಕೊರಿಯಾದಲ್ಲಿ ನಡೆದ 20ನೇ ಏಷ್ಯನ್ ರೋಲರ್ ಸ್ಕೇಟಿಂಗ್ ಚಾಂಪಿಯನ್‌ಶಿಪ್‌ನಲ್ಲಿ ಡಬಲ್ ಸಿಲ್ವರ್ ಪದಕ ವಿಜೇತ ಧನುಷ್ ಬಾಬು ಮತ್ತು ಸಿಲ್ವರ್ ಪದಕ ವಿಜೇತೆ ಕು. ಪೂರ್ವಿ ಮಠೆ ಅವರು ವಿಧಾನಸೌಧದ ಕಚೇರಿಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿದರು. ಈ ವೇಳೆ ಅವರಿಬ್ಬರನ್ನು ಸಿಎಂ ಸಿದ್ದರಾಮಯ್ಯ ಅಭಿನಂದಿಸಿದರು. ವಿಧಾನ ಪರಿಷತ್ ಸದಸ್ಯ ಹಾಗೂ ರಾಜ್ಯ ಒಲಂಪಿಕ್ ಅಸೋಸಿಯೇಷನ್ ಅಧ್ಯಕ್ಷರಾದ ಗೋವಿಂದರಾಜು ಇದ್ದರು.

ಕಾಂಗ್ರೆಸ್‌ನಿಂದ ತೆರಿಗೆ ಹಣ ದುರ್ಬಳಕೆ

ಬೆಂಗಳೂರು: ರಾಜ್ಯದ ಕಾಂಗ್ರೆಸ್ ಸರಕಾರ ತೆರಿಗೆ ಹಣವನ್ನು ಪಕ್ಷದ ಹಣ ಎಂದುಕೊಂಡಿದೆ. ತೆರಿಗೆ ಹಣ ದುರ್ಬಳಕೆ ಮಾಡುತ್ತಿರುವುದು ಖಂಡನೀಯ ಎಂದು ಶಾಸಕ ಡಾ.ಸಿ.ಎನ್.ಅಶ್ವತ್ಥನಾರಾಯಣ್ ತಿಳಿಸಿದರು.
ಸುದ್ದಿಗಾರರೊಂದಿಗೆ ಮಾತನಾಡಿ, ಸರಕಾರ ಜವಾಬ್ದಾರಿಯುತವಾಗಿದ್ದರೆ, ತೆರಿಗೆದಾರರ ಒಂದು ರುಪಾಯಿ ಹಣ ದುರ್ಬಳಕೆ ಮಾಡಬಾರದು. ಹಿಂದೂ ಸಮಾಜದ ಹಬ್ಬಗಳು ಬಂದಾಗ ನಮ್ಮ ಭಾವನೆಗಳಿಗೆ ಧಕ್ಕೆ ರೀತಿಯಲ್ಲಿ ಕಾಂಗ್ರೆಸ್ ನಡೆದುಕೊಳ್ಳುತ್ತಿತ್ತು. ಇದು ಒಂದೇ ಬಾರಿ ಅಲ್ಲ. ರಾಮ ಜನ್ಮಭೂಮಿಯಲ್ಲಿ ರಾಮಮಂದಿರ ನಿರ್ಮಾಣವಾಗಿ ಉದ್ಘಾಟನೆಯ ಸಂದರ್ಭದಲ್ಲೂ ಮನಬಂದಂತೆ ಮಾತನಾಡಿದ್ದರು ಎಂದು ವಾಗ್ದಾಳಿ ನಡೆಸಿದರು.

ವಿಶ್ವ ಜೈವಿಕ ಇಂಧನ ದಿನ ಕಾರ್ಯಕ್ರಮದಲ್ಲಿ ಎಸ್.ಈ. ಸುಧೀಂದ್ರ ಅಭಿಮತ

ಪೀಳಿಗೆಗೆ ಜೈವಿಕ ಇಂಧನ ಉಪಯೋಗ ಅಪಾರ

ಬೆಂಗಳೂರು: ಇಂಧನ ಕ್ಷೇತ್ರಕ್ಕೆ ವಿಜ್ಞಾನ, ತಂತ್ರಜ್ಞಾನ ಮತ್ತು ಪುನರ್ ಉತ್ಪಾದನೀಯ ಇಂಧನಗಳು ದೂರದೃಷ್ಟಿ ಕೊಡುಗೆಗಳು ಜೈವಿಕ ಇಂಧನ ಚಳವಳಿಗೆ ಪ್ರೇರಕವಾಗಿವೆ ಎಂದು ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಎಸ್.ಈ. ಸುಧೀಂದ್ರ ಹೇಳಿದರು.

ಮಹಾತ್ಮ ಗಾಂಧಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ, ಗದಗ ಹಾಗೂ ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿ, ಬೆಂಗಳೂರು ಇವರ ಸಂಯುಕ್ತ ಆಶ್ರಯದಲ್ಲಿ ಆಯೋಜಿಸಿದ್ದ ಸದ್ಭಾವನಾ ದಿವಸ್-ಊರ್ಜಾ ದಿವಸ್-ವಿಶ್ವ ಜೈವಿಕ ಇಂಧನ ದಿನ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ಸದ್ಭಾವನಾ ದಿವಸ್ ಹಾಗೂ ಊರ್ಜಾ ದಿವಸ್ ಒಂದೇ ನಾಣ್ಯದ ಎರಡು ಮುಖ ಸಾಮಾಜಿಕ ಸೌಹಾರ್ದತೆ ಮತ್ತು ಸಹಿಷ್ಣುತೆಯ ಗಳಂತಿವೆ. ಈ ಮೂಲಕ ರಾಷ್ಟ್ರೀಯ ಏಕತೆ, ಸಂದೇಶವನ್ನು ಜನತೆಗೆ ತಲುಪಿಸುವುದರ ಜತೆಗೆ, ವಿದ್ಯಾರ್ಥಿಗಳಲ್ಲಿ ನವೀಕರಿಸಬಹುದಾದ ಇಂಧನಗಳ ಕುರಿತು ಅರಿವು ಮೂಡಿಸಲಾಗುತ್ತಿದೆ ಎಂದರು.

ಈ ವೇಳೆ ನವೀಕರಿಸಬಹುದಾದ ಇಂಧನಗಳ ಉತ್ತೇಜನ ಯೋಜನೆಗಳಿಗೆ ಸಚಿವರಾದ ಪ್ರಿಯಾಂಕ್ ಖರ್ಗೆ ಹಾಗೂ ಎಚ್.ಕೆ.ಪಾಟೀಲ ಅವರು ನೀಡುತ್ತಿರುವ ಪ್ರೋತ್ಸಾಹಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ವಿವಿ ಕುಲಪತಿ ಪ್ರೊ.ಡಾ.ಸುರೇಶ್ ವಿ.ನಾಡ ಗೌಡರ, ವಿಶ್ವವಿದ್ಯಾಲಯವು ಗ್ರಾಮೀಣಾಭಿವೃದ್ಧಿ, ಪರಿಸರ ಸಂರಕ್ಷಣೆ ಮತ್ತು ಶಾಶ್ವತ ಶಕ್ತಿ ಸಂಪನ್ಮೂಲಗಳ ಅರಿವು ಮೂಡಿಸುವ ಕಾರ್ಯದಲ್ಲಿ ಸದಾ ಬದ್ಧವಾಗಿದೆ ಎಂದು ಅಭಿಪ್ರಾಯಪಟ್ಟರು.

ಗದಗ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಸಂತೋಷ್ ಕುಮಾರ್ ಕೆಂಚಪ್ಪನವರ್ ಮಾತನಾಡಿ, ಅರಣ್ಯ ಸಂಪತ್ತು, ಪರಿಸರ ಸಂರಕ್ಷಣೆ ಹಾಗೂ ನವೀಕರಿಸಬಹುದಾದ ಇಂಧನದ ಅಭಿವೃದ್ಧಿ ಪರಸ್ಪರ ಪೂರಕವಾಗಿದ್ದು, ಗ್ರಾಮೀಣಾಭಿವೃದ್ಧಿಗೆ ಹೊಸ ದಾರಿ ಯನ್ನು ತೋರಿಸುತ್ತವೆ ಎಂದು ಹೇಳಿದರು.

ಜೈವಿಕ ಇಂಧನ ಅಭಿವೃದ್ಧಿ ಮಂಡಳಿಯ ವ್ಯವಸ್ಥಾಪಕ ನಿರ್ದೇಶಕ ಶಿವಶರ ಎಲ್., ವಿವಿ ವಿತ್ತಾಧಿಕಾರಿ ಪ್ರಶಾಂತ್ ಜೆ.ಸಿ, ಜೈವಿಕ ಇಂಧನ ಸಂಶೋಧನೆ, ಮಾಹಿತಿ ಹಾಗೂ ಪ್ರಾತ್ಯಕ್ಷಿಕೆ ಕೇಂದ್ರದ ಸಂಯೋಜಕ ಡಾ.ರವಿ ಜಡಿ, ಸಹಾಯಕ ನಿರ್ದೇಶಕ ದೀಕ್ಷಿತ್, ಅಧ್ಯಾಪಕರು, ವಿದ್ಯಾರ್ಥಿಗಳು, ವಿವಿ ಸಿಬ್ಬಂದಿ ಇದ್ದರು.

ಸದ್ಭಾವನಾ ದಿವಸ್–ಊರ್ಜಾ ದಿವಸ್–ವಿಶ್ವ ಜೈವಿಕ ಇಂಧನ ದಿನ ಕಾರ್ಯಕ್ರಮವನ್ನು ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಎಸ್.ಈ. ಸುಧೀಂದ್ರ ಉದ್ಘಾಟಿಸಿದರು.

3 ಲಕ್ಷಕ್ಕೂ ಹೆಚ್ಚು ಉದ್ಯೋಗ ಸೃಷ್ಟಿ

ಪ್ರತಿವರ್ಷ ಆ.10ರಂದು ಡೀಸೆಲ್ ಎಂಜಿನ್ ಆವಿಷ್ಕರಿಸಿದ ಸರ್ ರೂಡಾಲ್ ಡೀಸೆಲ್‌ರ ಸ್ಮರಣಾರ್ಥವಾಗಿ ವಿಶ್ವ ಜೈವಿಕ ಇಂಧನ ದಿನ ಆಚರಿಸಲಾಗುತ್ತದೆ. 2004ರಲ್ಲಿ ಮೊದಲ ಬಾರಿಗೆ ರಾಜೀವ್ ಗಾಂಧಿ ಅಕ್ಷಯ್ ಊರ್ಜಾ ದಿವಸ್ ಆಚರಿಸಿದ ನೆನಪು ವಿಶೇಷ ಮುಂದಿನ ವರ್ಷಗಳಲ್ಲಿ ಕರ್ನಾಟಕದಲ್ಲಿ ಜೈವಿಕ ಇಂಧನ ಕ್ಷೇತ್ರವು ಲಕ್ಷ ಕೋಟಿ ಹೂಡಿಕೆ ಆಕರ್ಷಿಸಿ, 3 ಲಕ್ಷಕ್ಕೂ ಹೆಚ್ಚು ಉದ್ಯೋಗಗಳನ್ನು ಸೃಷ್ಟಿಸಿ, ರೈತರ ಆದಾಯವರ್ಧನೆಗೆ ದಾರಿಯಾಗಲಿದೆ. ನೂತನ ಜೈವಿಕ ಇಂಧನ ನೀತಿ ಶೀಘ್ರದಲ್ಲೇ ರಾಜ್ಯ ಸರಕಾರದಿಂದ ಪ್ರಕಟಗೊಳ್ಳಲಿದೆ ಎಂದು ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಎಸ್.ಈ. ಸುಧೀಂದ್ರ ಭರವಸೆ ವ್ಯಕ್ತಪಡಿಸಿದರು.

ಸ್ವಾಧೀನ ಸೂಚನೆ
(ಸ್ಥಿರ ಆಸ್ತಿಗಾಗಿ)

ಈ ಕಾರಣದಿಂದ,

ಸಮ್ಮಾನ್ ಕ್ಯಾಪಿಟಲ್ ಲಿ. (CIN:L65922DL2005PLC136029) (ಈಗಿನ ಹೆಸರು: **ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್**) ನ ಅಧಿಕಾರ ಕೊಟ್ಟಿರುವ ಅಧಿಕಾರಿಯ ಹಸ್ತಾಕ್ಷರವಿರುವ ಐಹಿಕತೆ ಮತ್ತು ಪುನರ್ ನಿರ್ಮಾಣ ಮತ್ತು ಫೈನಾನ್ಸ್‌ನ ಸಾಲ ತೀರಿಸಲು ಇರುವ ಸ್ವತ್ತು ಮತ್ತು ಎನ್‌ಫೊರ್ಸ್‌ಮೆಂಟ್ ಅಫ್ ಸೆಕ್ಯೂರಿಟಿಸ್ ಆಕ್ಟ್ 2002 ಮತ್ತು ಅಧಿಕಾರದ ಪ್ರಯೋಗ ಮಾಡುವಿಕೆಯ ಸೆಕ್ಷನ್ 13 (12) ನಿಯಮ 3 ರ ಸೆಕ್ಯೂರಿಟಿಸ್ (ಎನ್‌ಪೊರ್ಸ್‌ಮೆಂಟ್) ನಿಯಮ, 2002 ದೊಂದಿಗೆ ಓದಿರಿ. ಬೇಡಿಕಯ ಸೂಚನೆ ಮುಲಕ ಪ್ರಕಟಿಸಿದ ತಾರೀಖು **02.05.2025** ರಂದು ಕರೆದು ಸಾಲಗಾರ **ಮೋಸೆಸ್ ಐ ಮತ್ತು ವಿಜಯ್. ಐ** ನೋಟಿಸಿನಲ್ಲಿ ಹೇಳಿರುವಂತೆ ಮರುಪಾವತಿಸಬೇಕಾದ **ರೂ. 35,83,496.17 (ಮೂವತ್ತೈದು ಲಕ್ಷ ಎಂಬತ್ತು ಮೂರು ಸಾವಿರದ ನಾಲ್ಕು ನೂರ ತೊಂಬತ್ತಾರು ರೂಪಾಯಿಗಳು ಮತ್ತು ಹದಿನೇಳು ಪೈಸೆ ಮಾತ್ರ)** ಸಾಲ ಖಾತೆ ನಂ. **HHLBAN00515217** ಈ ಲೋನ್ ಅಕೌಂಟ್‌ಗೆ ಸಂಬಂಧಿಸಿದಂತ, ಹೇಳಲಾಗಿರುವ ನೋಟಿಸ್ ನಿಮ್ಮನ್ನು ತಲುಪಿ 60 ದಿನಗಳಾಗುವುದರೊಳಗೆ **30.04.2025** ರ ವರೆಗಿನ ಮೊತ್ತ ಮತ್ತು ಅದರ ಮೇಲಿನ ಬಡ್ಡಿ.

ಸಾಲಗಾರರು ಸಾಲ ಮರುಪಾವತಿಸಲು ವಿಫಲವಾದ ಕಾರಣ ಕೆಳಗೆ ತಿಳಿಸಿರುವ **ಆಸ್ತಿಯ ಸ್ವಾಧೀನ**ವನ್ನು ಅಧಿಕಾರ ಪ್ರಯೋಗ ಮಾಡುವ ಸೆಕ್ಷನ್ 13(4)ರ ಆಕ್ಟ್‌ನ ನಿಯಮ 8 ರೂಂದಿಗೆ ಓದಿ ತಿಳಿಸಿರುವ ನಿಯಮದ ಪ್ರಕಾರ ದಿನಾಂಕ **20.08.2025** ರಂದು ಮಾಡಲಾಗಿದೆ ಎಂದು ಸಾಲಗಾರನಿಗೆ ಮತ್ತು ಸಾರ್ವಜನಿಕವಾಗಿ ತಿಳಿಯಪಡಿಸಲಾಗುವುದು.

ಪ್ರತ್ಯೇಕವಾಗಿ ಸಾಲಗಾರರಿಗೆ ಮತ್ತು ಸರ್ವಸಾಮಾನ್ಯವಾದ ಸಾರ್ವಜನಿಕರ ಎಚ್ಚರಿಕೆಗಾಗಿ ಯಾವುದೇ ತರಹದ ಅಸ್ತಿ ವ್ಯವಹಾರವು ಮಾಡದಿರಲು ಮತ್ತು ಆಸ್ತಿಯಲ್ಲಿನ ಯಾವುದೇ ವ್ಯವಹಾರವು **ಸಮ್ಮಾನ್ ಕ್ಯಾಪಿಟಲ್ ಲಿ.** (ಈಗಿನ ಹೆಸರು: **ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್**)ಬಾಕಿ ಇರುವ ಮೊತ್ತ **ರೂ. 35,83,496.17 (ಮೂವತ್ತೈದು ಲಕ್ಷ ಎಂಬತ್ತು ಮೂರು ಸಾವಿರದ ನಾಲ್ಕು ನೂರ ತೊಂಬತ್ತಾರು ರೂಪಾಯಿಗಳು ಮತ್ತು ಹದಿನೇಳು ಪೈಸೆ ಮಾತ್ರ) 30.04.2025** ವರೆಗಿನ ಮೊತ್ತ ಮತ್ತು ಜೊತೆಗೆ ಅದರ ಮೇಲಿನ ಬಡ್ಡಿಗೆ ಒಳಪಟ್ಟಿದೆ.

ಸೆಕ್ಯೂರ್ಡ್ ಆಸ್ತಿಗಳನ್ನು ರಿಡೀಮ್ ಮಾಡಲು ಉಪಲಬ್ಧವಿರುವ ಸಮಯದ ಬಗ್ಗೆ ಸಾಲಗಾರರ ಗಮನವನ್ನು ಕಾಯ್ದೆಯ ಸೆಕ್ಷನ್ 13ರ ಉಪ-ಸೆಕ್ಷನ್ (8) ಪ್ರಾವಧಾನಗಳತ್ತ ಸೆಳೆಯಲಾಗುತ್ತದೆ.

ಸ್ಥಿರಾಸ್ತಿಯ ವರ್ಣನೆ

ಫ್ಲಾಟ್ ಸಂ 117, ವಿಂಗ್ ಬಿ, ಐಕಾನ್ ಹನಿ ಪೂಲ್ನಲ್ಲಿ ಮೊದಲ ಮಹಡಿಯಲ್ಲಿ ಸಾಮಾನ್ಯ ಪ್ರದೇಶಗಳಲ್ಲಿ ಅನುಪಾತದ ಪಾಲನ್ನು ಒಳಗೊಂಡಂತೆ 827 ಚದರ ಅಡಿ ಸೂಪರ್ ಬಿಲ್ಟ್ ಅಪ್ ಪ್ರದೇಶವನ್ನು ಹೊಂದಿದೆ. ಎಸ್.ವೈ. ಸಂ 75, ಪಿಐಡಿ ಸಂ 150200103200820119 ಭೂಮಿಯಲ್ಲಿ ನಿರ್ಮಿಸಲಾಗಿದೆ ಮತ್ತು ಕಾಚಾನಾಯಕನಹಳ್ಳಿ ಗ್ರಾಮ, ಜಿಗಣಿ ಹೋಬಳಿ, ಆನೇಕಲ್ ತಾಲ್ಲೂಕು, ಬೆಂಗಳೂರು-560099, ಕರ್ನಾಟಕದಲ್ಲಿರುವ ಐಕಾನ್ ಹನಿ ಪೂಲ್ ಎಂದು ಕರೆಯಲ್ಪಡುವ ಕಟ್ಟಡದಲ್ಲಿ ಕಾಥಾ ಸಂ 565/1/75/ಫ್117, 376.67 ಚದರ ಅಡಿ ಅವಿಭಜಿತ ಹಂಚಿಕೆಯ ಭೂಮಿಯನ್ನು ಹೊಂದಿದ್ದು ಒಂದು ಮುಚ್ಚಿದ ಕಾರ್ ಪಾರ್ಕಿಂಗ್ ಸ್ಥಳವನ್ನು ಹೊಂದಿರುವ ಸಂ 117 ರ ಅಡಿಯಲ್ಲಿ ಸೀಮಿತಗೊಳಿಸಲಾಗಿದೆ:

ಪೂರ್ವದಲ್ಲಿ	: ಕಾರಿಡಾರ್	ಪಶ್ಚಿಮದಲ್ಲಿ	: ಡ್ರೈವ್ ಅವೇ
ಉತ್ತರದಲ್ಲಿ	: ಕಾರಿಡಾರ್	ದಕ್ಷಿಣದಲ್ಲಿ	: ಫ್ಲಾಟ್ ಸಂ 116

ಅಧಿಕಾರವಿರುವ ಅಧಿಕಾರಿ
ದಿನಾಂಕ : 20.08.2025 **ಸಮ್ಮಾನ್ ಕ್ಯಾಪಿಟಲ್ ಲಿ.**
ಸ್ಥಳ : ಬೆಂಗಳೂರು **(ಹಿಂದಿನ ಹೆಸರು: ಇಂಡಿಯಬುಲ್ಸ್ ಹೌಸಿಂಗ್‌ಫೈನಾನ್ಸ್ ಲಿಮಿಟೆಡ್)**

ವಿರಾಮ
ಪ್ರತಿ ಭಾನುವಾರ

ಸ್ವಾಧೀನ ಸೂಚನೆ
(ಸ್ಥಿರ ಆಸ್ತಿಗಾಗಿ)

ಈ ಕಾರಣದಿಂದ,

ಸಮ್ಮಾನ್ ಕ್ಯಾಪಿಟಲ್ ಲಿ. (CIN:L65922DL2005PLC136029) (ಈಗಿನ ಹೆಸರು: **ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್**) ನ ಅಧಿಕಾರ ಕೊಟ್ಟಿರುವ ಅಧಿಕಾರಿಯ ಹಸ್ತಾಕ್ಷರವಿರುವ ಐಹಿಕತೆ ಮತ್ತು ಪುನರ್ ನಿರ್ಮಾಣ ಮತ್ತು ಫೈನಾನ್ಸ್‌ನ ಸಾಲ ತೀರಿಸಲು ಇರುವ ಸ್ವತ್ತು ಮತ್ತು ಎನ್‌ಪೊರ್ಸ್‌ಮೆಂಟ್ ಅಫ್ ಸೆಕ್ಯೂರಿಟಿಸ್ ಆಕ್ಟ್ 2002 ಮತ್ತು ಅಧಿಕಾರದ ಪ್ರಯೋಗ ಮಾಡುವಿಕೆಯ ಸೆಕ್ಷನ್ 13 (12) ನಿಯಮ 3 ರ ಸೆಕ್ಯೂರಿಟಿಸ್ (ಎನ್‌ಪೊರ್ಸ್‌ಮೆಂಟ್) ನಿಯಮ, 2002 ದೊಂದಿಗೆ ಓದಿರಿ. ಬೇಡಿಕಯ ಸೂಚನೆ ಮುಲಕ ಪ್ರಕಟಿಸಿದ ತಾರೀಖು **02.05.2025** ರಂದು ಕರೆದು ಸಾಲಗಾರ **ಅಲ್ಫೊನ್ಸಾ ಮಥಾಯ್ ಮತ್ತು ಪರಮಿತಾ ಡೆಬ್ಬರ್‌ಮೇನ್ (ಗ್ಯಾರಂಟರ್)** ನೋಟಿಸಿನಲ್ಲಿ ಹೇಳಿರುವಂತೆ ಮರುಪಾವತಿಸಬೇಕಾದ **ರೂ. 48,59,424.12 (ನಲವತ್ತೆಂಟು ಲಕ್ಷದ ಐವತ್ತೊಂಬತ್ತು ಸಾವಿರದ ನಾಲ್ಕುನೂರ ಇಪ್ಪತ್ತನಾಲ್ಕು ರೂಪಾಯಿಗಳು ಮತ್ತು ಹನ್ನೆರಡು ಪೈಸೆ ಮಾತ್ರ)** ಸಾಲ ಖಾತೆ ನಂ. **HHLBAN00234974** ಈ ಲೋನ್ ಅಕೌಂಟ್‌ಗೆ ಸಂಬಂಧಿಸಿದಂತ, ಹೇಳಲಾಗಿರುವ ನೋಟಿಸ್ ನಿಮ್ಮನ್ನು ತಲುಪಿ 60 ದಿನಗಳಾಗುವುದರೊಳಗೆ **30.04.2025** ರ ವರೆಗಿನ ಮೊತ್ತ ಮತ್ತು ಅದರ ಮೇಲಿನ ಬಡ್ಡಿ.

ಸಾಲಗಾರರು ಸಾಲ ಮರುಪಾವತಿಸಲು ವಿಫಲವಾದ ಕಾರಣ ಕೆಳಗೆ ತಿಳಿಸಿರುವ **ಆಸ್ತಿಯ ಸ್ವಾಧೀನ**ವನ್ನು ಅಧಿಕಾರ ಪ್ರಯೋಗ ಮಾಡುವ ಸೆಕ್ಷನ್ 13(4)ರ ಆಕ್ಟ್‌ನ ನಿಯಮ 8 ರೂಂದಿಗೆ ಓದಿ ತಿಳಿಸಿರುವ ನಿಯಮದ ಪ್ರಕಾರ ದಿನಾಂಕ **19.08.2025** ರಂದು ಮಾಡಲಾಗಿದೆ ಎಂದು ಸಾಲಗಾರನಿಗೆ ಮತ್ತು ಸಾರ್ವಜನಿಕವಾಗಿ ತಿಳಿಯಪಡಿಸಲಾಗುವುದು.

ಪ್ರತ್ಯೇಕವಾಗಿ ಸಾಲಗಾರರಿಗೆ ಮತ್ತು ಸರ್ವಸಾಮಾನ್ಯವಾದ ಸಾರ್ವಜನಿಕರ ಎಚ್ಚರಿಕೆಗಾಗಿ ಯಾವುದೇ ತರಹದ ಅಸ್ತಿ ವ್ಯವಹಾರವು ಮಾಡದಿರಲು ಮತ್ತು ಆಸ್ತಿಯಲ್ಲಿನ ಯಾವುದೇ ವ್ಯವಹಾರವು **ಸಮ್ಮಾನ್ ಕ್ಯಾಪಿಟಲ್ ಲಿ.** (ಈಗಿನ ಹೆಸರು: **ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್**) ಬಾಕಿ ಇರುವ ಮೊತ್ತ **ರೂ. 48,59,424.12 (ನಲವತ್ತೆಂಟು ಲಕ್ಷದ ಐವತ್ತೊಂಬತ್ತು ಸಾವಿರದ ನಾಲ್ಕುನೂರ ಇಪ್ಪತ್ತನಾಲ್ಕು ರೂಪಾಯಿಗಳು ಮತ್ತು ಹನ್ನೆರಡು ಪೈಸೆ ಮಾತ್ರ) 30.04.2025** ವರೆಗಿನ ಮೊತ್ತ ಮತ್ತು ಜೊತೆಗೆ ಅದರ ಮೇಲಿನ ಬಡ್ಡಿಗೆ ಒಳಪಟ್ಟಿದೆ.

ಸೆಕ್ಯೂರ್ಡ್ ಆಸ್ತಿಗಳನ್ನು ರಿಡೀಮ್ ಮಾಡಲು ಉಪಲಬ್ಧವಿರುವ ಸಮಯದ ಬಗ್ಗೆ ಸಾಲಗಾರರ ಗಮನವನ್ನು ಕಾಯ್ದೆಯ ಸೆಕ್ಷನ್ 13ರ ಉಪ-ಸೆಕ್ಷನ್ (8) ಪ್ರಾವಧಾನಗಳತ್ತ ಸೆಳೆಯಲಾಗುತ್ತದೆ.

ಸ್ಥಿರಾಸ್ತಿಯ ವರ್ಣನೆ

ನಾಗೇಶ್ವರ ನಾಗೇನಹಳ್ಳಿ, ಗ್ರಾಮ ಮತ್ತು ಕೊಥನೂರು ಗ್ರಾಮ, ಕೆಆರ್ ಪುರಂ ಹೋಬಳಿ, ಬೆಂಗಳೂರು ಪೂರ್ವ ತಾಲೂಕು, ಬೆಂಗಳೂರು-560048, ಕರ್ನಾಟಕ ಇಲ್ಲಿ ಮಂತ್ರಿ ವೆಬ್‌ಸಿಟಿ ಎಂದು ತಿಳಿಯಲಾಗುವ ಪ್ರೊಜೆಕ್ಟ್‌ನ ಟವರ್-ಎಫ್‌ನಲ್ಲಿ 19ನೇ ಮಹಡಿಯಲ್ಲಿ 1250 ಚದರ ಅಡಿ, ಅಂದರೆ 116.17 ಚದರ ಮೀಟರ್ ಸೂಪರ್ ಬಿಲ್ಟ್ ಅಪ್ ಏರಿಯಾ ಹೊಂದಿರುವ ಅಪಾರ್ಟ್‌ಮೆಂಟ್ ನಂ. ಎಫ್-1907, ಕವರ್ ಮಾಡಲಾದ ಒಂದು ಕಾರ್ ಪಾರ್ಕಿಂಗ್ ಜಾಗದೊಂದಿಗೆ, ಕಟ್ಟಡ/ಟವರ್‌ನ ಪ್ಲಿಂತ್ ಏರಿಯಾದಲ್ಲಿ ಸದರಿ ಅಪಾರ್ಟ್‌ಮೆಂಟ್‌ನ ಸೂಪರ್ ಬಿಲ್ಟ್-ಅಪ್ ಏರಿಯಾದ ಪ್ರಮಾಣಾನುಸಾರವಾಗಿ ಅವಿಭಜಿತ ಆಸಕ್ತಿಯ ಜೊತೆಗೆ.

ಅಧಿಕಾರವಿರುವ ಅಧಿಕಾರಿ
ದಿನಾಂಕ : 19.08.2025 **ಸಮ್ಮಾನ್ ಕ್ಯಾಪಿಟಲ್ ಲಿ.**
ಸ್ಥಳ : ಬೆಂಗಳೂರು **(ಹಿಂದಿನ ಹೆಸರು: ಇಂಡಿಯಬುಲ್ಸ್ ಹೌಸಿಂಗ್‌ಫೈನಾನ್ಸ್ ಲಿಮಿಟೆಡ್)**

ಆ.27ರಿಂದ ಸೆ.6ರವರೆಗೆ ಗಣೇಶೋತ್ಸವ | ಪ್ರಸಿದ್ಧ ಕಲಾವಿದರಿಂದ ಮನರಂಜನಾ ಕಾರ್ಯಕ್ರಮ

11 ದಿನ ಬೆಂಗಳೂರು ಗಣೇಶ ಉತ್ಸವ

ಬೆಂಗಳೂರು: ಶ್ರೀ ವಿದ್ಯಾರಣ್ಯ ಯುವಕ ಸಂಘದಿಂದ ನ್ಯಾಷನಲ್ ಕಾಲೇಜು ಮೈದಾನದಲ್ಲಿ ಬೆಂಗಳೂರು ಗಣೇಶ ಉತ್ಸವವು 63ನೇ ವರ್ಷಕ್ಕೆ ಕಾಲಿಟ್ಟ ಹಿನ್ನೆಲೆ ಆ.27ರಿಂದ ಸೆ.6ರವರೆಗೆ ಗಣೇಶೋತ್ಸವನ್ನು ಆಯೋಜಿಸಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ಈ ವರ್ಷದ ಗಣೇಶೋತ್ಸವವನ್ನು 11 ದಿನಗಳ ಕಾಲ ಅದ್ಧೂರಿ ಸಾಂಸ್ಕೃತಿಕ ಯಾತ್ರೆಯ ರೂಪದಲ್ಲಿ ಆಚರಿಸಲು ಆಯೋಜಕರು ನಿರ್ಧರಿಸಿದ್ದು, ಎಂ.ಡಿ. ಪಲ್ಲವಿ, ರಾಜೇಶ್ ಕೃಷ್ಣನ್, ಲಕ್ಷ್ಮಿ ಮತ್ತು ಇಂದು ನಾಗರಾಜ್, ಸೂರ್ಯಗಾಯತ್ರಿ, ಸುನೀತಾ ಉಪದ್ರಷ್ಟ, ಪಂಡಿತ್ ವೆಂಕಟೇಶ ಕುಮಾರ್, ವಿನಯ್ ವಾರಾಣಸಿ ಹಾಗೂ ಬಾಲ ಕಲಾವಿದೆ ಗಂಗಾ ಶಶಿಧರನ್ ಮುಂತಾದ ಸುಪ್ರಸಿದ್ಧ ಕಲಾವಿದರಿಂದ ಭಕ್ತಿ ಸಂಗೀತ ಕಾರ್ಯಕ್ರಮಗಳು ಜರುಗಲಿವೆ. ಎಲ್ಲಾ ದಿನವೂ ಸಂಜೆಯ ಬಳಿಕ ಭಕ್ತಿ ಸಂಗೀತದ ಜತೆಗೆ ಬೆಂಗಳೂರಿನ ಯುವಕರ ಆಸಕ್ತಿಯನ್ನು ತಣಿಸುವ ಆಧುನಿಕ ಮನರಂಜನಾ ಕಾರ್ಯಕ್ರಮಗಳನ್ನು ಆಯೋಜಿಸ ಲಾಗಿದೆ. ನಟ ಕ್ರೇಜಿಸ್ಟಾರ್ ರವಿಚಂದ್ರನ್ ಅವರು ಮಯೂರ ರಾಘವೇಂದ್ರ ಹಾಗೂ ಪ್ರೇಕ್ಷಕರ ಜತೆಗೆ ವಿಶಿಷ್ಟ ಸಂವಾದ ನಡೆಸಿಕೊಡಲಿದ್ದಾರೆ. ಅದರ ಜತೆಗೆ ಮಂಜು ಡ್ರಮ್ಸ್ ಕಲೆಕ್ಟಿವ್ ಅವರಿಂದ ಸಂಗೀತ ಕಛೇರಿ ಇರಲಿದೆ.

ಭಕ್ತಿಸಂಗೀತದ ದಂತಕತೆ ಕೆ.ಜೆ.ಯೇಸುದಾಸ್ ಅವರ ಪುತ್ರ ವಿಜಯ್ ಯೇಸುದಾಸ್‌ರ ಸಂಗೀತ ಕಾರ್ಯಕ್ರಮವಿರಲಿದ್ದು, ಗಾಯನ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ವಿಶಿಷ್ಟ ರಂಗಪ್ರಯೋಗ ಮತ್ತು ನೃತ್ಯ ಕಾರ್ಯಕ್ರಮಗಳ ಮೂಲಕ ಇನ್ನಷ್ಟು ಮೆರಗು ನೀಡಲು ಪಂಡಿತ್ ಜಗದೀಶ್ ಡಿ. ಕುರ್ತಕೋಟಿ ಹಾಗೂ ತಂಡದ ಕಾಶಿ ಡಮರು', ಸವಿತಕ್ಕ ಹಳ್ಳಿ ಬ್ಯಾಂಡ್‌ನ ಭಕ್ತಿ ಜಾನಪದ ಸಂಗೀತ' ಹಾಗೂ ವಿನಯ್ ವಾರಾಣಸಿಯವರು ನಡೆಸಿಕೊಡುವ ಗಣೇಶನ ಆಕರ್ಷಕ ಕತೆಗಳ ಗಜಮುಖಮ್' ನೃತ್ಯರೂಪಕಗಳು ಆಯೋಜನೆಗೊಂಡಿವೆ.

ಮನಸೆಳೆಯುವ ಸಂಗೀತ ಕಾರ್ಯಕ್ರಮ

ಗ್ರ್ಯಾಮಿ ಪ್ರಶಸ್ತಿ ವಿಜೇತ ವಿಜಯ್ ಪ್ರಕಾಶ್ ಚಿತ್ರಗೀತೆಗಳು ಹಾಗೂ ಸಮಕಾಲೀನ ಸಂಗೀತ ಸುಧೆಯನ್ನು ಹರಿಸಲಿದ್ದು, ಜಾನಪದ ಹಾಗೂ ರಾಕ್ ಸಂಗೀತವನ್ನು ಮಿಳಿತಗೊಳಿಸಿ ಜಾಗತಿಕ ವೇದಿಕೆಯಲ್ಲಿ ಭಾರತೀಯ ಸಂಗೀತದ ಸಾಂಸ್ಕೃತಿಕ ರಾಯಭಾರಿಯಾಗಿರುವ ರಘು ದೀಕ್ಷಿತ್ ಅವರು ಕನ್ನಡದ ಹಾಡುಗಳನ್ನು ಅಂತಾರಾಷ್ಟ್ರೀಯ ಸಂಗೀತದೊಂದಿಗೆ ಬೆರೆಸಿ ಹೈ-ಎನರ್ಜಿ ಕಾರ್ಯಕ್ರಮವನ್ನು ನೀಡಲಿದ್ದಾರೆ. ಅಂತಾರಾಷ್ಟ್ರೀಯ ಮಟ್ಟದಲ್ಲಿ ಪ್ರಸಿದ್ಧಿ ಪಡೆದಿರುವ ಹಾಗೂ ಫ್ಯೂಷನ್ ಸಂಗೀತದಲ್ಲಿ ತಮ್ಮದೇ ಆದ ಛಾಪು ಮೂಡಿಸಿ ಬಾನ್ಸುರಿಯ ನಾದವನ್ನು ಹೊಸ ಎತ್ತರಕ್ಕೆ ಕೊಂಡೊಯ್ದಿರುವ ಪ್ರವೀಣ್ ಗೋಡ್ಖಿಂಡಿಯವರು ಕೃಷ್ಣ ಫ್ಯೂಷನ್ ಬ್ಯಾಂಡ್, ಫ್ಲೂಟ್ ರಾಕ್ಸ್ ಜತೆ ಸೇರಿ ಕಾರ್ಯಕ್ರಮ ನೀಡಲಿದ್ದಾರೆ.

ವೀಲ್ ಆಫ್ ಹೋಪ್: ವಿಭಿನ್ನ ಚಟುವಟಿಕೆಗೆ ಚಾಲನೆ

ಬೆಂಗಳೂರು: ಓಯಾಸಿಸ್ ಫರ್ಟಿಲಿಟಿ ಭಾರತದ ತನ್ನ ಎಲ್ಲಾ ಕೇಂದ್ರಗಳಲ್ಲಿ 'ದಿ ವೀಲ್ ಆಫ್ ಹೋಪ್' ಎನ್ನುವ ವಿನೂತನ ಕಾರ್ಯಕ್ರಮಕ್ಕೆ ಚಾಲನೆ ನೀಡಿದೆ. ಈಗಾಗಲೇ 600ಕ್ಕೂ ಅಧಿಕ ದಂಪತಿಗಳು ಇದರಲ್ಲಿ ಪಾಲ್ಗೊಂಡಿದ್ದಾರೆ. ಇದರಲ್ಲಿ ಪ್ರಮುಖವಾಗಿ ಒಂದು ಸ್ಪಿನ್ ವೀಲ್ ಮೂಲಕ ಅಚ್ಚರಿಯ ಉಡುಗೊರೆ ಪಡೆಯಲು ಅವಕಾಶ ನೀಡಲಾಗಿದೆ. ದಂಪತಿಗಳಿಗೆ ನೀಡುವ ಸ್ಪಿನ್‌ನ ಅವಕಾಶದ ಮೂಲಕ ಬೆಂಗಳೂರು, ಒಡಿಶಾ ಮತ್ತು ಹೈದರಾಬಾದ್‌ನಲ್ಲಿ 11ಕ್ಕೂ ಹೆಚ್ಚು ದಂಪತಿಗಳು ಉಚಿತ ಐವಿಎಫ್ ಚಿಕಿತ್ಸೆ ಪಡೆದುಕೊಂಡಿದ್ದಾರೆ. ಈ ಬಗ್ಗೆ ಮಾತಾಡಿದ ಓಯಾಸಿಸ್ ಫರ್ಟಿಲಿಟಿ ವೈದ್ಯಕೀಯ ನಿರ್ದೇಶಕರಾದ ಡಾ. ದುರ್ಗಾ ಜಿ. ರಾವ್ ಅವರು, ಈ ಯೋಜನೆ ದಂಪತಿಗಳ ಪೋಷಕರಾಗುವ ಕನಸನ್ನು ಬೆಂಬಲಿಸಲು ಮತ್ತು ಭಾರತಕ್ಕಾಗಿ ಸುಂದರ ಭವಿಷ್ಯವನ್ನು ನಿರ್ಮಿಸಲು ನಮ್ಮ ಸಣ್ಣ ಕ್ರಮವಾಗಿದೆ. ಈ ಉಪಕ್ರಮ ಸಹಾನುಭೂತಿ, ಶ್ರೇಷ್ಠತೆ ಮತ್ತು ಸಶಕ್ತಗೊಳಿಸುವಿಕೆಯ ನಮ್ಮ ಮೂಲ ಮೌಲ್ಯಗಳನ್ನು ಮತ್ತೊಮ್ಮೆ ದೃಢಪಡಿಸುತ್ತದೆ ಎಂದರು.

ದಿ ವೀಲ್ ಆಫ್ ಹೋಪ್ ಚಟುವಟಿಕೆಯು ಈ ತಿಂಗಳಿಗಾಗಿ ನಮ್ಮ ಎಲ್ಲಾ ಕೇಂದ್ರಗಳಾದ್ಯಂತ ಸಕ್ರಿಯವಾಗಿದೆ ಮತ್ತು ಪೋಷಕರಾಗುವ ಕನಸನ್ನು ನನಸಾಗಿಸಲು ಮತ್ತು ಅಂತರ್ಗತಗೊಳಿಸುವ ನಮ್ಮ ಧ್ಯೇಯವನ್ನು ಬಲಪಡಿಸುತ್ತದೆ. ಪೋಷಕರಾಗುವ ಪ್ರಯಾಣದಲ್ಲಿ ಹೆಜ್ಜೆಯಿಡಲು ಬಯಸುವ ಪ್ರತಿ ಮಹಿಳೆಗೆ 10,000ದಿಂದ ಒಂದು ಲಕ್ಷ ರು.ವರೆಗೆ ಆಕರ್ಷಕ ವಿನಾಯಿತಿಗಳನ್ನು ಐವಿಎಫ್ ಚಕ್ರಗಳ ಮೇಲೆ ನೀಡುತ್ತಿದೆ ಎಂದಿದ್ದಾರೆ.

ಸಮಾಚಾರ ಸಣ್ಣದಲ್ಲ

ಟ್ರ್ಯಾಕ್ಟರ್ ಪಲ್ಟಿ: ಯುವಕ ಸಾವು

ಹಾಸನ: ರೀಲ್ಸ್ ಮಾಡಲು ಹೋಗಿ ಟ್ರ್ಯಾಕ್ಟರ್ ಪಲ್ಟಿಯಾಗಿ ಯುವಕ ಸಾವನ್ನಪ್ಪಿರುವ ಘಟನೆ ಹಾಸನ ಜಿಲ್ಲೆಯ ಅರಕಲಗೂಡು ತಾಲೂಕಿನ ಕಬ್ಬಳ್ಳಿಗೆರೆ ಬೆಟ್ಟದಲ್ಲಿ ನಡೆದಿದೆ. ವಿ.ಜಿ.ಕೊಪ್ಪಲು ಗ್ರಾಮದ ಕಿರಣ್ (19) ರೀಲ್ಸ್ ಹುಚ್ಚಿಗೆ ಬಲಿ ಯಾದ ಯುವಕ. ರೀಲ್ಸ್‌ಗಾಗಿ ಕಿರಣ್ ವೇಗವಾಗಿ ಟ್ರ್ಯಾಕ್ಟರ್ ಚಲಾ ಯಿಸುತ್ತಿದ್ದ. ಈ ವೇಳೆ ಬೆಟ್ಟದ ತಿರು ವಿನಲ್ಲಿ ವೇಗವಾಗಿ ಬಂದ ಟ್ರ್ಯಾಕ್ಟರ್ ನಿಯಂತ್ರಣಕ್ಕೆ ಸಿಗದೆ ಪಲ್ಟಿಯಾಗಿದೆ. ಪಲ್ಟಿಯಾದ ರಭಸಕ್ಕೆ ಕಿರಣ್ ಮೇಲೆಯೇ ಟ್ರ್ಯಾಕ್ಟರ್ ಉರುಳಿದ ಪರಿಣಾಮ ಸ್ಥಳದಲ್ಲೇ ಸಾವನ್ನಪ್ಪಿದ್ದಾನೆ. ಘಟನಾ ಸ್ಥಳಕ್ಕೆ ಕೊಣನೂರು ಪೊಲೀಸರು ಭೇಟಿ ನೀಡಿ, ಪ್ರಕರಣ ದಾಖಲಿಸಿಕೊಂಡಿದ್ದಾರೆ. ಕೊಣನೂರು ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ.

ಸೆ.1ಕ್ಕೆ ರಾಷ್ಟ್ರಪತಿ ಮುರ್ಮು ಮೈಸೂರಿಗೆ ಭೇಟಿ

ಮೈಸೂರು: ಇಲ್ಲಿನ ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆಯ ಬೆಳ್ಳಿ ಮಹೋತ್ಸವ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಸಾಂಸ್ಕೃತಿಕ ನಗರಿ ಮೈಸೂರಿಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಸೆ.1 ರಂದು ಆಗಮಿಸಲಿದ್ದು, ಈ ಸಂಬಂಧ ಅಗತ್ಯ ಸಿದ್ಧತಾ ಕ್ರಮ ಕೈಗೊಳ್ಳಬೇಕೆಂದು ಜಿಲ್ಲಾಧಿಕಾರಿ ಜಿ. ಲಕ್ಷ್ಮಿ ಕಾಂತ ರೆಡ್ಡಿ ಅಧಿಕಾರಿಗಳಿಗೆ ಸೂಚಿಸಿದರು. ರಾಷ್ಟ್ರಪತಿಗಳ ಆಗಮನದ ಹಿನ್ನೆಲೆ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಶಿಷ್ಟಾಚಾರದಲ್ಲಿ ಯಾವುದೇ ಲೋಪವಾಗದಂತೆ ಸಂಬಂಧಪಟ್ಟ ಅಧಿಕಾರಿಗಳು ಎಚ್ಚರ ವಹಿಸಬೇಕು. ರಾಡಿಸನ್ ಬ್ಲೂನಲ್ಲಿ ರಾಷ್ಟ್ರಪತಿಗಳು ವಾಸ್ತವ್ಯ ಮಾಡಲಿದ್ದು, ಸಕಲ ವ್ಯವಸ್ಥೆ ಮಾಡಿಕೊಳ್ಳಬೇಕು. ರಾಷ್ಟ್ರಪತಿಗೆ ಸೂಕ್ತ ಪೊಲೀಸ್ ಭದ್ರತೆ, ಅವರು ಸಂಚರಿಸುವ ರಸ್ತೆ ಸಂಪೂರ್ಣವಾಗಿ ದುರಸ್ತಿ ಸೇರಿ ಹಲ ವಾರು ಕ್ರಮ ಕೈಗೊಳ್ಳಲು ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ತಿಳಿಸಿದರು.

ಡ್ಯಾಮ್‌ನಿಂದ ನದಿಗೆ 2.8 ಲಕ್ಷ ಕ್ಯುಸೆಕ್ ನೀರು | ರಾಯಚೂರು-ಕಲಬುರಗಿ ಸಂಪರ್ಕ ಅಸ್ತವ್ಯಸ್ತ | ಕಲ್ಲೋಳ-ದಾನವಾಡ ಸೇತುವೆ ಮುಳುಗಡೆ

ಉತ್ತರ ಕರ್ನಾಟಕಕ್ಕೆ ಕೃಷ್ಣಾ ಜಲದಿಗ್ಬಂಧನ

ಬೆಂಗಳೂರು: ರಾಜ್ಯದ ಹಲವೆಡೆ ಗುರುವಾರವೂ ಮಳೆ ಮುಂದುವರಿದ್ದು, ರಾಯಚೂರು, ಯಾದಗಿರಿ, ಬಾಗಲಕೋಟೆ, ವಿಜಪುರ, ಬೆಳಗಾವಿ ಜಿಲ್ಲೆಗಳಲ್ಲಿ ಕೃಷ್ಣಾ ನದಿ ಆರ್ಭಟಿಸುತ್ತಿದೆ. ನದಿ ಪಾತ್ರದ ಗ್ರಾಮಗಳಿಗೆ ಪ್ರವಾಹ ಭೀತಿ ಎದುರಾಗಿದೆ.

ನಾರಾಯಣಪುರ ಡ್ಯಾಮ್‌ನಿಂದ 2.8 ಲಕ್ಷ ಕ್ಯುಸೆಕ್ ನೀರು ಬಿಟ್ಟ ಪರಿಣಾಮ ಶೀಲಹಳ್ಳಿ, ಹೂವಿನಹೆಡಗಿ ಸೇತುವೆ ಸಂಪೂರ್ಣ ಮುಳುಗಡೆಯಾಗಿದೆ.

30 ಕ್ರಸ್ಟ್ ಗೇಟ್‌ಗಳನ್ನು ತೆರೆಯುವ ಮೂಲಕ ನಾರಾಯಣಪುರ ಜಲಾಶಯದಿಂದ 2.8 ಲಕ್ಷ ಕ್ಯುಸೆಕ್ ನೀರನ್ನು ಬಿಡುಗಡೆ ಮಾಡಿರುವುದರಿಂದ ಹೂವಿನಹೆಡಗಿ ಸೇತುವೆ ಮುಳುಗಡೆಯಾಗಿದ್ದು, ರಾಯಚೂರು, ಯಾದಗಿರಿ ಮತ್ತು ಕಲಬುರಗಿ ನಡುವಿನ ರಸ್ತೆ ಸಂಪರ್ಕ ಕಡಿತಗೊಂಡಿದೆ. ಯಾದಗಿರಿಯ ಕೊಲ್ಲೂರು ಸೇತುವೆ ಮುಳುಗಡೆಯಾಗಿದ್ದು, ರಸ್ತೆ ಸಂಪರ್ಕ ಕಡಿತಗೊಂಡಿದೆ.

ಅಂಜಳ, ಅಂಚೆಸೂಗೂರು, ಹೂವಿನಹಡಗಿ, ಜೋಳದಡಗಿ, ಮೈದರ್ಗೋಳ್, ಕರ್ಕಿಹಳ್ಳಿ, ಕೊಣಚಪ್ಪಳಿ ಅಪ್ಪಾಳ್, ಬಸವಂತಪುರ ಸೇರಿದಂತೆ ನದಿ ತೀರದ ಗ್ರಾಮಗಳಲ್ಲಿ ಮುನ್ನೆಚ್ಚರಿಕೆ ವಹಿಸುವಂತೆ ಜಿಲ್ಲಾಡಳಿತಗಳಿಗೆ ಸೂಚನೆ ನೀಡಲಾಗಿದೆ.

ಹೂವಿನಹಡಗಿ ಬಳಿಯ ಗಡ್ಡೆಗೂಳಿ ಬಸವೇಶ್ವರ ದೇವಸ್ಥಾನ ಮುಳುಗಡೆಯಾಗಿದೆ. ನದಿ ದಂಡೆಗಳಿಗೆ ಹೋಗದಂತೆ ಅಧಿಕಾರಿಗಳು ಸಾರ್ವಜನಿಕರಿಗೆ ಸೂಚಿಸಿದ್ದಾರೆ. ಪ್ರವಾಹದ ನೀರನ್ನು ವೀಕ್ಷಿಸಲು ಜನರು ಸೇರುತ್ತಿರುವುದರಿಂದ ಪೊಲೀಸರು ಭದ್ರತೆ ಹೆಚ್ಚಿಸಿದ್ದಾರೆ.

ಮುಂದಿನ 6 ದಿನ ಭಾರೀ ಮಳೆ: ಮುಂದಿನ ಆರು ದಿನಗಳ ಕಾಲ ಕರ್ನಾಟಕದಾದ್ಯಂತ ವ್ಯಾಪಕ ಮಳೆಯಾಗುವ ಮುನ್ಸೂಚನೆಯನ್ನು ಭಾರತೀಯ ಹವಾಮಾನ ಇಲಾಖೆ ನೀಡಿದೆ. ಕರಾವಳಿ ಮತ್ತು ಉತ್ತರ ಒಳನಾಡಿನ ಜಿಲ್ಲೆಗಳಲ್ಲಿ ಭಾರಿ ಮಳೆಯಾಗುವ ನಿರೀಕ್ಷೆಯಿದೆ.

ಆಗಸ್ಟ್ 25 ರವರೆಗೆ ಮಳೆ ಮುಂದುವರಿಯುವ ಸಾಧ್ಯತೆಯಿದೆ. ಆಗಸ್ಟ್ 26 ರಂದು ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡದಲ್ಲಿ ಭಾರಿ ಮಳೆಯಾಗುವ ಸಾಧ್ಯತೆ ಇದೆ. ಬೀದರ್, ಕಲಬುರಗಿ ಮತ್ತು ಯಾದಗಿರಿಯಲ್ಲಿ ಗಂಟೆಗೆ 40-50 ಕಿ.ಮೀ ವೇಗದಲ್ಲಿ ಗಾಳಿ ಬೀಸಲಿದ್ದು, ಗುಡುಗು ಸಹಿತ ಮಳೆಯಾಗುವ ಸಾಧ್ಯತೆ ಇದೆ.

ನಾರಾಯಣಪುರ ಡ್ಯಾಮ್‌ನಿಂದ ಭಾರೀ ಪ್ರಮಾಣದಲ್ಲಿ ನೀರು ಬಿಟ್ಟಿದ್ದು, ಹೂವಿನಹೆಡಗಿ ಸೇತುವೆ ಸಂಪೂರ್ಣ ಜಲಾವೃತ ಆಗಿರುವುದು.

ಕುಂಡಲ ಸೇತುವೆ ಮುಳುಗಡೆ

ಜೊಯಿಡಾ ತಾಲೂಕಿನ ಸುಪಾ ಜಲಾನಯನ ಪ್ರದೇಶದಲ್ಲಿ ಸತತವಾಗಿ ಸುರಿಯುತ್ತಿರುವ ಮಳೆಗೆ ಸುಪಾ ಜಲಾಶಯಕ್ಕೆ ನೀರನ್ನು ಹರಿಸಲು ನಿರ್ಮಿಸಿರುವ ಅಪ್ಪರ ಕಾನೇರಿ ಜಲಾಶಯ ತುಂಬಿದ್ದು ಕುಂಡಲ ಭಾಗಕ್ಕೆ ಸಂಪರ್ಕ ಕಲ್ಪಿಸುವ ಸೇತುವೆ ಮುಳುಗಡೆಯಾಗಿದೆ.

ಸೇತುವೆ ಜತೆಗೆ ಸುಮಾರು ಅರ್ಧ ಕಿಲೋ ಮೀಟರ್ ನಷ್ಟು ದೂರದ ರಸ್ತೆಯವರೆಗೆ ನೀರು ಆವರಿಸಿಕೊಂಡಿದ್ದು ಕುಂಡಲ ಸೇರಿದಂತೆ ಕುರಾವಲಿ, ಕೆಲೋಲಿ, ಘಟ್ಟಾವ ಸೇರಿದಂತೆ ಹಲವು ಸಣ್ಣ ಪುಟ್ಟ ಹಳ್ಳಿಗಳಿಗೆ ಸಂಪರ್ಕ ರಸ್ತೆ ಇಲ್ಲದೆ ಜನರು ಸಂಚಾರಕ್ಕೆ ಪರದಾಡುವಂತಾಗಿದೆ. ಪ್ರತಿ ಬುಧವಾರ ಸಂಜೀವಿನಿ ಸೇವಾ ಟ್ರಸ್ಟ್ ವತಿಯಿಂದ ಕುಂಡಲ್ ಭಾಗಕ್ಕೆ ಆರೋಗ್ಯ ಸೌಲಭ್ಯಗಳನ್ನು ಒದಗಿಸುತ್ತಿದ್ದ ಸಂಚಾರಿ ಆಂಬುಲೆನ್ಸ್ ಸೇತುವೆ ಮೇಲೆ ನೀರು ತುಂಬಿದ್ದರಿಂದ ಮರಳಿತು.

30ಕ್ಕೂ ಹೆಚ್ಚು ಗ್ರಾಮಗಳಲ್ಲಿ ಪ್ರವಾಹ ಭೀತಿ

ಬೆಳಗಾವಿ: ಮಹಾರಾಷ್ಟ್ರದ ಪಶ್ಚಿಮಘಟ್ಟ ಪ್ರದೇಶದಲ್ಲಿ ಮಳೆ ಅಬ್ಬರ ಕಡಿಮೆಯಾದರೂ ಕೃಷ್ಣಾ ನದಿ ಒಳ ಹರಿವಿನ ಪ್ರಮಾಣ ಕಡಿಮೆಯಾಗಿಲ್ಲ. ಕೊಯ್ನಾ ಜಲಾಶಯ ಸೇರಿದಂತೆ ವಿವಿಧ ಬ್ಯಾರೇಜ್‌ನಿಂದ ಸುಮಾರು 2 ಲಕ್ಷ 20 ಸಾವಿರ ಕ್ಯುಸೆಕ್ ನೀರು ಹರಿದುಬರುತ್ತಿರುವ ಪರಿಣಾಮ ಕೃಷ್ಣಾ, ವೇದಗಂಗಾ, ದೂದಗಂಗಾ ನದಿ ಪಾತ್ರದ ಗ್ರಾಮಗಳಿಗೆ ಪ್ರವಾಹ ಭೀತಿ ಎದುರಾಗಿದೆ.

ಕೃಷ್ಣಾ ನದಿ ತೀರದ ಅಥಣಿ, ಕಾಗವಾಡ, ಚಿಕ್ಕೋಡಿ, ನಿಪ್ಪಾಣಿ ತಾಲೂಕಿನ 30 ಕ್ಕೂ ಹೆಚ್ಚು ಗ್ರಾಮಗಳಿಗೆ ಪ್ರವಾಹದ ಭೀತಿ ಎದುರಾಗಿದ್ದು, ನದಿ ಪಾತ್ರದ ಜನರನ್ನು ಸುರಕ್ಷಿತ ಸ್ಥಳಕ್ಕೆ ಕಳುಹಿಸುವ ನಿಟ್ಟಿನಲ್ಲಿ ಜಿಲ್ಲಾಡಳಿತ ಕೆಲಸ ಮಾಡುತ್ತಿದೆ. ವೇದಗಂಗಾ ಹಾಗೂ ದೂದಗಂಗಾ ನದಿ ನೀರಿನ ಮಟ್ಟ ಏರಿಕೆಯಾದ ಪರಿಣಾಮ ಕೆಳಹಂತದ ಸೇತುವೆಗಳು ಜಲಾವೃತಗೊಂಡಿವೆ.

ಪರಿಹಾರ ನೀಡಲು ರೈತರ ಆಗ್ರಹ: ಘಟಪ್ರಭಾ ನದಿಗೆ ಪ್ರವಾಹಕ್ಕೆ ಒಳಗಾಗಿದ್ದ ಗೋಕಾಕ್ ತಾಲೂಕಿನ ಅನೇಕ ಗ್ರಾಮಗಳಲ್ಲಿ ಸದ್ಯ ಪ್ರವಾಹದ ಮಟ್ಟ ಕಡಿಮೆಯಾಗಿದ್ದು ಜನ ನಿಟ್ಟುಸಿರು ಬಿಟ್ಟಿದ್ದಾರೆ. ಆದರೆ ರೈತರ ಗದ್ದೆಗಳಿಗೆ ನೀರು ನುಗ್ಗಿದ ಪರಿಣಾಮ ಬೆಳೆ ಹಾನಿ ಸಂಭವಿಸಿದ್ದು ಸರಕಾರ ಕೂಡಲೇ ಪರಿಹಾರ ನೀಡುವಂತೆ ರೈತರು ಆಗ್ರಹಿಸಿದ್ದಾರೆ.

12 ಸೇತುವೆಗಳು ಜಲಾವೃತ

ಚಿಕ್ಕೋಡಿ ಉಪ ವಿಭಾಗದ 12 ಪ್ರಮುಖ ಸೇತುವೆಗಳು ಜಲಾವೃತವಾಗಿದ್ದರಿಂದ ವಾಹನ ಸವಾರರು ಪರದಾಡುವ ಸ್ಥಿತಿ ನಿರ್ಮಾಣವಾಗಿದೆ. ಕೃಷ್ಣಾ ನದಿಗೆ ಅಡ್ಡಲಾಗಿರುವ ಕುಡಚಿ-ಉಗಾರ ರಾಜ್ಯ ಹೆದ್ದಾರಿ ಹಾಗೂ ಭಿರಡಿ ಚಿಂಚಲಿ ಮಧ್ಯದ ಸೇತುವೆ ಜಲಾವೃತವಾಗಿವೆ. ಅಲ್ಲದೇ, ಮಹಾರಾಷ್ಟ್ರಕ್ಕೆ ಸಂಪರ್ಕ ಕೊಂಡಿಯಾಗಿರುವ ಸದಲಗಾ-ಬೋರಗಾ, ಮಲ್ಲಿಕವಾಡ-ದತ್ತವಾಡ, ಯಕ್ಸಂಬಾ-ದಾನವಾಡ ಸೇತುವೆಗಳು ಕೂಡ ಜಲಾವೃತವಾಗಿವೆ. ಮತ್ತೊಂದೆಡೆ ಹುನ್ನರಗಿ ಗ್ರಾಮಕ್ಕೆ ವೇದಗಂಗಾ ನದಿ ನೀರು ನುಗ್ಗಿದ್ದರಿಂದ 20ಕ್ಕೂ ಹೆಚ್ಚು ಕುಟುಂಬಗಳನ್ನು ಜಿಲ್ಲಾಡಳಿತ ಕಾಳಜಿ ಕೇಂದ್ರಕ್ಕೆ ರವಾನಿಸಿದೆ.

ಕೃಷ್ಣಾ ನದಿ ತುಂಬಿ ಹರಿಯುತ್ತಿರುವ ಪರಿಣಾಮ ಕಲ್ಲೋಳ-ದಾನವಾಡ ಸೇತುವೆ ಜಲಾವೃತಗೊಂಡಿರುವುದು.

ಬಾಗಲಕೋಟೆಯಲ್ಲಿ ನಡೆದ ದಿ. ಭೀಮಾಬಾಯಿ ಲಿಂಬಾವಳಿ ಅವರ ವೈಕುಂಠ ಸಮಾರಾಧನೆ | ನಾಡಿನ ವಿವಿಧ ಮಠಾಧೀಶರಿಗೆ ಪಾದಪೂಜೆ ನೆರವೇರಿಸಿ ಶಿವಗಣಾರಾಧನೆ

ಭೀಮಾಬಾಯಿ ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ

ಬಾಗಲಕೋಟೆ: ಮಾಜಿ ಸಚಿವ ಅರವಿಂದ ಲಿಂಬಾವಳಿ ಅವರ ತಾಯಿ ಭೀಮಾಬಾಯಿ ವೆಂಕಟರಾವ್ ಲಿಂಬಾವಳಿ ಅವರ ವೈಕುಂಠ ಸಮಾರಾಧನೆ ಕಾರ್ಯಕ್ರಮ ಗುರುವಾರ ನೆರವೇರಿತು.

ಇಲ್ಲಿನ ದೀಪಂ ಕಾಲೋನಿಯಲ್ಲಿರುವ ಲಿಂಬಾವಳಿ ಅವರ ನಿವಾಸದಲ್ಲಿ ವೈಕುಂಠ ಸಮಾರಾಧನೆ ನಿಮಿತ್ತ ವಿವಿಧ ಮಠಾಧೀಶರ ಪಾದಪೂಜೆ ಹಾಗೂ ಪೂಜಾ ಕೈಂಕರ್ಯಗಳು ಜರುಗಿದವು.

ದಿ. ಭೀಮಾಬಾಯಿ ಲಿಂಬಾವಳಿ ಅವರ ಸಾರ್ಥಕ ಬದುಕು, ಮಕ್ಕಳಿಗೆ ಕೊಟ್ಟ ಶಿಕ್ಷಣ, ಅವರ ಸಾಮಾಜಿಕ ಬದುಕು ಅನುಕರಣೀಯವಾಗಿತ್ತು. ಮಕ್ಕಳಾದ ವಿಜಯಕುಮಾರ ಲಿಂಬಾವಳಿ, ಸುರೇಶ ಲಿಂಬಾವಳಿ, ಅಶೋಕ ಲಿಂಬಾವಳಿ, ಅರವಿಂದ ಲಿಂಬಾವಳಿ, ಭೀಮರಾವ ಲಿಂಬಾವಳಿ ಹಾಗೂ ಪಾರ್ವತಿ ಮತ್ತು ಲಕ್ಷ್ಮೀ ಅವರನ್ನು ಯಶಸ್ಸಿನ ದಡ ಸೇರಿಸುವಲ್ಲಿ ತಾಯಿ ಭೀಮಾಬಾಯಿ ಪ್ರಮುಖ ಪಾತ್ರ ವಹಿಸಿದ್ದರು ಎಂದು ಉಪಸ್ಥಿತರಿದ್ದ ಸ್ವಾಮೀಜಿಗಳು ನೆನೆದು, ಅವರ ಆತ್ಮಕ್ಕೆ ಚಿರಶಾಂತಿ ಕೋರಿದರು.

ಭೋವಿ ಗುರುಪೀಠದ ಜಗದ್ಗುರು ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ, ರೆಡ್ಡಿ ಗುರುಪೀಠದ ಜಗದ್ಗುರು ವೇಮನಾನಂದ ಸ್ವಾಮೀಜಿ, ಕಾಗಿನೆಲೆ ಮಹಾಸಂಸ್ಥಾನ ಕನಕಗುರು ಪೀಠದ ಜಗದ್ಗುರು ನಿರಂಜನಾನಂದಪುರಿ ಶ್ರೀಗಳು, ಜಗದ್ಗುರು ಅಖಿಲ ಕುಂಚಿಟಿಗ ಮಹಾಸಂಸ್ಥಾನ ಮಠದ ಜಗದ್ಗುರು ಶಾಂತವೀರ ಶ್ರೀಗಳು, ಶಿವಶರಣ ಮಾದರ ಚೆನ್ನಯ್ಯ ಗುರುಪೀಠದ ಜಗದ್ಗುರು ಬಸವಮೂರ್ತಿ ಮಾದಾರ ಚೆನ್ನಯ್ಯ ಶ್ರೀಗಳು,

ಮಾಜಿ ಸಚಿವ ಅರವಿಂದ ಲಿಂಬಾವಳಿ ಅವರು ತಾಯಿ ದಿ. ಭೀಮಾಬಾಯಿ ಲಿಂಬಾವಳಿ ಅವರ ಭಾವಚಿತ್ರಕ್ಕೆ ನಮಸ್ಕರಿಸಿದರು.

ಮಹರ್ಷಿ ವಾಲ್ಮೀಕಿ ಗುರುಪೀಠದ ಜಗದ್ಗುರು ವಾಲ್ಮೀಕಿ ಪ್ರಸನ್ನಾನಂದ ಶ್ರೀಗಳು, ಭಗೀರಥ ಗುರುಪೀಠದ ಜಗದ್ಗುರು ಪುರುಷೋತ್ತಮಾನಂದಪುರಿ ಶ್ರೀಗಳು, ಯಾದವ ಮಹಾಸಂಸ್ಥಾನ ಮಠದ ಜಗದ್ಗುರು ಕೃಷ್ಣ ಯಾದವಾನಂದ ಶ್ರೀಗಳು, ನಾರಾಯಣ ಗುರು ಮಹಾಸಂಸ್ಥಾನ ಮಠದ ಜಗದ್ಗುರು ರೇಣುಕಾನಂದ ಶ್ರೀಗಳು, ಹಡಪದ ಅಪ್ಪಣ್ಣ ದೇವರ ಮಹಾಸಂಸ್ಥಾನ ಮಠದ ಜಗದ್ಗುರು ಅನ್ನದಾನ ಭಾರತೀ ಅಪ್ಪಣ್ಣ ಶ್ರೀಗಳು, ಕುಂಬಾರ ಗುಂಡಯ್ಯ ಮಹಾಸಂಸ್ಥಾನ ಮಠದ ಜಗದ್ಗುರು ಬಸವ ಕುಂಬಾರ ಗುಂಡಯ್ಯ ಶ್ರೀಗಳು, ಮೇದಾರ ಕೇತೇಶ್ವರ ಮಹಾಮಠದ ಇಮ್ಮಡಿ ಕೇತೇಶ್ವರ ಶ್ರೀಗಳು, ಮಡಿವಾಳ ಗುರುಪೀಠದ ಜಗದ್ಗುರು ಬಸವ ಮಾಚಿದೇವ ಸ್ವಾಮೀಜಿ, ಅಂಬಿಗರ ಗುರುಪೀಠದ ಜಗದ್ಗುರು ಶಾಂತಬೀಷ್ಮ ಚೌಡಯ್ಯ ಸ್ವಾಮೀಜಿ, ಗುಳೇದಗುಡ್ಡದ ಜಗದ್ಗುರು ಗುರುಸಿದ್ಧ ಪಟ್ಟಾದರ್ಯ ಸ್ವಾಮೀಜಿ, ಇರಕಲ್ ಮಠದ ಬಸವ ಪ್ರಸಾದ ಸ್ವಾಮೀಜಿ, ಶಿವಸಿಂಪಿ ಗುರುಪೀಠ ಕೊರಟಗೆರೆ ಬಸವ ಮಹಾಲಿಂಗ ಸ್ವಾಮೀಜಿ, ಕಾರಟಗಿ ಪ್ರವಚನಕಾರರಾದ ರಾಚಯ್ಯ ಸ್ವಾಮಿಗಳು, ಹೇಳವ ಗುರುಪೀಠದ ಬಸವ

ಬಾಗಲಕೋಟೆಯ ದೀಪಂ ಕಾಲೋನಿಯಲ್ಲಿ ಲಿಂಬಾವಳಿ ಮನೆಯಲ್ಲಿ ಮಾಜಿ ಸಚಿವ ಅರವಿಂದ ಲಿಂಬಾವಳಿ ಅವರ ತಾಯಿ ದಿ. ಭೀಮಾಬಾಯಿ ಲಿಂಬಾವಳಿ ಅವರ ವೈಕುಂಠ ಸಮಾರಾಧನೆ ಕಾರ್ಯಕ್ರಮ ವಿವಿಧ ಮಠಾಧೀಶರ ಸಮ್ಮುಖದಲ್ಲಿ ನೆರವೇರಿತು.

ಬೃಂಗೇಶ್ವರ ಸ್ವಾಮೀಜಿ, ಹೊಸಮಠದ ಶಾಂತಲಿಂಗ ಸ್ವಾಮೀಜಿ, ಗಚ್ಚಿನ ಮಠದ ಶಿವಬಸವ ಸ್ವಾಮೀಜಿ, ಮುರುಘ ರಾಜೇಂದ್ರ ವಿರಕ್ತಮಠದ ಚನ್ನಬಸವ ಸ್ವಾಮೀಜಿ, ಮರಳು ಶಂಕರ ದೇವರ ಗುರುಪೀಠದ ಸಿದ್ದಬಸವ ಕಬೀರಸ್ವಾಮಿಗಳು, ಗುರುಬಸವೇಶ್ವರ ಸಂಸ್ಥಾನ ಮಠ ವ ಶಿವಾನಂದ ಸ್ವಾಮೀಜಿ, ತಿಪ್ಪೇರುದ್ರ ಸ್ವಾಮೀಜಿ, ಬಸವ ಮಹಾಮನೆ ಬಸವಕಲ್ಯಾಣದ ಮಾತೆ ಸತ್ಯಮ್ಮ ತಾಯಿಯವರು, ಬಸವ ಭೂಷಣ ಸ್ವಾಮೀಜಿ ಸೇರಿದಂತೆ ಇನ್ನೂ ಅನೇಕ ಶ್ರೀಗಳು ಪಾದಪೂಜೆಯೊಂದಿಗೆ ಶಿವಗಣಾರಾಧನೆ ಅರ್ಥಪೂರ್ಣವಾಗಿ ಆಚರಿಸಲಾಯಿತು.

ಶಾಸಕ ರಮೇಶ ಜಾರಕಿಹೊಳಿ, ಮಾಜಿ ಸಂಸದರಾದ ಮುನಿಸ್ವಾಮಿ ಹಾಗೂ ಪ್ರತಾಪ್ ಸಿಂಹ, ಆರ್‌ಎಸ್‌ಎಸ್‌ನ ಪ್ರಚಾರಕ ನರೇಂದ್ರ ಜೀ, ಬಿಜೆಪಿ ಮುಖಂಡ ರಾಜು ರೇವಣಕರ್ ಸೇರಿದಂತೆ ವಿವಿಧ ಪಕ್ಷಗಳ ಮುಖಂಡರುಗಳು, ಕಾರ್ಯಕರ್ತರು ಸೇರಿದಂತೆ ಇತರರು ವೈಕುಂಠ ಸಮಾರಾಧನೆ ಪಾಲ್ಗೊಂಡು ತಾಯಿ ಭೀಮಾಬಾಯಿ ಅವರಿಗೆ ಶಾಂತಿ ಕೋರಿದರು.

ಬಿಜೆಪಿ ಧರ್ಮ ಯುದ್ಧ

← ಮೊದಲಪುಟದಿಂದ

ಈ ಬಗ್ಗೆ ಸುದ್ದಿಗಾರರೊಂದಿಗೆ ಮಾತನಾಡಿದ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ಧರ್ಮಸ್ಥಳದ ವಿಚಾರವಾಗಿ ರಾಜ್ಯ ಸರಕಾರದ ಧೋರಣೆ ಖಂಡಿಸಿ ಧರ್ಮದ ಉಳಿವಿಗಾಗಿ ಧರ್ಮ ಯುದ್ಧ ಹೋರಾಟ ಮಾಡಲಿದ್ದೇವೆ. ಧರ್ಮಸ್ಥಳದ ವಿಚಾರವಾಗಿ ಉಪಮುಖ್ಯಮಂತ್ರಿ ಡಿ.ಕೆ.ಶಿ ಮತ್ತು ಸಚಿವ ದಿನೇಶ್ ಗುಂಡೂರಾವ್ ಅವರು ನೀಡಿರುವ ಹೇಳಿಕೆಗಳು ಎಲ್ಲರಿಗೂ ತಿಳಿದಿದೆ. ಧರ್ಮಸ್ಥಳದ ವಿರುದ್ಧ ಅಪಪ್ರಚಾರದ ವಿಚಾರವಾಗಿ ರಾಜ್ಯ ಸರಕಾರದ ನಡವಳಿಕೆ ಬಗ್ಗೆ ನಮಗೂ ಅನುಮಾನ ಗಳು ಕಾಡುತ್ತಿವೆ. ಸರಕಾರದ ಈ ಧೋರಣೆ ಖಂಡಿಸಿ ಧರ್ಮ ಯುದ್ಧ ಪ್ರತಿಭಟನೆ ಶುಕ್ರವಾರ ದಿಂದ ಒಂದು ವಾರದವರೆಗೂ ರಾಜ್ಯದ ಎಲ್ಲ ವಿಧಾನ ಸಭಾ ಕ್ಷೇತ್ರಗಳಲ್ಲಿ ಮಾಡಲಿದ್ದೇವೆ ಎಂದರು.

ಕಳೆದ ಒಂದು ತಿಂಗಳಿಂದ ಧರ್ಮಸ್ಥಳ ವಿಚಾರದಲ್ಲಿ ಯಾವ ಯಾವ ಬೆಳವಣಿಗೆ ಆಗಿದೆ ಎಂಬುದು ಎಲ್ಲರಿಗೂ ತಿಳಿದಿರುವ ವಿಚಾರ. ರಾಜ್ಯ ಸರಕಾರ ಧರ್ಮಸ್ಥಳ ವಿಚಾರದಲ್ಲಿ ತನಿಖೆ ನಡೆಸಬೇಕೆಂದು ಎಸ್‌ಐಟಿ ರಚಿಸಿದಾಗ ಅದನ್ನು ಸ್ವಾಗತ ಮಾಡಿದ್ದೆವು. ಈ ವಿಚಾರದಲ್ಲಿ ಸಮಗ್ರವಾಗಿ, ಪಾರದರ್ಶಕವಾಗಿ ತನಿಖೆಯಾಗಬೇಕು ಎಂದು ಸರಕಾರಕ್ಕೆ ನಾವು ಸಂಪೂರ್ಣವಾಗಿ ಬೆಂಬಲ ನೀಡಿದ್ದೆವು. ಇದು ಬಿಜೆಪಿಯ ಸ್ಪಷ್ಟ ನಿಲುವಾಗಿದೆ. ತನಿಖೆ ವಿಚಾರದಲ್ಲಿ ಇಂದು ಕೂಡ ನಾವು ಹಿಂದೆ ಸರಿದಿಲ್ಲ. ಆದರೆ ತನಿಖೆಯ ಸಂದರ್ಭದಲ್ಲಿ ಸಾಮಾಜಿಕ ಜಾಲತಾಣಗಳಲ್ಲಿ ನಿರಂತರವಾಗಿ ಕ್ಷೇತ್ರದ ಬಗ್ಗೆ ಅಪಪ್ರಚಾರ ನಡೆದುಕೊಂಡು ಬಂದಿವೆ. ಇಂಥ ಅಪಪ್ರಚಾರ ನಿಲ್ಲಿಸುವ, ತಡೆಯುವ ಮತ್ತು ಕಟ್ಟಿಹಾಕುವ ಕೆಲಸವನ್ನು ರಾಜ್ಯ ಸರಕಾರ ಮತ್ತು ಪೊಲೀಸ್ ಇಲಾಖೆ ಏಕೆ ಮಾಡಲಿಲ್ಲ ಎಂದು ಪ್ರಶ್ನಿಸಿದರು.

ಜಿಎಸ್‌ಟಿ ಕಡಿತಕ್ಕೆ ಅಸ್ತು

← ಮೊದಲಪುಟದಿಂದ

ತಂಬಾಕು ಮತ್ತು ಕೆಲವು ಐಷಾರಾಮಿ ವಸ್ತುಗಳಂತಹ ಮೇಲಿನ ಶೇ.40ರಷ್ಟು ತೆರಿಗೆ ಮುಂದು ವರೆಯುತ್ತದೆ. ಅಲ್ಲದೇ ಐಷಾರಾಮಿ ಕಾರುಗಳನ್ನು ಶೇ. 40 ರಷ್ಟು ತೆರಿಗೆ ವ್ಯಾಪ್ತಿಗೆ ತರಲು ಸಮಿತಿ ಶಿಫಾರಸು ಮಾಡಿದೆ. ನೂತನ ಯೋಜನೆ ಪ್ರಕಾರ, ಈ ಹಿಂದೆ ಶೇ. 12 ರಷ್ಟು ತೆರಿಗೆ ವಿಧಿಸಲಾಗುತ್ತಿದ್ದ ಶೇ. 99 ರಷ್ಟು ಸರಕುಗಳು ಈಗ ಶೇ. 5ರಷ್ಟು ಕಡಿಮೆ ಸ್ಲ್ಯಾಬ್‌ಗೆ ಬರುತ್ತವೆ. ಶೇ. 28 ರಷ್ಟು ತೆರಿಗೆ ವಿಧಿಸಲಾಗುತ್ತಿದ್ದ ಶೇ. 90ರಷ್ಟು ಸರಕುಗಳು ಶೇ. 18ರ ಸ್ಲ್ಯಾಬ್‌ಗೆ ಬರಲಿವೆ.

ಬಿಹಾರ ಉಪ ಮುಖ್ಯಮಂತ್ರಿ ಸಾಮ್ರಾಟ್ ಚೌಧರಿ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಕರ್ನಾಟಕದ ಕಂದಾಯ ಸಚಿವ ಕೃಷ್ಣ ಬೈರೇಗೌಡ, ಉತ್ತರ ಪ್ರದೇಶದ ಹಣಕಾಸು ಸಚಿವ ಸುರೇಶ್ ಕುಮಾರ್ ಖನ್ನಾ, ರಾಜಸ್ಥಾನದ ಆರೋಗ್ಯ ಸಚಿವ ಗಜೇಂದ್ರ ಸಿಂಗ್, ಪಶ್ಚಿಮ ಬಂಗಾಳದ ಹಣಕಾಸು ಸಚಿವ ಚಂದ್ರಿಮಾ ಭಟ್ಟಾಚಾರ್ಯ, ಕೇರಳದ ಹಣಕಾಸು ಸಚಿವ ಕೆ ಎನ್ ಬಾಲಗೋಪಾಲ್ ಮತ್ತಿತರ ಸದಸ್ಯರು ಉಪಸ್ಥಿತರಿದ್ದರು.

ಕೋಟೆಕಾರು ಪಟ್ಟಣ ಪಂಚಾಯತ್ ದ.ಕ.

ನಂಬ್ರ:ಕೋಪಪಂ/(1)/ಸಿಆರ್/177/2025-26 ದಿನಾಂಕ: 20.08.2025

ಟೆಂಡರು ಪ್ರಕಟಣೆ (ಕೆ.ಪಿ.ಪಿ.ಪಿ. ಪೋರ್ಟಲ್)

ಕೋಟೆಕಾರು ಪಟ್ಟಣ ಪಂಚಾಯತ್ ವ್ಯಾಪ್ತಿಯಲ್ಲಿ 2025-26ನೇ ಸಾಲಿನ ಪಟ್ಟಣ ಪಂಚಾಯತ್ ನಿಧಿಯಡಿ 7 ವಾರ್ಷಿಕ ನಿರ್ವಹಣಾ ಕಾಮಗಾರಿಗಳನ್ನು ನಿರ್ವಹಿಸಲು ಟೆಂಡರುಗಳನ್ನು ಕೆ.ಟಿ.ಪಿ.ಪಿ. ಅಧಿನಿಯಮ 1999 ನಿಯಮಾವಳಿಗಳು 2000ರ ಅನ್ವಯ ಕೆ.ಪಿ.ಪಿ.ಪಿ. ಪೋರ್ಟಲ್ ಮುಖಾಂತರ ಮುಖ್ಯಾಧಿಕಾರಿಯವರು, ಕೋಟೆಕಾರು ಪಟ್ಟಣ ಪಂಚಾಯತ್ ಇವರಿಂದ ಟೆಂಡರು ಕರೆಯಲಾಗಿದೆ. ಟೆಂಡರು ಶರ್ತಗಳು, ಇತರ ಮಾಹಿತಿ ಬೇಕಾದ್ದಲ್ಲಿ ಪಟ್ಟಣ ಪಂಚಾಯತ್ ಕಚೇರಿಯಲ್ಲಿ ಕಚೇರಿಯ ಸಮಯದಲ್ಲಿ ಪಡೆದುಕೊಳ್ಳಬಹುದು ಅಥವಾ ಕೆ.ಪಿ.ಪಿ.ಪಿ. ಪೋರ್ಟಲ್‌ನಲ್ಲಿ ಪಡೆಯಬಹುದು ಹಾಗೂ ಪಟ್ಟಣ ಪಂಚಾಯತ್ ವೆಬ್‌ಸೈಟ್ www.kotekartown.mrc. gov.in ನಲ್ಲಿ ನೋಡಬಹುದು.

ಟೆಂಡರು ಸಲ್ಲಿಸುವ ಕೊನೆಯ ದಿನಾಂಕ: 15.09.2025 ಅಪರಾಹ್ನ 5.00 ಗಂಟೆಗೆ, ಟೆಂಡರು ತೆರೆಯುವ ದಿನಾಂಕ. 17.09.2025 ಅಪರಾಹ್ನ 5.00 ಗಂಟೆಗೆ

ಸಹಿ/-
(ಶ್ರೀಮತಿ ದಿವ್ಯ ಎಸ್. ಶೆಟ್ಟಿ)
ಅಧ್ಯಕ್ಷರು,
ಪಟ್ಟಣ ಪಂಚಾಯತ್ ಕೋಟೆಕಾರು

ಸಹಿ/-
(ಶ್ರೀಮತಿ ಮಾಲಿನಿ)
ಮುಖ್ಯಾಧಿಕಾರಿ
ಪಟ್ಟಣ ಪಂಚಾಯತ್ ಕೋಟೆಕಾರು

DIPR/MNG/666/MPL/25-26

ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರ ಕಛೇರಿ, ಜಲಾನಯನ ಅಭಿವೃದ್ಧಿ ಇಲಾಖೆ, ಕೋಲಾರ

ಸಂಖ್ಯೆ: ಹಿಸತೋನಿ/ಜಲಅಇ/ಕೋ/ಇ-ಪ್ರೊಕ್ಯೂರ್‌ಮೆಂಟ್/ಸಿಆರ್/06/2025-26 ದಿನಾಂಕ: 20.08.2025

ಅಲ್ಪಾವಧಿ ಇ-ಟೆಂಡರ್ ಪ್ರಕಟಣೆ (ದ್ವಿ-ಲಕೋಟೆ)
(ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, 2025-26 ನೇ ಸಾಲಿನಲ್ಲಿ ವಿವಿಧ ಯೋಜನೆಗಳ ಅಡಿಯಲ್ಲಿ ಖುಷ್ಕಿ ತೋಟಗಾರಿಕೆ, ಸಮುದಾಯ ಹಾಗೂ ಕೃಷಿ ಅರಣ್ಯ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ಸಂಬಂಧ **ದಿನಾಂಕ: 28.08.2025 ರಂದು ಇ-ಟೆಂಡರ್ ಅನ್ನು ಸಲ್ಲಿಸಲು ದಿನಾಂಕವನ್ನು ನಿಗದಿಪಡಿಸಲಾಗಿದ್ದು**, ಸದರಿ ಕಾಮಗಾರಿಗಳಿಗೆ ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಕರ್ನಾಟಕ ಸರ್ಕಾರದ ಅಂತರ್ಜಾಲದ ವೆಬ್ ಸೈಟ್ ವಿಳಾಸ **https://kppp.karnataka.gov.in**ರಲ್ಲಿ ಪಡೆಯಬಹುದಾಗಿದೆ.

ಸಹಿ/- ಟೆಂಡರ್ ಆಹ್ವಾನ ಅಧಿಕಾರಿಗಳು ಹಾಗೂ
ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು
ಜಲಾನಯನ ಅಭಿವೃದ್ಧಿ ಇಲಾಖೆ, ಕೋಲಾರ

ವಾಸಾಸಂಇ/ಕೋಲಾರ/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ:243/2025-26

ನಗರಸಭಾ ಕಾರ್ಯಾಲಯ, ಹೂಟಗಳ್ಳಿ

ಎಸ್.ಆರ್.ಎಸ್. ಎದುರು, ಹೈಟೆನ್ಷನ್, ಜೋಡಿ ರಸ್ತೆ, ಹೂಟಗಳ್ಳಿ, ಮೈಸೂರು ಜಿಲ್ಲೆ-570018
ಸಹಾಯವಾಣಿ ಸಂಖ್ಯೆ : 0821-2001737, E-Mail: ka.hootagalli.cmc@gmail.com

ಸಂಖ್ಯೆ: ನಸಹೂ/ತಾಂತ್ರಿಕ/ಟೆಂಡರ್ ಪ್ರಕಟಣೆ/ಸಿ.ಆರ್-09/2025-26 ದಿನಾಂಕ: 20.08.2025

ಟೆಂಡರ್ ಪ್ರಕಟಣೆ

ಹೂಟಗಳ್ಳಿ ನಗರಸಭೆ ವ್ಯಾಪ್ತಿಯಲ್ಲಿ 2024-25 ಮತ್ತು 2025-26ನೇ ಸಾಲಿನ ನಗರಸಭಾ ನಿಧಿ ಅನುದಾನದಲ್ಲಿ ಕೆ.ಟಿ.ಪಿ.ಪಿ. ಕಾಯ್ದೆ 2000ರ ಪ್ರಕಾರ KW-04 ನಿಯಮದಂತೆ KPP ಪೋರ್ಟಲ್ ಮೂಲಕ ಐಟಂವಾರು ವಿವಿಧ ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿದ್ದು, ಲೋಕೋಪಯೋಗಿ ಇಲಾಖೆಯಲ್ಲಿ ಅರ್ಹ ನೊಂದಾಯಿತ ಸಿವಿಲ್ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್‌ಗಳನ್ನು **https://kppp.karnataka.gov.in** ಪೋರ್ಟಲ್ ಮೂಲಕ ಸಲ್ಲಿಸಬಹುದಾಗಿದೆ. ಟೆಂಡರ್ ಸಲ್ಲಿಸುವ ಕೊನೆಯ **ದಿನಾಂಕ: 18.09.2025 ಸಂಜೆ 5.30 ಗಂಟೆಯವರೆಗೆ,** ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 20.09.2025 ಬೆಳಗ್ಗೆ 11.00 ಗಂಟೆಗೆ,** ಹೆಚ್ಚಿನ ಮಾಹಿತಿಗಾಗಿ ಕಛೇರಿಯ ತಾಂತ್ರಿಕ ಶಾಖೆಯ ಅಭಿಯಂತರರನ್ನು ಸಂಪರ್ಕಿಸಬಹುದಾಗಿದೆ. ಕ್ರ.ಸಂ. 07ರ ಕಾಮಗಾರಿಗೆ ಟೆಂಡರ್ ಸಲ್ಲಿಸುವ ಕೊನೆಯ **ದಿನಾಂಕ: 03.10.2025 ಸಂಜೆ 5.30 ಗಂಟೆಯವರೆಗೆ** ಹಾಗೂ ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 05.10.2025 ಬೆಳಗ್ಗೆ 11.00 ಗಂಟೆಗೆ** ಈ ಕೆಳಕಂಡ ಕಾಮಗಾರಿಗಳು ನಗರಸಭೆಯ ಸಾಮಾನ್ಯ ನಿಧಿಯ ಕಾಮಗಾರಿಗಳಾಗಿದ್ದು, ಪೂರ್ಣಗೊಂಡ ಕಾಮಗಾರಿಗಳಿಗೆ ನಗರಸಭೆಯ ಆರ್ಥಿಕ ಪರಿಸ್ಥಿತಿಗನುಗುಣವಾಗಿ ಬಿಲ್ ಪಾವತಿಸಲಾಗುವುದು.

ಕ್ರ.ಸಂ	ಕಾಮಗಾರಿಗಳ ಇಂಡೆಂಟ್ ವಿವರಗಳು	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)	ಇ.ಎಂ.ಡಿ. ಮೊತ್ತ (ರೂ. ಗಳಲ್ಲಿ)
1	DMA/2024-25/OW/WORK_INDENT33214/CALL-2	470.00	5,97,000/-
2	DMA/2024-25/OW/WORK_INDENT33263/CALL-2	500.00	6,30,000/-
3	DMA/2024-25/OW/WORK_INDENT33264/CALL-2	350.00	4,45,000/-
4	DMA/2024-25/OW/WORK_INDENT33303/CALL-2	400.00	5,10,000/-
5	DMA/2024-25/OW/WORK_INDENT33307/CALL-2	499.20	6,35,000/-
6	DMA/2024-25/OW/WORK_INDENT33308/CALL-2	500.00	6,35,000/-
7	DMA/2024-25/OW/WORK_INDENT33311/CALL-2	150.00	1,91,000/-
8	DMA/2024-25/WS/WORK_INDENT33350/CALL-2	300.00	3,82,000/-
9	DMA/2024-25/WS/WORK_INDENT33351/CALL-2	400.00	5,09,000/-
10	DMA/2024-25/OW/WORK_INDENT33682/CALL-2	500.00	6,36,000/-
11	DMA/2024-25/OW/WORK_INDENT33683/CALL-2	350.00	4,46,000/-

ವಾಸಾಸಂಇ/ಮೈಸೂರು/ಎಸ್‌ಎಸ್‌ಸಿ/829/2025-26

ಸಹಿ/- ಪೌರಾಯುಕ್ತರು
ನಗರಸಭೆ, ಹೂಟಗಳ್ಳಿ

ವಿರಾಮ ಪ್ರತಿ ಭಾನುವಾರ

ಜನಸಂದಣಿಗೆ ಸದನ ಬ್ರೇಕ್

← ಮೊದಲಪುಟದಿಂದ

ವಿಧೇಯಕದಲ್ಲಿ ಕೆಲ ಗೊಂದಲಗಳಿದ್ದು, ಆ ಬಗ್ಗೆ ಸ್ಪಷ್ಟನೆ ಬೇಕಿದೆ. ಆದ್ದರಿಂದ ಈ ವಿಧೇಯಕವನ್ನು ಪರಿಶೀಲನೆಗಾಗಿ ಸದನ ಸಮಿತಿಗೆ ಒಪ್ಪಿಸಿ ಎಂಬ ಪ್ರತಿಪಕ್ಷಗಳ ಆಗ್ರಹಕ್ಕೆ ಸರಕಾರ ಮಣಿದು ಜನಸಂದಣಿ ನಿಯಂತ್ರಣ ವಿಧೇಯಕವನ್ನು ಸದನ ಸಮಿತಿಯ ಪರಿಶೀಲನೆಗೆ ಒಪ್ಪಿಸಲು ಸಮ್ಮತಿಸಿತು.

ವಿಧೇಯಕದ ಉದ್ದೇಶವೇನು?: ವಿಧೇಯಕದಲ್ಲಿ ರಾಜಕೀಯ ಸಭೆ ಸೇರಿದಂತೆ ದೊಡ್ಡ ದೊಡ್ಡ ಕಾರ್ಯಕ್ರಮಗಳಲ್ಲಿ ಅವಘಡಗಳಾದರೆ ಅದಕ್ಕೆ ಜೈಲು ಶಿಕ್ಷೆ ಮತ್ತು ದಂಡ ವಿಧಿಸುವ ಅಂಶಗಳನ್ನು ಪ್ರಸ್ತಾಪಿಸಿದರು. ಆಗ ಪ್ರತಿಪಕ್ಷಗಳ ಬಹುತೇಕ ಸದಸ್ಯರು ಎದ್ದುನಿಂತು ಈ ವಿಧೇಯಕ ಜನವಿರೋಧಿ, ಹೋರಾಟ ಹತ್ತಿಕ್ಕುವ ಸಲುವಾಗಿಯೇ ವಿಧೇಯಕವನ್ನು ಸರಕಾರ ತರಲು ಹೊರಟಿದೆ. ವಿಧೇಯಕದ ಬಗ್ಗೆ ಹಲವು ಸ್ಪಷ್ಟನೆಗಳು ಬೇಕಿದೆ. ತಕ್ಷಣಕ್ಕೆ ಈ ವಿಧೇಯಕ ಜಾರಿ ಮಾಡುವುದು ಬೇಡ, ಸದನ ಸಮಿತಿ ವಹಿಸಿ, ಮುಂದಿನ ಅಧಿವೇಶನದಲ್ಲಿ ವಿಧೇಯಕದ ಬಗ್ಗೆ ಚರ್ಚೆ ನಡೆಸಿ ತೀರ್ಮಾನ ಮಾಡೋಣ ಎಂದು ಪಟ್ಟು ಹಿಡಿದ್ದಿದ್ದು ಸದನದಲ್ಲಿ ಕಾವೇರಿದ ವಾತಾವರಣ ಸೃಷ್ಟಿಯಾಗಲು ಕಾರಣವಾಯಿತು.

ಬೈಕ್ ಟ್ಯಾಕ್ಸಿ ಪುನರಾರಂಭಕ್ಕೆ ಗ್ರೀನ್ ಸಿಗ್ನಲ್

← ಮೊದಲಪುಟದಿಂದ

ಬೈಕ್ ಟ್ಯಾಕ್ಸಿ ನಿಷೇಧಕ್ಕೆ ಆಟೋ ಸಂಘಟನೆಗಳ ತೀವ್ರ ಒತ್ತಡದ ಬೆನ್ನಲ್ಲೇ ಹೈಕೋರ್ಟ್ ಸೂಚನೆ ಮೇರೆಗೆ ಜೂನ್ 16ರಿಂದ ರಾಜ್ಯದಲ್ಲಿ ಬೈಕ್ ಟ್ಯಾಕ್ಸಿ ಸೇವೆ ರದ್ದಾಗಿತ್ತು.

ಬೈಕ್ ಟ್ಯಾಕ್ಸಿಗೆ ನೀತಿ ಚೌಕಟ್ಟು ನಿಗದಿಗೆ ಹೈಕೋರ್ಟ್ ಸೂಚನೆ: ಬೈಕ್ ಟ್ಯಾಕ್ಸಿ ಸೇವೆ ರದ್ದು ಪ್ರಶ್ನಿಸಿ ಆ್ಯಪ್ ಆಧಾರಿತ ಸೇವೆ ಒದಗಿಸುವ ಕಂಪನಿಗಳು ಕರ್ನಾಟಕ ಹೈಕೋರ್ಟ್ ಮೊರೆ ಹೋಗಿದ್ದವು. ಈ ಹಿನ್ನೆಲೆಯಲ್ಲಿ ಬೈಕ್ ಟ್ಯಾಕ್ಸಿ ಸಂಬಂಧ ನೀತಿ ಚೌಕಟ್ಟು ನಿಗದಿಪಡಿಸಲು ಹೈಕೋರ್ಟ್ ರಾಜ್ಯ ಸರಕಾರಕ್ಕೆ ಸೂಚನೆ ನೀಡಿದ್ದು, ಸೆಪ್ಟೆಂಬರ್ 22ಕ್ಕೆ ವಿಚಾರಣೆಯನ್ನು ಮುಂದೂಡಿದೆ. ಸದ್ಯ ರಾಜ್ಯ ಸರಕಾರ ಗುರುವಾರದಿಂದ ಬೈಕ್ ಟ್ಯಾಕ್ಸಿ ಸೇವೆಯನ್ನು ಆರಂಭಿಸಲು ಅನುಮತಿ ನೀಡಿದೆ.

ಬೆಂಗಳೂರು ವ್ಯಾಪ್ತಿಯಲ್ಲೇ 1.20 ಲಕ್ಷ ಬೈಕ್‌ಗಳು ಬೈಕ್ ಟ್ಯಾಕ್ಸಿ ಸೇವೆಗೆ ನೋಂದಣಿ ಮಾಡಿಕೊಂಡಿವೆ. ಇನ್ನು ರಾಜ್ಯದಾದ್ಯಂತ 6 ಲಕ್ಷಕ್ಕೂ ಹೆಚ್ಚು ಸವಾರರು ಬೈಕ್ ಟ್ಯಾಕ್ಸಿ ನಂಬಿಕೊಂಡು ತಮ್ಮ ಜೀವನ ಸಾಗಿಸುತ್ತಿದ್ದಾರೆ. ಬೈಕ್ ಟ್ಯಾಕ್ಸಿ ಸೇವೆ ರದ್ದಾದ ವೇಳೆ ಸಾಕಷ್ಟು ಸಮಸ್ಯೆ ಉಂಟಾಗಿತ್ತು. ಇದೀಗ ಮತ್ತೆ ಬೈಕ್ ಟ್ಯಾಕ್ಸಿ ಸೇವೆ ಪುನಾರಂಭಗೊಂಡಿರುವುದು ಬೈಕ್ ಟ್ಯಾಕ್ಸಿ ಚಾಲಕರಿಗೆ ಖುಷಿ ತಂದಿದೆ.

ತಿಮರೋಡಿ ಸೆರೆ

← ಮೊದಲಪುಟದಿಂದ

ಸುಮಾರು ಅರ್ಧಗಂಟೆಗೂ ಹೆಚ್ಚು ಕಾಲ ಬೆಂಬಲಿಗರೊಂದಿಗೆ ಮಾತುಕತೆ ನಡೆಸಿದ ಪೊಲೀಸರು ತಿಮರೋಡಿಯನ್ನ ವಶಕ್ಕೆ ಪಡೆದು ಖಾಸಗಿ ಕಾರಿನಲ್ಲಿ ಬ್ರಹ್ಮಾವರಕ್ಕೆ ಕರೆ ತಂದರು. ಬ್ರಹ್ಮಾವರ ಠಾಣೆಯ 500 ಮೀಟರ್ ಸುತ್ತಲ ಪ್ರದೇಶದಲ್ಲಿ 144 ಸೆಕ್ಷನ್ ಜಾರಿಗೊಳಿಸಿ ಬಿಗಿ ಭದ್ರತೆಯ ನಡುವೆ ತಿಮರೋಡಿಯವರನ್ನು ವಿಚಾರಣೆಗೆ ಒಳಪಡಿಸಿದ ಬಳಿಕ ನ್ಯಾಯಾಲಯಕ್ಕೆ ಹಾಜರುಪಡಿಸಲಾಯಿತು. ಆರೋಗ್ಯದ ಹಿನ್ನೆಲೆಯಲ್ಲಿ ಜಾಮೀನು ಕೋರಿದ ತಿಮರೋಡಿ ಮನವಿಯನ್ನು ತಿರಸ್ಕರಿಸಿದ ನ್ಯಾಯಾಲಯ ಜಾಮೀನು ನಿರಾಕರಿಸಿ 14 ದಿನಗಳ ಕಾಲ ನ್ಯಾಯಾಂಗ ಬಂಧನ ವಿಧಿಸಿದೆ.

ಸಂತೋಷ್ ವಿರುದ್ಧ ಅವಹೇಳನಕಾರಿ ಹೇಳಿಕೆ: ಮಹೇಶ್ ಶೆಟ್ಟಿ ತಿಮರೋಡಿ ಸೌಜನ್ಯಾ ಅತ್ಯಾಚಾರ ಮತ್ತು ಕೊಲೆ ಪ್ರಕರಣಕ್ಕೆ ಸಂಬಂಧಿಸಿ ಬಿ.ಎಲ್. ಸಂತೋಷ್ ವಿರುದ್ಧ ಫೇಸ್‌ಬುಕ್‌ನಲ್ಲಿ ವಿಡಿಯೊವೊಂದನ್ನು ಪೋಸ್ಟ್ ಮಾಡಿದ್ದರು. ಈ ವಿಡಿಯೋದಲ್ಲಿ ಅವರು, ಸೌಜನ್ಯಳ ಅತ್ಯಾಚಾರವನ್ನು ಬಚಾವ್ ಮಾಡಲು ರಾಜಕೀಯ ಒಳಗೆ ತಂದು ನಾಟಕವಾಡಿದ ಪಾಪಿ, ಬಿ.ಎಲ್. ಸಂತೋಷ್ ಕೆಟ್ಟ ಹುಳ, ನಿನ್ನಿಂದ ಆರೆಸ್ಸೆಸ್‌ಗೆ ಮುಖಭಂಗ ಆಗುತ್ತದೆ, ನಿನಗೆ ಹಿಂದುತ್ವದ ರಕ್ತ ಇದ್ಯಾ? ಎಂದು ತೀವ್ರ ನಿಂದನಾತ್ಮಕ ಹೇಳಿಕೆಗಳನ್ನು ನೀಡಿದ್ದರು. ಇದೇ ವೀಡಿಯೋದಲ್ಲಿ ಶಾಸಕ ವಿ. ಸುನೀಲ್‌ಕುಮಾರ್ ವಿರುದ್ಧವೂ ಮನೆಯವರ ವಿರುದ್ಧ, ಮಹಿಳೆಯರ ವಿರುದ್ಧ ನಿಂದನಾತ್ಮಕ ಪದ ಬಳಸಿದ್ದರು. ಈ ಹೇಳಿಕೆಗಳು ಧಾರ್ಮಿಕ ಭಾವನೆಗಳಿಗೆ ಧಕ್ಕೆ ತಂದಿವೆ ಎಂದು ಆರೋಪಿಸಿ ಉಡುಪಿ ಗ್ರಾಮಾಂತರ ಬಿಜೆಪಿ ಮಂಡಲಾಧ್ಯಕ್ಷ ರಾಜೀವ ಕುಲಾಲ್ ದೂರು ದಾಖಲಿಸಿದ್ದರು.

ಬೆಳ್ತಂಗಡಿ ಠಾಣೆಗೆ ಪತ್ರ ಬರೆದ ಸಮೀರ್: ಇದೇ ವೇಳೆ ಧರ್ಮಸ್ಥಳದಲ್ಲಿ ದಾಖಲಾದ ಪ್ರಕರಣಕ್ಕೆ ಸಂಬಂಧಿಸಿ ಪೊಲೀಸರು ಸಮೀರ್ ಬಂಧನಕ್ಕಾಗಿ ಬೆಂಗಳೂರಿಗೆ ಆಗಮಿಸಿದ್ದರು. ಆದರೆ ನಿರೀಕ್ಷಣಾ ಜಾಮೀನು ಸಿಕ್ಕಿದ ಹಿನ್ನೆಲೆಯಲ್ಲಿ ಬರಿಗೈನಲ್ಲಿ ವಾಪಸ್ಸಾಗಿದ್ದಾರೆ. ಯೂಟ್ಯೂಬರ್ ಸಮೀರ್ ಎಂ.ಡಿ ಬೆಳ್ತಂಗಡಿ ಸರ್ಕಲ್ ಇನ್‌ಸ್ಪೆಕ್ಟರ್‌ಗೆ ಪತ್ರ ಬರೆದಿದ್ದು, ನನ್ನ ಮೇಲೆ ಆಗಿರುವ ಎಫ್‌ಐಆರ್ ಪ್ರಕರಣಕ್ಕೆ ಪತ್ರವನ್ನು ಬರೆಯುತ್ತಿದ್ದೇನೆ. ನಾನು ಧರ್ಮಸ್ಥಳ ಠಾಣೆಗೆ ಬರಲು ಸಿದ್ಧವಾಗಿದ್ದೆ, ಆದರೆ ನನ್ನ ಸ್ನೇಹಿತರ ಮೇಲೆ ಮಾರಣಾಂತಿಕವಾಗಿ ಹಲ್ಲೆಯಾಗಿದೆ. ಟಾರ್ಗೆಟ್ ಮಾಡಿ ಯೂಟ್ಯೂಬ್ ಸ್ನೇಹಿತರಿಗೆ ಹಲ್ಲೆ ಮಾಡಿದ್ದಾರೆ. ನನಗೆ ಪ್ರಾಣ ಬೆದರಿಕೆ ಇದೆ ಹಾಗೂ ಅಪಾಯವಿದೆ ಎಂದು ತಿಳಿದು ನಾನು ಸೆಷನ್ಸ್ ನ್ಯಾಯಾಲಯದಲ್ಲಿ ಜಾಮಿನಿಗೆ ಅರ್ಜಿ ಹಾಕಿರುವುದಾಗಿ ಪತ್ರದಲ್ಲಿ ತಿಳಿಸಿದ್ದಾನೆ.

ಒಂದು ವೇಳೆ ನನಗೆ ರಕ್ಷಣೆ ನೀಡಿದರೆ ಧರ್ಮಸ್ಥಳ ಪೊಲೀಸ್ ಠಾಣೆಗೆ ಬಂದು ವಿಚಾರಣೆಗೆ ಸಹಕರಿಸುತ್ತೇನೆ. 15 ದಿನಗಳ ಕಾಲಾವಕಾಶದ ಒಳಗಡೆ ನಿಮ್ಮ ಮುಂದೆ ಹಾಜರಾಗುತ್ತೇನೆ. ದಯವಿಟ್ಟು ನನಗೆ ರಕ್ಷಣೆ ನೀಡಿ ಎಂದು ಬರೆದಿದ್ದಾನೆ.

ಕೋರ್ಟ್ ಷರತ್ತುಗಳು: ಈ ನಡುವೆ ನಿರೀಕ್ಷಣಾ ಜಾಮೀನು ಮಂಜೂರು ಮಾಡಿರುವ ನ್ಯಾಯಾಲಯ ಸಮೀರ್‌ಗೆ 75 ಸಾವಿರ ವೈಯಕ್ತಿಕ ಬಾಂಡ್, ಮತ್ತೆ ಇದೇ ರೀತಿಯ ಅಪರಾಧವನ್ನು ಮಾಡಬಾರದು. ತಪ್ಪಿಸಿಕೊಳ್ಳಲು ಯತ್ನಿಸಬಾರದು, ಬೆದರಿಕೆ, ಪ್ರಚೋದನೆ ಅಥವಾ ಇನ್ನಾವುದೇ ರೀತಿಯಲ್ಲಿ ಸಾಕ್ಷಿಗಳನ್ನು ತಿರುಚಬಾರದು. ಪ್ರಾಸಿಕ್ಯೂಷನ್ ಸಾಕ್ಷ್ಯವನ್ನು ನಾಶಪಡಿಸಬಾರದು. ತನಿಖಾಧಿಕಾರಿಗೆ ಸಮೀರ್ ಸಿಗುವಂತಿರಬೇಕು. ಅಗತ್ಯವಿದ್ದಾಗ ವಿಚಾರಣೆಗೆ ಹಾಜರಾಗಬೇಕು ಎಂದು ಷರತ್ತಿನಲ್ಲಿ ತಿಳಿಸಲಾಗಿದೆ.

ಶೀತ ವಾತಾವರಣ ತಡೆಯಲು 12 ಕಾಮಗಾರಿಗಳಿಗೆ 16.42 ಕೋಟಿ ವೆಚ್ಚ ಮಾಡಲಾಗಿದೆ. ಮತ್ತೊಂದು ಅಂದಾಜು ವರದಿ ಮಾಡಿಸಿ 27 ಕೋಟಿ ಬೇಕಾಗಿದೆ ಎಂದು ವರದಿ ಸಲ್ಲಿಸಿದ್ದಾರೆ. ನಾವು ಆರ್ಥಿಕ ಪರಿಸ್ಥಿತಿಗೆ ಅನುಗುಣವಾಗಿ ಈ ಬಗ್ಗೆ ಗಮನಹರಿಸುತ್ತೇವೆ. ಈ ಹಿಂದೆ ಶಾಸಕರುಗಳು ಜಲಸಂಪನ್ಮೂಲ ಇಲಾಖೆಯಿಂದ ರಸ್ತೆ, ಸಮುದಾಯ ಭವನ ಬೇಕು ಎಂದು ಶಿಫಾರಸು ಮಾಡುತ್ತಿದ್ದರು. ಈಗ ನಾನು ಅದನ್ನೆಲ್ಲಾ ನಿಲ್ಲಿಸಿದ್ದೇನೆ. ನಮ್ಮ ಇಲಾಖೆ ಹಣ ಕಾಲುವೆ ಅಭಿವೃದ್ಧಿ, ಪ್ರಮುಖ ಯೋಜನೆಗಳಿಗೆ ಮಾತ್ರ ಬಳಸುತ್ತಿದ್ದೇವೆ.

-ಡಿ.ಕೆ.ಶಿವಕುಮಾರ್, ಉಪಮುಖ್ಯಮಂತ್ರಿ

ಸ್ಪೀಕರ್ ತಾಳ್ಮೆ ಕಳೆದುಕೊಳ್ಳಬಾರದು. ಕಡಿಮೆ ಮಾತನಾಡಬೇಕು. ಸದಸ್ಯರು ಮಾತನಾಡುವಾಗ ಬೇಗ ಮುಗಿಸಿ ಎಂದು ಒತ್ತಡ ಹಾಕಿದರೆ, ಹೇಳಬೇಕಾದ ಅಭಿಪ್ರಾಯಗಳೇ ಮರೆತು ಹೋಗುತ್ತವೆ. ಸದನದಲ್ಲಿ ಕಾಯ್ದೆಗಳ ಬಗ್ಗೆ ವಿಸ್ತøತ ಚರ್ಚೆಯಾಗಬೇಕು. ಒಂದಿಷ್ಟು ಆ ಕಡೆ ಈ ಕಡೆ ಮಾತುಗಳು ವ್ಯತ್ಯಾಸವಾದರೂ ಅದಕ್ಕೆ ಸಹನೆ ಇರಲಿ.

-ಬಸನಗೌಡ ಪಾಟೀಲ್ ಯತ್ನಾಳ್, ಶಾಸಕ



ವಿಧಾನ ಮಂಡಲ ಮಧ್ಯದೊಳಗೆ

ಸಮಾಚಾರ ಸಣ್ಣದಲ್ಲ

ಕಾಡಲ್ಲಿ ಹೊರ ರಾಜ್ಯದ ಜಾನುವಾರಿಗೆ ಬ್ರೇಕ್

ವಿಧಾನಸಭೆ: ನಮ್ಮ ರಾಜ್ಯದ ಕುರಿಗಾಹಿಗಳಿಗೆ ತೊಂದರೆ ನೀಡದಂತೆ ಅರಣ್ಯಾಧಿಕಾರಿಗಳಿಗೆ ಸೂಚಿಸಲಾಗಿದೆ ಎಂದು ಅರಣ್ಯ ಸಚಿವ ಈಶ್ವರ್ ಖಂಡ್ರೆ ಸ್ಪಷ್ಟಪಡಿಸಿದರು. ವಿಧಾನಸಭೆ ಯಲ್ಲಿ ಮಾತನಾಡಿದ ಅವರು, ಡೀಮ್ಡ್ ಅರಣ್ಯದ ಬಗ್ಗೆ ಈಗಾ ಗಲೇ ಮರು

ಸಮೀಕ್ಷೆ ನಡೆಯು ತ್ತಿದೆ. ಸುಪ್ರೀಂ ಕೋರ್ಟ್ ಮತ್ತೊಂದು ಅವಕಾಶ ನೀಡಿದ್ದು, ಸಮೀಕ್ಷೆಯ ನಂತರ ಅರಣ್ಯ ಇಲ್ಲದ ಪ್ರದೇಶವನ್ನು ಕೈಬಿಡಬಹುದು ಮತ್ತು ಯಾವುದನ್ನು ಸೇರಿಸಬಹುದು ಎಂಬುದನ್ನು ಪರಾಮರ್ಶಿಸಲಾಗುವುದು ಎಂದು ತಿಳಿಸಿದರು. ಅರಣ್ಯೇತರ ಉದ್ದೇಶಕ್ಕೆ ಅರಣ್ಯ ಭೂಮಿ ಬಳಕೆ ಮಾಡಿಕೊಳ್ಳಲು ಪರಿವೇಶ್ ಪೋರ್ಟಲ್‌ನಲ್ಲಿ ಅರ್ಜಿ ಸಲ್ಲಿಸಿ, ಪರ್ಯಾಯ ಭೂಮಿ ಮತ್ತು ಎನ್‌ಪಿವಿ ಶುಲ್ಕ ಪಾವತಿಸಿ ನಿಯಮಾನುಸಾರ ಅನುಮತಿ ಪಡೆಯಲು ಅವಕಾಶವಿದೆ ಎಂದು ಹೇಳಿದರು. ಹೊರ ರಾಜ್ಯದಿಂದ ಜಾನುವಾರುಗಳನ್ನು ತಂದು ನಮ್ಮ ರಾಜ್ಯದ ಕಾಡಿನಲ್ಲಿ ಮೇಯಿಸುವುದನ್ನು ನಿಷೇಧಿಸಲು ಸೂಚಿಸಲಾಗಿದೆ. ಮಲೆ ಮಹದೇಶ್ವರ ಬೆಟ್ಟದಲ್ಲಿ 5 ಹುಲಿಗಳ ಸಾವು ಸಂಭವಿಸಿದಾಗ ತಮಿಳುನಾಡಿನಿಂದ ಸಾವಿರಾರು ಜಾನುವಾರುಗಳನ್ನು ತಂದು ನಮ್ಮ ಅರಣ್ಯ ನಾಶ ಪಡಿಸುತ್ತಿರುವ ಅಂಶ ವರದಿಯಲ್ಲಿ ತಮ್ಮ ಗಮನಕ್ಕೆ ಬಂದ ಬಳಿಕ, ಹೊರ ರಾಜ್ಯದ ಜಾನುವಾರನ್ನು ನಮ್ಮ ಕಾಡಿನಲ್ಲಿ ಮೇಯಿಸುವುದಕ್ಕೆ ನಿಷೇಧ ಹೇರಲಾಗಿದೆ. ನಮ್ಮ ರಾಜ್ಯದ ಕುರಿಗಾಹಿಗಳಿಗೆ ತೊಂದರೆ ನೀಡದಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದು ಸ್ಪಷ್ಟಪಡಿಸಿದರು.

ಕುರಿಗಾಹಿಗಳಿಗೆ ಗನ್ ನೀಡಿ: ಬೈರತಿ ಸುರೇಶ್

ವಿಧಾನಸಭೆ: ಸಾಂಪ್ರದಾಯಿಕ ಕುರಿಗಾಹಿಗಳ ಆತ್ಮರಕ್ಷಣೆಗೆ ಗನ್ ನೀಡುವ ವ್ಯವಸ್ಥೆಯಾಗಬೇಕು ಎಂದು ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ಅಭಿಪ್ರಾಯಪಟ್ಟರು. ಕುರಿಗಾಹಿಗಳ ರಕ್ಷಣೆಗಾಗಿ ರಾಜ್ಯ ಸರಕಾರ ತಂದಿರುವ ಕರ್ನಾಟಕ ಸಾಂಪ್ರ

ದಾಯಿಕ ಅಲೆಮಾರಿ ಕುರಿಗಾಹಿಗಳ (ಕ್ಷೇಮಾಭಿವೃದ್ಧಿ ಕ್ರಮಗಳು ಮತ್ತು ದೌರ್ಜನ್ಯಗಳ ವಿರುದ್ಧ ರಕ್ಷಣೆ) ವಿಧೇಯಕಕ್ಕೆ ಸಂಬಂಧಿಸಿದಂತೆ ಮಾತನಾಡಿದ ಅವರು, ರಾಜ್ಯದ ಕುರಿಗಾಹಿಗಳ ಪರವಾಗಿ ಮಂತ್ರಿಗಳು ಮತ್ತು ಸರಕಾರಕ್ಕೆ ಅಭಿನಂದನೆ ಸಲ್ಲಿಸುತ್ತೇನೆ. ಕುರಿಗಾಹಿಗಳೆಂದರೆ ಕೇವಲ ಕುರುಬರೇ ಅಲ್ಲ. ಒಂದು ಧರ್ಮಕ್ಕೆ, ಜಾತಿಗೆ ಸೀಮಿತವಾಗಿರದೇ ರಾಜ್ಯದ ಬಹುತೇಕ ಹಳ್ಳಿಗಳ ಎಲ್ಲಾ ಸಮುದಾಯಗಳಿಗೆ ಸೇರಿದ ಜನರು ಕುರಿಗಳನ್ನು ಸಾಕುತ್ತಿದ್ದಾರೆ. ಈ ಮೂಲಕ ಕುರಿ ಸಾಕಾಣಿಕೆ ಒಂದು ಉದ್ಯೋಗವಾಗಿದೆ. ಜೀವನ ಸಾಗಿಸಲು ಇದೊಂದು ಮಾರ್ಗವಾಗಿದೆ. ಕುರಿಗಾಹಿಗಳದ್ದು ಶತಮಾನಗಳಷ್ಟು ಹಳೆಯದಾದ ಸಂಪ್ರದಾಯವಾಗಿದೆ ಎಂದರು. ರಾತ್ರೋರಾತ್ರಿ ಕುರಿಗಳನ್ನು ಕಳ್ಳತನ ಮಾಡುವ ಪ್ರಕರಣಗಳು ಜರುಗುತ್ತಿವೆ. ನಾಲ್ಕೈದು ತಿಂಗಳ ಹಿಂದೆ ಬಾಗಲಕೋಟೆಯಲ್ಲಿ ಕುರಿಗಾಹಿಯೊಬ್ಬರನ್ನು ಕೊಲೆ ಮಾಡಿ ಕುರಿಗಳನ್ನು ಕದ್ದೊಯ್ದ ಪ್ರಕರಣ ನಡೆದಿದೆ. ಇಂತಹ ಕುರಿಗಾಹಿಗಳಿಗೆ ಕಾನೂನಾತ್ಮಕವಾಗಿ ರಕ್ಷಣೆ ನೀಡುವುದು ಸರಕಾರದ ಕರ್ತವ್ಯವಾಗಿದೆ. ಕುರಿಗಾಹಿಗಳಿಗೆ ತೊಂದರೆ ನೀಡುವುದು, ಕಿರುಕುಳ ಮಾಡುವುದನ್ನು ತಪ್ಪಿಸಲು ಇಂತಹ ಕಾನೂನು ಅಗತ್ಯವಿತ್ತು ಎಂದು ಅಭಿಪ್ರಾಯಪಟ್ಟರು. ಕೊಡಗಿನ ಮಾದರಿಯಲ್ಲಿ ಸಾಂಪ್ರದಾಯಿಕ ಕುರಿಗಾಹಿಗಳಿಗೆ ಅರ್ಜಿ ಸಲ್ಲಿಸಿದ ತಕ್ಷಣ ಗನ್ ಪರವಾನಗಿ ನೀಡುವ ವ್ಯವಸ್ಥೆಯನ್ನೂ ಸರಕಾರ ಮಾಡಬೇಕೆಂದು ಸಲಹೆ ನೀಡಿದರು.

ಮೂರು ವಿಧೇಯಕ ಹಿಂಪಡೆದ ಸರಕಾರ

ವಿಧಾನ ಪರಿಷತ್: ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ವಿಧೇಯಕ, 2024ನೇ ಸಾಲಿನ ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ ವಿಧೇಯಕ) ಹಾಗೂ 2024ರ ನೋಂದಣಿ (ಕರ್ನಾಟಕ ತಿದ್ದುಪಡಿ) ವಿಧೇಯಕಗಳನ್ನು ವಿಧಾನಪರಿಷತ್‌ನಲ್ಲಿ ಹಿಂದಕ್ಕೆ ಪಡೆಯಲಾಯಿತು. ಕಲಾಪದ ವೇಳೆ ಸಭಾನಾಯಕ ಬೋಸರಾಜುರವರು ಈ ಮೂರೂ ವಿಧೇಯಕಗಳನ್ನು ಮಂಡಿಸಿ ಹಿಂದಕ್ಕೆ ಪಡೆಯಲು ಮನವಿ ಮಾಡಿದರು. ಮುಖ್ಯಮಂತ್ರಿ ಸಿದ್ದರಾಮಯ್ಯ ನವರ ಪರವಾಗಿ ಸಹಕಾರ ಸಂಘಗಳ (ತಿದ್ದುಪಡಿ) ವಿಧೇಯಕ, ಸೌಹಾರ್ದ ಸಹಕಾರಿ (ತಿದ್ದುಪಡಿ) ವಿಧೇಯಕ ಹಾಗೂ ಕಂದಾಯ ಸಚಿವ ಕೃಷ್ಣಬೈರೇಗೌಡರ ಪರವಾಗಿ ನೋಂದಣಿ (ಕರ್ನಾಟಕ ತಿದ್ದುಪಡಿ) ವಿಧೇಯ ಕವನ್ನು ಹಿಂದಕ್ಕೆ ಪಡೆಯಲು ಅನುಮತಿ ಕೋರಿದರು. ಈ ಮೂರೂ ವಿಧೇಯಕಗಳಿಗೆ ಸಂಬಂಧಿಸಿದಂತೆ ಈಗಾಗಲೇ ಹೊಸದಾಗಿ ಹಲವಾರು ಸುಧಾರಣೆ ಕ್ರಮಗಳು, ಅನೇಕ ವಿಚಾರಗಳನ್ನೊಳಗೊಂಡ ವಿಧೇಯಕ ತರಲಾಗಿದ್ದು, ಈ ವಿಧೇಯಕಗಳು ಅಗತ್ಯವಿರಲಿಲ್ಲ ಎಂದರು.

ವಿಶ್ವವಾಣಿ ಕ್ಲಬ್ ಹೌಸ್
22.08.2025
ಸಂಜೆ: 06.55 ರಿಂದ 08.05 ರವರೆಗೆ
ಶುಕ್ರವಾರದ ಅತಿಥಿ

ಶ್ರೀ ಪಿ.ಕೆ.ನಂದೀಶ
ವಿಷಯ
ಶ್ರೀ ರಾಮಾಯಣ ದರ್ಶನಂ ಸಮೀಕ್ಷೆ
vishwavani.news

ಅಕ್ರಮ ಗಣಿಗಾರಿಕೆ, ಕುರಿಗಾಹಿ ಹಿತರಕ್ಷಣೆ ಸೇರಿ ಹಲವು ವಿಧೇಯಕಗಳು ಪಾಸ್

ಹಲವು ಬಿಲ್‌ಗಳಿಗೆ ಒಪ್ಪಿಗೆ ನೀಡಿದ ಸದನ

ವಿಶ್ವವಾಣಿ ಸುದ್ದಿಮನೆ ವಿಧಾನಸಭೆ

ಮಳೆಗಾಲದ ಅಧಿವೇಶನದ ಮುನ್ನ ದಿನ ಮ್ಯಾರಥಾನ್ ಮಾದರಿಯಲ್ಲಿ ವಿಧಾನಸಭೆಯಲ್ಲಿ ಹತ್ತು ಹಲವು ವಿಧೇಯಕಗಳು ಅನುಮೋದನೆ ದೊರೆತಿವೆ. ಗುರುವಾರ ನಡೆದ ವಿಧಾನಸಭಾ ಕಲಾಪದಲ್ಲಿ 2025ನೇ ಸಾಲಿನ ರಾಜ್ಯ ಅಕ್ರಮ ಗಣಿಗಾರಿಕೆ ಮತ್ತು ಅಪರಾಧದ ಉತ್ಪತ್ತಿಗಳಿಂದಾದ ಸ್ವತ್ತನ್ನು ವಶಪಡಿಸಿಕೊ ಳ್ಳುವುದಕ್ಕಾಗಿ ಮತ್ತು ಜಪ್ತಿಗಾಗಿ ವಸೂಲಾತಿ ಆಯುಕ್ತರ ನೇಮಕಾತಿ ವಿಧೇಯಕ, 2025ನೇ ಸಾಲಿನ ರಾಜ್ಯ ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿಗಳ (ಕ್ಷೇಮಾ ಭಿವೃದ್ಧಿ ಕ್ರಮಗಳು ಮತ್ತು ದೌರ್ಜನ್ಯಗಳ ವಿರುದ್ಧದ ರಕ್ಷಣೆ) ವಿಧೇಯಕ, ಕರ್ನಾಟಕ ಲಿಫ್ಟ್, ಎಸ್ಕಲೇಟರ್ ಮತ್ತು ಪ್ಯಾಸೆಂಜರ್ ಕನ್ವೇಯರ್ (ತಿದ್ದುಪಡಿ)ವಿಧೇ ಯಕ, ಕರ್ನಾಟಕ ಭೂ ಕಂದಾಯ ವಿಧೇಯಕ ತಿದ್ದುಪಡಿ ಸೇರಿದಂತೆ ಹಲವು ವಿಧೇಯಕಗಳನ್ನು ಅನುಮೋದನೆ ನೀಡಲಾಯಿತು.

ಅಕ್ರಮ ಗಣಿಗಾರಿಕೆ ಮತ್ತು ಅಪರಾಧದ ಉತ್ಪತ್ತಿಗಳಿಂದಾದ ಸ್ವತ್ತನ್ನು ವಶ ಪಡಿಸಿಕೊಳ್ಳುವುದಕ್ಕಾಗಿ ಮತ್ತು ಜಪ್ತಿಗಾಗಿ ವಸೂಲಿ ಆಯುಕ್ತರನ್ನು ನೇಮಿಸುವ ಸಂಬಂಧಪಟ್ಟ ವಿಧೇಯಕವನ್ನು ಗಣಿ ಮತ್ತು ಭೂವಿಜ್ಞಾನ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರ ಪರವಾಗಿ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್. ಕೆ.ಪಾಟೀಲ್ ಅವರು, ಮಂಡಿಸಿದರು. ಅಕ್ರಮ ಗಣಿಗಾರಿಕೆ ಮತ್ತು ಅದರ ಅಪರಾಧಗಳಿಂದ ಸಂಪಾದಿಸಿದ ಸ್ವತ್ತುಗಳನ್ನು ವಸೂಲಿ ಮಾಡಿಕೊಳ್ಳಲು ಈಗಿರುವ ಕಾನೂನುಗಳಲ್ಲಿ ಅವಕಾಶಗಳಿವೆ. ಆದರೆ ನಿರ್ದಿಷ್ಟ ನಿಯಮಾವಳಿಗಳಿಲ್ಲ. 2006 ರಿಂದ 2012ರ ವರೆಗೆ ರಾಜ್ಯದಲ್ಲಿ ಅಕ್ರಮ ಗಣಿಗಾರಿಕೆ ವ್ಯವಹಾರ ನಡೆದಿದೆ. ಇದರ ಬಗ್ಗೆ ಲೋಕಾಯುಕ್ತ ವರದಿ ನೀಡಿದ್ದಾರೆ. ಸಚಿವ ಸಂಪುಟ ಸಭೆಯ ವರದಿ ಕೂಡ ಇದೆ ಎಂದು ಹೇಳಿದರು.

ಲೂಟಿಯಾದ ಸ್ವತ್ತಿನ ಮರು ಗಳಿಕೆ: 1964ರ ಕ್ರಿಮಿನಲ್ ಆರ್ಡಿಯನ್ಸ್ ಪ್ರಕಾರ ಅಕ್ರಮವಾಗಿ ಗಳಿಸಿದ ಸಂಪತ್ತನ್ನು ವಶಪಡಿಸಿಕೊಳ್ಳಬಹುದು. ಕೋಟ್ಯಂತರ ರುಪಾಯಿ ಅವ್ಯವಹಾರವಾದಾಗ ನಿರ್ದಿಷ್ಟ ಸ್ವರೂಪಗಳಿಲ್ಲ. ಯಾವುದೇ ಅಕ್ರಮ ಅಥವಾ ಅಪರಾಧ ನಡೆದಾಗ ಸರಕಾರದ ಸ್ವತ್ತುಗಳು ಲೂಟಿಯಾಗುತ್ತವೆ. ಅಂತಹ ಪ್ರಕರಣಗಳಲ್ಲಿ ಪೊಲೀಸರು ಅಥವಾ ಸರಕಾರದ ತನಿಖಾ ಸಂಸ್ಥೆಗಳು ಪ್ರಕರಣ ದಾಖಲಿಸುತ್ತವೆ. ಆರೋಪಿಗಳನ್ನು ಬಂಧಿಸುತ್ತವೆ. ಲೂಟಿಯಾದ ಸ್ವತ್ತಿನ ಮರು ಗಳಿಕೆಯಾಗುತ್ತಿಲ್ಲ. ಅಪರಾಧಿಗಳು ಅಕ್ರಮ ಮಾಡಿ ಸಂಪಾದಿಸಿದ ಆಸ್ತಿಯನ್ನು ಜಪ್ತಿ ಮಾಡುವ ಮೂಲಕ ಲೂಟಿಯಾದ ಸ್ವತ್ತಿನ ಮರುಗಳಿಕೆ ಮಾಡಬೇಕಿದೆ. ಆ ನಿಟ್ಟಿನಲ್ಲಿ ಕಾಯಿದೆ ರೂಪಿಸಲಾಗಿದೆ ಎಂದು ತಿಳಿಸಿದರು.

ಅಲೆಮಾರಿ ಕುರಿಗಾಹಿ ವಿಧೇಯಕಕ್ಕೆ ಒಪ್ಪಿಗೆ: ರಾಜ್ಯದಲ್ಲಿ ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿಗಳಿಗೆ ಕ್ಷೇಮಾಭಿವೃದ್ಧಿ ಕ್ರಮ ಹಾಗೂ ಅವರ ವಿರುದ್ಧ ದೌರ್ಜನ್ಯಗಳ ಅಪರಾಧ ಎಸಗುವುದನ್ನು ತಡೆಗಟ್ಟುವ ಉದ್ದೇಶವುಳ್ಳ 2025ನೇ ಸಾಲಿನ ಕರ್ನಾಟಕ ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿಗಳ(ಕ್ಷೇಮಾಭಿವೃದ್ಧಿ ಕ್ರಮಗಳು ಮತ್ತು ದೌರ್ಜನ್ಯಗಳ ವಿರುದ್ಧದ ರಕ್ಷಣೆ) ವಿಧೇಯಕಕ್ಕೆ ಅಂಗೀಕಾರ ದೊರೆಯಿತು. ಪಶುಸಂಗೋಪನಾ ಸಚಿವ ಕೆ. ವೆಂಕಟೇಶ್ ಅವರು ವಿಧೇಯಕವನ್ನು ಮಂಡಿಸಿ ವಿವರಣೆ ನೀಡಿ, ರಾಜ್ಯದಲ್ಲಿ 15 ಸಾವಿರ ಕುರಿಗಾಹಿಗಳು ನೋಂದಣಿಯಾಗಿದ್ದಾರೆ. 4 ಸಾವಿರ ಕುರಿಗಾಹಿಗಳಿಗೆ ಗುರುತಿನ ಚೀಟಿ ನೀಡಲಾಗಿದೆ. ಮೂರು ವರ್ಷದಲ್ಲಿ 242 ಕುರಿಗಾಹಿಗಳ ದೌರ್ಜನ್ಯಕ್ಕೆ ಸಂಬಂಧಿಸಿದ ಕೇಸುಗಳು ದಾಖಲಾಗಿವೆ. ಅವರು ವಲಸೆ ಹೋದಾಗ ಕುರಿತು ಹೊತ್ತುಕೊಂಡು ಹೋಗುವುದು, ದೌರ್ಜನ್ಯ ನಡೆಸುವುದು, ಅತ್ಯಾಚಾರ ಎಸಗುವ ಕೃತ್ಯಗಳು ಜರುಗಿವೆ. ಹೀಗಾಗಿ, ಇಂತಹವುಗಳನ್ನು ತಡೆಯಲು ಅಗತ್ಯ ಕ್ರಮ ಕೈಗೊಳ್ಳುವ ಅಗತ್ಯವಿದೆ ಎಂದು ಹೇಳಿದರು.

ಪ್ರತಿಯೊಬ್ಬ ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿಯು ಫಲಾನುಭವಿಯಾಗಿ ನೋಂದಾಯಿಸಿಕೊಳ್ಳಬೇಕು. ಕೈಗೆಟಕುವ ಬೆಲೆಯಲ್ಲಿ ವಸತಿಗಾಗಿ ಭೂಮಿ ಮಂಜೂರಾತಿ, ಜೀವವಿಮೆ, ಆರೋಗ್ಯವಿಮೆ, ಪಶು ವಿಮೆ, ಆರೋಗ್ಯ ಮತ್ತು ಶೈಕ್ಷಣಿಕ ಸೌಲಭ್ಯಗಳು, ಕೌಶಲ್ಯ ಉನ್ನತೀಕರಣ, ಆಹಾರ ಭದ್ರತೆ, ಕಲ್ಯಾಣ ಕಾರ್ಯಕ್ರಮಗಳಾಗಿವೆ ಅಲ್ಲದೆ ಜಾನುವಾರುಗಳಿಗೆ ಲಸಿಕೆ, ಚಿಕಿತ್ಸೆ, ಕುರಿಗಾಹಿಗಳ ಉತ್ಪನ್ನಗಳಿಗೆ ಮಾರಾಟ ಬೆಂಬಲ, ನಷ್ಟದ ಸಂದರ್ಭದಲ್ಲಿ ನಷ್ಟ ಪರಿಹಾರ ಮೊದಲಾದ ಸೌಲಭ್ಯಗಳನ್ನು ಫಲಾನುಭವಿಗಳಿಗೆ ಒದಗಿಸಲಾಗುತ್ತದೆ ಎಂದರು.



50 ಸಾವಿರ ಟನ್ ತೂಕಕ್ಕೂ ಹೆಚ್ಚಿನ ಅದಿರು ಲೂಟಿಯಾದರೆ ಅದನ್ನು ಸಿಬಿಐ ತನಿಖೆ ನಡೆಸುತ್ತದೆ. ಅದರ ಒಳಗಿನ ಪ್ರಕರಣವಾದರೆ ರಾಜ್ಯ ಸರಕಾರ ಕ್ರಮ ಕೈಗೊಳ್ಳುತ್ತದೆ. ಈ ಕಾಯಿದೆ ಅಗತ್ಯವಾಗಿದ್ದು ಅಂಗೀಕಾರ ನೀಡಬೇಕು.

-ಎಚ್.ಕೆ. ಪಾಟೀಲ್, ಸಚಿವ

ಇಳಕಲ್ ಭಾಗದಲ್ಲಿ ಗ್ರಾನೈಟ್ ಗಣಿಗಾರಿಕೆ ನಡೆಯುತ್ತದೆ. ಗ್ರಾನೈಟ್ ತೆಗೆಯುವ ಮುನ್ನ ಆರಂಭದಲ್ಲಿ ಐದು ಅಡಿ ಮಣ್ಣು ತುಂಬಿದ್ದು, ಅದರ ನಂತರ ಗ್ರಾನೈಟ್ ದೊರೆಯುತ್ತದೆ. ಅಧಿಕಾರಿಗಳು ಮಣ್ಣಿನ ಆಳತೆಯನ್ನು ಸೇರಿಸಿ ಗಣಿ ಉದ್ಯಮಿಗಳಿಗೆ ದುಪ್ಪಟ್ಟು ದಂಡ ವಿಧಿಸಿದರು. ಈ ರೀತಿಯ ಕ್ರಮಗಳು ಸರಿಯಲ್ಲ. ಉದ್ಯಮದಾರರಿಗೂ ತೊಂದರೆಯಾಗದಂತೆ ಎಚ್ಚರಿಕೆ ವಹಿಸಬೇಕು,

-ಸಿ.ಸಿ. ಪಾಟೀಲ್, ಶಾಸಕ

ಕುರಿಗಾಹಿಗಳಿಗೆ ಮಳೆಯಲ್ಲಿ ರಕ್ಷಣೆಗೆ ಟೆಂಟ್ ಕೊಡಬೇಕು. ಅವರಿಗೆ ಕಾನೂನು ಸೌಲಭ್ಯ ಒದಗಿಸಬೇಕು. ದೌರ್ಜನ್ಯ ಎಸಗುವವರನ್ನು ಶಿಕ್ಷೆಗೊಳಿಸಬೇಕು.

-ಆರ್. ಅಶೋಕ್, ಪ್ರತಿಪಕ್ಷ ನಾಯಕ

ನೂತನ ಕಾಯಿದೆಯಲ್ಲಿ ಹಲವು ಸುಳ್ಳು

ಕಾಯಿದೆಗೆ ಸಂಬಂಧಿಸಿದಂತೆ ಮಾತನಾಡುವ ವೇಳೆ ಶಾಸಕ ಎಸ್.ಟಿ. ಸೋಮಶೇಖರ್, ಗಣಿ ಸಚಿವರ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದರು. ರಾಜ್ಯದಲ್ಲಿ ಗಣಿ ಸಚಿವರು ಯಾರು ಎಂದು ಗೊತ್ತಿಲ್ಲ. ನಮ್ಮ ಕ್ಷೇತ್ರದಲ್ಲಿ ಹಲವಾರು ಗಣಿಗಾರಿಕೆಗಳಿಂದ ಲೂಟಿಯಾಗುತ್ತಿದೆ. ಸರಕಾರಕ್ಕೆ ರಾಜಸ್ವ ನಷ್ಟವಾಗುತ್ತಿದೆ. ಇದರ ಬಗ್ಗೆ ಕಳೆದ ಅಧಿವೇಶನದಲ್ಲೂ ನಾನು ಪ್ರಸ್ತಾಪ ಮಾಡಿದೆ. ತನಿಖೆ ಮಾಡುತ್ತೇವೆ, ಕ್ರಮ ಕೈಗೊಳ್ಳುತ್ತೇವೆ ಎಂದು ಸರಕಾರ ಭರವಸೆ ನೀಡಿತ್ತು. ಆದರೆ ಅದ್ಯಾವುದು ಆಗಿಲ್ಲ. ಈ ರೀತಿಯ ಲೂಟಿಗಳನ್ನು ಮೊದಲು ನಿಲ್ಲಿಸಿ. ಹೊಸ ಕಾಯಿದೆ ಕಾನೂನುಗಳು ಬರಿ ಬೋಗಸ್ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಕುರಿಗಾಹಿಗೆ ಕಿರುಕುಳ ನೀಡಿದರೆ ದಂಡವೇನು?

ಕುರಿಗಾಹಿ ದಾರಿಗೆ ಅಡ್ಡಿ ಉಂಟು ಮಾಡುವ ವ್ಯಕ್ತಿಗೆ 2 ವರ್ಷಗಳ ಸೆರೆವಾಸ, ಒಂದು ಲಕ್ಷ ರುಪಾಯಿ ದಂಡವಿದೆ. ಉದ್ದೇಶಪೂರ್ವಕವಾಗಿ ಕುರಿಗಾಹಿಯನ್ನು ಅವಮಾನಿಸಿದರೆ, ನಿಂದಿಸಿದರೆ ಆರು ತಿಂಗಳ ಅವಧಿಯ, ಐದು ವರ್ಷದವರೆಗೆ ವಿಸ್ತರಿಸಬಹುದಾದ ಸೆರೆವಾಸ ಮತ್ತು ಲಕ್ಷ ರು. ದಂಡ ವಿಧಿಸಲಾಗುತ್ತದೆ ಎಂದು ವಿವರಿಸಿದರು. ಕುರಿಗಾಹಿ ಮರಣಕ್ಕೆ ಕಾರಣವಾಗುವ ವ್ಯಕ್ತಿಯನ್ನು ಜಾರಿಯಲ್ಲಿರುವ ಸಂಬಂಧಪಟ್ಟ ಕ್ರಿಮಿನಲ್ ಕಾನೂನಿನಲ್ಲಿ ದಂಡಿಸಲಾಗುತ್ತದೆ. ಲೈಂಗಿಕ ಕಿರುಕುಳ ಪ್ರಕರಣದಲ್ಲಿ ಬಿಎಂಎಸ್ ಕಾಯಿದೆಯಲ್ಲಿ ದಂಡಿಸಲಾಗುತ್ತದೆ. ಕುರಿಗಾಹಿಯು ನ್ಯಾಯಿಕ ನೆರವನ್ನು ಪಡೆಯುವುದರಿಂದ ತಡೆಯುವ ವ್ಯಕ್ತಿಗೆ 2 ವರ್ಷಗಳ ಸೆರೆವಾಸ, 50 ಸಾವಿರ ರು. ದಂಡ ವಿಧಿಸಲಾಗುತ್ತದೆ. ಸೂಕ್ತ ಪ್ರಾಧಿಕಾರದ ಗಮನಕ್ಕೆ ತರದೆ ಕುರಿಗಾಹಿಯಿಂದ ಹಾನಿಗಳನ್ನು ಕ್ಲೈಮ್ ಮಾಡುವ ವ್ಯಕ್ತಿಗೆ ಮೂರು ವರ್ಷ ಅವಧಿಯ ಸೆರೆವಾಸ ಮತ್ತು ಒಂದು ಲಕ್ಷ ರು. ದಂಡ ವಿಧಿಸುವುದನ್ನು ವಿಧೇಯಕ ಪ್ರಸ್ತಾಪಿಸಿದೆ ಎಂದರು.

ಪ್ರಕರಣದಲ್ಲಿ ಯಾರನ್ನೂ ರಕ್ಷಣೆ ಮಾಡುವ ಪ್ರಶ್ನೆಯೇ ಇಲ್ಲ: ಪರಮೇಶ್ವರ್

ವಿದ್ಯಾರ್ಥಿನಿ ಕೊಲೆ: ಕಠಿಣ ಕ್ರಮದ ಭರವಸೆ

ವಿಧಾನಪರಿಷತ್: ಚಿತ್ರದುರ್ಗ ತಾಲೂಕಿನ ರಾಷ್ಟ್ರೀಯ ಹೆದ್ದಾರಿ 48ರ ಸಮೀಪದ ಗೋನೂರು ರಸ್ತೆಯಲ್ಲಿ ಪದವಿ ವಿದ್ಯಾರ್ಥಿನಿ ವರ್ಷಿತ ಕೊಲೆ ಪ್ರಕರಣದ ಆರೋಪಿಗಳನ್ನು ಮುಲಾಜಿಲ್ಲದೆ ಕಾನೂನಿನ ಪ್ರಕಾರ ಶಿಕ್ಷೆಗೆ ಗುರಿಪಡಿಸುತ್ತೇವೆ ಎಂದು ಗೃಹಸಚಿವ ಡಾ.ಜಿ.ಪರಮೇಶ್ವರ್ ಎಚ್ಚರಿಸಿದ್ದಾರೆ.

ಬಿಜೆಪಿಯ ನವೀನ್ ಅವರು ಪ್ರಸ್ತಾಪಿಸಿದ ವಿಷಯಕ್ಕೆ ಉತ್ತರಿಸಿದ ಸಚಿವರು, ಈ ಪ್ರಕರಣದಲ್ಲಿ ಯಾರನ್ನೂ ರಕ್ಷಣೆ ಮಾಡುವ ಪ್ರಶ್ನೆಯೇ ಇಲ್ಲ. ಕಾನೂನಿನ ಪ್ರಕಾರ ಆರೋಪಿಗಳಿಗೆ ಯಾವ ಶಿಕ್ಷೆಯಾಗಬೇಕೋ ಅದು ಆಗೇ ಆಗುತ್ತದೆ. ಇಂಥ ಘಟನೆಗಳು ನಾಗರಿಕ ಸಮಾಜದಲ್ಲಿ ಆಗಲೇಬಾರದು. ಯಾರನ್ನು ನಾವು ಸಹಿಸಿಕೊಳ್ಳುವುದಿಲ್ಲ. ನಾನು ಈ ಪ್ರಕರಣ ಕುರಿತು ಸಂಬಂಧಪಟ್ಟ ಅಧಿಕಾರಿಗಳಿಂದ ಮಾಹಿತಿ ಪಡೆದು ಸದನಕ್ಕೆ ಪೂರ್ಣ ಮಾಹಿತಿ ನೀಡುವುದಾಗಿ ಸ್ಪಷ್ಟಪಡಿಸಿದರು.

ಇದಕ್ಕೂ ಮುನ್ನ ವಿಷಯ ಪ್ರಸ್ತಾಪಿಸಿದ ನವೀನ್, ಮಂಗಳವಾರ ಯುವತಿಯ ಮೃತದೇಹ ಪತ್ತೆಯಾಗಿದೆ. ಐಮಂಗಲ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಕೋವೇರಹಟ್ಟಿ ಗ್ರಾಮದ ವರ್ಷಿತ ಪಿಯುಸಿಯಲ್ಲಿ ವ್ಯಾಸಂಗ ಮಾಡುತ್ತಿದ್ದರು. ಡಾ.ಬಿ.ಆರ್.ಅಂಬೇಡ್ಕರ್ ಹಾಸ್ಟೆಲ್‌ನಲ್ಲಿ ವ್ಯಾಸಂಗ ಮಾಡುತ್ತಿದ್ದ ಯುವತಿಯನ್ನು ದುಷ್ಕರ್ಮಿಗಳು ಅಪಹರಿಸಿ ಅತ್ಯಂತ ಭೀಕರವಾಗಿ ಕೊಲೆ ಮಾಡಿ ಮೃತ ದೇಹವನ್ನು ಸುಟ್ಟು ಹಾಕಿದ್ದಾರೆ. ನಾವು ಮಹಿಳೆಯರ ಸುರಕ್ಷತೆಯ ಕುರಿತು ಎರಡು ಮಸೂದೆಗಳನ್ನ ಅಂಗೀಕರಿಸಿದ್ದೇವೆ. ಈ ಪ್ರಕರಣ ನೋಡಿದರೆ ಪೋಷಕರು ತಮ ಮಕ್ಕಳನ್ನು ಶಾಲೆಗೆ ಕಳುಹಿಸಲು ಹಿಂದೇಟು ಹಾಕುತ್ತಿದ್ದಾರೆ ಎಂದು ಆತಂಕ ವ್ಯಕ್ತಪಡಿಸಿದರು.

ಸುಮ್ಮನೆ ಕುಳಿತುಕೊಳ್ಳಿ: ಸಭಾಪತಿ ಗರಂ

ನ್ಯಾಯಕ್ಕಾಗಿ ದಲಿತ ಸಂಘಟನೆಗಳು ಮತ್ತಿತರ ಸಂಘಟನೆಗಳು ಹೋರಾಟ ನಡೆಸುತ್ತಿವೆ. ಪೋಷಕರು ನ್ಯಾಯಕ್ಕಾಗಿ ಅಂಗಲಾಚುತ್ತಿದ್ದಾರೆ. ಸರಕಾರ ತಪ್ಪಿತಸ್ಥರ ಮೇಲೆ ಕ್ರಮ ಜರುಗಿಸಲಿ ಎಂದು ಒತ್ತಾಯಿಸಿದರು. ಇದಕ್ಕೂ ಮುನ್ನ ಸದಸ್ಯರಿಗೆ ವಿಷಯ ಪ್ರಸ್ತಾಪಿಸಲು ಅವಕಾಶ ನೀಡಿದಕ್ಕೆ ಮುಖ್ಯ ಸಚೇತಕ ಸಲೀಂ ಮತ್ತಿತರರು ಆಕ್ಷೇಪಿಸಿದರು. ಮೊದಲು ವಿಧೇಯಕಗಳ ಮಂಡನೆಯಾಗಲಿ. ನಂತರ ಚರ್ಚೆಗೆ ಅವಕಾಶ ಕೊಡಿ ಎಂದು ಸಭಾಪತಿಗೆ ಮನವಿ ಮಾಡಿದರು. ನಾನು ಅವಕಾಶ ನೀಡಿದ ಮೇಲೆ ನೀವೇಕೆ ಪ್ರಶ್ನೆ ಮಾಡುತ್ತೀರಿ? ಸುಮ್ಮನೆ ಕುಳಿತುಕೊಳ್ಳಿ ಎಂದು ಸಭಾಪತಿಗಳು ಗರಂ ಆದರು.

21 ಮೀಟರ್‌ಗಿಂತ ಎತ್ತರದ ಕಟ್ಟಡಗಳಿಗೆ ಶೇ.1ರಷ್ಟು ಫೈರ್ ಸೆಸ್

ಬಹುಮಹಡಿ ಕಟ್ಟಡಗಳಿಗೆ ಬೆಂಕಿ ತೆರಿಗೆ

ವಿಧಾನ ಪರಿಷತ್: ರಾಜ್ಯದಲ್ಲಿ ಹಾಲಿ ಇರುವ ಹಾಗೂ ಹೊಸದಾಗಿ ನಿರ್ಮಾಣವಾಗುವ ಬಹುಮಹಡಿ ಕಟ್ಟಡಗಳಿಗೆ ಶೇ.1ರಷ್ಟು 'ಫೈರ್ ಸೆಸ್' ವಿಧಿಸುವ ಕರ್ನಾಟಕ ಅಗ್ನಿಶಾಮಕದಳ ತಿದ್ದುಪಡಿ ವಿಧೇಯಕ ವಿಧಾನಪರಿಷತ್‌ನಲ್ಲಿ ಅಂಗೀಕಾರಗೊಂಡಿತು.

ಇದರಿಂದಾಗಿ ಬೆಂಗಳೂರು ನಗರ ಸೇರಿದಂತೆ ರಾಜ್ಯದಲ್ಲಿ ನಿರ್ಮಾಣವಾಗಿರುವ 21 ಮೀಟರ್‌ಗಿಂತ ಎತ್ತರದ ಕಟ್ಟಡಗಳಿಗೆ ಶೇ.1ರಷ್ಟು ಬೆಂಕಿ ತೆರಿಗೆ (ಫೈರ್ ಸೆಸ್) ಅನ್ವಯವಾಗಲಿದೆ. ಅಗ್ನಿ ಸುರಕ್ಷತಾ ಕಾಯ್ದೆಗೆ ಅನ್ವಯವಾಗುವ ಆಸ್ಪತ್ರೆಗಳು, ಕೈಗಾರಿಕೆ, ವಾಣಿಜ್ಯ ಕಟ್ಟಡಗಳು ಒಳಗೊಂಡಂತೆ ಇನ್ನಿತರ ಗಗನಚುಂಬಿ ಕಟ್ಟಡಗಳು ತೆರಿಗೆ ವ್ಯಾಪ್ತಿಗೆ ಬರಲಿವೆ. ಶಾಲೆಗಳಿಗೆ ಈ ತೆರಿಗೆಯಿಂದ ವಿನಾಯಿತಿ ನೀಡಲಾಗಿದೆ.

ವಿಧಾನಸಭೆಯಲ್ಲಿ ಅಂಗೀಕಾರವಾಗಿದ್ದ ಮಸೂ ದೆಯನ್ನು ವಿಧಾನಪರಿಷತ್‌ನಲ್ಲಿ ಮಂಡಿಸಿ ಮಾತನಾಡಿದ ಗೃಹ ಸಚಿವ ಜಿ.ಪರಮೇಶ್ವರ್, ಕೇಂದ್ರ ಸರಕಾರದ ಅಂಗವಾಗಿರುವ ಆಡಿಟಿಂಗ್ ಸಂಸ್ಥೆಯೊಂದರ ಸೂಚನೆಯಂತೆ ಕಾಯ್ದೆಗೆ ತಿದ್ದುಪಡಿ ತರಲಾಗಿದೆ. ಫೈರ್ ಸೆಸ್ ವಿಧಿಸುವಂತೆ ಸಂಸ್ಥೆಯು 2022ರಿಂದ ಆರು ಬಾರಿ ಪತ್ರ ಬರೆದಿತ್ತು. ಈ ಬಗ್ಗೆ ಅಂದಿನ ಸರಕಾರ ಕ್ರಮ ಕೈಗೊಂಡಿರಲಿಲ್ಲ. ಹೀಗಾಗಿ 2024-25ನೇ ಸಾಲಿನ ಬಜೆಟ್‌ನಲ್ಲಿ ಫೈರ್ ಸೆಸ್ ಬಗ್ಗೆ ಪ್ರಸ್ತಾಪಿಸಲಾಗಿತ್ತು ಎಂದರು.

ಇತ್ತೀಚೆಗೆ ಬೆಂಗಳೂರಿನ ತಿಗಳರಪೇಟೆಯ ಕಟ್ಟಡವೊಂದರಕ್ಕೆ ಬೆಂಕಿ ಬಿದ್ದು ಐವರು ಸಾವನ್ನಪ್ಪಿದ್ದರು. ಕಿರಿದಾದ ಸ್ಥಳದಲ್ಲಿ 8 ಮಹಡಿಯ ಕಟ್ಟಡದಲ್ಲಿ ದುರಂತ ಸಂಭವಿಸಿತ್ತು. ಅಗ್ನಿ ನಂದಿಸಲು ಅಗ್ನಿಶಾಮಕ ಸಿಬ್ಬಂದಿ ನಿರಂತರ 15 ಗಂಟೆ ಕಾರ್ಯನಿರ್ವಹಿಸಿದ್ದರು. ಕಟ್ಟಡ ಸುತ್ತಲೂ ಜಾಗ ಬಿಡದೆ ನಿಯಮ ಉಲ್ಲಂಘಿಸಲಾಗಿತ್ತು. ಬಿಬಿಎಂಪಿಯು ಕಟ್ಟಡಕ್ಕೆ ಅನುಮೋದನೆ ಕೊಡುವಾಗ ಎಷ್ಟೆಲ್ಲ ತಪ್ಪು ಮಾಡುತ್ತದೆ ಎಂಬುದಕ್ಕೆ ಈ ಘಟನೆ ಉದಾಹರಣೆ ಎಂದು ಹೇಳಿದರು.

ವಿಧಾನಸೌಧ ಕಟ್ಟಡಕ್ಕೆ ಫೈರ್ ಎನ್‌ಓಸಿ ಇಲ್ಲ

ಬೆಂಕಿ ತೆರಿಗೆ ವಿಚಾರ ಚರ್ಚೆಯಾಗುತ್ತಿದ್ದಾಗ ಸದಸ್ಯ ಕೆ.ಎಸ್.ನವೀನ್, ಶಕ್ತಿಕೇಂದ್ರವಾಗಿರುವ ವಿಧಾನಸೌಧಕ್ಕೆ ಅಗ್ನಿಶಾಮಕ ಇಲಾಖೆಯಿಂದ ನಿರಾಕ್ಷೇಪಣಾ ಪತ್ರ (ಎನ್‌ಓಸಿ) ನವೀಕರಣಗೊಳಿಸಿಲ್ಲ. 2016 ಮಾರ್ಚ್ 23ರಂದು ವಿಧಾನಸೌಧದಲ್ಲಿ ಬೆಂಕಿ ಕಾಣಿಸಿಕೊಂಡಿತ್ತು. ಬಹುಮಹಡಿ ಕಟ್ಟಡಗಳಿಗೆ ಅನ್ವಯವಾಗುವ ರೀತಿ ವಿಧಾನಸೌಧಕ್ಕೆ ಅಗ್ನಿ ಸುರಕ್ಷತಾ ಕ್ರಮಗಳನ್ನು ಅಳವಡಿಸಬೇಕು ಎಂದು ಆಗ್ರಹಿಸಿದರು. ಇದಕ್ಕೆ ಉತ್ತರಿಸಿದ ಪರಮೇಶ್ವರ್, ಸುರಕ್ಷತೆಗೆ ಸಂಬಂಧ ವಿಧಾನಸೌಧಕ್ಕೆ ಕೈಗೊಳ್ಳಬೇಕಾದ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಇನ್ನಷ್ಟು ಆಧುನೀಕರಣಗೊಳಿಸಲು ಮುಂದಾಗಿದ್ದೇವೆ ಎಂದರು.

ಕೃಷ್ಣಾ ಮೇಲ್ದಂಡೆ ಯೋಜನೆಗೆ ಆಂಧ್ರ, ಮಹಾರಾಷ್ಟ್ರ ಅಡ್ಡಿ

ವಿಧಾನ ಪರಿಷತ್: ಕೃಷ್ಣಾ ಮೇಲ್ದಂಡೆ ಯೋಜನೆಗೆ ಅಧಿಸೂಚನೆಗೆ ಒಮ್ಮೆ ಆಂಧ್ರ ಪ್ರದೇಶ ಮತ್ತೊಮ್ಮೆ ಮಹಾರಾಷ್ಟ್ರದವರು ಕೇಂದ್ರದ ಮೇಲೆ ಒತ್ತಡ ತಂದು ನಿಲ್ಲಿಸಿದರು ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಹೇಳಿದರು.

ಪ್ರಶ್ನೋತ್ತರ ಕಲಾಪದಲ್ಲಿ ಸದಸ್ಯ ಪಿ.ಎಚ್.ಪೂಜಾರ್ ಅವರು ಕೃಷ್ಣಾ ಮೇಲ್ದಂಡೆ ಯೋಜನೆಯ ಪ್ರಗತಿಯ ವಿಚಾರವಾಗಿ ಕೇಳಿದ ಪ್ರಶ್ನೆಗೆ ಉತ್ತರಿಸಿ, ಕೇಂದ್ರ ಜಲಶಕ್ತಿ ಸಚಿವರಾದ ಸಿ.ಆರ್.ಪಾಟೀಲ್ ಅವರು ಈ ಯೋಜನೆಯ ಪರವಾಗಿದ್ದು, ಇದಕ್ಕೆ ಅಧಿಸೂಚನೆ ಹೊರಡಿಸಲೇಬೇಕು ಎಂದು ಸಂಬಂಧಪಟ್ಟ ರಾಜ್ಯಗಳ ಸಭೆ ನಡೆಸಲು ಎರಡು ಬಾರಿ ಪ್ರಯತ್ನಿಸಿದರು. ಆದರೆ ಎರಡು ರಾಜ್ಯದವರು ದೂರವಾಣಿ ಕರೆ ಮಾಡಿ ನಿಲ್ಲಿಸಿದರು. ಕೇಂದ್ರ ಸಚಿವರನ್ನು ನಾನು, ಮುಖ್ಯಮಂತ್ರಿಯವರು ಹಾಗೂ ಕೇಂದ್ರ ಸಚಿವ ಸೋಮಣ್ಣ ಅವರು ಭೇಟಿಯಾಗಿ ಮನವಿ ಸಲ್ಲಿಸಿದ್ದೆವು ಎಂದರು.

ಯೋಜನೆ ಜಾರಿಗೆ 2 ಲಕ್ಷ ಕೋಟಿ ಬೇಕು: ಕೃಷ್ಣಾ ಮೇಲ್ದಂಡೆ ಯೋಜನೆ (3) ಜಾರಿಗೆ 2 ಲಕ್ಷಕೋಟಿ ಬೇಕಾಗುತ್ತದೆ. ಇದು ಸಾಧ್ಯವಾಗುತ್ತದೆಯೇ? ಈ ಯೋಜನೆ ವಿಚಾರದಲ್ಲಿ ದೊಡ್ಡ ಹಗರಣವೇ ನಡೆಯುತ್ತಿದೆ. ಭೂಮಿ ಪರಿಹಾರ ವಿಚಾರದಲ್ಲಿ ವಕೀಲರುಗಳು ಹಣ ಮಾಡುತ್ತಿದ್ದಾರೆ ವಿನಃ ರೈತರಿಗೆ ಪರಿಹಾರ ದೊರೆಯುವುದಿಲ್ಲ. ಆದ ಕಾರಣಕ್ಕೆ ಪರಿಷತ್ ಸದಸ್ಯರಾದ ಪೂಜಾರ್ ಅವರು ಅಲ್ಲಿನ ರೈತರನ್ನು ಸಮಾಧಾನ ಪಡಿಸಿದರೆ ಹದಿನೈದು ದಿನಗಳಲ್ಲಿ ಒಂದು ತೀರ್ಮಾನಕ್ಕೆ ಬರಲು ಸಾಧ್ಯವಾಗುತ್ತದೆ ಎಂದರು. ಸುಪ್ರೀಂಕೋರ್ಟ್‌ನಿಂದ ಎಕರೆಗೆ 8- 10 ಕೋಟಿ ಪರಿಹಾರ ನೀಡಿ ಎಂದು ಆದೇಶವಾಗಿದೆ. ಇಷ್ಟು ಪರಿಹಾರ ಮೊತ್ತ ಬೆಂಗಳೂರಿನಲ್ಲಿಯೇ ಇಲ್ಲ. ಆದ ಕಾರಣಕ್ಕೆ ಕಂದಾಯ ಇಲಾಖೆಯಿಂದ ನೀರಾವರಿ ಇಲಾಖೆಗೆ ಭೂಮಿ ಹಸ್ತಾಂತರ ಕುರಿತ ವಿಚಾರ ಸಚಿವ ಸಂಪುಟದ ಮುಂದಿಡಲಾಗಿದೆ. ಈಗಾಗಲೇ 75,563 ಎಕರೆ ಸಬ್ ಮರ್ಜ್ ಆಗಿದೆ. ಭೂ ಸ್ವಾಧೀನಕ್ಕೆ ಅಧಿಸೂಚನೆ ಹೊರಡಿಸಿರುವುದು 2,543 ಎಕರೆಗೆ ಮಾತ್ರ. ವಿವಿಧ ಹಂತಗಳಲ್ಲಿ ಅಧಿಸೂಚನೆ ಹೊರಡಿಸಿರುವ ಅಡಿ 29,568 ಎಕರೆ ಭೂಮಿಯಿದೆ. 43,452 ಎಕರೆ ಭೂಮಿಗೆ ಅಧಿಸೂಚನೆ ಹೊರಡಿಸಲು ಬಾಕಿ ಇದೆ. ಕಾಲುವೆಗಳ ನಿರ್ಮಾಣಕ್ಕೆ 51 ಸಾವಿರ ಎಕರೆ ಬೇಕಾಗಿದೆ. ಇದರಲ್ಲಿ 23 ಸಾವಿರ ಎಕರೆ ಭೂಸ್ವಾಧೀನಕ್ಕೆ ಅಧಿಸೂಚನೆ ಹೊರಡಿಸಲಾಗಿದೆ. ಆರ್‌ಸಿ ಭೂಮಿಗೆ 6,467 ಎಕರೆ ಬೇಕಾಗಿದೆ ಇದರಲ್ಲಿ ಶೇ.50 ರಷ್ಟು ಎಂದರೆ 3,392 ಎಕರೆ ಸ್ವಾಧೀನ ಪಡಿಸಿಕೊಳ್ಳಲಾಗಿದೆ ಎಂದರು.

ಕೊಳವೆ ಬಾವಿಯಿಂದ ದಿನಕ್ಕೆ 25 ಸಾವಿರ ಲೀಟರ್ ನೀರು ಹೊರತೆಗೆಯಬಹುದು

ಬೋರ್‌ವೆಲ್ ಕೊರೆಯಲು ಪ್ರಾಧಿಕಾರದ ಅನುಮತಿ ಕಡ್ಡಾಯ

ವಿಧಾನ ಪರಿಷತ್: ವಿಧಾನಸಭೆಯಲ್ಲಿ ಅಂಗೀಕಾರ ಪಡೆದಿರುವ ಅಂತರ್ಜಲ ಸಂರಕ್ಷಣೆ, ಪುನಶ್ಚೇತನಕ್ಕೆ ಒತ್ತು ನೀಡುವ ಕರ್ನಾಟಕ ಅಂತರ್ಜಲ (ಅಭಿವೃದ್ಧಿ ಮತ್ತು ನಿರ್ವಹಣೆ ವಿನಿಮಯ) ತಿದ್ದುಪಡಿ ಮಸೂದೆಯನ್ನು ವಿಧಾನಪರಿಷತ್‌ನಲ್ಲೂ ಅನುಮೋದನೆ ಪಡೆಯಲಾಯಿತು.

ತಿದ್ದುಪಡಿ ಕಾಯ್ದೆಯಂತೆ ಇನ್ನು ಮುಂದೆ ದಿನಕ್ಕೆ ನಿಗದಿತ ಪ್ರಮಾಣದಲ್ಲಿ ಮಾತ್ರವೇ ಕೊಳವೆಬಾವಿಯಿಂದ ನೀರು ಹೊರತೆಗೆಯಬೇಕಿದೆ. ಪ್ರಾಧಿಕಾರದ ಅನುಮತಿ ಪಡೆಯದೆ ಬೋರ್‌ವೆಲ್ ಕೊರೆಯುವಂತಿಲ್ಲ. ಖಾಸಗಿ ಟ್ಯಾಂಕರ್‌ಗಳ ಮಾಲೀಕರು ನೀರು ತೆಗೆಯಲು ಎನ್‌ಓಸಿ ಪಡೆಯುವುದು ಕಡ್ಡಾಯವಾಗಿರಲಿದೆ. ಪ್ಯಾಕೆಟ್ ಕುಡಿಯುವ ನೀರು ತಯಾರಕರಿಗೆ 1 ರಿಂದ 25 ಸಾವಿರ ಲೀಟರ್‌ವರೆಗೆ ಯಾವುದೇ ಶುಲ್ಕ ಇರುವುದಿಲ್ಲ ಎಂಬ ನಿಯಮ ತಿದ್ದುಪಡಿ ಮಸೂದೆಯಲ್ಲಿ ಸೇರಿಸಲಾಗಿದೆ.

ಇದಲ್ಲದೇ, ಗಣಿ- ಕೈಗಾರಿಕೆ ಸೇರಿದಂತೆ ಇನ್ನಿತರ ಮೂಲಸೌಕರ್ಯಗಳಿಗೆ 25 ಸಾವಿರ ಲೀಟರ್‌ನಿಂದ 2 ಲಕ್ಷ ಲೀಟರ್ ನೀರು ಬಳಸಿದರೆ ಪ್ರತಿ ಸಾವಿರ ಲೀಟರ್‌ಗೆ 1 ರು. ಶುಲ್ಕ, ಅಪಾರ್ಟ್‌ಮೆಂಟ್ ಹಾಗೂ ಗ್ರೂಪ್ ಹೌಸ್‌ಗಳು 2 ಲಕ್ಷ ಲೀಟರ್‌ಗಿಂತ ಹೆಚ್ಚು ನೀರು ಹೊರ ತೆಗೆದರೆ ಸಾವಿರ ಲೀಟರ್‌ಗೆ 2 ರು. ಶುಲ್ಕ ಪಾವತಿಸಬೇಕಿದೆ.

ನಿಯಮ ಮೀರಿದರೆ ಗರಿಷ್ಠ 25 ಸಾವಿರ ದಂಡ ಪಾವತಿಸುವಂತೆ ಮಸೂದೆಯಲ್ಲಿ ತಿದ್ದುಪಡಿ ತರಲಾಗಿದೆ.

ಬಯಲುಸೀಮೆಗಳಲ್ಲಿ ಜಲ ಕೊರತೆ: ಈ ಬಗ್ಗೆ ಮಾತನಾಡಿದ ಸದಸ್ಯ ರವಿಕುಮಾರ್, ಅಂತರ್ಜಲ ದಿನೇ ದಿನೇ ಕುಸಿಯುತ್ತಿದೆ. ಬಯಲುಸೀಮೆ ಪ್ರದೇಶಗಳಾಗಿರುವ ಕೋಲಾರ, ಚಿಕ್ಕಬಳ್ಳಾಪುರದಲ್ಲಿ 1800 ಅಡಿ ಕೊರೆದರೆ ನೀರು ಬರುತ್ತಿಲ್ಲ. ಇದರಿಂದ, ಫ್ಲೋರೈಡ್‌ಯುಕ್ತ ನೀರು ಕುಡಿಯುವುದು ಅನಿವಾರ್ಯವಾಗಿದೆ ಎಂದು ಕಳವಳ ವ್ಯಕ್ತಪಡಿಸಿದರು.

ಕೆ.ಸಿ. ವ್ಯಾಲಿ ಯೋಜನೆಯಿಂದಾಗಿ 300 ಅಡಿಗೆ ನೀರು ಸಿಗುತ್ತಿದೆ ಎಂಬ ಕಾಂಗ್ರೆಸ್ ಸದಸ್ಯ ನಜೀರ್ ಅಹಮದ್ ಮಾತಿಗೆ ಪ್ರತಿಕ್ರಿಯಿಸಿದ ಅವರು, ಬೆಂಗಳೂರು ಸುತ್ತಮುತ್ತ ಬೆಳೆಯುವ ತರಕಾರಿಗೂ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಬೆಳೆಯುವ ತರಕಾರಿಗೆ ವ್ಯತ್ಯಾಸವಿದೆ. ವಿಷಕಾರಿ ತರಕಾರಿ ಸೇವಿಸುತ್ತಿದ್ದೇವೆ. ಹೀಗಾಗಿ, ಅಂತರ್ಜಲ ಸಂರಕ್ಷಣೆ ತಿದ್ದುಪಡಿ ವಿಧೇಯಕ ಸ್ವಾಗತಾರ್ಹ ಎಂದರು.

ಬಳಿಕ ಸಚಿವ ಬೋಸರಾಜು ಮಾತನಾಡಿ, ಅಂತರ್ಜಲ ಕುಸಿತ ತಪ್ಪಿಸಲು ಹಾಗೂ ಶುದ್ಧ ನೀರು ಒದಗಿಸಲು ನಾನಾ ರೀತಿಯ ಯೋಜನೆಗಳನ್ನ ಹಮ್ಮಿಕೊಳ್ಳಲಾಗುತ್ತಿದೆ. ಕೇಂದ್ರ ಸರಕಾರದ ಸೂಚನೆಯಂತೆ ಕಾಯ್ದೆಗೆ ತಿದ್ದುಪಡಿ ತರಲಾಗಿದೆ. ಅಂತರ್ಜಲ ಕುಸಿತದಲ್ಲಿ ಕರ್ನಾಟಕ ಏಳನೇ ಸ್ಥಾನದಲ್ಲಿದೆ ಎಂದು ಕೇಂದ್ರವು ವರದಿ ನೀಡಿದೆ. 2024ರ ಅಧ್ಯಯನ ಪ್ರಕಾರ ರಾಜ್ಯದ 44 ತಾಲೂಕುಗಳು ಶೇ.100ರಷ್ಟು ಅಂತರ್ಜಲ ಕುಸಿತವಾಗಿದೆ. 15 ತಾಲೂಕುಗಳು ಅಪಾಯದ ಮಟ್ಟದಲ್ಲಿವೆ. 33 ತಾಲೂಕಗಳು ಅಪಾಯದಂಚಿನಲ್ಲಿದೆ. 70 ತಾಲೂಕುಗಳಲ್ಲಿ ಅಂತರ್ಜಲ ಮಟ್ಟ ಸುರಕ್ಷಿತವಾಗಿದೆ ಎಂದು ತಿಳಿಸಿದರು. ಆಡಳಿತ ಹಾಗೂ ವಿರೋಧ ಪಕ್ಷದ ಸದಸ್ಯರು ಕುಸಿಯುತ್ತಿರುವ ಅಂತರ್ಜಲದ ಬಗ್ಗೆ ಆತಂಕ ವ್ಯಕ್ತಪಡಿಸಿ ಸಲಹೆ- ಸೂಚನೆಗಳನ್ನು ನೀಡಿದರು.

ಕೆರೆಗಳಿಗೆ ನೀರು ತುಂಬಿಸುವ ಕಾರ್ಯ

ಕೇಂದ್ರದ ಅಟಲ್ ಭೂ ಜಲ ಯೋಜನೆಯಡಿ ಕೆರೆಗಳಿಗೆ ನೀರು ತುಂಬಿಸುವ ಕಾರ್ಯ ಪ್ರಗತಿಯಲ್ಲಿದೆ. 14 ಜಿಲ್ಲೆಗಳ ವ್ಯಾಪ್ತಿಯ 44 ತಾಲೂಕುಗಳ 1198 ಪಂಚಾಯಿತಿಗಳಲ್ಲಿ ಕಾಮಗಾರಿ ಮುಗಿದಿದ್ದು, 860 ಕೋಟಿ ರು. ವೆಚ್ಚವಾಗಿದೆ. ಇದರಲ್ಲಿ 240 ಕೋಟಿ ಬಾಕಿಯಿದ್ದು, ಈ ಹಣ ಬಿಡುಗಡೆ ಮಾಡುವಂತೆ ಕೇಂದ್ರಕ್ಕೆ ಮನವಿ ಮಾಡಲಾಗಿದೆ. ಬೆಂಗಳೂರು ನಗರದಲ್ಲಿ ಜಲಮಂಡಳಿಯು ಸಾವಿರಾರು ಕೋಟಿ ವೆಚ್ಚದಲ್ಲಿ ಕೆ.ಸಿ.ವ್ಯಾಲಿ ಯೋಜನೆ ಕೈಗೆತ್ತಿಕೊಂಡಿದ್ದು, 146 ಕೆರೆಗಳ ತುಂಬಿಸುವ ಕೆಲಸವಾಗುತ್ತಿದೆ. ರಾಜಕಾಲುವೆ ನೀರನ್ನು ಎರಡು ಹಂತಗಳಲ್ಲಿ ಶುದ್ಧೀಕರಿಸಲಾಗುತ್ತಿದೆ. ವೃಷಭಾವತಿ ಕಾಲುವೆ ಮೂಲಕ ಸುತ್ತಮುತ್ತಲಿನ 19 ಕೆರೆಗಳಿಗೆ ನೀರು ತುಂಬಿಸುವ ಕೆಲಸ ಮಾಡುತ್ತಿದ್ದೇವೆ. ಅಂತರ್ಜಲ ಸಂರಕ್ಷಣೆ ಹಾಗೂ ಪುನಶ್ಚೇತನಕ್ಕಾಗಿ ರಾಜ್ಯದೆಲ್ಲೆಡೆ ನೀರೇ ಭವಿಷ್ಯ ಕಾರ್ಯಕ್ರಮ ಹಮ್ಮಿಕೊಂಡು ಜಾಗೃತಿ ಮೂಡಿಸುವ ಕೆಲಸ ಮಾಡುತ್ತಿದ್ದೇವೆ ಎಂದು ಸಚಿವ ಬೋಸರಾಜು ಹೇಳಿದರು.

ಕಳೆದ ಮೂರು ವರ್ಷಗಳಲ್ಲಿ 14,485 ಪ್ರಕರಣ ದಾಖಲು: ಜಿ.ಪರಮೇಶ್ವರ್

ಒಂದೇ ವರ್ಷದಲ್ಲಿ ಡ್ರಗ್ಸ್ ನಿರ್ಮೂಲನೆ ಸಾಧ್ಯವಿಲ್ಲ

ವಿಧಾನ ಪರಿಷತ್: ಡ್ರಗ್ಸ್ ಮುಕ್ತ ಕರ್ನಾಟಕ ಮಾಡುವುದು ರಾಜ್ಯ ಸರಕಾರದ ಗುರಿಯಾಗಿದ್ದು ಈ ನಿಟ್ಟಿನಲ್ಲಿ ಕಾರ್ಯನ್ಮುರಾಗಿದ್ದೇವೆ. ಒಂದು ವರ್ಷದಲ್ಲಿ ಡ್ರಗ್ಸ್ ನಿರ್ಮೂಲನೆ ಸಾಧ್ಯವಿಲ್ಲ. ಈ ಪಿಡುಗಿನ ವಿರುದ್ಧ ನಿರಂತರವಾಗಿ ಕಾರ್ಯಾಚರಣೆ ನಡೆಸುತ್ತಿದ್ದು ಕಳೆದ ಮೂರು ವರ್ಷಗಳಲ್ಲಿ 14,485 ಪ್ರಕರಣ ದಾಖಲಿಸಲಾಗಿದೆ ಎಂದು ಗೃಹ ಸಚಿವ ಜಿ.ಪರಮೇಶ್ವರ್ ಪರಿಷತ್‌ನಲ್ಲಿ ಮಾಹಿತಿ ನೀಡಿದರು.

ಪ್ರಶ್ನೋತ್ತರ ಅವಧಿಯಲ್ಲಿ ಬಿಜೆಪಿ ಸದಸ್ಯ ಎನ್.ರವಿಕುಮಾರ್ ಮಾತನಾಡಿ, ರಾಜ್ಯದಲ್ಲಿ ಇಂದು ಡ್ರಗ್ಸ್ ಮಹಾ ಹೆಮ್ಮಾರಿಯಾಗಿ ಪರಿಣಮಿಸಿದೆ. ಹಳ್ಳಿ-ಹಳ್ಳಿಗಳಲ್ಲಿ ಮಾದಕವಸ್ತುವಿನ ಜಾಲ ತಲುಪಿದೆ. ಕೊರಿಯರ್ ಮೂಲಕ ಡ್ರಗ್ಸ್ ಸಾಗಾಟವಾಗುತ್ತಿದೆ ಈ ಬಗ್ಗೆ ಸರಕಾರ ಕೈಗೊಂಡಿರುವ ಕ್ರಮಗಳ ಬಗ್ಗೆ ಪ್ರಶ್ನಿಸಿದರು. ಇದಕ್ಕೆ ಉತ್ತರಿಸಿದ ಸಚಿವರು ಡ್ರಗ್ಸ್ ಜಾಲದ ವಿರುದ್ಧ ನಿರಂತರವಾಗಿ ಸಮರ ಸಾರುತ್ತಿದ್ದೇವೆ. ಎನ್ ಡಿಪಿಎಸ್ ಅಡಿಯಲ್ಲಿ ಕಳೆದ ಮೂರು ವರ್ಷಗಳಲ್ಲಿ 14,485 ಪ್ರಕರಣ ದಾಖಲಿಸಿಕೊಳ್ಳಲಾಗದೆ. ಈ ಪೈಕಿ 5,304 ಪ್ರಕರಣದಲ್ಲಿ ಶಿಕ್ಷೆಯಾಗಿದೆ. ಇನ್ನುಳಿದ ಪ್ರಕರಣಗಳು ವಿಚಾರಣೆ ಹಂತದಲ್ಲಿವೆ. ವೈಜ್ಞಾನಿಕ ಸಾಕ್ಷ್ಯಗಳ ಕೊರತೆ, ತನಿಖಾ ನ್ಯೂನತೆಗಳು, ಚಾರ್ಜ್‌ಶೀಟ್ ದೋಷ ಸಲ್ಲಿಕೆ ವಿಳಂಬ ಸೇರಿದಂತೆ ವಿವಿಧ ಕಾರಣದಿಂದ ಆರೋಪಿಗಳಿಗೆ ಶಿಕ್ಷೆ ಕೊಡಿಸಲು ವಿಫಲವಾಗುತ್ತಿವೆ ಎಂದು ಸಚಿವರು ಉತ್ತರದಲ್ಲಿ ತಿಳಿಸಿದ್ದಾರೆ.

200 ಮಂದಿ ದೇಶದಿಂದ ಗಡಿಪಾರು

ಕಳೆದ ಮೂರು ವರ್ಷಗಳಲ್ಲಿ ಡ್ರಗ್ಸ್ ದಂಧೆಯಲ್ಲಿ ತೊಡಗಿದ್ದ 318 ವಿದೇಶಿ ಪ್ರಜೆಗಳನ್ನು ಬಂಧಿಸಲಾಗಿದೆ. ಈ ಪೈಕಿ 200 ಮಂದಿಯನ್ನ ದೇಶದಿಂದ ಗಡಿಪಾರು ಮಾಡಲಾಗಿದೆ. ಆಯಾ ಠಾಣಾ ವ್ಯಾಪ್ತಿಯ ಪೊಲೀಸರು ಕಡ್ಡಾಯವಾಗಿ ತಿಂಗಳಿಗೊಮ್ಮೆ ಕಾಲೇಜಿಗೆ ತೆರಳಿ ಡ್ರಗ್ಸ್ ಬಗ್ಗೆ ಜಾಗೃತಿ ಮೂಡಿಸುವಂತೆ ಸೂಚನೆ ನೀಡಿದ್ದೇನೆ. ಆ್ಯಂಟಿ ಡ್ರಗ್ ಕ್ಯಾಂಪೇನ್ ಮೂಲಕ 15 ಲಕ್ಷ ವಿದ್ಯಾರ್ಥಿಗಳಿಗೆ ಈ ಬಗ್ಗೆ ಅರಿವು ಮೂಡಿಸಲಾಗಿದೆ. ಡ್ರಗ್ಸ್ ಪ್ರಕರಣಗಳನ್ನ ಬೇಧಿಸಲು ಪ್ರತ್ಯೇಕವಾಗಿ ನಾರ್ಕೋಟಿಕ್ ಕಂಟ್ರೋಲ್ ಬ್ಯೂರೊ ಸ್ಥಾಪಿಸಲಾಗಿದೆ ಎಂದು ಗೃಹ ಸಚಿವ ಜಿ.ಪರಮೇಶ್ವರ್ ಹೇಳಿದರು.

ವಿಶ್ವವಾಣಿ

ಸಂಪಾದಕೀಯ

ಇದು ಶ್ಲಾಘನೀಯ ಹೆಜ್ಜೆ

ನಮ್ಮ ಸಮಾಜದ ವಿವಿಧ ಸ್ತರಗಳಲ್ಲಿ ತನ್ನ ಕಬಂಧಬಾಹುವನ್ನು ಚಾಚಿ, ಯುವಶಕ್ತಿ ಸೇರಿದಂತೆ ಬಹುಜನರನ್ನು ಒಂದೇ ಗುಕ್ಕಿಗೆ ಆಪೋಶನ ತೆಗೆದುಕೊಳ್ಳುತ್ತಿರುವ ಆನ್‌ಲೈನ್ ಗೇಮಿಂಗ್ ಎಂಬ ಪಿಡುಗಿಗೆ ಕಡಿವಾಣ ಹಾಕಬೇಕು ಎಂಬ ಕೂಗು ಬಹಳ ದಿನಗಳಿಂದ ಕೇಳಿಬರುತ್ತಿತ್ತು. ಅದಕ್ಕೀಗ ಕಾಲ ಕೂಡಿಬಂದಿರುವುದು ಸಂತಸದ ಬೆಳವಣಿಗೆ. 'ಆನ್‌ಲೈನ್ ಗೇಮಿಂಗ್ ಪ್ರಚಾರ ಮತ್ತು ನಿಯಂತ್ರಣ ವಿಧೇಯಕ-2025'ಕ್ಕೆ ಲೋಕಸಭೆಯಲ್ಲಿ ಹಸಿರು ನಿಶಾನೆ ಸಿಕ್ಕಿರುವುದು ಬಹುಜನರ ದನಿಗೆ ಒದಗಿದ ಭರವಸೆಯ ಪ್ರತಿಧ್ವನಿಯಾಗಿದೆ ಎಂದರೆ ಅತಿಶಯೋಕ್ತಿ ಆಗಲಾರದು. ದೇಶದ ಜನಸಂಖ್ಯೆಯ ಹತ್ತತ್ತಿರ ಮೂರನೇ ಒಂದು ಭಾಗದಷ್ಟು ಮಂದಿ ಜೂಜಾಟ, ಬೆಟ್ಟಿಂಗ್ ಸೇರಿದಂತೆ ಆನ್‌ಲೈನ್ ಗೇಮ್‌ಗಳ ಚಾಳಿಗೆ ಸಿಲುಕಿ ಪ್ರತಿ ವರ್ಷವೂ 20,000 ಕೋಟಿ ರುಪಾಯಿಗಳನ್ನು ಕಳೆದುಕೊಳ್ಳುತ್ತಿದ್ದಾರೆ ಎಂಬ ಆಘಾತಕಾರಿ ಸಂಗತಿಯು ಇದೇ ಸಂದರ್ಭದಲ್ಲಿ ಹೊರಬಿದ್ದಿದೆ. ವ್ಯಕ್ತಿಗತ ಮತ್ತು ಕೌಟುಂಬಿಕ ನೆಲೆಯಲ್ಲಿ ಉದ್ಧಾರವಾಗುವುದರ ಜತೆಗೆ ದೇಶವನ್ನೂ ಪ್ರಗತಿಪಥದತ್ತ ಕೊಂಡೊಯ್ಯಬೇಕಾದ ಜನರೇ ಇಂಥ 'ಅಧಃಪತನಕಾರಿ' ಹವ್ಯಾಸಗಳಲ್ಲಿ ಸಿಲುಕಿಕೊಳ್ಳುವುದು ದುರಂತದ ಸಂಗತಿ. ಇಂಥ ಪಿಡುಗುಗಳ ಅಸ್ತಿತ್ವ ಮತ್ತು ಹರಡಿಕೆಯ ಬಗ್ಗೆ ಗೊತ್ತಿದ್ದೂ ಆಳುಗರು ಅವಕ್ಕೆ ಲಗಾಮು ಹಾಕದಿದ್ದರೆ ಅದು ಕೂಡ ನಿರ್ಲಕ್ಷ್ಯದ ಪರಮಾವಧಿಯೇ ಆಗುತ್ತದೆ. ಒಟ್ಟಿನಲ್ಲಿ ತಡವಾಗಿಯಾದರೂ ಒಂದು ದಮನಕಾರಿ ಹೆಜ್ಜೆಯನ್ನು ಇಟ್ಟಂತಾಗಿದೆ. ಸಮಾಜಕ್ಕೆ ಕಂಟಕವಾಗಿ ಕಾಡುತ್ತಿರುವ ಮಿಕ್ಕ ಸಾಮಾಜಿಕ ಪಿಡುಗುಗಳ ಮೂಲೋತ್ಪಾಟನೆಗೂ ಆಳುಗರು ಇಂಥದೇ ಉಪಕ್ರಮಗಳಿಗೆ ಮುಂದಾಗಲಿ ಎಂಬುದು ಸಹೃದಯಿಗಳ ಆಶಯ ಮತ್ತು ನಿರೀಕ್ಷೆ. ಆಗ ಮಾತ್ರವೇ ಸ್ವಸ್ಥ ಸಮಾಜ ರೂಪುಗೊಂಡೀತು, ದೇಶವು ಪ್ರಗತಿ ಪಥದಲ್ಲಿ ಮತ್ತಷ್ಟು ಉತ್ಸಾಹಭರಿತವಾಗಿ ಹೆಜ್ಜೆಹಾಕಲು ಅದು ಪೂರಕವಾದೀತು.

ಸೊಂಪಾದಕೀಯ

30 ದಿನಗಳಲ್ಲಿ ಜೈಲು ಸೇರಿರಿ

ಗಂಭೀರ ಕ್ರಿಮಿನಲ್ ಆಪಾದನೆಗಳ ಮೇಲೆ ಕನಿಷ್ಠ 5 ವರ್ಷ ಜೈಲುಶಿಕ್ಷೆಗೆ ಅರ್ಹವಾದ ಪ್ರಕರಣಗಳಲ್ಲಿ ಬಂಧನಕ್ಕೊಳಗಾದ ಅಥವಾ ತನಿಖಾ ಸಂಸ್ಥೆಗಳು ವಶಕ್ಕೆ ಪಡೆದ ಪ್ರಧಾನಿ, ಕೇಂದ್ರ ಮಂತ್ರಿಗಳು, ಮುಖ್ಯಮಂತ್ರಿಗಳು, ಸಚಿವರನ್ನು ಹುದ್ದೆಯಿಂದ ವಜಾಗೊಳಿಸುವ ವಿಧೇಯಕವನ್ನು ಮಂಡಿಸಲಾಗಿದೆ. ಇಂಥ ಪ್ರಕರಣಗಳಲ್ಲಿ 30 ದಿನ ಬಂಧನ ಅಥವಾ ತನಿಖೆಗಾಗಿ ವಶಕ್ಕೆ ಪಡೆದಿದ್ದರೆ ಅಂಥವರ ಹುದ್ದೆ ತಾನೇತಾನಾಗಿ ಅನರ್ಹವಾಗುತ್ತದೆ. ಈ ಒಂದು ವಿಧೇಯಕವನ್ನು ಮಂಡಿಸಿರೋದು ನಕಲಿ ಎನ್‌ಕೌಂಟರ್ ಪ್ರಕರಣದಲ್ಲಿ ಜೈಲು ಸೇರಿದ್ದ ನಮ್ಮ ಕೇಂದ್ರ ಗೃಹಮಂತ್ರಿಗಳಾದ ಅಮಿತ್ ಶಾ ಅವರು. ಹಾಗಾಗಿ ಈ ವಿಷಯದ ಬಗ್ಗೆ ನಮ್ಮ ಪ್ರತಿಪಕ್ಷಗಳು ಅವರಿಗೆ ಕೌಂಟರ್ ನೀಡುತ್ತಿವೆ.

ಈ ಬಗ್ಗೆ ಲೋಕಸಭೆಯಲ್ಲಿ ಕೋಲಾಹಲ ನಡೆದು ಪ್ರತಿಪಕ್ಷಗಳ ನಾಯಕರು ವಿಧೇಯಕವನ್ನು ಹರಿದು ಹಾಕಿ ಕಿಡಿಕಾರಿದ್ದಾರೆ. ಪ್ರತಿ ಪಕ್ಷಗಳ ಆಕ್ರೋಶದಲ್ಲೂ ಅರ್ಥ ಇದೆ. ಯಾಕಂದ್ರೆ, ಈ ವಿಧೇಯಕ ಮಂಡಿಸುತ್ತಾ ಇರೋದು ಬಿಜೆಪಿ ಕೈಯಲ್ಲಿರುವ ಸರಕಾರ. ಹೇಳಿ ಕೇಳಿ ವಿರೋಧ ಪಕ್ಷಗಳ ನಾಯಕರುಗಳನ್ನು ಹಣಿಯಲು ಅಧಿಕಾರವನ್ನು ಬಳಸಿಕೊಳ್ಳೋದ್ರಲ್ಲಿ ಬಿಜೆಪಿ ಎತ್ತಿದ ಕೈ. ಹಾಗಾಗಿ ಕೈ ಪಕ್ಷ ಸೇರಿದಂತೆ ಹಲವು ಪಕ್ಷಗಳ ನಾಯಕರು ಈ ವಿಧೇಯಕದ ವಿರುದ್ಧ ನಿಂತಿದ್ದಾರೆ. ಕೇಂದ್ರದಲ್ಲಿ ಬಿಜೆಪಿ ಸರಕಾರ ಅಲುಗಾಡುತ್ತಿರುವ ಹೊತ್ತಿನಲ್ಲೇ ಇಂಥ ನಿಯಮಗಳನ್ನು ಅಮಿತ್ ಶಾ ಮಂಡಿಸಿರೋದು ಎಲ್ಲರ ವಿರೋಧಕ್ಕೆ ಕಾರಣ. ಅಂಥ ಪರಿಸ್ಥಿತಿ ಬಂದರೆ ಇದನ್ನು ವಿರೋಧ ಪಕ್ಷಗಳ ಆಡಳಿತ ಇರೋ ರಾಜ್ಯಗಳ ಮುಖ್ಯಮಂತ್ರಿಗಳ ವಿರುದ್ಧ, ತಮ್ಮ ಸರಕಾರಕ್ಕೆ ಆತಂಕ ತರುವಂಥ ವಿರೋಧಿ ನಾಯಕರ ವಿರುದ್ಧ ಅಸ್ತ್ರವಾಗಿ ಬಳಸೋದನ್ನು ಬಿಜೆಪಿ ಮಾಡಲ್ಲ ಅನ್ನೋದಕ್ಕೆ ಯಾವ ಗ್ಯಾರಂಟಿಯೂ ಇಲ್ಲ. ಯಾವುದಾದರೂ ಇಲ್ಲದ ಆರೋಪ ಹೊರಿಸಿ ಅವರನ್ನು 30 ದಿನ ಜೈಲಿನಲ್ಲಿ ಇರುವಂತೆ ಮಾಡಿ ಅವರನ್ನು ತನ್ನ ದಾರಿಯಿಂದ ಆಚೆಗಟ್ಟೋದು ಬಿಜೆಪಿಗೆ ದೊಡ್ಡ ಕೆಲಸ ಏನಲ್ಲ. ಈಗಾಗಲೇ ಸಿಬಿಐ, ಐಟಿ, ಇ.ಡಿ.ಗಳ ಮೂಲಕ ಬಿಜೆಪಿ ಇಂಥ ಕೆಲಸ ಮಾಡಿದ ಅನೇಕ ಉದಾಹರಣೆಗಳು ನಮ್ಮ ಕಣ್ಣ ಮುಂದೆ ಇರುವಾಗ ಕುರಿಮಂದೆಗಳಂತೆ ಬಿಜೆಪಿಯ ಈ ಹೊಸ ನಿಯಮವನ್ನು ಯಾರೂ ಒಪ್ಪಿಕೊಳ್ಳೋದು ಕಷ್ಟವೇ ಬಿಡಿ.

ಸಂಪಾದಕರ ಸದ್ಯಶೋಧನೆ

ಐದಾರು ಪ್ಯಾರಗಳಲ್ಲಿ ಡಾ.ಕಲಾಂ

ಕೆಲವರನ್ನು ಅರ್ಥ ಮಾಡಿಕೊಳ್ಳಲು ಅವರ ಜತೆ ಇಪ್ಪತ್ತು-ಮೂವತ್ತು ವರ್ಷ ಒಡನಾಡಬೇಕಿಲ್ಲ. ಮುಖತಃ ಭೇಟಿ ಮಾಡಿ ಅರ್ಧ ಗಂಟೆ ಮಾತಾಡಿದರೂ ಸಾಕು. ಅಂದಿನ ರಾಷ್ಟ್ರಪತಿ ಡಾ.ಅಬ್ದುಲ್ ಕಲಾಂ ಅವರು ನಿವೃತ್ತರಾಗುವುದಕ್ಕಿಂತ (2007ರಲ್ಲಿ) ಕೆಲ ದಿನಗಳ ಮೊದಲು, ಪತ್ರಕರ್ತ ಮತ್ತು ಸಾಹಿತಿ ಖುಷವಂತ್ ಸಿಂಗ್ ಅವರನ್ನು ಭೇಟಿ ಮಾಡಿದ್ದರು. ಆ ಭೇಟಿಯ ಬಗ್ಗೆ ಖುಷವಂತ್ ಸಿಂಗ್ ತಮ್ಮ ಅಂಕಣದಲ್ಲಿ ಬರೆದಿದ್ದರು. ಕೆಲ ತಿಂಗಳ ಹಿಂದೆ ನನ್ನ ಹಳೆಯ ಕಡತದಲ್ಲಿ ಸಿಂಗ್ ಬರೆದ ಆ ಬರಹ ಸಿಕ್ಕಿತು. ಅವರು ಡಾ.ಕಲಾಂ ಕುರಿತು ಹೀಗೆ ಬರೆದಿದ್ದರು: ''ಇನ್ನು ಕೆಲವೇ ತಿಂಗಳುಗಳಲ್ಲಿ, ಭಾರತದ ಹನ್ನೊಂದನೇ ರಾಷ್ಟ್ರಪತಿಯಾಗಿ ಐದು ವರ್ಷ ಪೂರ್ಣ ಅವಧಿ ಅಧಿಕಾರ ಪೂರೈಸಲಿರುವ ಡಾ.ಅಬ್ದುಲ್ ಕಲಾಂ ನಿವೃತ್ತರಾಗಲಿದ್ದಾರೆ. ಈ ಹುದ್ದೆಯನ್ನು ಅಲಂಕರಿಸಿದ ಮುಸ್ಲಿಮರ ಪೈಕಿ ಡಾ.ಕಲಾಂ ಮೂರನೆಯವರಾಗಿದ್ದಾರೆ. ಸೆಕ್ಯುಲರ್ ಡೆಮಾಕ್ರಸಿ ಎಂದು ಭಾರತ ಕರೆಯಿಸಿಕೊಂಡಿದ್ದು ಸಾರ್ಥಕವಾಯಿತು. ಅಲ್ಲದೇ ಇದರಿಂದ ನಮ್ಮ ನೆರೆಹೊರೆಯವರಿಗೆ ಒಂದು ಉತ್ತಮ ಸಂದೇಶವೂ ಹೋದಂತೆ ಆಗಿದೆ. ನಿವೃತ್ತರಾದ ಬಳಿಕ ಡಾ.ಕಲಾಂ ತಮ್ಮ ವೈಜ್ಞಾನಿಕ ಸಂಶೋಧನೆಯನ್ನು ಮುಂದುವರಿಸುತ್ತಾರಾ, ವಿಶ್ವವಿದ್ಯಾಲಯದಲ್ಲಿ ಉಪನ್ಯಾಸಕ ಸೇವೆ ಕೈಗೆತ್ತಿಕೊಳ್ಳುತ್ತಾರಾ ಅಥವಾ ಸನ್ಯಾಸತ್ವ ಹೊಂದುತ್ತಾರಾ ಎಂಬ ಬಗ್ಗೆ ನನಗೇನೂ ಗೊತ್ತಿಲ್ಲ. ನನಗೆ ಅವರ ಜತೆ ಅರ್ಧ ಗಂಟೆ ಕಳೆಯುವ ಸದವಕಾಶ ಸಿಕ್ಕಿತ್ತು. ಅವರು ನಾನು ವಾಸಿಸುವ ಅಪಾರ್ಟ್‌ಮೆಂಟಿಗೆ ಬಂದಿದ್ದು ನನಗೆ ನೀಡಿದ ಗೌರವ ಎಂದು ಭಾವಿಸುವೆ. ನನ್ನಂಥ ಪೆನ್ನು-ಪುಸ್ತಕ ನೆಚ್ಚಿಕೊಂಡಿರುವವನ ಮನೆಗೆ ಈ ದೇಶದ ಅತ್ಯುನ್ನತ ಹುದ್ದೆಯಲ್ಲಿರುವವರೊಬ್ಬರು ಬರುವುದು ಅವರ ನಮ್ರತೆಯನ್ನು ತೋರಿಸುತ್ತದೆ. ನಮ್ಮಿಬ್ಬರ ನಡುವೆ ಸಾಮಾನ್ಯ ಎನಿಸುವ ಸಂಗತಿಗಳು ಕೆಲವೇ ಕೆಲವಿರಬಹುದು. ಅವರು ತಮಿಳಿಗ. ನನಗೆ 'ವಣಕ್ಕಮ್' ಮತ್ತು 'ಅಯ್ಯಯ್ಯೋ' ಎಂಬ ಎರಡು ತಮಿಳು ಪದಗಳು ಮಾತ್ರ ಗೊತ್ತು. ವಿಜ್ಞಾನಿಯಾದರೂ ಅವರು ಅಪ್ಪಟ ಧಾರ್ಮಿಕ ವ್ಯಕ್ತಿ. ನಾನು ನಾಸ್ತಿಕ. ವಿಜ್ಞಾನ ಮತ್ತು ಧರ್ಮ ಒಟ್ಟಿಗೆ ಹೋಗಲಾರವು ಎಂದು ನಂಬಿದವನು ನಾನು. ಒಂದು ಕಾರಣ (Reason) ಆಧರಿತ, ಮತ್ತೊಂದು ನಂಬಿಕೆ (Faith) ಆಧರಿತ. ಅವರ ಬರಹಗಳನ್ನು ಓದಿದ ಮತ್ತು ಅವರೊಂದಿಗೆ ಮಾತಾಡಿದ ನಂತರ ನನಗೆ ಮಹಾತ್ಮ ಗಾಂಧಿಯವರ ಧಾರ್ಮಿಕ ನಂಬಿಕೆಗಳಂತೆ ಡಾ.ಕಲಾಂ ಅವರದ್ದೂ ಅದೇ ರೀತಿಯದ್ದು ಎಂದೆನಿಸಿತು. ಬಾಪು ಅವರ ಎಲ್ಲ ವಿಚಾರಗಳನ್ನು ಸ್ವೀಕರಿಸಲು ಅಸಮರ್ಥನಾದರೂ, ನಾನು ನನ್ನನ್ನು ಗಾಂಧಿವಾದಿ ಎಂದು ಕರೆದುಕೊಳ್ಳುತ್ತೇನೆ. ಡಾ.ಕಲಾಂ ಅವರು ವಿಜ್ಞಾನ ಮತ್ತು ಧರ್ಮದ ಮಧ್ಯೆ ಯಾವ ವೈರುಧ್ಯ ಅಥವಾ ಸಂಘರ್ಷಗಳನ್ನು ಕಾಣುವುದಿಲ್ಲ. ಅವರೊಂದಿಗೆ ಮಾತಾಡುವಾಗ, 'ಸ್ವರ್ಗ ಮತ್ತು ನರಕ ಎಂಬುದಿಲ್ಲ. ಅವೇನಾದರೂ ಇದ್ದರೆ ನಮ್ಮ ಮನಸ್ಸಿನಲ್ಲಿ ಮಾತ್ರ' ಎಂದು ಹೇಳಿದರು. ಹಾಗಾದರೆ ಡಾ.ಕಲಾಂ ಅವರ ಪ್ರಕಾರ ದೇವರು ಅಂದರೆ ಯಾರು? ಈ ಪ್ರಶ್ನೆಗೆ ಅವರಲ್ಲಿ ಸ್ಪಷ್ಟತೆ ಇದೆ. ಈಶ್ವರ-ಅಲ್ಲಾಹ್, ಖುದಾ-ಭಗವಾನ್ ಮತ್ತು ಮಸೀದಿ-ದೇವಾಲಯ ಎಂಬ ದ್ವಂದ್ವ ಇಲ್ಲ. ಪ್ರೀತಿಯೊಂದೇ ಅವರ ಉದ್ದೇಶ. ಆದರೆ ನಾವು ದ್ವೇಷಕ್ಕೆ ನಮ್ಮ ಶಕ್ತಿಯನ್ನು ವ್ಯಯಿಸುತ್ತಿದ್ದೇವೆ. ನಮ್ಮ ನಮ್ಮ ಸಂತಸವನ್ನು ಕೊಂದು ಜೀವನವನ್ನು ಹೈರಾಣ ಮಾಡಿಕೊಳ್ಳುತ್ತಿದ್ದೇವೆ. ಖುದಾ ಮತ್ತು ರಾಮ ಇಬ್ಬರೂ ಒಂದೇ. ಪ್ರೀತಿಯಲ್ಲಿ ಮಾತ್ರ ಇವರಿಬ್ಬರೂ ಒಂದೇ ಆಗುತ್ತಾರೆ. ಇದನ್ನು ಡಾ.ಕಲಾಂ ಒಂದು ಕವಿತೆ ಮೂಲಕ ವಿವರಿಸಿದರು. ಡಾ.ಕಲಾಂ ಅವರ ದೈವತ್ವ ಕಲ್ಪನೆಗೆ ಯಾವ ರಾಷ್ಟ್ರೀಯವಾದಿಯೂ ತಕರಾರು ತೆಗೆಯಲಾರ. ಕೆಲವರು ದೇವರು ಅಂದ್ರೆ ಸತ್ಯ ಎಂದು ಪ್ರತಿಪಾದಿಸುತ್ತಾರೆ. ಉಳಿದವರು ಪ್ರೀತಿ ಅಂತಾರೆ. ಆದರೆ ಡಾ.ಕಲಾಂ ಪ್ರಕಾರ ದೇವರೆಂದರೆ ಕಾರುಣ್ಯ''. ಡಾ.ಕಲಾಂ ವ್ಯಕ್ತಿತ್ವವನ್ನು ಖುಷವಂತ್ ಸಿಂಗ್ ಕೇವಲ ಐದಾರು ಪ್ಯಾರಗಳಲ್ಲಿ ಕಟ್ಟಿಕೊಟ್ಟಿದ್ದರು.

ಇಲ್ಲಿ ನ್ಯಾಯಾಧೀಶರಾಗಬೇಕೆಂದರೆ ಚುನಾವಣೆಯಲ್ಲಿ ಗೆಲ್ಲಬೇಕು!

ಶಿಶಿರಕಾಲ
ಶಿಶಿರ್ ಹೆಗಡೆ
shishirh@gmail.com

ಕೆಲವು ಚಂದಮಾಮ ಕಥೆಗಳಲ್ಲಿ, ಅಕ್ಬರ್-ಬೀರ್‌ಬಲ್ ತರಹದ ಅದೆಷ್ಟೋ ನೀತಿಕಥೆಗಳಲ್ಲಿ ಇಂಥ ಘಟನೆಗಳಿರುತ್ತವೆ. ತೀರಾ ಚಿಕ್ಕಪುಟ್ಟ ಬೇಲಿ ಜಗಳ, ಕಾಕ-ಪೋಕ್ ವಿವಾದವನ್ನು ಪ್ರಜೆಗಳು ಮಹಾರಾಜರ ಮುಂದೆ ತಂದು ನ್ಯಾಯಕ್ಕಾಗಿ ಬೇಡುವ ಸನ್ನಿವೇಶ. ಭಾರತ ವಷ್ಟೇ ಅಲ್ಲ, ನಾನು ಓದಿದ ಚೀನಾ, ಪರ್ಷಿಯಾ, ಯುರೋಪ್, ಅತ್ತ ದಕ್ಷಿಣ ಅಮೆರಿಕದ ರಾಜರುಗಳ ಕಥೆಗಳೆಲ್ಲ ಹೆಚ್ಚು ಕಡಿಮೆ ಹೀಗೆಯೇ. ಅಲ್ಲಿ ಕೂಡ ಒಬ್ಬ ಸಮರ್ಥ ರಾಜನ ಬುದ್ಧಿವಂತಿಕೆ ಮತ್ತು ನ್ಯಾಯಪರತೆ ಹೇಗಿತ್ತು ಎನ್ನುವುದಕ್ಕೆ ಇಂಥದೇ ಲಾಟ್-ಪೂಟ್ ಕಥೆಗಳು. ''ಮಹಾರಾಜ, ನನ್ನ ಬೆಕ್ಕನ್ನು ಪಕ್ಕದ ಮನೆಯವನು ಕದ್ದಿದ್ದಾನೆ'' ಎಂಬ ತೀರಾ ಯಃಕಶ್ಚಿತ್ ದಾವೆಗಳು. ಅವು ರಾಜನ ಮುಂದೆ ಬರುವುದಂತೆ, ಚತುರ ಮಂತ್ರಿ, ಅಥವಾ ಖುದ್ದು ಮಹಾರಾಜನೇ ಬುದ್ಧಿವಂತಿಕೆಯಿಂದ ಬಗೆಹರಿಸಿ ನ್ಯಾಯ ಕೊಡುವುದಂತೆ. ನಾವು ನೀವೆಲ್ಲ ಅಂಥ ಎಷ್ಟೋ ದೊಡ್ಡ ದೊಡ್ಡ ಚಕ್ರವರ್ತಿಗಳ ಚಿಲ್ಲರೆ ನ್ಯಾಯದ ಕಥೆಗಳನ್ನು ಓದಿರುತ್ತೇವೆ, ಕೇಳುತ್ತಲೇ ಇರುತ್ತೇವೆ. ಇವುಗಳು ರಂಜನೆಗೆ, ನೀತಿಗೆ ಆದೀತು. ಇತಿಹಾಸಕ್ಕಲ್ಲ. ಆದರೆ ಅಂಥ ಕಥೆಗಳೇ ಇತಿಹಾಸಕ್ಕಿಂತ ಪ್ರಚಲಿತ!

ಆದರೆ ಕೃಷ್ಣದೇವರಾಯ, ಅಕ್ಬರ, ಈಜಿಪ್ಟಿನ ಫೆರೋ, ಚೀನಾದ ಗಾಂಗ್, ವಾಂಗ್ (ರಾಜರು) ಇವರಿಗೆಲ್ಲ ಅಸಲಿಗೂ ಬೇರೆ ಕೆಲಸವೇ ಇರಲಿಲ್ಲವೇ? ಅಥವಾ ಅವರಿಗೆ ಅಗಸನ ಕತ್ತೆಗೂ ನ್ಯಾಯ ಕೊಡುವಷ್ಟು ಪುರುಸೊತ್ತಿರುತ್ತಿತ್ತೆ? ಇರಲಿಕ್ಕಿಲ್ಲ. ಇಂದಿನ ಒಬ್ಬ ಎಂಎಲ್‌ಎಯನ್ನು ಭೇಟಿಯಾಗುವುದೇ ಜನಸಾಮಾನ್ಯರಿಗೆ ಅಸಾಧ್ಯವಾಗಿರುವಾಗ ''ಅವನು ನನ್ನ ಬೆಕ್ಕನ್ನು ಕದ್ದೊಯ್ದಿದ್ದಾನೆ'' ಎಂಬಂಥ ಮೊಕದ್ದಮೆಗಳು ರಾಜನ ಎದುರು ಬಗೆಹರಿಯಲು ಬರುತ್ತಿದ್ದವು ಎಂಬುದನ್ನು ನಂಬುವುದು ಕಷ್ಟ. ಬಹುತೇಕ ಕಟ್ಟುಕಥೆಗಳು.

ಬಹುಶಃ ಇಂಥ ಕೆಲವು ಕಲ್ಪಿತ ಕಥೆಗಳನ್ನು ರಾಜಾಶ್ರಯದಲ್ಲಿಯೇ ಇತಿಹಾಸವೆಂಬಂತೆ ಸುಳ್ಳುಸುಳ್ಳೇ ಕಟ್ಟಿರಲೂಬಹುದು. ಉದಾಹರಣೆಗೆ ಅಕ್ಬರನ ಬಗ್ಗೆ ಇರುವ ಅದೆಷ್ಟೋ ನ್ಯಾಯಪರ ಕಥೆಗಳು. ಚಿತ್ತೋರ್‌ಗಢದ ರಜಪೂತರನ್ನು ಗೆದ್ದ ನಂತರ ಹೆಂಗಸರು, ಮಕ್ಕಳು ಎನ್ನುವುದನ್ನು ನೋಡದೆ-ಕೋಟೆಯೊಳಗಿದ್ದ ಸುಮಾರು ಐವತ್ತು ಸಾವಿರ ಮುಗ್ಧ ಹಿಂದೂಗಳನ್ನು ಕೊಂದ ಇತಿಹಾಸವಿರುವ ಅಕ್ಬರ್ ಇಂಥ ಚಿಲ್ಲರೆ ಕಥೆಗಳಲ್ಲಿ ನ್ಯಾಯದೇವತೆಯ ರೂಪ ಪಡೆದುಬಿಡುತ್ತಾನೆ. ಆ ಮೂಲಕ ನಮ್ಮ ಬುದ್ಧಿಜೀವಿಗಳ ಕಣ್ಣಲ್ಲಿ ಅಕ್ಬರನು ಕೃಷ್ಣದೇವರಾಯ ಲೆವೆಲ್ಲಿನಲ್ಲಿ ತೂಗುತ್ತಾನೆ.

ಈ ಯಾವ ಕಥೆಗಳೂ ಇತಿಹಾಸದ ನ್ಯಾಯವ್ಯವಸ್ಥೆಯ ರೂಪಕವಲ್ಲ. ಭಾರತದಲ್ಲಿ, ಅಷ್ಟೇಕೆ ಯುರೋಪ್, ಚೀನಾ ಎಲ್ಲೆಲ್ಲಿ ನಾಗರಿಕತೆಗಳು ಬೆಳೆದವೋ, ಸಮಾಜ ಒಂದು ವ್ಯವಸ್ಥೆಯಾಗಿ ನಿರ್ಮಾಣವಾಯಿತೋ ಅಲ್ಲೆಲ್ಲ ಬಹುಸ್ತರದ ನ್ಯಾಯವ್ಯವಸ್ಥೆ ಜೈವಿಕ ವೇಗದಲ್ಲಿ, ಜತೆಯಲ್ಲಿ ಬೆಳೆದು ಬಂದಿದೆ. ರಾಜರ ಕಾಲದಿಂದಲೂ ಪಂಚರು, ಊರ ಮುಖ್ಯಸ್ಥರು, ಸಭಾಪತಿಗಳು ಇತ್ಯಾದಿ ವಿವಿಧ ಹಂತದಲ್ಲಿ ನ್ಯಾಯದ ತೀರ್ಪು ನೀಡುವ ವ್ಯವಸ್ಥೆ ಇದ್ದ ಬಗ್ಗೆ ನಮಗೆಲ್ಲ ಗೊತ್ತಿದೆ.

ಅದೇ ಬಹುಸ್ತರದ ನ್ಯಾಯವ್ಯವಸ್ಥೆಗಳು ಇಂದು ರೂಪಾಂತರವಾಗಿ ಆಧುನಿಕ ನ್ಯಾಯಾಲಯಗಳಾಗಿವೆ. ಆ ಕಾರಣಕ್ಕೆ ದೇಶ ದೇಶಗಳ ಸಾಂಸ್ಕೃತಿಕ ಭಿನ್ನತೆಯಂತೆ, ಅದರಿಂದಲೇ ರೂಪುಗೊಂಡ ನ್ಯಾಯವ್ಯವಸ್ಥೆಯಲ್ಲಿ ಕೂಡ ಸಾಕಷ್ಟು ಭಿನ್ನತೆಯಿದೆ. ಆ ಪರಿಕಲ್ಪನೆಯನ್ನು ಅಮೆರಿಕದ ಉದಾಹರಣೆಯೊಂದಿಗೆ ನಿಮ್ಮೊಂದಿಗೆ ಹಂಚಿಕೊಳ್ಳುವುದು ಈ ಲೇಖನ ಸರಣಿಯ ಉದ್ದೇಶ. ಇಡೀ ಮನುಷ್ಯ ಸಮಾಜದ ವರ್ತನೆಯನ್ನು ನಿರ್ದೇಶಿಸುವುದು ನ್ಯಾಯ ವ್ಯವಸ್ಥೆ. ಅಲ್ಲಿ ತೀರ್ಪು ನೀಡುವವನು ಅತ್ಯಂತ ಮುಖ್ಯ. ಮೊದಲೋ, ಸಭಾಸದರು, ಕೆಳ ಹಂತದ ನ್ಯಾಯಾಧೀಶರನ್ನು ಆಯ್ಕೆ ಮಾಡುತ್ತಿದ್ದುದು ಮಹಾರಾಜ. ಆದರೆ ಈಗ ಪ್ರಜಾಪ್ರಭುತ್ವ. ಇಲ್ಲಿ ಯಾರು ನ್ಯಾಯಾಧೀಶರಾಗಬೇಕು ಎಂದು ನಿರ್ಧರಿಸುವವರು ಯಾರು? ಅವರ ಆಯ್ಕೆ ಹೇಗೆ? ಈ ಹೋಲಿಕೆ ಇಂದಿನ ವಿಷಯ. ಯಾವುದು ಉತ್ತಮ- ಯಾವುದು ಸರಿ. ಅದೆಲ್ಲ ನಿಮ್ಮ ವಿವೇಚನೆಗೆ.

ಭಾರತದಲ್ಲಿ ಜಿಲ್ಲಾ ಸತ್ರ ನ್ಯಾಯಾಲಯ, ಸಿವಿಲ್ ನ್ಯಾಯಾಧೀಶರಾಗಿ ನೇರ ನೇಮಕಾತಿ, ಅಥವಾ ಬಡ್ತಿ ಪಡೆದು ಆಯ್ಕೆಯಾಗುತ್ತಾರೆ. ಆದರೆ ಕೊಲಾಜಿಯಂ ಪದ್ಧತಿಯ ಬಗ್ಗೆ ನೀವು ತಿಳಿದಿರಬಹುದು. ಹೈಕೋರ್ಟ್, ಸುಪ್ರೀಂ ಕೋರ್ಟಿನ ಹಿರಿಯ ನ್ಯಾಯಾಧೀಶರೇ ಇಲ್ಲಿ ನ್ಯಾಯಾಧೀಶರನ್ನು ಆರಿಸುವುದು. ಈ ವ್ಯವಸ್ಥೆಯಿಂದಾಗಿ ಅಲ್ಲಿಯೂ ವಂಶಾವಳಿ ಅಧಿಕಾರ ಹಸ್ತಾಂತರವಾಗುತ್ತಿದೆ ಎಂದು ಇತ್ತೀಚೆಗೆ ಗಲಾಟೆಗಳೆದ್ದದ್ದು ಕೇಳಿರುತ್ತೀರಿ. ಸುಪ್ರೀಂ ಕೋರ್ಟಿನ ನ್ಯಾಯಾಧೀಶರನ್ನು ಆಯ್ಕೆ ಮಾಡುವುದು ಚೀಫ್ ಜಸ್ಟೀಸ್ ಮತ್ತು ನಾಲ್ಕು ಹಿರಿಯ ನ್ಯಾಯಾಧೀಶರು. ಇತ್ತ ಹೈಕೋರ್ಟಿನ ನ್ಯಾಯಾಧೀಶರ ಆಯ್ಕೆಯೂ ಹಾಗೆಯೇ. ಹೈಕೋರ್ಟ್ ಚೀಫ್ ಜಸ್ಟೀಸ್ ಮತ್ತು ಇಬ್ಬರು ಹಿರಿಯ ನ್ಯಾಯಾಧೀಶರು ಸೇರಿ ಹೈಕೋರ್ಟ್ ನ್ಯಾಯಾಧೀಶರನ್ನು ಆಯ್ಕೆ ಮಾಡುವುದು. ಕರ್ನಾಟಕ ಹೈಕೋರ್ಟ್‌ನಲ್ಲಿ ಸದ್ಯ 47 ನ್ಯಾಯಾಧೀಶರಿದ್ದಾರೆ.

ನ್ಯಾಯಾಧೀಶರನ್ನು ನೇಮಿಸುವುದು ರಾಷ್ಟ್ರಪತಿಗಳು ಎಂದು ನಾವು ಶಾಲೆಯಲ್ಲಿ ಓದಿದ್ದು. ಆದರೆ ಅಸಲಿಗೆ ರಾಷ್ಟ್ರಪತಿಗಳ ಪಾತ್ರ ಏನೆಂದು ಪಠ್ಯ ಕಲಿಸಿರಲಿಲ್ಲ. ಅವರಿಗೆ ನ್ಯಾಯಾಧೀಶರ ಹೆಸರು ಸೂಚಿಸುವುದು ಈ ಕೊಲಾಜಿಯಂ. ಅದನ್ನು ರಾಷ್ಟ್ರಪತಿಗಳು ಪ್ರಶ್ನಿಸಿ ಮರುಪರಿಶೀಲನೆಗೆ ನೀಡಬಹುದು. ಆದರೆ ಅದೇ ಹೆಸರನ್ನು ಮರು ಆಯ್ಕೆ ಮಾಡಿ ಎರಡನೇ ಬಾರಿ ರಾಷ್ಟ್ರಪತಿಗೆ ಕಳುಹಿಸಿದರೆ ಅದನ್ನು ಅವರು ತಿರಸ್ಕರಿಸುವಂತಿಲ್ಲ. ಇದರಲ್ಲಿ ಗಮನಿಸಬೇಕಾದದ್ದು ಏನೆಂದರೆ ನಮ್ಮಲ್ಲಿನ ಕೊಲಾಜಿಯಂ ವ್ಯವಸ್ಥೆ ಕಾನೂನು ರಚಿತವಲ್ಲ. ಬದಲಿಗೆ ನ್ಯಾಯಾಲಯದ ತೀರ್ಪುಗಳಿಂದಾಗಿಯೇ ಹುಟ್ಟಿಕೊಂಡ ವ್ಯವಸ್ಥೆ.

ಒಂದೇನೆಂದರೆ, ಈ ವ್ಯವಸ್ಥೆಯ ಮೂಲಕ ನಮ್ಮಲ್ಲಿ ಶಾಸಕಾಂಗವು ನ್ಯಾಯಾಂಗದಿಂದ ಸಂಪೂರ್ಣ ಹೊರಗುಳಿಯಲು ಸಾಧ್ಯವಾಗಿದೆ. ಇದು ಒಳ್ಳೆಯದು- ಏಕೆಂದರೆ ರಾಜಕಾರಣಿಗಳು- ಖುದ್ದು ಪ್ರಧಾನಿ, ರಾಷ್ಟ್ರಪತಿ ಕೂಡ ನ್ಯಾಯಾಂಗದಲ್ಲಿ ಹಸ್ತಕ್ಷೇಪ ಮಾಡುವಂತಿಲ್ಲ. ಆದರೆ- ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನ್ಯಾಯಾಂಗದ ಅತ್ಯುನ್ನತ ಪದವಿಯನ್ನು ಅವರವರೇ ಆಯ್ಕೆ ಮಾಡಿಕೊಳ್ಳುವುದು ಎಷ್ಟು ಸರಿ? ಆ ಪ್ರಶ್ನೆಯೂ ಸಮಂಜಸವೇ.

ಅಮೆರಿಕ ಕಾನೂನು ವ್ಯವಸ್ಥೆ: ಭಾಗ-3

ನ್ಯಾಯಾಧೀಶರ ಆಯ್ಕೆಯಲ್ಲಿ ಅಮೆರಿಕದ ವ್ಯವಸ್ಥೆ ಭಾರತಕ್ಕಿಂತ ಸಂಪೂರ್ಣ ವಿಭಿನ್ನ. ಅಮೆರಿಕದಲ್ಲಿ ಸುಪ್ರೀಂ ಕೋರ್ಟಿನ ನ್ಯಾಯಾಧೀಶರ ಆಯ್ಕೆಯೇ ಬೇರೆ- ಕೆಳ ಹಂತದ ನ್ಯಾಯಾಧೀಶರ ಆಯ್ಕೆಯ ಬಗೆಯೇ ಬೇರೆ. ಇಲ್ಲಿನ ಬಹುತೇಕ ರಾಜ್ಯಗಳಲ್ಲಿ ಎಲ್ಲಾ ಹಂತದ ನ್ಯಾಯಾಧೀಶರುಗಳನ್ನು ಮತ್ತು ಪಬ್ಲಿಕ್ ಪ್ರಾಸಿಕ್ಯೂಟರ್ ಅನ್ನು ಆಯ್ಕೆ ಮಾಡುವುದು ಜನರು! ಹೌದು. ಹೈಕೋರ್ಟ್‌ನಿಂದ ಹಿಡಿದು ಜಿಲ್ಲಾ ಮತ್ತು ಸ್ಥಳೀಯ ಹಂತದ ನ್ಯಾಯಾಧೀಶರೂ ಚುನಾವಣೆಗೆ ನಿಲ್ಲಬೇಕು. ನಮ್ಮಲ್ಲಿ ಕೋರ್ಟು ಕಚೇರಿಯ ಸುಳಿಯಲ್ಲಿ ಸಿಕ್ಕಿಕೊಂಡವರ ಹೊರತಾಗಿ ಉಳಿದ ಸಾಮಾನ್ಯ ಜನರಿಗೆ ತಾಲೂಕಿನ, ಜಿಲ್ಲೆಯ ಜಡ್ಜ್ ಹೆಸರು ಗೊತ್ತಿರುವುದಿಲ್ಲ, ಮುಖವನ್ನೂ ನೋಡಿರುವುದಿಲ್ಲ. ಆದರೆ ಅಮೆರಿಕದಲ್ಲಿ ನ್ಯಾಯಾಧೀಶನಾಗಬೇಕು ಎಂದರೆ ಜನರೆದುರು ಬಂದು ಭಾಷಣ ಮಾಡಬೇಕು, ಮತಪರೀಕ್ಷೆಗೊಳಗಾಗಬೇಕು. ಅಂಥ ಚುನಾವಣೆ ಆಗೀಗ ನಡೆಯುತ್ತಿರುತ್ತದೆ. ಆಗ ರಸ್ತೆ ಅಕ್ಕಪಕ್ಕದಲ್ಲಿ ನಿಲ್ಲಿಸುವ ಚಿಕ್ಕ ಬೋರ್ಡುಗಳಲ್ಲಿ, ಟಿವಿಯಲ್ಲಿ 'Vote Tom, Tough on crime' , 'Vote Martin, Reform the system' ಈ ರೀತಿ, ನನ್ನನ್ನು ನಿಮ್ಮ ನ್ಯಾಯಾಧೀಶರನ್ನಾಗಿ ಆಯ್ಕೆ ಮಾಡಿ, ನಾನು ಕೆಟ್ಟವರನ್ನು ಬಿಡುವುದಿಲ್ಲ, ಶಿಕ್ಷಿಸುತ್ತೇನೆ, ಸಮಾಜದಲ್ಲಿ ಸುಧಾರಣೆ ತರುತ್ತೇನೆ ಇತ್ಯಾದಿ ಸ್ಲೋಗನ್ನುಗಳು. 19ನೇ ಶತಮಾನದಲ್ಲಿ ಇಲ್ಲಿ ಒಂದಿಷ್ಟು ಸಮಾಜ ಸುಧಾರಣಾ ಕೆಲಸಗಳಾದವು. ನ್ಯಾಯಾಧೀಶರನ್ನು ಆಯ್ಕೆ ಮಾಡುವವರು ಮಂತ್ರಿಗಳೇ ಆಗಿಬಿಟ್ಟರೆ ಇಬ್ಬರೂ ಕೂಡಿ ಸಮಾಜವನ್ನು ಬಿಗಡಾಯಿಸಿಬಿಡಬಹುದು. ಆ ಕಾರಣಕ್ಕೆ ಜನರೇ ಮತ ಚಲಾಯಿಸಿ ನ್ಯಾಯಾಧೀಶರನ್ನು ಆಯ್ಕೆ ಮಾಡುವ ಪ್ರಕ್ರಿಯೆ ಶುರುವಾದದ್ದು. ಈಗ ಅಮೆರಿಕದ ಶೇ. 90ರಷ್ಟು ನ್ಯಾಯಾಧೀಶರು ಈ ರೀತಿ ಚುನಾವಣೆಯಲ್ಲಿಯೇ ಆಯ್ಕೆಯಾಗುವುದು. ನಿಗದಿತ ಅವಧಿಗಷ್ಟೇ ಆಯ್ಕೆ. ನಾಲ್ಕರಿಂದ ಆರು ವರ್ಷ, ಕೆಲವು ಕಡೆ ಹನ್ನೆರಡು. ಅದಾದ ಮೇಲೆ ಮತ್ತೆ ಚುನಾವಣೆ ಎದುರಿಸಬೇಕು. ಅವಧಿ ಒಂದೊಂದು ರಾಜ್ಯದಲ್ಲಿ ಒಂದೊಂದು, ಆದರೆ ನಿಗದಿತ. ಅದು ನಿವೃತ್ತಿ ಆಗುವಷ್ಟು ಕಾಲದ ಹುದ್ದೆಯಲ್ಲ.

ಚುನಾವಣೆಯಲ್ಲಿ ಜನರೇ ಆಯ್ಕೆ ಮಾಡಿದರೆ ಒಳ್ಳೆಯದೇ ಅಲ್ಲವೇ? ಒಳ್ಳೆಯದೇ ಹೌದು- ಆದರೆ ಇದು ರೂಪಾಂತರಗೊಳ್ಳುತ್ತಾ ಇಂದು ನಡೆಯುವ ರೀತಿ ಮಾತ್ರ ವಿಚಿತ್ರವಾಗಿದೆ. ಏನೆಂದರೆ- ಈ ರೀತಿ ಸ್ಪರ್ಧಿಸುವ ನ್ಯಾಯಾಧೀಶರು ಇಲ್ಲಿನ ಎರಡು ಪಕ್ಷದಲ್ಲಿ ಒಂದರ ಜತೆ ಗುರುತಿಸಿಕೊಂಡು ಚುನಾವಣೆಗೆ ನಿಲ್ಲಬಹುದು. ''ನಾನು ರಿಪಬ್ಲಿಕನ್ ಪಕ್ಷದ ನ್ಯಾಯಾಧೀಶ ಆಕಾಂಕ್ಷಿ, ನಾನು ಡೆಮಾಕ್ರಟಿಕ್ ಪಕ್ಷದ ವತಿಯಿಂದ ನಿಲ್ಲುತ್ತಿರುವ ನ್ಯಾಯಾಧೀಶ ಆಕಾಂಕ್ಷಿ''- ಹೀಗೆ. ಪಕ್ಷೇತರರಾಗಿಯೂ ನಿಲ್ಲಬಹುದು. ವಕೀಲರಾಗಿದ್ದರಾಯ್ತು- ಇಂತಿಷ್ಟು ವರ್ಷ ಪರಿಣತಿ ಇದ್ದರಾಯ್ತು. ಸ್ಪರ್ಧೆ, ಚುನಾವಣೆ ಎಂದಾಕ್ಷಣ ನಾನೇಕೆ ಇನ್ನೊಬ್ಬನಿಗಿಂತ ಉತ್ತಮ ಎಂದು ಮತದಾರರಲ್ಲಿ ವಿವರಿಸಬೇಕಾಯ್ತಲ್ಲ. ತಮ್ಮನ್ನು ಆಯ್ಕೆ ಮಾಡಿದರೆ ಯಾವ ರೀತಿ ಶಿಕ್ಷೆ ನೀಡುತ್ತೇವೆ ಎಂದೆಲ್ಲ ಪ್ರಚಾರ ನಡೆಯುತ್ತದೆ. ಕೆಲವು ಅತಿ ಚರ್ಚಿತ ವಿಷಯಗಳಲ್ಲಿ ತಮ್ಮ ಒಲವೇನು ಇತ್ಯಾದಿಯನ್ನು ಬಹಿರಂಗವಾಗಿಯೇ ಪ್ರಚಾರಕ್ಕೆ ಬಳಸಿಕೊಳ್ಳುತ್ತಾರೆ. ಒಂದು ವೇಳೆ ಹಾಲಿ ನ್ಯಾಯಾಧೀಶರೇ ಅವಧಿ ಮುಗಿಸಿ ಮರು ಆಯ್ಕೆ ಬಯಸಿದಲ್ಲಿ- ಅವರ ಎದುರಿಗೆ ಚುನಾವಣೆಗೆ ನಿಲ್ಲುವ ಇನ್ನೊಬ್ಬ ಆಕಾಂಕ್ಷಿಯು ಹಾಲಿ ನ್ಯಾಯಾಧೀಶರ ತಪ್ಪುಗಳನ್ನೆಲ್ಲ ಬಹಿರಂಗಮಾಡುತ್ತಾರೆ. ಇನ್ನು, ಚುನಾವಣೆ ಎಂದರೆ ಪ್ರಚಾರದ ಖರ್ಚು. ಜಾಹೀರಾತು ಕೊಡಬೇಕು ಇತ್ಯಾದಿ. ಹಾಗಾಗಿ ಸ್ಪರ್ಧಿಗಳು ಚಂದಾ ಎತ್ತಬೇಕು. ಮರು ಆಯ್ಕೆ ಬಯಸುವ ನ್ಯಾಯಾಧೀಶರು ಚುನಾವಣೆ ಬರುತ್ತಿದ್ದಂತೆ ಉಗ್ರ ಶಿಕ್ಷೆಗಳನ್ನು ಕೊಟ್ಟು ಪ್ರಚಾರ ಪಡೆಯುತ್ತಾರೆ ಎಂಬುದು ಸಾಮಾನ್ಯ ಆರೋಪ.

ಸಾಮಾನ್ಯವಾಗಿ ರಾಜಕೀಯ ಪಕ್ಷದ ಹೆಸರಿನ ಜತೆ ನಿಂತವರೇ ಆಯ್ಕೆಯಾಗುವುದು; ಪಕ್ಷೇತರರು ನಮ್ಮಲ್ಲಿನ ಪಕ್ಷೇತರರಂತೆ- ಗೆಲ್ಲುವುದು ಅಪರೂಪ. ಹಾಗಾಗಿ ಎಲ್ಲಾ ನ್ಯಾಯಾಧೀಶರ ನ್ಯಾಯದ ಒಲವು ರಾಜಕೀಯ ಪಕ್ಷದ ಒಲವಿಗೆ ಹೊಂದಿಕೊಂಡಿರುತ್ತವೆ. ಇನ್ನು ಕೆಲವೇ ರಾಜ್ಯಗಳಲ್ಲಿ ಕೆಳ ಹಂತದ ನ್ಯಾಯಾಧೀಶರ ಪದವಿಗೆ ಯಾರು ಬೇಕಾದರೂ ಚುನಾವಣೆಗೆ ನಿಲ್ಲಬಹುದು- ವಕೀಲರಾಗಿರಬೇಕೆಂದಿಲ್ಲ. ಅಥವಾ ನ್ಯಾಯಾಂಗದ ಜ್ಞಾನವಿರಬೇಕಾದದ್ದು ಕೂಡ ಅವಶ್ಯಕತೆಯಲ್ಲ. ಆದರೆ ಸಾಮಾನ್ಯವಾಗಿ ಆ ರೀತಿಯ ಆಕಾಂಕ್ಷಿಗಳನ್ನು ಜನರೇ ಮತದಲ್ಲಿ ತಿರಸ್ಕರಿಸಿಬಿಡುತ್ತಾರೆ. ಒಟ್ಟಾರೆ ವಿಷಯ- ಹಿಂದೆ ಹೇಳಿದಂತೆ, ಶೇ. 90ರಷ್ಟು ನ್ಯಾಯಾಧೀಶರು ನ್ಯಾಯಾಂಗದಲ್ಲಿನ ಜನಪ್ರತಿನಿಧಿಗಳು, ಚುನಾಯಿತರು.

ಇದೆಲ್ಲ ಹೈಕೋರ್ಟ್‌ಗಿಂತ ಕೆಳ ಹಂತದ ನ್ಯಾಯಾಧೀಶರ ವಿಷಯವಾಯಿತು. ಸುಪ್ರೀಂ ಕೋರ್ಟಿನ ನ್ಯಾಯಾಧೀಶರ ಆಯ್ಕೆ ಯಲ್ಲಿ ಚುನಾವಣೆಯಿಲ್ಲ. ಸುಪ್ರೀಂ ಕೋರ್ಟಿನ ಪರಮೋಚ್ಚ ನ್ಯಾಯಾಧೀಶರು ಯಾವತ್ತೂ ಒಟ್ಟು 9 ಮಂದಿ. ಅವರನ್ನು ನೇರ ನೇಮಿಸುವುದು ಅಮೆರಿಕದ ಅಧ್ಯಕ್ಷರು. ಅವರ ಆಯ್ಕೆಯನ್ನು ಇಲ್ಲಿನ ಕೆಳಮನೆ ಅನುಮೋದಿಸಿದರೆ ಆಯಿತು. ಒಮ್ಮೆ ಆಯ್ಕೆಯಾದರೆ ಅವರಿಗೆ ನಿವೃತ್ತಿ ಎಂಬುದೇ ಇಲ್ಲ. ಸಾಯುವವರೆಗೂ ಅವರೇ ಪರಮೋಚ್ಚ ನ್ಯಾಯಾಧೀಶರು. ಅವರನ್ನು ತೆಗೆದುಹಾಕಲು ಕಷ್ಟದ ರಾಜಕೀಯ ಮಾರ್ಗವಿದೆ- ಆದರೆ ಅದು ಕೊನೆಯ ಬಾರಿ ನಡೆದದ್ದು 1804ನೇ ಇಸವಿಯಲ್ಲಿ. ಅದಾದ ಮೇಲೆ ಇಲ್ಲಿಯವರೆಗೆ ಯಾರ್‍ಯಾರು ಅಮೆರಿಕದ ಸುಪ್ರೀಂ ನ್ಯಾಯಾಧೀಶರಾಗಿದ್ದಾರೋ ಅವರೆಲ್ಲ ಸತ್ತ ಮೇಲೆಯೇ ವಿಶ್ರಾಂತರಾದದ್ದು. ಈಗ 2-3 ವರ್ಷಗಳ ಹಿಂದೆ ಸುಪ್ರೀಂ ನ್ಯಾಯಾಧೀಶೆ ರುತ್ ಗಿನ್ಸ್‌ಬರ್ಗ್ ತೀರಿಕೊಂಡಾಗ ಆಕೆಗೆ 87 ವರ್ಷ!

ಸುಪ್ರೀಂ ಕೋರ್ಟಿನ ಈ 9 ನ್ಯಾಯಾಧೀಶರು ಅತ್ಯಂತ ಬಲಿಷ್ಠರು- ಪವರ್‌ಫುಲ್. ಹೀಗೆಂದರೆ ಸರಕಾರದ ನಡೆ, ಕಾನೂನು, ನ್ಯಾಯಸಮ್ಮತವೇ ಎಂದು ನಿರ್ಧರಿಸುವವರು ಇವರೇ 9 ಮಂದಿ. ನೂರಾರು ಮಂದಿ ಜನಪ್ರತಿನಿಧಿಗಳು ಸೇರಿ ಮಾಡಿದ ಕಾನೂನನ್ನು ಅಧ್ಯಕ್ಷರು ಒಪ್ಪಿ ಸಹಿಹಾಕಬೇಕು. ಅದನ್ನು ಕೂಡ ಪ್ರಶ್ನಿಸಿ- ತಿರಸ್ಕರಿಸುವ ಶಕ್ತಿ ಈ 9 ಜನರಿಗಿದೆ. ಅಧ್ಯಕ್ಷರೇ ನೇಮಿಸಿದರೂ ಈ ಆಯ್ಕೆ ರಾಜಕೀಯದಿಂದ ಹೊರತಾಗಿಲ್ಲ. ನಮ್ಮಲ್ಲಿ ಲೆಕ್ಕದಂತೆ ರಾಷ್ಟ್ರಪತಿ ಪಕ್ಷಾತೀತ- ಅಮೆರಿಕದಲ್ಲಿ ರಾಷ್ಟ್ರಾಧ್ಯಕ್ಷ ರಾಜಕೀಯ ಪಕ್ಷದವರು. ಹಾಗಾಗಿ ಆಯ್ಕೆ ಕೂಡ ರಾಜಕೀಯವೇ. ಈ 9 ಮಂದಿಯಲ್ಲಿ ಯಾರೇ ಒಬ್ಬ ನ್ಯಾಯಾಧೀಶ ಮೃತನಾದ ಎಂದಿಟ್ಟುಕೊಳ್ಳಿ- ಆಗ ಮಾತ್ರ ಹಾಲಿ ಅಧ್ಯಕ್ಷನಿಗೆ ಆಯ್ಕೆ ಮಾಡುವ ಸೌಭಾಗ್ಯ. ಆಗ ಅಧ್ಯಕ್ಷ ಆರಿಸಿದ ನ್ಯಾಯಾಧೀಶನನ್ನು ಇಲ್ಲಿನ ಸಂಸತ್ತಿನ ಕೆಳಮನೆಯವರು ಅನುಮೋದಿಸಬೇಕು. ಕೆಲವೊಮ್ಮೆ ಅಧ್ಯಕ್ಷರ ವಿರೋಧಪಕ್ಷ ಕೆಳಮನೆಯಲ್ಲಿ ಬಹುಮತವನ್ನು ಹೊಂದಿರುತ್ತದೆ. ಆಗ ಅಧ್ಯಕ್ಷರ ಆಯ್ಕೆಯನ್ನು ಕೆಳಮನೆ ಒಪ್ಪುವುದಿಲ್ಲ, ತಿರಸ್ಕರಿಸುತ್ತದೆ. ಅಂಥ ಸಂದರ್ಭದಲ್ಲಿ ಅಧ್ಯಕ್ಷರು ಮತ್ತು ಕೆಳಮನೆಯ ಸದಸ್ಯರ ನಡುವೆ ರಾಜಕೀಯ ಜಟಾಪಟಿ ನಡೆಯುತ್ತದೆ. ಒಬಾಮಾ ಆಡಳಿತದ ಸಮಯದಲ್ಲಿ ಹಾಗೆಯೇ ಆಯಿತು. ಒಂಬತ್ತರಲ್ಲಿ ಒಬ್ಬರು ತೀರಿಕೊಂಡರು. ಒಬಾಮ ಒಬ್ಬರನ್ನು ಆಯ್ಕೆ ಮಾಡಿ ಕೆಳಮನೆಯ ಅನುಮೋದನೆಗೆ ಕಳುಹಿಸಿದ. ಆದರೆ ಕೆಳಮನೆಯಲ್ಲಿ ಅವರ ಪಕ್ಷಕ್ಕೆ ಬಹುಮತವಿರಲಿಲ್ಲ, ಅವರು ಒಪ್ಪಲಿಲ್ಲ, ಒಬಾಮಾ ಬದಲಿಸಲಿಲ್ಲ, ಹೀಗಾಗಿ ಒಂದಿಡೀ ವರ್ಷ ಎಂಟೇ ಮಂದಿ ಮುಖ್ಯ ನ್ಯಾಯಾಧೀಶರು. ಚುನಾವಣೆಯಾಗಿ ಟ್ರಂಪ್ ಅಧಿಕಾರಕ್ಕೆ ಬಂದ ನಂತರ, ಅವರದೇ ಪಕ್ಷ ಕೆಳಮನೆಯಲ್ಲಿ ಬಹುಮತದಲ್ಲಿದ್ದದ್ದರಿಂದ ಆ ಜಾಗವನ್ನು ತುಂಬಿಸಿದ್ದು.

ರಿಪಬ್ಲಿಕನ್ ಪಕ್ಷ ಎಂದರೆ ಇಲ್ಲಿನ ಬಲಪಂಥ. ಡೆಮಾಕ್ರಟಿಕ್ ಪಕ್ಷ ಎಡಪಂಥ. ಇಲ್ಲಿನ ಎಡ-ಬಲ ಪಂಥವನ್ನು ಭಾರತದ ಕಾಂಗ್ರೆಸ್-ಬಿಜೆಪಿ ಎಂದೆಲ್ಲ ಹೋಲಿಸಿಕೊಳ್ಳುವುದು ಬೇಡ. ಒಟ್ಟಿನಲ್ಲಿ ಹೆಚ್ಚಿನ ವಿಷಯಗಳಲ್ಲಿ ಈ ಎರಡು ಪಕ್ಷಗಳು- ಎರಡು ಧ್ರುವಗಳು. ಒಬ್ಬೊಬ್ಬರ ಒಲವು ಒಂದೊಂದು ಕಡೆ. ಅಂತೆಯೇ ಆಯಾ ಪಕ್ಷದವರು ಅಧ್ಯಕ್ಷರಾಗಿದ್ದಾಗ- ಒಂಬತ್ತರಲ್ಲಿ ಖಾಲಿಯಾದ ಜಾಗಕ್ಕೆ ಅವರ ಪಕ್ಷದ ಒಲವಿಗೆ ಹೊಂದಿಕೊಳ್ಳುವ ನ್ಯಾಯಾಧೀಶರನ್ನೇ ಆಯ್ಕೆ ಮಾಡುವುದು. ಹೀಗೆ ಆಯ್ಕೆ ಮಾಡಿದ ನ್ಯಾಯಾಧೀಶರಲ್ಲಿ ಒಂದೋ ಎಡದ ಒಲವು, ಇಲ್ಲ ಬಲದ ಒಲವು. ಹಾಗಾಗಿ ಅಲ್ಲಿಯೂ ನ್ಯಾಯದ ತಕ್ಕಡಿ ಇತ್ತಿಂದತ್ತ-ಅತ್ತಿಂದಿತ್ತ ಸರಿಯುತ್ತದೆ. ಈ ಸಮತೋಲನ ಪ್ರತಿ ಬಾರಿ ಉಚ್ಚ ನ್ಯಾಯಾಧೀಶರಲ್ಲೊಬ್ಬ ತೀರಿಕೊಂಡಾಗಲೂ ಬದಲಾಗುತ್ತದೆ.

ಅಮೆರಿಕದ ಅಧ್ಯಕ್ಷರ ಪ್ರಮಾಣವಚನ ಸ್ವೀಕಾರ ಕಾರ್ಯಕ್ರಮದ ತುಣುಕನ್ನು ನೀವು ನೋಡಿದ್ದರೆ ಅಲ್ಲಿ ಕಪ್ಪು ರೋಬ್ ಧರಿಸಿದ ಈ 9 ನ್ಯಾಯಾಧೀಶರು ಕಾಣಿಸಿರುತ್ತಾರೆ. ಇವರಲ್ಲಿ ಪ್ರಮುಖರೇ ಅಮೆರಿಕ ಅಧ್ಯಕ್ಷರಿಗೆ ಪ್ರಮಾಣವಚನ ಬೋಧಿಸುವುದು. ಇವರ ಪಾತ್ರ ಬಹುಮುಖ್ಯ. ರಾಜಕೀಯ ಪಕ್ಷ-ಜನಪ್ರತಿನಿಧಿಗಳು ತೆಗೆದುಕೊಳ್ಳಲಾಗದ ಕೆಲವು ನಿರ್ಧಾರಗಳನ್ನು ಈ ನವನ್ಯಾಯಮೂರ್ತಿಗಳ ವ್ಯವಸ್ಥೆ ಅಮೆರಿಕದ ಇತಿಹಾಸದಲ್ಲಿ ತೆಗೆದುಕೊಂಡಿದೆ. ಕಪ್ಪುವರ್ಣೀಯ ಮಕ್ಕಳ ಶಾಲೆಯಲ್ಲಿನ ಅಸಮಾನತೆಯನ್ನು ಕೊನೆಯಾಗಿಸಿದ್ದು ಇಲ್ಲಿನ ಸರಕಾರವಲ್ಲ- ಅಂದಿನ ಈ ನ್ಯಾಯಮೂರ್ತಿಗಳು. ಗರ್ಭಪಾತ ಹೆಣ್ಣಿನ ಹಕ್ಕು ಎಂದು ಕಾನೂನು ಮಾಡಿದ್ದು ಕೂಡ ಅವರೇ. ಬುಷ್ ಮತ್ತು ಆಲ್ ಗೋರ್ ಅಧ್ಯಕ್ಷೀಯ ಚುನಾವಣೆಯಲ್ಲಿ ಆದ ಗೊಂದಲವನ್ನು ಬಗೆಹರಿಸಿದ್ದೂ ಇವರೇ. ಡೊನಾಲ್ಡ್ ಟ್ರಂಪ್ ಹಿಂದಿನ ಬಾರಿ ಆಯ್ಕೆ ಮಾಡಿದ ನ್ಯಾಯಾಧೀಶರಿಂದ ಈ 9 ಜನರಲ್ಲಿ ಸಮತೋಲನ ಬದಲಾಗಿದೆ. ಸದ್ಯ ಸಂಪ್ರದಾಯವಾದಿ ನ್ಯಾಯಾಧೀಶರದ್ದೇ ಮೇಲುಗೈ. ಹಾಗಾಗಿಯೇ ಸಂಪ್ರದಾಯದ ವಿಷಯವಾದ 'ಗರ್ಭಪಾತ ಹೆಣ್ಣಿನ ಹಕ್ಕು' ಎನ್ನುವ ಪರಿಭಾಷೆಯ ದಶಕಗಳ ಹಿಂದಿನ ಕೋರ್ಟ್ ತೀರ್ಪನ್ನು ಈಗ ಈ ತಂಡ ತಿರಸ್ಕರಿಸಿದೆ. ಪರಿಣಾಮ, ಗರ್ಭಪಾತ ನ್ಯಾಯಸಮ್ಮತವೋ ಅಲ್ಲವೋ ಎಂಬುದನ್ನು ರಾಜ್ಯಗಳೇ ಈಗ ನಿರ್ಧರಿಸಬಹುದು. ರಾಜ್ಯ ನ್ಯಾಯಾಲಯದಲ್ಲೂ ಇದೇ ರೀತಿ. ಎಲ್ಲೆಲ್ಲಿ ನ್ಯಾಯಮೂರ್ತಿಗಳ ಒಲವು ಅತ್ತಲಿದೆಯೋ ಆ ಎಲ್ಲಾ ರಾಜ್ಯಗಳಲ್ಲಿ, ಈಗ ಅರ್ಧ ಅಮೆರಿಕದಲ್ಲಿ ಗರ್ಭಪಾತ ಪೂರ್ಣ ನಿಷಿದ್ಧ!!

(ಮುಂದುವರಿಯುತ್ತದೆ)

ಕೋಳಿ ಅಂಕವೇ ಆದರೂ, ದುಡ್ಡು ಇಟ್ಟರೆ ಜೂಜಾಟವೇ!

ಮನಿ ಮೈಂಡೆಡ್
ಕೇಶವ ಪ್ರಸಾದ್ ಬಿ.
vveditoped@gmail.com

ಕೋಳಿ ಅಂಕ ಅಥವಾ ಕೋರಿಕಟ್ಟ ಎನ್ನುವ ಜನಪದ ಕ್ರೀಡೆ ಇದೆ. ಅಂದರೆ, ಜೋಡಿ ಕೋಳಿಗಳ ಕಾಲಿಗೆ ಹರಿತವಾದ ಬಾಳು (ಕತ್ತಿ) ಕಟ್ಟಿ, ಅವುಗಳ ಮಧ್ಯೆ ಕಾದಾಟವಾಡಿಸುವುದು. ಊರ ಜನರಿಗೆ ಮಸ್ತ್ ಗಮ್ಮತ್ತು. ಆದರೆ ಕೋಳಿ ಕಟ್ಟದ ಹೆಸರಿನಲ್ಲಿ ಹಣವನ್ನು ಪಣಕ್ಕಿಟ್ಟು ಆಡಿದರೆ ಜೂಜಾಟವಾಗುತ್ತದೆ. ಅದು ಕಾನೂನುಬಾಹಿರ. ಹಬ್ಬಗಳ ವಿರಾಮದ ಸಂದರ್ಭ ನೆಂಟರಿಷ್ಟರು ಕಾಫಿ-ಚಹಾ ಹೀರುತ್ತಾ, ಒಂದಷ್ಟು ಹೊತ್ತು ಇಸ್ಪೀಟ್ ಎಲೆಗಳಲ್ಲಿ ಆಡಿದರೆ ಅದೊಂದು ಸಂಭ್ರಮ. ಆದರೆ ಅದನ್ನೇ ಯಾವುದೋ ಅಡ್ಡೆಗಳಲ್ಲಿ ದುಡ್ಡನ್ನು ಪಣಕ್ಕಿಟ್ಟು ಆಡಿದರೆ ಅದು ತಪ್ಪು. ಸಮಕಾಲೀನ ಆನ್‌ಲೈನ್ ಗೇಮಿಂಗ್ ಕೂಡ ಹಾಗೆಯೇ! ಇಲ್ಲಿಯೂ ಸಾಮಾನ್ಯ ಆಟಗಳ ವಿನ್ಯಾಸವಿದೆ. ಅದು ಸರಳ ಮತ್ತು ಮೋಜಿನದ್ದು. ನಿರುಪದ್ರವಿ ಆಟ. ಆದರೆ ಆನ್‌ಲೈನ್ ಗೇಮಿಂಗ್‌ನಲ್ಲಿ 'ರಿಯಲ್ ಮನಿ ಗೇಮ್ಸ್' ಎನ್ನುವ ಅಪಾಯಕಾರಿ ಮಾದರಿ ಇದೆ. ಇದರಲ್ಲಿ ಹಣವನ್ನು ಪಣಕ್ಕಿಟ್ಟು ಆಟವಾಡಬೇಕಾಗುತ್ತದೆ. ಇದಕ್ಕೆ ಹೆಚ್ಚು ಕೌಶಲ, ಕಾರ್ಯತಂತ್ರ, ಹೆಚ್ಚು ಸಮಯ ಬೇಕು. ಇದರಲ್ಲಿ ಹಣದ ಲಾಭ ಆಗಲೂಬಹುದು, ಭಾರಿ ನಷ್ಟವೂ ಆದೀತು.

ಗೇಮಿಂಗ್ ಇಂಡಸ್ಟ್ರಿಯ ಬಿಸಿನೆಸ್ ಹಿತಾಸಕ್ತಿಯ ವಾದವೇ ಬೇರೆ. ''ನೋಡಿ, ರಿಯಲ್ ಮನಿ ಗೇಮಿಂಗ್ ಅನ್ನು ನಿಷೇಧಿಸಿದರೆ ದೇಶದಲ್ಲಿ 2 ಲಕ್ಷ ಜನರು ಉದ್ಯೋಗ ಕಳೆದುಕೊಳ್ಳುತ್ತಾರೆ. 400 ಕಂಪನಿಗಳು ಬಾಗಿಲು ಮುಚ್ಚಬೇಕಾಗುತ್ತದೆ. 25,000 ಕೋಟಿ ರುಪಾಯಿ ಹೂಡಿಕೆ ನಷ್ಟವಾಗುತ್ತದೆ. ಈ ಸೆಕ್ಟರ್‌ಗೆ ವಿದೇಶಿ ಹೂಡಿಕೆಗಳೂ ಸ್ಥಗಿತವಾಗುತ್ತವೆ. ಈಗ ಆನ್‌ಲೈನ್ ಗೇಮಿಂಗ್ ಮಾರುಕಟ್ಟೆಯಲ್ಲಿ ವರ್ಷಕ್ಕೆ 31,000 ಕೋಟಿ ರುಪಾಯಿ ಆದಾಯ ಸಿಗುತ್ತದೆ. ಸರಕಾರಗಳಿಗೂ ಇದರಲ್ಲಿ 20,000 ಕೋಟಿ ರುಪಾಯಿ ಜಿಎಸ್‌ಟಿ ನಷ್ಟವಾಗುತ್ತದೆ'' ಎಂದು ಇಂಡಸ್ಟ್ರಿಯ ಪ್ರತಿನಿಧಿಗಳು ಹೇಳುತ್ತಾರೆ. ಆನ್‌ಲೈನ್ ರಿಯಲ್ ಮನಿ ಗೇಮ್‌ಗಳನ್ನು ನಿಷೇಧಿಸುವುದರಿಂದ ಕ್ರಿಕೆಟ್ ಇತ್ಯಾದಿ ಆಟಗಳಿಗೆ ಜಾಹೀರಾತು ಆದಾಯ ಕಡಿಮೆಯಾಗಬಹುದು. ಬಿಸಿಸಿಐ ಮತ್ತು ಜಿಯೊಸ್ಟಾರ್ ಕಂಪನಿಯ ಆದಾಯಕ್ಕೆ ಕೊರತೆ ಆಗುವ ನಿರೀಕ್ಷೆ ಇದೆ. ಈ ಫ್ಯಾಂಟಸಿ ಸ್ಪೋರ್ಟ್ಸ್ ಕಂಪನಿಗಳು ಐಪಿಎಲ್ ಮತ್ತು ಐಸಿಸಿ ಟೂರ್ನಮೆಂಟ್‌ಗಳಲ್ಲಿ ಪ್ರಮುಖ ಪ್ರಾಯೋಜಕತ್ವವನ್ನು ವಹಿಸುತ್ತಿವೆ. ಡ್ರೀಮ್ ಇಲೆವನ್ ಸಂಸ್ಥೆಯು ಐಪಿಎಲ್‌ನ ಟೈಟಲ್ ಸ್ಪಾನ್ಸರ್ ಕೂಡ ಆಗಿತ್ತು. ಒಂದು ಕಡೆ ಗೇಮಿಂಗ್ ಕಂಪನಿಗಳ ಮಾಲೀಕರು ಶ್ರೀಮಂತರಾಗುತ್ತಿದ್ದಾರೆ; ಡ್ರೀಮ್ ಇಲೆವನ್ ಕಂಪನಿಯ ಸಿಇಒ ಹಾಗೂ ಸಹ ಸಂಸ್ಥಾಪಕರಾಗಿರುವ ಹರ್ಷ ಆನಂದ್ ಜೈನ್ ಅವರು ಮುಂಬೈನ ಮಲಬಾರ್ ಹಿಲ್‌ನಲ್ಲಿ 138 ಕೋಟಿ ರುಪಾಯಿಗೆ ಐಷಾರಾಮಿ ಅಪಾರ್ಟ್‌ಮೆಂಟ್ ಖರೀದಿಸಿದ್ದರು. ಮತ್ತೊಂದು ಕಡೆ 45 ಕೋಟಿ ಜನರು ವಾರ್ಷಿಕ 20,000 ಕೋಟಿ ರುಪಾಯಿಗಳನ್ನು ಆನ್‌ಲೈನ್ ಗೇಮಿಂಗ್‌ಗಳಲ್ಲಿ ಕಳೆದುಕೊಳ್ಳುತ್ತಿದ್ದಾರೆ.

ಮೇಲ್ನೋಟಕ್ಕೆ ಅತ್ಯಂತ ಸಂಭಾವಿತನಂತೆ ಕಾಣುವ ವ್ಯಕ್ತಿ ಕೂಡ ತಾನು ಎಲ್ಲೇ ಇದ್ದರೂ, ಮನೆಯವರಿಗೂ ಗೊತ್ತಾಗದಂತೆ ಗುಟ್ಟಾಗಿ ಮೊಬೈಲ್‌ನಲ್ಲೇ ಆನ್‌ಲೈನ್ ಬೆಟ್ಟಿಂಗ್ ವ್ಯಸನಿಯಾಗಿಬಿಡಬಹುದು. ದುಡಿಮೆಯ ಹಣವನ್ನೆಲ್ಲ ಕಳೆದುಕೊಂಡು ಬರಿಗೈ ದಾಸನಾಗಬಹುದು. ಹೀಗಾಗಿ ಅನೇಕ ಕುಟುಂಬಗಳು ಬೀದಿಪಾಲಾಗಿವೆ. ಮಕ್ಕಳು ಅನಾಥವಾಗಿವೆ. ಅತ್ಯಂತ ಅಪಾಯಕಾರಿ ಬೆಳವಣಿಗೆ ಏನೆಂದರೆ, 2020ರಿಂದ 2024ರ ಅವಧಿಯಲ್ಲಿ ದೇಶದಲ್ಲಿ ಆನ್‌ಲೈನ್ ಆಟವಾಡುವ ಗೇಮರ್ಸ್ ಸಂಖ್ಯೆಯಲ್ಲಿ ಗಣನೀಯ ಏರಿಕೆಯಾಗಿದೆ. ಅದು 36 ಕೋಟಿಗಳಿಂದ ಬರೋಬ್ಬರಿ 50 ಕೋಟಿಗೆ ಜಿಗಿದಿದೆ. ಸ್ಮಾರ್ಟ್‌ಫೋನ್‌ಗಳ ಬಳಕೆ ಹೆಚ್ಚಿರುವುದು, ಅಗ್ಗದ ದರದಲ್ಲಿ ಡೇಟಾ ಸಿಗುತ್ತಿರುವುದು ಇದಕ್ಕೆ ಕಾರಣ.

ಇವತ್ತು, ಆನ್‌ಲೈನ್ ಗೇಮಿಂಗ್ ವ್ಯಸನದ ಪರಿಣಾಮವಾಗಿ ದುರಂತ ಅಂತ್ಯವನ್ನು ಕಂಡ ಅನೇಕ ಕುಟುಂಬಗಳು ಇವೆ. ಒಡಿಶಾದ ರಾಯಗಢ ಜಿಲ್ಲೆಯ ಗಾಮನಗುಡ ಎಂಬಲ್ಲಿ 15 ವರ್ಷದ ಸೈನಾ ಸಾಹು ಎಂಬ ಬಾಲಕಿ ಆನ್‌ಲೈನ್ ಗೇಮ್‌ನಲ್ಲಿ ಲಕ್ಷಾಂತರ ರುಪಾಯಿ ಕಳೆದುಕೊಂಡು ಆತ್ಮಹತ್ಯೆ ಮಾಡಿಕೊಂಡಳು. ಆಕೆ ಪ್ರತಿದಿನವೂ ಮೊಬೈಲ್‌ನಲ್ಲಿ ಆನ್‌ಲೈನ್ ಗೇಮಿಂಗ್‌ನಲ್ಲಿ ತಲ್ಲೀನಳಾಗುತ್ತಿದ್ದಳು. ಮನೆಯವರು ಎಷ್ಟು ತಡೆದರೂ ಕೇಳುತ್ತಿರಲಿಲ್ಲ. ಇಂದೋರ್‌ನಲ್ಲಿ ವಿದ್ಯಾರ್ಥಿಯೊಬ್ಬ ಆನ್‌ಲೈನ್ ಗೇಮ್‌ನಲ್ಲಿ 2,800 ರುಪಾಯಿ ಕಳೆದುಕೊಂಡಿದ್ದಕ್ಕೆ ನೇಣಿಗೆ ಶರಣಾಗಿದ್ದ! ಕರ್ನಾಟಕದಲ್ಲೂ 2023ರಿಂದ ಇಲ್ಲಿಯವರೆಗೆ ಆನ್‌ಲೈನ್ ಜೂಜಿನಲ್ಲಿ ನಷ್ಟ ಮಾಡಿಕೊಂಡು 32 ಮಂದಿ ಆತ್ಮಹತ್ಯೆ ಮಾಡಿಕೊಂಡಿರುವ ಪ್ರಕರಣಗಳು ವರದಿಯಾಗಿವೆ. ಇದರಲ್ಲಿ ಮೂರನೇ ಎರಡರಷ್ಟು ಸಂತ್ರಸ್ತರು ಬೆಂಗಳೂರಿನವರು. ಡ್ರೈವರ್‌ಗಳು, ಸಣ್ಣಪುಟ್ಟ ವ್ಯಾಪಾರಿಗಳು, ಸಂಬಳದಾರರು ಆನ್‌ಲೈನ್ ಜೂಜಾಟದ ಪರಿಣಾಮವಾಗಿ ಸಾಲ ಸೋಲ ಮಾಡಿ, ನಷ್ಟಕ್ಕೀಡಾಗಿ ಬದುಕನ್ನು ಕೊನೆಗೊಳಿಸಿಕೊಂಡ ಪ್ರಕರಣಗಳು ಕಳವಳಕಾರಿಯಾಗಿವೆ. ದೇಶದ ಬಹುತೇಕ ರಾಜ್ಯಗಳಲ್ಲಿ ಇಂಥ ದುರ್ಘಟನೆಗಳು ನಡೆದಿದ್ದು, ಆನ್‌ಲೈನ್ ಗೇಮಿಂಗ್ ಸಾಮಾಜಿಕ ಪಿಡುಗಾಗುತ್ತಿದೆಯೇ ಎಂಬ ಪ್ರಶ್ನೆಯನ್ನು ಅವು ಹುಟ್ಟುಹಾಕಿದ್ದವು. ಮೈಸೂರಿನಲ್ಲಿ ವ್ಯಕ್ತಿಯೊಬ್ಬರು ಸೋದರಿಯ ಹೆಸರಿನಲ್ಲಿ 80 ಲಕ್ಷ ರು.ಸಾಲ ಮಾಡಿ, ಅದೆಲ್ಲವನ್ನೂ ಆನ್‌ಲೈನ್ ಜೂಜಿನಲ್ಲಿ ಕಳೆದುಕೊಂಡರು. ಬೆಂಗಳೂರಿನಲ್ಲಿ ಆಟೋ ಚಾಲಕರೊಬ್ಬರು ಸಾಲ ಮಾಡಿ ಪಡೆದಿದ್ದ ಬರೋಬ್ಬರಿ 10 ಲಕ್ಷ ರುಪಾಯಿಗಳನ್ನು ಆನ್‌ಲೈನ್ ಗೇಮಿಂಗ್‌ನಲ್ಲಿ ಕಳೆದುಕೊಂಡರು. ಹಾಸನದಲ್ಲಿ ವ್ಯಕ್ತಿಯೊಬ್ಬರು 15 ಲಕ್ಷ ರು. ನಷ್ಟಕ್ಕೀಡಾಗಿ ಹೇಮಾವತಿ ನಾಲೆಗೆ ಹಾರಿದರು. ಇಂಥ 32 ದಾರುಣ ಘಟನೆಗಳು ನಮ್ಮ ರಾಜ್ಯದಲ್ಲೇ ಸಂಭವಿಸಿವೆ. ವರದಿಯಾಗದಿರುವ ಇನ್ನಷ್ಟು ಪ್ರಕರಣಗಳೂ ಇರಬಹುದು. ಆದ್ದರಿಂದ ಜನರು ಇನ್ನಾದರೂ ಇಂಥ ಆನ್‌ಲೈನ್ ಮನಿ ಗೇಮಿಂಗ್‌ಗಳಿಂದ ದೂರವಿರಲೇಬೇಕು. ಈ ಸಂತ್ರಸ್ತರು ಇದೇ ಲಕ್ಷಾಂತರ ರುಪಾಯಿಗಳನ್ನು ಮ್ಯೂಚುವಲ್ ಫಂಡ್ 'ಸಿಪ್'ನಲ್ಲಿ ಅಥವಾ ಉತ್ತಮ ಕಂಪನಿಯ ಷೇರಿನಲ್ಲಾದರೂ, ಇಟಿಎಫ್, ಬಾಂಡ್, ಬಂಗಾರದಲ್ಲಾದರೂ ಹೂಡಿಕೆ ಮಾಡಿರುತ್ತಿದ್ದರೆ, ಮುಂದಿನ 10-15 ವರ್ಷದಲ್ಲಿ ಅದು ದೊಡ್ಡ ಮೊತ್ತವಾಗಿರುತ್ತಿತ್ತು. ಅವರ ಸಂಪತ್ತು ನಿಸ್ಸಂದೇಹವಾಗಿ ವೃದ್ಧಿಸುತ್ತಿತ್ತು.

ಗೇಮಿಂಗ್ ಅಪ್ಲಿಕೇಶನ್‌ಗಳಿಂದ ಯುವಜನರು ವ್ಯಸನಿಗಳಾಗುತ್ತಿರುವ, ಲಕ್ಷಾಂತರ ಹಣವನ್ನು ಕಳೆದುಕೊಂಡು ಆತ್ಮಹತ್ಯೆಗೆ ಶರಣಾಗುತ್ತಿರುವ ಪ್ರಕರಣಗಳು ಹೆಚ್ಚುತ್ತಿರುವುದನ್ನು ಗಂಭೀರವಾಗಿ ಪರಿಗಣಿಸಿರುವ ಕೇಂದ್ರ ಸರಕಾರ ಇದನ್ನು ನಿಷೇಧಿಸಲು 14 ಪುಟಗಳ 'ಆನ್‌ಲೈನ್ ಗೇಮಿಂಗ್ ಪ್ರಚಾರ ಮತ್ತು ನಿಯಂತ್ರಣ ವಿಧೇಯಕ-2025' ಅನ್ನು ಲೋಕಸಭೆಯಲ್ಲಿ ಮಂಡಿಸಿ ಅಂಗೀಕಾರವನ್ನು ಪಡೆದುಕೊಂಡಿದೆ. ಅದರ ಪ್ರಕಾರ ಎಲ್ಲ ಬಗೆಯ ರಿಯಲ್ ಮನಿ ಗೇಮ್‌ಗಳು ಕಾನೂನಿಗೆ ವಿರುದ್ಧ. ಅದನ್ನು ಪ್ರಚಾರ ಮೂಡುವುದೂ ಅಪರಾಧ. ಅದಕ್ಕೆ ಮೂರು ವರ್ಷಗಳ ಅವಧಿಯ ಶಿಕ್ಷೆ ಮತ್ತು 1 ಕೋಟಿ ರುಪಾಯಿ ತನಕ ದಂಡ ವಿಧಿಸಬಹುದು.

ಕೇಂದ್ರ ಸಚಿವ ಅಶ್ವಿನ್ ವೈಷ್ಣವ್ ಅವರ ಈ ಮಾತನ್ನು ಗಮನಿಸಿ- ''ಆನ್‌ಲೈನ್ ಗೇಮ್ ಆಡುವವರು ನಿಜವಾಗಿಯೂ ಅದಕ್ಕೆ ಜವಾಬ್ದಾರರಲ್ಲ, ಅವರು ಅದರ ಬಲಿಪಶುಗಳು. ಆದ್ದರಿಂದ ಸಂತ್ರಸ್ತರಿಗೆ ಶಿಕ್ಷೆಯಾಗದಂತೆ ಸರಕಾರ ಎಚ್ಚರ ವಹಿಸಲಿದೆ. ಇಲ್ಲಿ ಜನರಿಂದ ದುಡ್ಡು ಪಡೆದು ಆನ್‌ಲೈನ್ ಗೇಮ್ ಸರ್ವೀಸ್‌ಗಳನ್ನು ಪೂರೈಸುವವರು ಮತ್ತು ಅದನ್ನು ಬೆಂಬಲಿಸಿ ಜಾಹೀರಾತುಗಳನ್ನು ಕೊಡುವವರು, ಪ್ರಚಾರ ಮಾಡುವವರು ಇಲ್ಲಿ ಹೊಣೆಗಾರರಾಗುತ್ತಾರೆ''. ಸರಕಾರವು ವಿಧೇಯಕದ ಅಂಗೀಕಾರದ ಮೂಲಕ ನಿಷೇಧಿಸಲು ಹೊರಟಿರುವ ರಿಯಲ್ ಮನಿ ಗೇಮಿಂಗ್ಸ್ ಎಂದರೇನು? ಇವುಗಳು ಆನ್‌ಲೈನ್ ಗೇಮ್ಸ್ ಆಗಿದ್ದು, ಮೊಬೈಲ್‌ನಲ್ಲಿಯೇ ಆಡಬಹುದು. ಇಲ್ಲಿ ಹಣವನ್ನು ಗಳಿಸಬಹುದು ಅಥವಾ ನಷ್ಟವೂ ಆದೀತು. ನಷ್ಟಕ್ಕೀಡಾದವರೇ ಹೆಚ್ಚು. ಹಾಗಾದರೆ ಭಾರತದಲ್ಲಿರುವ ಜನಪ್ರಿಯ ರಿಯಲ್ ಮನಿ ಗೇಮ್‌ಗಳು ಯಾವುವು? ಫ್ಯಾಂಟಸಿ ಸ್ಪೋರ್ಟ್ಸ್, ರಮ್ಮಿ, ಪೋಕರ್, ತೀನ್ ಪತ್ತಿ, ಆನ್‌ಲೈನ್ ಕ್ಯಾಸಿನೋಗಳು ಇವೆ. ಫ್ಯಾಂಟಸಿ ಸ್ಪೋರ್ಟ್ಸ್‌ನಲ್ಲಿ ಡ್ರೀಮ್ ಇಲೆವನ್ ಮತ್ತು ಎಂಪಿಎಲ್ (ಮೊಬೈಲ್ ಪ್ರೀಮಿಯರ್ ಲೀಗ್) ಭಾರಿ ಜನಪ್ರಿಯತೆ ಗಳಿಸಿವೆ. ಇದರಲ್ಲಿ ಆಟ ಆಡುವವರು ನಿಜವಾದ ಕ್ರೀಡಾಪಟುಗಳ ಹೆಸರಿನಲ್ಲಿ ವರ್ಚುವಲ್ ಟೀಮ್‌ಗಳನ್ನು ಸೃಷ್ಟಿಸುತ್ತಾರೆ. ನಿಜವಾದ ಪಂದ್ಯಗಳಲ್ಲಿ ಕ್ರೀಡಾಪಟುಗಳ ಪರ್ಫಾರ್ಮೆನ್ಸ್ ಅನ್ನು ಅಧರಿಸಿ ಗೇಮರ್ಸ್ ಅಂಕಗಳನ್ನು ಗಳಿಸುತ್ತಾರೆ. ಕ್ರಿಕೆಟ್, ಫುಟ್ಬಾಲ್, ಬಾಸ್ಕೆಟ್ಬಾಲ್ ಮತ್ತು ಕಬಡ್ಡಿಯಲ್ಲಿ ಈ ಪ್ಲಾಟ್‌ಫಾರ್ಮ್‌ಗಳ ಆನ್‌ಲೈನ್ ಗೇಮ್ ಸೇವೆಯನ್ನು ನೋಡಬಹುದು.

ರಮ್ಮಿ ಜನಪ್ರಿಯ ಕಾರ್ಡ್ ಗೇಮ್ ಆಗಿದ್ದು, ಆನ್‌ಲೈನ್‌ನಲ್ಲೂ ಮನಿ ರಮ್ಮಿ ಗೇಮ್ಸ್ ಇವೆ. ಗೆಲ್ಲುವವರಿಗೆ ನಗದು ಬಹುಮಾನ ಇರುತ್ತದೆ. ಇದೀಗ ಇಂಥ ಅಪಾಯಕಾರಿ ಆನ್‌ಲೈನ್ ಜೂಜಾಟಗಳಿಗೆ ಕೇಂದ್ರ ಸರಕಾರ ನಿಷೇಧ ಹೇರುತ್ತಿರುವುದರಿಂದ, ಡ್ರೀಮ್ 11, ಮೈ11 ಸರ್ಕಲ್, ವಿನ್ ಝೋ, ಗೇಮ್ಸ್ 24X7, ಜಂಗಲ್ ಗೇಮ್ಸ್ ಸೇರಿದಂತೆ 400 ಕಂಪನಿಗಳಿಗೆ ಸವಾಲು ಎದುರಾಗಿದೆ. ಹಾಗಂತ ಈ ವಿಧೇಯಕವು ಹಣವನ್ನು ಪಣಕ್ಕಿಟ್ಟು ಜೂಜಾಡುವುದನ್ನು ಮಾತ್ರ ನಿಷೇಧಿಸುತ್ತಿದೆ. ಆದರೆ ಇ-ಸ್ಪೋರ್ಟ್ಸ್ ಅನ್ನು ನಿಷೇಧಿಸಿಲ್ಲ. ಹೊಸ ಕಾನೂನಿನಲ್ಲಿ ಅದಕ್ಕೆ ಉತ್ತೇಜನ ಇದೆ. ವಿಧೇಯಕವು ಇ-ಸ್ಪೋರ್ಟ್ಸ್ ಮತ್ತು ರಿಯಲ್ ಮನಿ ಗೇಮಿಂಗ್ ನಡುವಣ ವ್ಯತ್ಯಾಸವನ್ನು ಸ್ಪಷ್ಟವಾಗಿ ಗುರುತಿಸಿದೆ. ಉದಾಹರಣೆಗೆ ಸ್ಪರ್ಧಾತ್ಮಕವಾಗಿರುವ ವಿಡಿಯೊ ಗೇಮಿಂಗ್‌ಗಳಾದ ಬಿಜಿಎಂಐ, ಪಬ್ಜಿ, ಲೀಗ್ ಆಫ್ ಲೆಜೆಂಡ್ಸ್ ಅನ್ನು ನಿಷೇಧಿಸಿಲ್ಲ. ನಗದು ಬಹುಮಾನಗಳನ್ನು ಒಳಗೊಂಡಿರುವ, ರಿಯಲ್ ಮನಿ ಗೇಮ್ ಪ್ಲಾಟ್‌ಫಾರ್ಮ್‌ಗಳನ್ನು ಮಾತ್ರ ಕಾನೂನುಬಾಹಿರಗೊಳಿಸಲಾಗುತ್ತಿದೆ.

ಆನ್‌ಲೈನ್ ಗೇಮಿಂಗ್ ಕಂಪನಿಗಳು ಈಗ ಕಾನೂನಿನ ಬಲೆಗಳಿಂದ ಬೈಪಾಸ್ ಆಗುವ ಮಾರ್ಗೋಪಾಯಗಳನ್ನು ಕಂಡುಕೊಳ್ಳಬಹುದು. ಆದರೆ ಜನಸಾಮಾನ್ಯರು ಆನ್‌ಲೈನ್ ಮನಿ ಗೇಮ್‌ಗಳ ಅಪಾಯಗಳನ್ನು ಅರ್ಥ ಮಾಡಿಕೊಂಡು ತಾವಾಗಿಯೇ ದೂರವಿರುವುದು ಕೂಡ ಅಷ್ಟೇ ಮುಖ್ಯವಾಗುತ್ತದೆ. ಏಕೆಂದರೆ ಸುಲಭವಾಗಿ ಮತ್ತು ರಾತ್ರೋರಾತ್ರಿ ದುಡ್ಡು ಮಾಡುವ ಬಗೆ ಹೇಗೆ ಎಂಬುದನ್ನೇ ಮನುಷ್ಯ ಆಲೋಚಿಸುತ್ತಾನೆ. ಹತ್ತಾರು ವರ್ಷ ಕಾದು, ಶಿಸ್ತುಬದ್ಧವಾಗಿ ಸಣ್ಣ ಮೊತ್ತಗಳನ್ನು ಹೂಡಿಕೆ ಮಾಡುತ್ತಾ ಸಂಪತ್ತನ್ನು ಸೃಷ್ಟಿಸಿಕೊಳ್ಳುವ, ಕಂಪೌಂಡಿಂಗ್ ಎಫೆಕ್ಟ್‌ನ ಲಾಭವನ್ನು ಪಡೆದುಕೊಳ್ಳುವ ವ್ಯವಧಾನ ಈಗಿನ ಜಮಾನದ ಯುವ ಜನತೆಗೆ ಕಡಿಮೆಯಾಗುತ್ತಿದೆ. ಆದ್ದರಿಂದಲೇ ಸ್ಟಾಕ್ ಮಾರ್ಕೆಟ್‌ನಲ್ಲೂ ಈಕ್ವಿಟಿ ಹೂಡಿಕೆಯ ದೀರ್ಘಾವಧಿಯ ಇನ್ವೆಸ್ಟ್‌ಮೆಂಟ್ ಬದಲಿಗೆ, ಇಂಟ್ರಾ ಡೇ ಟ್ರೇಡಿಂಗ್ ಅಥವಾ ಫ್ಯೂಚರ್ಸ್ ಆಂಡ್ ಆಪ್ಷನ್ಸ್ ಟ್ರೇಡಿಂಗ್ ಆಕರ್ಷಿಸುತ್ತದೆ. ಜನರಿಗೆ ಬೆಳಗ್ಗೆ ದುಡ್ಡು ಹಾಕಿ, ಸಂಜೆಯ ವೇಳೆಗೆ ಹತ್ತು ಪರ್ಸೆಂಟ್ ಲಾಭ ಪಡೆಯುವ ಆಸೆ. ಸ್ಟಾಕ್ ಮಾರ್ಕೆಟ್‌ನ ಸೂಚ್ಯಂಕಗಳ ಏರಿಳಿತದಲ್ಲಿ, ಎಲ್ಲೋ ವೀಕ್ ಪಾಯಿಂಟ್‌ನಲ್ಲಿ ಲಕ್ಷಾಂತರ ರುಪಾಯಿ ಹಾಕಿ, ಏರಿದೊಡನೆ ಷೇರುಗಳನ್ನು ಮಾರಿ ಲಾಭ ಗಳಿಸುವ ಮೋಹ. ಆದರೆ ಅದಕ್ಕೆ ಗ್ಯಾರಂಟಿ ಇಲ್ಲ ಎಂಬ ಮುಖ್ಯವಾದ ಸಂಗತಿಯನ್ನೇ ಮರೆಯುತ್ತಾರೆ. ಇದೇ ಎಡವಟ್ಟಿಗೆ ಕಾರಣವಾಗುತ್ತದೆ. ಆದ್ದರಿಂದ ''ದುಡ್ಡು ಮರದಲ್ಲಿ ಬೆಳೆಯುವುದಿಲ್ಲ'' ಎಂಬ ಸತ್ಯವನ್ನು ಮನನ ಮಾಡಿಕೊಳ್ಳಬೇಕು.

ಭಟ್ಟರ್ ಸ್ಕಾಚ್

- **ಚಂದ್ರಶೇಖರ ನಾಗೂರ, (ಇಮೇಲ್ ಮೂಲಕ)**
ಭಟ್ರೇ, ಟ್ರಂಪ್‌ಗೆ ಯಾಕೆ ನೊಬೆಲ್ ಶಾಂತಿ ಪ್ರಶಸ್ತಿ ಬೇಕಂತೆ?
– **ಆತನಿಗೆ ಶಾಂತಿ ಸಿಗ್ತಾಳೆ, ನೊಬೆಲ್ ಅಷ್ಟು ಸುಲಭ ಅಲ್ಲ ಅಂತ ಗೊತ್ತಿದೆ!**

- **ಗಿಡ್ಡ ಗೋಪಾಲ, ಶ್ರೀರಂಗಪಟ್ಟಣ**
ಭಟ್ರೇ, ಆಕಾಶವಾಣಿಯವರು ಆಗಾಗ 'ನಮ್ಮ ಮುಂದಿನ ಕಾರ್ಯಕ್ರಮ ಇನ್ನೇನು ಕೆಲವೇ ಕ್ಷಣಗಳಲ್ಲಿ ಪ್ರಾರಂಭವಾಗುತ್ತೆ' ಅಂತ ಹೇಳುತ್ತಲೇ ಇರುತ್ತಾರಲ್ಲ?
– **ಶ್ರೋತೃಗಳು ರೇಡಿಯೋ ಬಿಟ್ಟು ಹೋಗಿಬಿಟ್ಟಾರು ಎನುವ ಅಂತಕ ಅಷ್ಟೇ!**

- **ಲೀನಾ, ಬೆಂಗಳೂರು**
ಭಟ್ರೇ, ಪ್ರೀತಿ, ಪ್ರೇಮ, ಪ್ರಣಯದ ಬಗ್ಗೆ ಪತ್ರಿಕೆಯನ್ನು ಆರಂಭಿಸಿದರೆ ಯಾವ ಹೆಸರಿಡುತ್ತೀರಾ?
– **'ಪ್ರಣಯ ಪ್ರಪಂಚ'!**

- **ರವೀಂದ್ರ ಕಾಟೋಟಿ, (ಇಮೇಲ್ ಮೂಲಕ)**
ಭಟ್ರೇ, ಎಲ್ಲೆಡೆ ರಸ್ತೆ ಗುಂಡಿ ಬಿದ್ದಿದೆಯಲ್ಲ?
– **ಗುಂಡಿ ಮುಚ್ಚಿ ಅಂದ್ರೆ, ಗುಂಡಿ ತೋಡುತ್ತಿದ್ದಾರೆ!**

- **ರವಿ ಬಸರಾಣಿ, (ಇಮೇಲ್ ಮೂಲಕ)**
ಭಟ್ರೇ, ಸಾಮಾಜಿಕ ಜಾಲತಾಣ ತೆರೆದರೆ ಎಲ್ಲರೂ ಬರೀ ವಿಷ ಕಾರುತ್ತಾರಲ್ಲ?
– **ಹೊಟ್ಟೆಯೊಳಗೆ ಏನಿದೆಯೋ ಅದನ್ನೇ ಕಾರಬೇಕಲ್ಲ?!**

- **ನವೀನ ಹೆಬ್ಬಾಳ, ಬೆಂಗಳೂರು**
ಭಟ್ರೇ, ನಿಮ್ಮನ್ನು ಹುಡುಗಿಯರು ಸುತ್ತುವರಿಯುವುದಿಲ್ಲವೇ?
– **ಸಾರ್ವಜನಿಕವಾಗಿ ಸುತ್ತುವರಿಯುವಷ್ಟು ಅವರು ಅಮಾಯಕರಲ್ಲ!**

- **ನಿರಂಜನ ಎಸ್., ಚನ್ನರಾಯಪಟ್ಟಣ**
ಭಟ್ರೇ, ಇತ್ತೀಚೆಗೆ ನೀವು ವೀರಪ್ಪ ಮೊಯಿಲಿಯವರನ್ನು ನಿರ್ಲಕ್ಷಿಸುತ್ತಿದ್ದೀರಿ ಅಂತ ಅನಿಸುತ್ತಿದೆಯಲ್ಲ?
– **ಹಾಗಾದ್ರೆ ಅವರು ಮಹಾಕಾವ್ಯ ಬರೆಯುವುದನ್ನು ನಿಲ್ಲಿಸಬಾರದು!**

- **ವಿನಾಯಕ ಹಿರೇಮಠ, ಗದಗ**
ಭಟ್ರೇ, ಹುಡುಗಿಯರಿಗೆ ಪ್ರೇಮ ಪತ್ರ ಬರೆಯುವ ಸಂಪ್ರದಾಯವೇ ನಿಂತು ಹೋಗಿದೆಯಲ್ಲ?
– **ಅದು ಅಂಚೆಯಿಂದ ಮಿಂಚಂಚೆಗೆ, ವಾಟ್ಸಾಪ್‌ಗೆ ಶಿಫ್ಟ್ ಆಗಿದೆ!**

- **ಸುಮಾ, ಬೆಂಗಳೂರು**
ಭಟ್ರೇ, ಒಬ್ಬ ವ್ಯಕ್ತಿ ಇಬ್ಬರಿಗೂ ಬೇಕಾಗುವುದು ಯಾವಾಗ?
– **ಒಬ್ಬ ವ್ಯಕ್ತಿ ಹೆಗ್ಗಡೆ ಮತ್ತು ಮಟ್ಟಣ್ಣನವರ ಸ್ನೇಹಿತರಾದಾಗ!**

- **ಕೆ. ಮಾರುತಿ, ನಂಜನಗೂಡು**
ಭಟ್ರೇ, ನಿಮ್ಮ ಬಗ್ಗೆ ಇರುವ ಕೆಲವು ಅನುಮಾನಗಳನ್ನು ಪರಿಹರಿಸಿಕೊಳ್ಳುವುದು ಹೇಗೆ?
– **ನಿಮ್ಮ ಊರಿನವರೇ ಆದ ನಂಜನಗೂಡು ಮೋಹನ್ ಕೇಳಿದ್ದರೆ ಈ ಪ್ರಶ್ನೆಯನ್ನು ಕೇಳುತ್ತಿರಲಿಲ್ಲ!**

ಮಕ್ಕಳೇ ಮಣ್ಣು ಹೊತ್ತ ಆಟದ ಮೈದಾನ!

ಶಶಾಂಕಣ
ಶಶಿಧರ ಹಾಲಾಡಿ
vveditoped@gmail.com

ನೀವು ಏನೇ ಹೇಳಿ, ಗ್ರಾಮೀಣ ಬದುಕಿನಲ್ಲಿ ಕಷ್ಟಗಳು ಇದ್ದರೂ, ಅಲ್ಲಿನ ಅನುಭವ ವೈವಿಧ್ಯಕ್ಕೆ ಸಾಟಿಯೇ ಇಲ್ಲ! ಉದಾಹರಣೆಗೆ ಹೇಳುವುದಾದರೆ, ನಾನು ಓದಿದ ಹೈಸ್ಕೂಲು ಇದ್ದದ್ದು ಕಾಡಿನ ಅಂಚಿನ ಒಂದು ಗುಡ್ಡದ ಬದಿಯಲ್ಲಿ. ಮುಖ್ಯರಸ್ತೆಗೆ ಹೊಂದಿಕೊಂಡಿದ್ದ ಹೈಸ್ಕೂಲು ವಿದ್ಯಾಭ್ಯಾಸವೆಂದರೆ, ಹಲವು ಅನುಭವ ವೈವಿಧ್ಯದ ಆಗರ! ಆ ಹೈಸ್ಕೂಲನ್ನು ತಲುಪಲು ಪ್ರತಿದಿನ ಬೆಳಗ್ಗೆ 5 ಕಿ.ಮೀ., ಸಂಜೆ 5 ಕಿ.ಮೀ. ಕ್ರಮಿಸುವ ಅನುಭವ ಮಾತ್ರ ತುಸು ಶ್ರಮದಾಯಕ, ತುಸು ಸಂತಸಭರಿತ. ಅದರಲ್ಲಿ ಅರ್ಧ ದೂರ ಅನಿವಾರ್ಯವಾಗಿ ನಡಿಗೆ, ಇನ್ನರ್ಧ ದೂರ ಒಮ್ಮೊಮ್ಮೆ ಬಸ್ ಪಯಣ, ಕೆಲವೊಮ್ಮೆ ಅದೂ ನಡಿಗೆಯಲ್ಲೇ! ಗದ್ದೆ ಬಯಲು, ಹಾಡಿ, ಹಕ್ಕಲುಗಳ ನಡುವೆಯಿದ್ದ ನಮ್ಮ ಮನೆಯಿಂದ, ಬಸ್ ರಸ್ತೆ ತಲುಪಲು ಅನಿವಾರ್ಯವಾಗಿ 2 ಕಿ.ಮೀ. ನಡೆಯಲೇಬೇಕಿತ್ತು. ನಂತರ ಅಲ್ಲಿಂದ 3 ಕಿ.ಮೀ. ದೂರದಲ್ಲಿ ಹೈಸ್ಕೂಲು. ಮನೆಯಿಂದ ಆ ಹೈಸ್ಕೂಲಿಗೆ ಇದ್ದ 5 ಕಿ.ಮೀ. ಕ್ರಮಿಸಲು ನಮಗೆ ಒಂದರಿಂದ ಒಂದೂವರೆ ಗಂಟೆ ಕಾಲ ಬೇಕಿತ್ತು. ಮಕ್ಕಳಿಗಿಂತಲೂ ಮುಂಚೆ ಮನೆಯ ಹಿರಿಯರು ಎದ್ದು, ಶಾಲೆಗೆ ಹೋಗುವವರಿಗೆ ಸಿದ್ಧತೆ ನಡೆಸಬೇಕಿತ್ತು!

ನಮ್ಮಮ್ಮ ತಯಾರಿಸಿ ಕೊಟ್ಟ ಗಂಜಿಯನ್ನು ಪುಟಾಣಿ ಬುತ್ತಿಪಾತ್ರೆಗೆ ತುಂಬಿಸಿಕೊಂಡು, ನಡೆದು ಬಸ್‌ಸ್ಟಾಪ್ ಬಳಿಗೆ 8.30ರ ಮುಂಚೆ ಬಂದರೆ, ಜಗದೀಶ್ವರ ಎಂಬ ಬಸ್ ಸಿಗುತ್ತಿತ್ತು. ಆ ಬಸ್ 8.45ರ ಮುಂಚೆ ನಮ್ಮನ್ನು ಹೈಸ್ಕೂಲಿನ ಬಳಿ ಬಿಡುತ್ತಿತ್ತು. ಸಕಾಲಕ್ಕೆ ಬೇರೆ ಬಸ್‌ಗಳಿರಲಿಲ್ಲ. ಅಷ್ಟು ಬೇಗನೆ ಹೋಗುವುದು ಏಕೆ ಎಂದು, ಹೆಚ್ಚಿನ ದಿನ ನಡೆದುಕೊಂಡೇ ಹೈಸ್ಕೂಲಿಗೆ ಹೋಗುತ್ತಿದ್ದೆ. ಇತರ ಸಹಪಾಠಿಗಳು ಜತೆಯಾಗುತ್ತಿದ್ದರು. ಮೊದಲ 2 ಕಿ.ಮೀ., ಗದ್ದೆ ಬೈಲು, ಕಾಡು ಗುಡ್ಡದ ದಾರಿ, ನಂತರದ 3 ಕಿ.ಮೀ. ರಸ್ತೆ ದಾರಿ.

ನಮ್ಮ ಹೈಸ್ಕೂಲು ಇದ್ದ ಹಳ್ಳಿಯ ಮೂಲಹೆಸರು ಗೋಳಿಕಟ್ಟೆ. ಪುರಾತನ ಕಾಲದಲ್ಲಿ ಅಲ್ಲೊಂದು ಗೋಳಿ ಮರ ಮತ್ತು ಅದಕ್ಕೆಂದೇ ಒಂದು ಕಟ್ಟೆ ಇತ್ತು ಎನಿಸುತ್ತದೆ. ನಾಲ್ಕು ರಸ್ತೆ ಕೂಡುವ ತಾಣ ಅದು. ಈ ನಡುವೆ, ಅಲ್ಲೇ ಇದ್ದ ಪುರಾತನ ಕಾಲದ ಶಂಕರನಾರಾಯಣ ದೇವಾಲಯವು ಪ್ರಸಿದ್ಧಿಗೆ ಬಂತು. ಆದ್ದರಿಂದ ಆ ಹಳ್ಳಿಯನ್ನು ದೇವರ ಹೆಸರಿನಲ್ಲಿ ಅಂದರೆ 'ಶಂಕರನಾರಾಯಣ' ಎಂದು ಕರೆಯತೊಡಗಿದರು! ದೇವರ ಹೆಸರು, ವ್ಯಕ್ತಿಯ ಹೆಸರು ಒಂದು ಹಳ್ಳಿಯ ಹೆಸರಾಗಿದೆ ಎಂಬ ಕ್ವಿಜ್ ಪ್ರಶ್ನೆಗೆ ಈ ಊರು ಸೂಕ್ತ!

ಬೆಳಗ್ಗೆ ಶಾಲೆಗೆ ಅನುಕೂಲವಾದ ಸಮಯಕ್ಕೆ ಬಸ್ ಇರಲಿಲ್ಲವೆಂದೋ, ಆಗ ಎಲ್ಲರೂ ಅನುಸರಿಸುತ್ತಿದ್ದ ಮಿತವ್ಯಯದ ಆಚರಣೆಯಿಂದಲೋ ಏನೋ, ನಾವು ಹಲವರು ಮಕ್ಕಳು ರಸ್ತೆಯ ಮೇಲೆ ನಡೆಯುತ್ತಾ ಹೋಗಿ ಹೈಸ್ಕೂಲು ತಲುಪುತ್ತಿದ್ದೆವು. ಎಷ್ಟೋ ದಿನ ಸಂಜೆ ವಾಪಸ್ ಬರುವಾಗಲೂ 5 ಕಿ.ಮೀ. ನಡೆದೇ ಮನೆ ಸೇರಿದ್ದುಂಟು. ಆಗ ಬಸ್ ಚಾರ್ಜ್ 35 ಪೈಸೆ. ಅದನ್ನು ಉಳಿಸಲು ಈ ರಸ್ತೆ ಚಾರಣ ಎನ್ನಬಹುದಾದರೂ, ಆ ದಾರಿಯ ಸೌಂದರ್ಯಕ್ಕೆ, ಸೌಕರ್ಯಕ್ಕೆ ಮನಸೋತು ನಡೆದಿದ್ದೇವೆ ಎಂದು ಈಗ ಹೇಳಿದರೂ, ಒಪ್ಪಬಹುದು. ಏಕೆಂದರೆ, ದಾರಿಯುದ್ದಕ್ಕೂ ಹಸಿರಿನ ಸಿರಿ. ಜತೆಗೆ ನಡೆದು ವಾಪಸ್ ಬರುವಾಗಲೂ, ಮನೆ ತಲುಪುವಾಗ ಸಂಜೆಗತ್ತಲಾದರೂ, ಯಾರಿಗೂ ಯಾವುದೇ ರೀತಿಯ ಭಯವಿರಲಿಲ್ಲ. ಅದೆಷ್ಟೋ ಬಾರಿ ಹುಡುಗರು, ಹುಡುಗಿಯರು ಒಬ್ಬೊಬ್ಬರೇ ನಡೆದು ಬರುತ್ತಿದ್ದುದೂ ಉಂಟು. ಅಲ್ಲಲ್ಲಿ ಸಿಗುವ ಮನೆಯವರ ಸಹಕಾರವು ಪರೋಕ್ಷ ಧೈರ್ಯ ನೀಡುತ್ತಿತ್ತು. ದಾರಿಯ ನಡುವೆ ಬಾಯಾರಿದರೆ, ಯಾರ ಮನೆಗೆ ಹೋದರೂ, ಕುಡಿಯಲು ಬೆಲ್ಲ ನೀರು ಕೊಡುತ್ತಿದ್ದರು. ಕಬ್ಬಿನಾಲೆಯ ಸಮಯದಲ್ಲಿ ಎಲ್ಲರಿಗೂ ಕುಡಿಯಲು ಕಬ್ಬಿನ ಹಾಲು, ತಿನ್ನಲು ಕಬ್ಬಿನ ಕೋಲು! ನಡೆದು ಮನೆ ಸೇರುವಾಗ ಕತ್ತಲಾದರೂ, ದಾರಿಯಲ್ಲಿ ಮನುಷ್ಯರಿಂದ ಭಯ, ಶೋಷಣೆ ಇರಲಿಲ್ಲ. ಹುಲಿ, ಚಿರತೆ ಕಾಟ ಇರಲಿಲ್ಲ. ಆದ್ದರಿಂದಲೇ ಆ ನಡಿಗೆಯ ಅನುಭವ ಅನುಪಮ.

ಮಳೆಗಾಲದಲ್ಲಿ ನಮ್ಮ ಮನೆಯಿಂದ ಹೈಸ್ಕೂಲಿಗೆ ನಡೆದು ಹೊರಟರೆ, ಮೊದಲಿನ ಅರ್ಧ ಕಿ.ಮೀ. ದೂರ ತುಸು ರಗಳೆಯೇ ಸರಿ. ಒಂದು ಕೈಯಲ್ಲಿ ಕೊಡೆ, ಇನ್ನೊಂದು ಕೈಯಲ್ಲಿ ಬುತ್ತಿಪಾತ್ರೆ ಹಿಡಿದು ಆ ಬೈಲನ್ನು ದಾಟುವುದು ಸಣ್ಣ ಸಾಹಸ. ಮಳೆ ಸುರಿಯವಾಗ, ಕೊಡೆ ಹಿಡಿದು ಗದ್ದೆಯಂಚಿನ ಮೇಲೆ ನಡಿಗೆ, ಎರಡೂ ಕಡೆ ಭತ್ತ ಬೆಳೆದ ಗದ್ದೆ, ಅದರಾಚೆ ನೀರು ಹರಿಯುವ ತೋಡು, ಆ ತೋಡನ್ನು ದಾಟಲು ಮರದ ಸಾರ, ಅದನ್ನು ದಾಟಿ, ಹಾಡಿಯ ದಾರಿ ಹಿಡಿದು ಅರ್ಧ ಗಂಟೆ ನಡೆದಾಗ ನಮ್ಮೂರಿನ ಬಸ್‌ಸ್ಟಾಪ್ ಸಿಗುತ್ತಿತ್ತು. ಅಲ್ಲಿಂದಾಚೆ ಹೆಚ್ಚಿನ ದಿನ ರಸ್ತೆಯ ಮೇಲೆ ನಡೆಯುವ ಕೆಲಸ. ನಮ್ಮೂರಿನ ಹತ್ತಿರವೇ ವಾರಾಹಿ ನದಿಗೆ ಅಡ್ಡಲಾಗಿ ನಿರ್ಮಿಸಲಾಗಿದ್ದ ಹೊಸ ಸೇತುವೆಯ ಮೇಲೆ ನಡೆಯುವಾಗ, ಕೆಳಗೆ ಹರಿಯುವ ನೀರನ್ನು ನೋಡುವ ಆಸೆ. ಮಳೆಗಾಲದಲ್ಲಾದರೆ, ಆ ನದಿಯಲ್ಲಿ ಹರಿಯುವ ಕೆಂಪನೆಯ ನೀರು, ಅದರಲ್ಲಿ ಒಮ್ಮೊಮ್ಮೆ ತೇಲಿಬರುವ ಬೃಹತ್ ಗಾತ್ರದ ಮರಗಳು! ಚಳಿಗಾಲದಲ್ಲಿ ಆ ನದಿಯ ತಿಳಿಯಾದ ನೀರಿನಲ್ಲಿ ಓಡಾಡುವ ಗೊದಮೊಟ್ಟೆಗಳ ಹಿಂಡು, ಮೀನುಗಳ ದಂಡು ಕಾಣಸಿಗುತ್ತಿತ್ತು.

ಸೇತುವೆ ದಾಟಿದ ನಂತರ, ರಸ್ತೆಯ ಇಕ್ಕೆಲದಲ್ಲೂ ಹಾಡಿ, ಕಾಡು, ಅಲ್ಲಲ್ಲಿ ಗುಡ್ಡ. ಬೇಸಗೆ ಹತ್ತಿರ ಬರುತ್ತಿದ್ದಂತೆ, ದಾರಿಯ ತುಸು ಒಳಭಾಗದಲ್ಲಿ ಕುರುಚಲು ಗಿಡಗಳ ನಡುವೆ ಬೆಳೆದ ಚೇಂಪಿ ಹಣ್ಣು ತಿನ್ನುವ ಅವಕಾಶ. ಚೇಂಪಿ ಹಣ್ಣು ರುಚಿ ಮತ್ತು ಗಾತ್ರದಲ್ಲಿ ದ್ರಾಕ್ಷಿಯನ್ನು ಹೋಲುತ್ತದೆ. ಬೇರೆ ಬೇರೆ ಸಮಯದಲ್ಲಿ ಬೇರೆ ಬೇರೆ ಹಣ್ಣುಗಳು ತಿನ್ನಲು ಸಿಗುತ್ತಿದ್ದುದು ಒಂದು ಸೋಜಿಗವೇ! ಗರ್ಚನ ಹಣ್ಣು, ಬೆಳಮಾರ ಹಣ್ಣು, ಕಾಟುಮಾವಿನ ಹಣ್ಣುಗಳು, ನೇರಳೆ ಹಣ್ಣು, ಸಳ್ಳೆ ಹಣ್ಣುಗಳು ಮಕ್ಕಳಿಗೆ ಬಲು ಇಷ್ಟ.

ನಾವು ನಡೆಯುವ ಟಾರುರಸ್ತೆಯ ಮೇಲೆ ಅಲ್ಲಲ್ಲಿ ಕಪ್ಪೆಗಳ ಕಳೇಬರ! ರಾತ್ರಿ ಹೊತ್ತಿನಲ್ಲೋ ಏನೊ, ವೇಗವಾಗಿ ಸಾಗುವ ಲಾರಿಗಳ ಚಕ್ರಕ್ಕೆ ಸ್ಕಿಕಿದ ಅಬ್ಬೆಪಾರಿ ಕಪ್ಪೆಗಳ ಪಾಡು ಅದು. ಅದೇ ರಸ್ತೆಯಲ್ಲಿ ನಡೆದು, ಕಲ್ಕುಟುಕನ ದೇವಾಲಯದ ಬಳಿ ದಟ್ಟ ಹಾಡಿದಾರಿಯಲ್ಲಿ ಬಲಕ್ಕೆ ಸಾಗಿ ಮುಂದುವರಿದರೆ, ಹೈಸ್ಕೂಲು ಸಿಗುತ್ತದೆ. ಈಗ ಆ ಕಲ್ಕುಟಕನ ಹಾಡಿ ಸಂಪೂರ್ಣ ನಾಶವಾಗಿಬಿಟ್ಟಿದೆ; ಜೆಸಿಬಿಗಳು ಆ ಜಾಗವನ್ನು ಮಟ್ಟಸ ಮಾಡಿವೆ.

ದಿನಾ ಈ ಟಾರ್‌ರಸ್ತೆಯ ಮೇಲೆ ನಡೆಯಲು ಬೋರ್ ಎನಿಸಿದರೆ, ಒಂದು ಒಳದಾರಿಯಿತ್ತು. ಕಟ್ಟೆಮಕ್ಕಿ ಉಬ್ಬು ಏರಿದ ನಂತರ, ತುಸು ದೂರದಲ್ಲಿ ಎಡಭಾಗದ ಹಕ್ಕಲಿನೊಳಗೆ ಸಾಗುವ ದಾರಿಯಲ್ಲಿ ನಡೆದರೆ, ಇನ್ನಷ್ಟು ನಿರ್ಜನ ಎನಿಸುವ ಕಾಡುದಾರಿ. ಅದರಾಚೆ ಒಂದು ಗದ್ದೆಬೈಲು, ತೋಡು, ಸಂಕ. ಅಲ್ಲಿಂದಾಚೆ ಮತ್ತೊಂದು ಗುಡ್ಡ. ಅದನ್ನೇರಿ ಇಳಿದರೆ, ಶಂಕರನಾರಾಯಣ ದೇವಾಲಯದ ಹಿಂಭಾಗದಲ್ಲಿ, ಐತಾಳರ ಮನೆಯ ಹತ್ತಿರ ಸೌಡ ರಸ್ತೆಯನ್ನು ತಲುಪಬಹುದು. ಅಲ್ಲಿಂದ ಮತ್ತೆ ಟಾರುರಸ್ತೆಯಲ್ಲಿ ಒಂದು ಕಿ.ಮೀ. ನಡೆದರೆ ನಮ್ಮ ಹೈಸ್ಕೂಲು.

ಈ ಒಳದಾರಿ ಅಷ್ಟೇನೂ ಹತ್ತಿರದ ದಾರಿ ಎನ್ನಲಾಗದು. ಆದರೆ, ಆ ದಾರಿಯುದ್ದಕ್ಕೂ ಸಿಗುವ ಹಾಡಿ, ಹಕ್ಕಲು, ಗದ್ದೆ, ಗುಡ್ಡಗಳಲ್ಲಿ ನಡೆಯುವ ಅನುಭವಕ್ಕೆಂದೇ ನಾವೆಲ್ಲಾ ಅಲ್ಲಿ ನಡೆಯುತ್ತಿದ್ದೆವು ಎನಿಸುತ್ತದೆ. ಚಳಿಗಾಲ ಕಳೆದ ನಂತರ ಆ ದಾರಿಯುದ್ದಕ್ಕೂ ಮಾವಿನ ಮಿಡಿಗಳು ತಿನ್ನಲು ಸಿಗುತ್ತಿದ್ದವು. ಅಲ್ಲಲ್ಲಿ ಕೆಲವರು ಕಬ್ಬಿನಾಲೆ ಮಾಡುವವರು ಕಬ್ಬು ಕೊಡುತ್ತಿದ್ದರು. ನಾನೊಮ್ಮೆ ಒಬ್ಬನೇ ಆ ದಾರಿಯಲ್ಲಿ ನಡೆದಾಗ, ಒಂದು ಪುಟಾಣಿ ಹಕ್ಕಿಯ ಗೂಡನ್ನು ಕಂಡ ನೆನಪಿದೆ. ಗದ್ದೆಯಂಚಿನ ತೋಡಿನ ಪಕ್ಕದ ಮುಂಡುಕದ ಮುಳ್ಳು ಎಲೆಗಳ ನಡುವೆ ಆ ಸಣ್ಣ ಹಕ್ಕಿ ಗೂಡು ಕಟ್ಟಿತ್ತು. 5 ಅಡಿ ಎತ್ತರದಲ್ಲಿ ಇದ್ದ ಆ ಗೂಡು, ಟ್ಯೂಬ್ ಆಕಾರದಲ್ಲಿತ್ತು. ಪೂರ್ತಿ ಎಲೆಗಳಿಂದಲೇ ನಿರ್ಮಾಣ. ಆ ಹಕ್ಕಿಯ ಹೆಸರು ಗೊತ್ತಿರಲಿಲ್ಲ. ನಾನು ಗೂಡನ್ನು ನೋಡುತ್ತಾ ನಿಂತಾಗ, ಆ ಹಕ್ಕಿಯು ಬೆದರಿ ಹಾರಿಹೋಗಿದ್ದು ನೆನಪಿದೆ. 'ಓ, ನಾವೆಲ್ಲಾ ಈ ರೀತಿ ಹತ್ತಿರದಿಂದ ಅದನ್ನು ನೋಡಿದರೆ ಅದಕ್ಕೆ ತೊಂದರೆ' ಎಂದರಿತ ನಾನು, ಬೇಗ ಬೇಗನೆ ಕಾಲು ಹಾಕಿದೆ.

ಹೈಸ್ಕೂಲಿನ ಹಿಂಭಾಗದಲ್ಲಿ ಆರಂಭದಲ್ಲಿ, ಒಂದು ಕುರುಚಲು ಕಾಡಿದೆ. ಆ ನಂತರ ದಟ್ಟವಾದ ಕಾಡು, ಗುಡ್ಡ. ಶಾಲೆಯ ಹಿಂಭಾಗದ ಕುರುಚಲು ಗಿಡಗಳ ಒಂದು ಟೊಂಗೆಯಲ್ಲಿ ಹಕ್ಕಿಯೊಂದು ಕಟ್ಟಿದ್ದ ಗೂಡು ಇಂದಿಗೂ ನೆನಪಿದೆ. ಪಾಪ, ಆ ಹಕ್ಕಿಯು ಮೂರರಿಂದ ನಾಲ್ಕು ಅಡಿಗಳ ಎತ್ತರದಲ್ಲಿ ಗೂಡುಕಟ್ಟಿ ಮೊಟ್ಟೆಯಿಟ್ಟಿತ್ತು. ಸಾಮಾನ್ಯವಾಗಿ ದರ್ಜಿ ಹಕ್ಕಿಗಳು ಅಷ್ಟು ಕಡಿಮೆ ಎತ್ತರದಲ್ಲಿ ಗೂಡು ಕಟ್ಟುತ್ತವೆ. ಅದೂ ದರ್ಜಿಹಕ್ಕಿಯ ಗೂಡು ಇರಬಹುದು. ನಾವು ಮಕ್ಕಳು ಪ್ರತಿದಿನ ಆ ಗೂಡನ್ನು ನೋಡುತ್ತಿದ್ದೆವು. ಹತ್ತಿರದಿಂದ, ತಲೆಬಗ್ಗಿಸಿ, ಮಾತನಾಡುತ್ತಾ ನಾವು ನೋಡುತ್ತಾ ನಿಂತಾಗ, ಆ ಹಕ್ಕಿಗೆ ಅದರಿಂದ ಅದೆಷ್ಟು ಕಿರಿಕಿರಿ ಆಯಿತೋ ಗೊತ್ತಿಲ್ಲ.

ಹೆಚ್ಚಿನ ದಿನ ನಮ್ಮ ಬುತ್ತಿಪಾತ್ರೆಯಲ್ಲಿ ಹಾಕಿಕೊಡುತ್ತಿದ್ದುದು, ಅನ್ನ ಅಥವಾ ಗಂಜಿ, ಅದರ ಜತೆ ಮೊಸರು, ಅದರ ಮೇಲೊಂದು ಉಪ್ಪಿನಕಾಯಿ ಹೋಳು. ಹೈಸ್ಕೂಲು ಸೇರಿದ ಹೊಸತರಲ್ಲಿ, ಮೂರು ಕಂಪಾರ್ಟ್ಮೆಂಟ್ ಇರುವ ಪುಟ್ಟ ಬುತ್ತಿಪಾತ್ರೆಯನ್ನು ನಮ್ಮಪ್ಪ ತೆಗೆಸಿಕೊಟ್ಟಿದ್ದರು. ಅದರಲ್ಲಿ ಪ್ರತ್ಯೇಕವಾಗಿ ಉಪ್ಪಿನಕಾಯಿ ಹಾಕಿಕೊಳ್ಳುವ ಅವಕಾಶ. ಮಳೆಗಾಲದಲ್ಲಿ ನಮ್ಮ ಹೈಸ್ಕೂಲಿನ ಪಕ್ಕದಲ್ಲೇ ಹರಿಯುತ್ತಿದ್ದ ತಿಳಿನೀರಿನ ತೊರೆಯಲ್ಲಿ ಕೈತೊಳೆಯುವ, ಬುತ್ತಿಪಾತ್ರೆ ತೊಳೆಯುವ ಪರಿಪಾಠ.

ಒಮ್ಮೊಮ್ಮೆ ಬುತ್ತಿಯೂಟ ತಿನ್ನಲು, ಶಾಲೆಯ ಹಿಂಭಾಗದ ಕಾಡಿನತ್ತ ಸಾಗಿದ್ದ ಗಾಡಿಜಾಡಿನಲ್ಲಿ ಸ್ವಲ್ಪ ದೂರ ನಡೆದು ಹೋಗುತ್ತಿದ್ದೆವು. ಅಲ್ಲಿ ಪುರಾತನ ಕಾಲದ ಹಲವು ಮರಗಳಿದ್ದವು, ಅವುಗಳ ದಪ್ಪನೆಯ ಬೇರು ನಮ್ಮ ಕುರ್ಚಿ, ಇನ್ನೊಂದು ಬೇರು ಟೇಬಲ್. ಅದೊಂದು ದಟ್ಟ, ಸುಂದರ ಕಾಡು. ಊಟ ಮುಗಿಸಿದಾಗ, ಕೈತೊಳೆಯಲು ಅಲ್ಲೊಂದು ನೀರಿನಾಶ್ರಯವಿತ್ತು. ಸುಮಾರು ಹತ್ತು ಅಡಿ ವಿಶಾಲವಿದ್ದ ಆ ನೀರಿನ ಗುಮ್ಮಿಯಲ್ಲಿ ಬೇಸಗೆಯಲ್ಲೂ ನೀರಿರುತ್ತಿತ್ತು. ಅದರ ಸುತ್ತಲೂ ಗಿಡ, ಪೊದೆ, ಬಳ್ಳಿ, ಮರಗಳಿದ್ದುದರಿಂದಲೇ ಇರಬೇಕು, ಅದರ ನೀರು ಒಣಗುತ್ತಿರಲಿಲ್ಲ. ಆದರೆ, ಆ ಗುಮ್ಮಿಗೆ ನಿರಂತರವಾಗಿ ಎಲೆಗಳು ಬೀಳುತ್ತಿದ್ದುದರಿಂದಾಗಿ, ಆ ನೀರನ್ನು ಬಾಯಿಗೆ ಹಾಕಿಕೊಂಡರೆ, ಎಲೆಕೊಳೆತ ರುಚಿ! ಕೈತೊಳೆಯಲು, ಬುತ್ತಿಪಾತ್ರೆ ತೊಳೆಯಲು ಮಾತ್ರ ಅದರ ಉಪಯೋಗ. ಆ ಸುತ್ತಲೂ ಎಲ್ಲೂ ಮನೆಗಳಿರಲಿಲ್ಲ. ಅದು ಕಾಡುಪ್ರಾಣಿಗಳೇ ಮಾಡಿದ ಗುಮ್ಮಿ ಇರಬಹುದು. ಕಾಡುಪ್ರಾಣಿಗಳ ಉಪಯೋಗಕ್ಕೆ ಸೂಕ್ತವಾಗಿತ್ತು ಆ ಗುಮ್ಮಿಯ ನೀರು.

ಅದೇ ಗುಮ್ಮಿಯ ಪಕ್ಕ ಸಾಗಿದ್ದ ಗಾಡಿಜಾಡಿನಲ್ಲಿ ನಾನು ಮತ್ತು ಸಹಪಾಠಿ ಒಮ್ಮೆ ನಡೆದುಕೊಂಡು ಹೋಗಿದ್ದುಂಟು. ಅವರ ಮನೆಯು ನಮ್ಮ ಮನೆಗಿಂತಲೂ ಹೆಚ್ಚು ದುರ್ಗಮ ಸ್ಥಳದಲ್ಲಿತ್ತು. ಹೈಸ್ಕೂಲಿನ ಹಿಂಭಾಗದ ಆ ದಾರಿಯಲ್ಲಿ 5 ಕಿ.ಮೀ. ನಡೆದರೆ ಅವರ ಊರು ರಟ್ಟಾಡಿ. ಒಂದು ಸಂಜೆ ಕ್ಲಾಸ್ ಮುಗಿಸಿ, ನಾವಿಬ್ಬರು ಆ ದಾರಿ ಹಿಡಿದೆವು. ಎಲ್ಲಾ ಕಡೆ ಕಾಡು, ಹಾಡಿ, ಗುಡ್ಡಗಳು! ನಡುನಡುವೆ ಗದ್ದೆಗಳು. ಅವುಗಳ ನಡುವೆ ದಾರಿಗಡ್ಡಲಾಗಿ ವಾರಾಹಿ ಹೊಳೆಯ ಉಪನದಿ! ಅವು ಬೇಸಗೆಯ ದಿನಗಳಾಗಿದ್ದರಿಂದ ನೀರು ಕಡಿಮೆಯಿತ್ತು. ಆ ನೀರಿನಲ್ಲಿ ನಡೆದರೆ ತೊಡೆ ಮಟ್ಟದ ನೀರು. ನಿಧಾನವಾಗಿ, ಜಾಗ್ರತೆಯಿಂದ ಆ ಹರಿಯುವ ನೀರಿನಲ್ಲಿ ನದಿಯನ್ನು ದಾಟುವಾಗ ನನ್ನ ಚಡ್ಡಿಯ ಅಂಚು ತುಸು ಒದ್ದೆಯಾಯಿತು. ಆದರೆ ಸಂಜೆಯ ಇಳಿಬಿಸಿಲಿನಲ್ಲಿ, ಆ ವಿಶಾಲ ನದಿಯ ಹರವನ್ನು ಕಾಲ್ನಡಿಗೆಯಲ್ಲೇ ದಾಟಿದ ಅನುಭವ ಮಾತ್ರ ಅಪೂರ್ವ. ನಮ್ಮ ಹೈಸ್ಕೂಲಿನ ವಿಶೇಷತೆ ಎಂದರೆ, ಮುಂಭಾಗದಲ್ಲೊಂದು ವಿಶಾಲವಾದ ಆಟದ ಮೈದಾನ, ಹಿಂಭಾಗದಲ್ಲಿ ಅದಕ್ಕಿಂತಲೂ ವಿಶಾಲವಾದ ಇನ್ನೊಂದು ಆಟದ ಮೈದಾನ. ಹಿಂಭಾಗದ ಮೈದಾನ ಅದೆಷ್ಟು ವಿಶಾಲವೆಂದರೆ, ಫುಟ್‌ಬಾಲ್ ಆಟ ಆಡುವಷ್ಟು! ಅಲ್ಲಿದ್ದ ಹೆಬ್ಬಾರ್ ಎಂಬ ಪಿ.ಇ. ಟೀಚರ್, ಮಕ್ಕಳ ಸಹಾಯದಿಂದ ಅಷ್ಟು ದೊಡ್ಡ ಆಟದ ಮೈದಾನ ನಿರ್ಮಿಸಿದ್ದರು. ಸಮಯ ಇದ್ದಾಗಲೆಲ್ಲಾ ಶಾಲಾ ಮಕ್ಕಳು ಗುಡ್ಡವನ್ನು ತರಿದು, ಕೈಗಾಡಿಯಲ್ಲಿ ಮಣ್ಣನ್ನು ತುಂಬಿಕೊಂಡು, ಇಳಿಜಾರಿಗೆ ತುಂಬಿಸುವ ಕೆಲಸ ಮಾಡಿದ್ದರು. ಈ ರೀತಿ ಹಲವು ವರ್ಷ ಮಾಡಿದ್ದರಿಂದ, ಅಷ್ಟು ದೊಡ್ಡ ಮೈದಾನ ಸಿದ್ಧವಾಗಿತ್ತು. ನಾನೂ ಆ ಮೈದಾನ ನಿರ್ಮಿಸಲು, ಮಣ್ಣನ್ನು ಕೈಗಾಡಿಯಲ್ಲಿ ತಳ್ಳಿ ತಂದು ಇಳಿಜಾರಿಗೆ ಹಾಕಿ, ಅಳಿಲುಸೇವೆ ಮಾಡಿದ್ದೆ. ಆದರೆ, ಅಷ್ಟು ಹೊತ್ತಿಗೆ ಅದಾಗಲೇ, ಹಿಂದಿನ ವಿದ್ಯಾರ್ಥಿಗಳು ಮಣ್ಣು ಹೊತ್ತು, ಮಣ್ಣು ಹೊತ್ತು, ಸಾಕಷ್ಟು ವಿಶಾಲ ಮೈದಾನವನ್ನು ನಿರ್ಮಾಣ ಮಾಡಿದ್ದರು. ಮಕ್ಕಳೆಲ್ಲರೂ ಕ್ರಿಕೆಟ್, ಫುಟ್‌ಬಾಲ್, ಕಬಡ್ಡಿ, ಬಾಲ್‌ಬ್ಯಾಡ್ಮಿಂಟನ್, ವಾಲಿಬಾಲ್, ಥ್ರೋಬಾಲ್, ಖೋಖೋ ಆಡಲು ಪ್ರಶಸ್ತವಾದ ಮೈದಾನವದು! ಮೈದಾನ ನಿರ್ಮಿಸಲು ನಾನೂ ಒಂದಷ್ಟು ಮಣ್ಣನ್ನು ತರಿದು, ಕೈಗಾಡಿಯಲ್ಲಿ ತಂದು ಒಂದು ಮೂಲೆಯಲ್ಲಿ ರಾಶಿ ಹಾಕಿದ್ದರಿಂದಾಗಿ, 'ಶಾಲೆಗೆ ಮಣ್ಣು ಹೊತ್ತಿದ್ದು' ಎಂಬ ನುಡಿಗಟ್ಟು ಇಲ್ಲಿ ನಿಜವಾಗಿಯೂ ಅನುಭವಕ್ಕೆ ಬಂದಿತ್ತು!

ಈಗ ಆ ಹೈಸ್ಕೂಲು ಅಭಿವೃದ್ಧಿ ಕಂಡಿದೆ. ಅಲ್ಲೀಗ ಪ್ರಥಮದರ್ಜೆ ಕಾಲೇಜು ಆರಂಭಗೊಂಡಿದೆ.

ಪ್ರತಿಸ್ಪಂದನ

ಶಂಕರನಾರಾಯಣ ಭಟ್

ಪ್ರಗತಿಯೂ ಪರಿಸರ ಪ್ರೇಮವೂ...

'ಸಮನ್ವಯತೆ ಸಾಧಿಸಬೇಕು' ಎಂಬ ಶೀರ್ಷಿಕೆಯುಳ್ಳ ಸಂಪಾದಕೀಯ (ಆ.21) ಅತ್ಯಂತ ಗಂಭೀರ ವಿಷಯದ ಚರ್ಚೆಗೆ ಮುಂದಾಗಿದೆ. ಇಂದು ಎಲ್ಲ ಕ್ಷೇತ್ರಗಳಲ್ಲೂ 'ಅಭಿವೃದ್ಧಿ ಮಂತ್ರ'ವು ಪಠಿಸಲ್ಪಡುತ್ತಿದೆ. ರೈಲು ಸಂಚಾರ ವಿಭಾಗವೂ ಅದಕ್ಕೆ ಹೊರತಲ್ಲ. ಅದರಲ್ಲೂ ನಗರಗಳಲ್ಲಿ ಕಾಣಬರುವ ಮಿತಿಮೀರಿದ ಜನಸಂದಣಿ, ಅದಕ್ಕೆ ತಕ್ಕಂತೆ ವಾಹನಗಳ ಏರಿಕೆ ನಿಜಕ್ಕೂ ಒಂದು ದೊಡ್ಡ ಸಮಸ್ಯೆಯೇ ಸರಿ. ಇದಕ್ಕೆ ಬೆಂಗಳೂರೂ ಹೊರತಲ್ಲ.

ಈ ಹಿಂದೆ ಬೆಂಗಳೂರಿನಲ್ಲಿ, ಮುಂಬೈನಲ್ಲಿರುವಂಥ ಲೋಕಲ್ ಟ್ರೇನುಗಳ ಸೌಲಭ್ಯ ಇರಲಿಲ್ಲ. ಹೀಗಾಗಿ ಪ್ರಯಾಣಿಕರು ರಸ್ತೆಯನ್ನೇ ಅವಲಂಬಿಸಿ ಸಾಗಬೇಕಿತ್ತು. ಇದು ಎಷ್ಟೊಂದು ಕಷ್ಟವನ್ನು ತಂದೊಡ್ಡಿತು ಎಂದರೆ, ಕೇವಲ 5 ಕಿ.ಮೀ. ಚಲಿಸಲೂ ರಸ್ತೆಯ ಮೇಲೆ ತಾಸುಗಟ್ಟಲೆ ಇರಬೇಕಾಗಿತ್ತು. ಅದಕ್ಕೆ ಕಾರಣ ಮಿತಿಮೀರಿದ ವಾಹನ ದಟ್ಟಣೆ. ಈ ಪರಿಸ್ಥಿತಿಯನ್ನು ಹಿಡಿತಕ್ಕೆ ತರುವುದು ದುಸ್ತರ ಎಂಬುದು ಮನವರಿಕೆಯಾದಾಗ ಹುಟ್ಟಿಕೊಂಡಿದ್ದೇ 'ನಮ್ಮ ಮೆಟ್ರೋ'. ಒಂದು ಸಂಚಾರದಲ್ಲೇ ಹೆಚ್ಚು ಜನರನ್ನು ಸಾಗಿಸಬಲ್ಲ ರೈಲು ಪ್ರಯಾಣ ನಿಜಕ್ಕೂ ಸುರಕ್ಷಿತ ಎಂಬುದಕ್ಕೆ ಮುಂಬೈ ಒಂದನ್ನೇ ಉದಾಹರಿಸಿದರೂ ಸಾಕು. ಒಂದೊಮ್ಮೆ ಮುಂಬೈನಲ್ಲಿ ಲೋಕಲ್ ಟ್ರೇನುಗಳು ಇರದೇ ಹೋಗಿದ್ದರೆ ನಗರ ಸಂಚಾರ ಅಸಾಧ್ಯ ವಾಗಿರುತ್ತಿತ್ತು, ಅಸ್ತವ್ಯಸ್ತವಾಗುತ್ತಿತ್ತು.

ಇಂದು ಬೆಂಗಳೂರಿನ ಸ್ಥಿತಿಯೂ ಹಾಗೇ ಆಗಿದೆ. 'ಹಳದಿ ಮಾರ್ಗ'ದ ಹೆಸರಿನಲ್ಲಿ ಮತ್ತೊಂದು ಮೆಟ್ರೋ ಸಂಚಾರ ಪ್ರಾರಂಭಗೊಂಡರೂ ಟ್ರಾಫಿಕ್ ಜಾಮ್ ಕಡಿಮೆ ಆಗದಿರುವುದನ್ನು ಗಮನಿಸಿ ಸಂಬಂಧಪಟ್ಟವರು 'ಕಿತ್ತಳೆ ಮಾರ್ಗ'ಕ್ಕೆ ಅಣಿಯಾಗುತ್ತಿರುವುದು ಸಂತೋಷ. ಆದರೆ ಈ ಭರದಲ್ಲಿ ಪರಿಸರ ಸಂರಕ್ಷಣೆಯ ಆಶಯಕ್ಕೆ ಧಕ್ಕೆಯಾಗಬಾರದಲ್ಲವೇ? ಸಂಪಾದಕೀಯದಲ್ಲಿ ಹೇಳಿರುವಂತೆ, ಒಂದು ಕಾಲಕ್ಕೆ ಗಿಡ-ಮರಗಳಿಂದ ಕಂಗೊಳಿಸುವ 'ಉದ್ಯಾನ ನಗರಿ'ಯಾಗಿದ್ದ ಬೆಂಗಳೂರು ಇಂದು 'ಕಾಂಕ್ರೀಟ್ ಜಂಗಲ್' ಆಗಿ ರೂಪಾಂತರಗೊಂಡಿರುವುದು ಬೇಸರದ ಸಂಗತಿ. ಕಾರಣ, 'ಅಭಿವೃದ್ಧಿ'ಯ ಹೆಸರಿನಲ್ಲಿ ಒಂದಿಷ್ಟು ಹೊಂದಾಣಿಕೆಯಾಗುತ್ತಿದೆ. ಪ್ರಹಸನ ಇಷ್ಟಕ್ಕೇ ಮುಗಿಯದೆ ರೈಲುಮಾರ್ಗದ ನಿರ್ಮಾಣಕ್ಕಾಗಿ ಸಾವಿರಾರು ಮರಗಳನ್ನೂ ಕಡಿಯಲೇಬೇಕಾದ ಅನಿವಾರ್ಯತೆ ಒದಗಿರುವುದು ಚಿಂತೆಯ ವಿಷಯವೇ. ಪರಿಸರ ಸ್ವಚ್ಛ ಇರಲೇ ಬೇಕು, ಅದಕ್ಕೆ ಮರಗಳೂ ಬೇಕೇ ಬೇಕು, ಅದರ ಮಧ್ಯೆ ಅಭಿವೃದ್ಧಿ ಚಟುವಟಿಕೆಗಳೂ ನಡೆಯಲೇಬೇಕು. ಎಂಥಾ ಜಟಿಲ ಸಮಸ್ಯೆ! ಇಲ್ಲೇ ಬರುವುದು ಸಮನ್ವಯದ ಚರ್ಚಾವಿಷಯ. ಇದು ಹೇಗೆ ಸಾಧ್ಯ?

ಇಲ್ಲೊಂದು ಪ್ರಶ್ನೆ: ನಮ್ಮ ಆಡಳಿತಗಾರರು 'ಅಧ್ಯಯನ ಪ್ರವಾಸ'ದ ಹೆಸರಲ್ಲಿ ಅದೆಷ್ಟೋ ಬಾರಿ ವಿದೇಶ ಪ್ರವಾಸ ಕೈಗೊಳ್ಳುತ್ತಾರಲ್ಲವೇ? ಅಲ್ಲೂ ಇಂಥದೇ ಸಮಸ್ಯೆ ಇದ್ದಿರಲೇಬೇಕು. ಹಾಗಾದರೆ ಅವರೆಲ್ಲ ಅದಕ್ಕೆ ಎಂಥ ಪರಿಹಾರ ಕಂಡುಕೊಂಡರು, ಅಭಿವೃದ್ಧಿ ಚಟುವಟಿಕೆ ಮತ್ತು ಪರಿಸರ ಸಂರಕ್ಷಣೆಯ ಮಧ್ಯೆ ಹೇಗೆ ಸಮನ್ವಯ ಸಾಧಿಸಿದರು ಎಂಬುದನ್ನು ಆ ವೇಳೆ ಅರಿತು, ನಮ್ಮಲ್ಲೂ ಅದನ್ನು ಅಳವಡಿಸಬಹುದಲ್ಲವೇ? ನೂರಾರು ದೇಶಗಳನ್ನು ಸುತ್ತಾಡಿ ಅಲ್ಲಿಯ ಅಭಿವೃದ್ಧಿಯ ಪರಿಯನ್ನು ಕಂಡವರಿಗೆ, ತಮ್ಮ ಅನುಭವ ಹಂಚಿಕೊಳ್ಳುವ ಅವಕಾಶವನ್ನು ಸರಕಾರ ಒದಗಿಸಿದರೆ ಈ ಸಮಸ್ಯೆಗೆ ಪರಿಹಾರ ಸಿಗಬಹುದಲ್ಲವೇ? ಆದರೆ ನಮ್ಮಲ್ಲೊಂದು ಎದ್ದು ಕಾಣುವ ಎಡವಟ್ಟಿದೆ. ಅದೆಂದರೆ ಆಡಳಿತಗಾರರು ಮತ್ತು ಪರಿಸರವಾದಿಗಳ ನಡುವಿನ ಸಮನ್ವಯದ ಕೊರತೆ. ಇಬ್ಬರೂ ತಂತಮ್ಮ ಜಿದ್ದಿಗೆ ಬಿದ್ದಂತೆ ಕಾಣುತ್ತಿದೆ. ಹೊಂದಾಣಿಕೆ ಅಥವಾ ಸಮನ್ವಯತೆಗೆ ಯಾರೂ ಮುಂದಾಗುತ್ತಿಲ್ಲ, ಹೀಗಾಗಿ ಒಬ್ಬರು ಹೇಳಿದ್ದನ್ನು ಇನ್ನೊಬ್ಬರು ಕೇಳಿಸಿಕೊಳ್ಳುವಂಥ ವ್ಯವಧಾನವೂ ಇಲ್ಲದಂತಾಗಿದೆ, ಪ್ರತಿಷ್ಠೆ ಮತ್ತು ಅಹಮಿಕೆ ಅಡ್ಡಿಬರುತ್ತಿವೆ. ನಮ್ಮ ದೇಶದಲ್ಲಿ ಇಂದೂ ಅದೆಷ್ಟೋ ವಿಷಯಗಳಿಗೆ ಜಡ್ಡು ಹಿಡಿದಿರುವುದು ಇದೇ ಕಾರಣಕ್ಕೆ. ಶ್ರೇಯವನ್ನು ತಮ್ಮದಾಗಿಸಿಕೊಳ್ಳುವ ಸಮರ ಮತ್ತು ಪ್ರತಿಷ್ಠೆಗಳು ಕಡಿಮೆಯಾದರೆ, ಸಮನ್ವಯತೆ ತನ್ನಿಂತಾನೇ ಬಂದೊದಗುತ್ತದೆ.

(ಲೇಖಕರು ಹವ್ಯಾಸಿ ಬರಹಗಾರರು)

ದೇಶದಲ್ಲಿನ ರೇಬಿಸ್ ಸಮಸ್ಯೆಗೆ 'ಸುಪ್ರೀಂ' ತೀರ್ಪು ಪರಿಹಾರವೇ?

ನಾಯಿನೆರಳು
ಡಾ. ರೋಹಿತ್ ಕುಮಾರ್ ಎಚ್.ಜಿ.
vveditoped@gmail.com

2025ರ ಆಗಸ್ಟ್ 11ರಂದು, ಭಾರತದ ಸುಪ್ರೀಂ ಕೋರ್ಟ್ ನೀಡಿದ ಆದೇಶವು ದೇಶಾದ್ಯಂತ ಸಾರ್ವಜನಿಕರ ಸುರಕ್ಷತೆ ಮತ್ತು ಪ್ರಾಣಿಹಿತಾಸಕ್ತಿ ನಡುವಿನ ಚರ್ಚೆಯನ್ನು ಎಬ್ಬಿಸಿದೆ.

ದೆಹಲಿ ರಾಷ್ಟ್ರೀಯ ರಾಜಧಾನಿ ಪ್ರದೇಶದ ಭಾಗವಾದ ಘಾಜಿಯಾಬಾದ್‌ನಲ್ಲಿ ಜೂನ್ 30ರಂದು ಛಾವಿ ಶರ್ಮಾ ಎಂಬ ಆರು ವರ್ಷದ ಬಾಲಕಿಯ ಮೇಲೆ ರೇಬಿಸ್ ಸೋಂಕಿತ ಬೀದಿನಾಯಿಯೊಂದು ಆಕ್ರಮಣ ಮಾಡಿ, ಗಂಭೀರವಾಗಿ ಗಾಯಗೊಳಿಸಿತ್ತು. ಸ್ಥಳೀಯ ಆಸ್ಪತ್ರೆಯಲ್ಲಿ ತಕ್ಷಣವೇ ಚಿಕಿತ್ಸೆ ಕೊಟ್ಟು ರೇಬಿಸ್ ಲಸಿಕೆ ನೀಡಿದಾಗ್ಯೂ, ಚಿಕಿತ್ಸೆ ಫಲಕಾರಿಯಾಗದೆ ಲಸಿಕೆಯ ನಾಲ್ಕನೇ ಮತ್ತು ಕೊನೆಯ ಡೋಸ್‌ಗಿಂತ ಕೆಲವೇ ದಿನಗಳ ಮುನ್ನ, ಅಂದರೆ ಜುಲೈ 25ರಂದು ಬಾಲಕಿ ಮೃತಪಟ್ಟಳು. ಈ ಕುರಿತು ಪತ್ರಿಕೆಗಳಲ್ಲಿ ಪ್ರಕಟವಾದ ಸುದ್ದಿಯನ್ನು ಪರಿಗಣಿಸಿ, ನ್ಯಾಯಮೂರ್ತಿಗಳಾದ ಜೆ.ಬಿ. ಪರ್ಡಿವಾಲಾ ಮತ್ತು ಆರ್. ಮಹಾದೇವನ್ ನೇತೃತ್ವದ ಪೀಠವು ಸ್ವಯಂಪ್ರೇರಿತವಾಗಿ ಪ್ರಕರಣವನ್ನು ಕೈಗೆತ್ತಿಕೊಂಡು, ದೆಹಲಿ, ಗುರುಗ್ರಾಮ, ನೊಯ್ಡಾ ಮತ್ತು ಘಾಜಿಯಾಬಾದ್‌ನಲ್ಲಿ ಬೀಡುಬಿಟ್ಟಿರುವ ಎಲ್ಲಾ ಬೀದಿನಾಯಿಗಳನ್ನು 8 ವಾರಗಳೊಳಗಾಗಿ ಸಾರ್ವಜನಿಕ ಸ್ಥಳಗಳಿಂದ ಪ್ರತ್ಯೇಕ ಆಶ್ರಯತಾಣಗಳಿಗೆ ಸ್ಥಳಾಂತರಿಸಬೇಕೆಂದು ಆದೇಶ ನೀಡಿತು. ಸಮಾಜವು ಭಯವಿಲ್ಲದೆ ಬದುಕಬೇಕು. ಶಿಶುಗಳು ಮತ್ತು ಮಕ್ಕಳು ರೇಬಿಸ್‌ಗೆ ಬಲಿಯಾಗಬಾರದು. ಹಾಗಾಗಿ, ಯಾವುದೇ ಬಡಾವಣೆಗಳಲ್ಲಿ ಬೀದಿನಾಯಿಗಳು ಇರಬಾರದು ಎಂದು ನ್ಯಾಯಾಲಯ ಆದೇಶಿಸಿದೆ. ಅಷ್ಟೇ ಅಲ್ಲದೆ, ಈ ಆದೇಶದ ಅನುಷ್ಠಾನಕ್ಕೆ ಯಾರಾದರೂ ಅಡ್ಡಿಪಡಿಸಿದರೆ ನ್ಯಾಯಾಲಯ ನಿಂದನೆಯನ್ನು ಎದುರಿಸಬೇಕಾಗುತ್ತದೆ ಎಂದೂ ಎಚ್ಚರಿಸಿದೆ.

ಈ ತೀರ್ಪಿಗೆ ಕೆಲ ದಿನಗಳಿಂದ ಪರ-ವಿರೋಧದ ಪ್ರತಿಕ್ರಿಯೆಗಳು ವ್ಯಕ್ತವಾಗುತ್ತಲೇ ಇವೆ. ಅತ್ತ ಪ್ರಾಣಿಪ್ರಿಯರು, ಪ್ರಾಣಿದಯಾ ಸಂಘಗಳ ಹೋರಾಟಗಾರರು ''ಈ ತೀರ್ಪು ಬೀದಿನಾಯಿಗಳ ಹಿಂಸೆಗೆ ಕಾರಣವಾಗುತ್ತದೆ'' ಎಂದು ದೂರಿದರೆ, ಇತ್ತ ನಾಯಿಗಳ ದಾಳಿಯಿಂದ ಬಾಧಿತ ಕುಟುಂಬದವರು ಹಾಗೂ ವಿವಿಧ ಬಡಾವಣೆಗಳ ನಿವಾಸಿ ಸಂಘದವರು ''ಇದೊಂದು ಅತ್ಯವಶ್ಯಕ ಕ್ರಮ'' ಎಂದು ಅಭಿಪ್ರಾಯಪಟ್ಟಿದ್ದಾರೆ. ಆದರೆ, ಇಂಥದ್ದೊಂದು ದೊಡ್ಡ ತೀರ್ಪಿಗೆ ಒಂದು ಸಾವು ಮಾತ್ರ ಕಾರಣವೇ ಎಂದರೆ ಖಂಡಿತಾ ತಪ್ಪಾದೀತು.

ಅಂಕಿ-ಅಂಶಗಳು: 2024ರಲ್ಲಿ ಭಾರತದಲ್ಲಿ 37 ಲಕ್ಷಕ್ಕೂ ಹೆಚ್ಚು ನಾಯಿ ಕಡಿತ ಪ್ರಕರಣಗಳು ದಾಖಲಾಗಿವೆ! 2025ರ ಮೊದಲರ್ಧದಲ್ಲಿ ಕೇವಲ ದೆಹಲಿಯಲ್ಲೇ 26,000ಕ್ಕೂ ಹೆಚ್ಚು ನಾಯಿ ಕಡಿತ ಘಟನೆಗಳು ಸಂಭವಿಸಿವೆ. ಅಂದರೆ, ದಿನಕ್ಕೆ ಸರಾಸರಿ 2,000 ಪ್ರಕರಣಗಳು! ಇದರಲ್ಲಿ ಹೆಚ್ಚು ತೊಂದರೆಗೊಳಗಾದವರು ಮಕ್ಕಳು. 2024ರಲ್ಲಿ 15 ವರ್ಷಕ್ಕಿಂತ ಕಡಿಮೆ ವಯಸ್ಸಿನ 5 ಲಕ್ಷಕ್ಕೂ ಹೆಚ್ಚು ಮಕ್ಕಳು ನಾಯಿಗಳ ದಾಳಿಗೆ ತುತ್ತಾಗಿದ್ದಾರೆ. ಅಂದರೆ ಪ್ರತಿ ಗಂಟೆಗೆ ಸುಮಾರು 60 ಮಕ್ಕಳು ಕಡಿತಕ್ಕೆ ಒಳಗಾಗಿದ್ದಾರೆ. ಮಹಾರಾಷ್ಟ್ರ, ಕರ್ನಾಟಕ, ತಮಿಳುನಾಡು ಮತ್ತು ಗುಜರಾತ್ ಅತಿ ಹೆಚ್ಚು ಪ್ರಕರಣವುಳ್ಳ ರಾಜ್ಯಗಳಾಗಿವೆ. ಕರ್ನಾಟಕದಲ್ಲಿ ಕಳೆದ ವರ್ಷ 3.6 ಲಕ್ಷ ನಾಯಿ ಕಡಿತದ ಪ್ರಕರಣಗಳು ವರದಿಯಾಗಿವೆ. ಈ ವರ್ಷದ ಮೊದಲ 6 ತಿಂಗಳಲ್ಲಿಯೇ 2.31 ಲಕ್ಷ ಪ್ರಕರಣಗಳು ದಾಖಲಾಗಿದ್ದು, ಕಳೆದ ವರ್ಷಕ್ಕಿಂತ ಶೇ.36ರಷ್ಟು ಏರಿಕೆಯಾಗಿದೆ.

ಇನ್ನು ರೇಬಿಸ್‌ನಿಂದಾದ ಸಾವಿನ ಅಂಕಿ-ಅಂಶದ ವಿಷಯಕ್ಕೆ ಬಂದರೆ, ಈ ಸಂಬಂಧ ಸ್ಪಷ್ಟ ಹಾಗೂ ಏಕಸ್ವರೂಪದ ಮಾಹಿತಿ ಲಭ್ಯವಿಲ್ಲ. ಇದಕ್ಕೆ ಮುಖ್ಯ ಕಾರಣ, ಇಂಥ ಪ್ರಕರಣಗಳನ್ನು ದಾಖಲಿಸುವಲ್ಲಿ ಇರುವ ಹಲವಾರು ಸವಾಲುಗಳು. ಲೋಕಸಭೆಯ ಅಧಿವೇಶನದಲ್ಲಿ ಕೇಳಲಾದ ಪ್ರಶ್ನೆಗೆ ಕೇಂದ್ರ ಸರಕಾರ ನೀಡಿದ ಉತ್ತರದಲ್ಲಿದ್ದ ಮಾಹಿತಿಯ ಪ್ರಕಾರ ಭಾರತದಲ್ಲಿ 2024ರಲ್ಲಿ ಕನಿಷ್ಠ 54 ರೇಬಿಸ್ ಸಾವುಗಳು ವರದಿಯಾಗಿವೆ. ಇದೇ ವರ್ಷ ಕರ್ನಾಟಕದಲ್ಲಿಯೇ 42 ಮಂದಿ ರೇಬಿಸ್‌ನಿಂದ ಮೃತಪಟ್ಟಿದ್ದಾರೆ ಎಂದು ಇನ್ನೊಂದು ವರದಿ ಹೇಳಿದೆ! ಅಂದರೆ ದೇಶದಲ್ಲಿ ಲಭ್ಯವಿರುವ ದಾಖಲೆಗಳ ಪ್ರಕಾರ ರೇಬಿಸ್ ಸಾವುಗಳಲ್ಲಿ ಕರ್ನಾಟಕವೇ ಮುಂದಿದೆ.

2025ರ ಜನವರಿಯಲ್ಲಿ ಭಾರತೀಯ ವೈದ್ಯಕೀಯ ಸಂಶೋಧನಾ ಪರಿಷತ್ತು ಪ್ರಕಟಿಸಿದ ವರದಿಯನ್ವಯ ದೇಶದಲ್ಲಿ ರೇಬಿಸ್‌ನಿಂದ ಪ್ರತಿ ವರ್ಷ ಅಂದಾಜು 5,726 ಮಂದಿ ಸಾವನ್ನಪ್ಪುತ್ತಿದ್ದಾರೆ. ಆದರೆ, ಈ ಎಲ್ಲಾ ಸಂಖ್ಯೆಗಳು ನಿಖರವಾಗಿಲ್ಲ ಎಂದು ವಿಶ್ವ ಆರೋಗ್ಯ ಸಂಸ್ಥೆ ಅಭಿಪ್ರಾಯಪಟ್ಟಿದೆ. ಅದರ ಪ್ರಕಾರ ಭಾರತ ಜಗತ್ತಿನಲ್ಲಿ ಅತ್ಯಂತ ಹೆಚ್ಚು ರೇಬಿಸ್ ಬಾಧಿತ ದೇಶವಾಗಿದ್ದು, ಜಗತ್ತಿನ ಶೇ.36ರಷ್ಟು ರೇಬಿಸ್ ಸಾವುಗಳು ಭಾರತದಲ್ಲೇ ಸಂಭವಿಸುತ್ತವೆ. ನಮ್ಮ ದೇಶದಲ್ಲಿ ವರ್ಷಕ್ಕೆ 18,000ದಿಂದ 20,000 ಜನರು ರೇಬಿಸ್‌ಗೆ ಬಲಿಯಾಗುತ್ತಾರೆ ಎಂದು ವಿಶ್ವ ಆರೋಗ್ಯ ಸಂಸ್ಥೆ ಅಂದಾಜಿಸಿದೆ. ಮೇಲ್ಕಂಡ ಯಾವುದೇ ಅಂಕಿ-ಅಂಶವನ್ನು ಪರಿಗಣಿಸಿದರೂ, ಇರುವ ಸಮಸ್ಯೆ ಗಂಭೀರವಾದುದೇ ಹಾಗೂ ಶೇ.99ರಷ್ಟು ರೇಬಿಸ್‌ಗಳು ನಾಯಿ ಕಡಿತದಿಂದಲೇ ಬರುವಂಥವು ಎನ್ನುವುದು ಕೂಡಾ ನಿಜ.

ರೇಬಿಸ್ ಎಂಬ ಸೈಲೆಂಟ್ ಕಿಲ್ಲರ್!: ಒಬ್ಬ ವ್ಯಕ್ತಿ ಅಥವಾ ಪ್ರಾಣಿಯನ್ನು ರೇಬಿಸ್ ಸೋಂಕಿತ ಪ್ರಾಣಿ ಕಚ್ಚಿದಾಗ, ಕಚ್ಚಿದ ಪ್ರಾಣಿಯ ಲಾಲಾರಸದಲ್ಲಿರುವ ರೇಬಿಸ್ ವೈರಸ್ ಗಾಯದ ಮೂಲಕ ದೇಹವನ್ನು ಪ್ರವೇಶಿಸುತ್ತದೆ. ಹೀಗೆ ದೇಹ ಸೇರಿದ ವೈರಸ್ ಕೆಲವು ವಾರಗಳಿಂದ ತಿಂಗಳವರೆಗೆ ಕಚ್ಚಿದ ಜಾಗದಲ್ಲಿನ ಸ್ನಾಯುಗಳಲ್ಲಿ ಹಲವಾರು ಬಾರಿ ದ್ವಿಗುಣಗೊಳ್ಳುತ್ತದೆ. ನಂತರ ಕಚ್ಚಿದ ಜಾಗದ ಹತ್ತಿರದಲ್ಲಿರುವ ನರಗಳ ತುದಿಗೆ ಅಂಟಿಕೊಂಡು ಬೆನ್ನುಹುರಿಯ ಮೂಲಕ ಕೊನೆಗೆ ಮಿದುಳನ್ನು ತಲುಪುತ್ತವೆ. ಈ ಪ್ರಕ್ರಿಯೆ ನಿಧಾನವಾಗಿ ನಡೆಯುವುದರಿಂದ ರೋಗ ಲಕ್ಷಣಗಳು ಕಾಣಿಸಿಕೊಳ್ಳಲು ದೀರ್ಘ ಸಮಯ ತೆಗೆದುಕೊಳ್ಳುತ್ತದೆ. ಕಚ್ಚಿದ ಜಾಗವು ಮಿದುಳಿಗೆ ಎಷ್ಟು ಹತ್ತಿರವಿದೆ ಎಂಬುದರ ಆಧಾರದ ಮೇಲೆ (ಹತ್ತಿರವಿದ್ದಷ್ಟೂ ಬೇಗ) ಕೆಲವು ವಾರಗಳಿಂದ 3 ತಿಂಗಳ ಒಳಗೆ ರೋಗ ಲಕ್ಷಣಳಾದ ಮಿದುಳಿನ ಉರಿಯೂತ, ನೀರನ್ನು ಕಂಡರೆ ಭಯ (ಹೈಡ್ರೋಫೋಬಿಯಾ), ಗೊಂದಲ, ಆಕ್ರಮಣಕಾರಿ ನಡವಳಿಕೆ, ಹೆಚ್ಚು ಲಾಲಾರಸದ ಉತ್ಪತ್ತಿ ಮತ್ತು ಪಾರ್ಶ್ವವಾಯು ಮುಂತಾದ ತೀವ್ರವಾದ ನರರೋಗ ಲಕ್ಷಣಗಳು ಕಾಣಿಸಿಕೊಳ್ಳುತ್ತವೆ. ಸೋಂಕಿತ ಪ್ರಾಣಿಗಳಿಂದ ಕಡಿತಕ್ಕೊಳಗಾದ ತಕ್ಷಣವೇ ಲಸಿಕೆ ಪಡೆದಲ್ಲಿ ಮಿದುಳನ್ನು ವೈರಸ್ ತಲುಪದಂತೆ ತಡೆಯಬಹುದು. ಹಾಗಾಗಿಯೇ ಯಾವುದೇ ಪ್ರಾಣಿ ಕಡಿದ ನಂತರ ತಕ್ಷಣವೇ ವೈದ್ಯರನ್ನು ಕಾಣುವುದು ಅತ್ಯವಶ್ಯಕ. ಆದರೆ, ಒಮ್ಮೆ ರೋಗ ಲಕ್ಷಣಗಳು ಕಾಣಿಸಿಕೊಂಡವು ಎಂದರೆ ಅಂಥ ಪ್ರಕರಣಗಳಲ್ಲಿ ಸಾವು ಖಚಿತವಾಗಿರುತ್ತದೆ.

ಸವಾಲುಗಳು: ಮೇಲಿನೆಲ್ಲಾ ಅಂಕಿ-ಅಂಶಗಳನ್ನು ಪರಿಗಣಿಸಿ ಹೇಳುವುದಾದರೆ ಸುಪ್ರೀಂ ಕೋರ್ಟಿನ ಆದೇಶದ ಹಿಂದೆ ಒಂದು ಉತ್ತಮವಾದ ಉದ್ದೇಶವಂತೂ ಖಂಡಿತಾ ಇದೆ. ಆದರೆ, ಅದರ ಜತೆಗೆ ಆದೇಶದ ಅನುಷ್ಠಾನದಲ್ಲಿ ಎದುರಾಗುವ ಸವಾಲುಗಳು ಕೂಡಾ ದೊಡ್ಡ ಮಟ್ಟದ್ದೇ ಆಗಿವೆ. ಈ ಆದೇಶವನ್ನು ಜಾರಿಗೊಳಿಸಲು ವ್ಯಾಪಕ ಮೂಲಸೌಕರ್ಯ ಮತ್ತು ಸಂಪನ್ಮೂಲಗಳ ಅವಶ್ಯಕತೆಯಿದೆ. ದೆಹಲಿ ಮುನ್ಸಿಪಲ್ ಕಾರ್ಪೊರೇಷನ್‌ನ ಅಂಕಿ-ಅಂಶದ ಅನುಸಾರ ಅಲ್ಲಿರುವ ಬೀದಿನಾಯಿಗಳ ಒಟ್ಟು ಸಂಖ್ಯೆ ಅಂದಾಜು 10 ಲಕ್ಷ! ಇಡೀ ದೇಶದಲ್ಲಿನ ಬೀದಿನಾಯಿಗಳ ಸಂಖ್ಯೆ ಸುಮಾರು 6 ಕೋಟಿಗೂ ಹೆಚ್ಚು! ಆದರೆ, ದೆಹಲಿಯಲ್ಲಿ ಪ್ರಸ್ತುತವಿರುವ 20 ಪ್ರಾಣಿ ಜನ್ಮ ನಿಯಂತ್ರಣ ಕೇಂದ್ರಗಳಲ್ಲಿ ಕೇವಲ 2,500 ನಾಯಿಗಳಿಗೆ ಮಾತ್ರ ಆಶ್ರಯ ನೀಡಬಹುದಾಗಿದೆ. ಎಲ್ಲಾ ನಾಯಿಗಳಿಗೆ ಆಶ್ರಯ ಸಿಗಬೇಕಾದರೆ ಕನಿಷ್ಠ 2,000 ಹೊಸ ಆಶ್ರಯ ಕೇಂದ್ರಗಳನ್ನು ನಿರ್ಮಿಸಬೇಕಾಗುತ್ತವೆ. ಇದಕ್ಕೆ 15,000 ಕೋಟಿ ರುಪಾಯಿ ನಿರ್ಮಾಣ ವೆಚ್ಚ ಹಾಗೂ ವಾರಕ್ಕೆ 5 ಕೋಟಿ ರು. ಆಹಾರ ವೆಚ್ಚವಾಗಬಹುದು ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ. ರಾಷ್ಟ್ರ ರಾಜಧಾನಿ ಪ್ರದೇಶದ ಬೇರೆ ನಗರಗಳಾದ ಗುರುಗ್ರಾಮ (50,000 ನಾಯಿಗಳಿಗೆ ಕೇವಲ 50 ನಾಯಿಗಳು ವಾಸಿಸಬಹುದಾದ 2 ಚಿಕ್ಕ ಆಶ್ರಯ ಕೇಂದ್ರ), ಘಾಜಿಯಾಬಾದ್ (48,000 ನಾಯಿಗಳಿಗೆ ಯಾವುದೇ ಅಧಿಕೃತ ಆಶ್ರಯ ಕೇಂದ್ರವಿಲ್ಲ) ಮತ್ತು ನೊಯ್ಡಾದಲ್ಲಿ (1.5 ಲಕ್ಷ ನಾಯಿಗಳಿಗೆ 4 ಖಾಸಗಿ ಕೇಂದ್ರಗಳು) ಸಹ ಪರಿಸ್ಥಿತಿ ಭಿನ್ನವಾಗೇನೂ ಇಲ್ಲ. ಶೀಘ್ರವಾಗಿಯೇ ಕ್ರಮ ಕೈಗೊಂಡು ಮೂಲಸೌಕರ್ಯಗಳನ್ನು ನಿರ್ಮಿಸಿದರೂ, ಇವುಗಳ ನಿರ್ವಹಣೆಗೆ ಅಗತ್ಯವಿರುವ ಮಾನವ ಸಂಪನ್ಮೂಲ ಮತ್ತು ವಾಹನಗಳ ಕೊರತೆಯೂ ತೀವ್ರವಾಗಿವೆ.

ಜಾಗತಿಕ ಮಾದರಿಗಳು: ಹಾಗಂತ ಇದೇನೂ ವಿಶ್ವದಲ್ಲಿ ಮೊದಲ ಬಾರಿಗೆ ಕೈಗೊಳ್ಳಲಾದ ನಿರ್ಧಾರವಲ್ಲ. ಸಿಂಗಾಪುರ್, ನೆದರ್ಲ್ಯಾಂಡ್ಸ್, ಭೂತಾನ್‌ನಂಥ ದೇಶಗಳು ಈಗಾಗಲೇ ಈ ಸಮಸ್ಯೆಯನ್ನು ಬಗೆಹರಿಸಿವೆ. ನೆದರ್ಲ್ಯಾಂಡ್ಸ್ ಕೈಗೊಂಡ ರಾಷ್ಟ್ರೀಯ ಕಾರ್ಯಕ್ರಮದಡಿ ಕಡಿಮೆ ಅವಧಿಯಲ್ಲಿಯೇ ಶೇ.70ಕ್ಕೂ ಹೆಚ್ಚಿನ ಹೆಣ್ಣು ನಾಯಿಗಳಿಗೆ ಸಂತಾನಶಕ್ತಿಹರಣ ಶಸ್ತ್ರಚಿಕಿತ್ಸೆಯನ್ನು ಮಾಡುವುದರ ಜತೆಗೆ ಬೀದಿನಾಯಿಗಳಿಗೆ ರೇಬಿಸ್ ಲಸಿಕೆಯನ್ನು ನೀಡಲಾಯಿತು. ಪ್ರಾಣಿ ಹಿಂಸೆ ಅಥವಾ ನಿರ್ಲಕ್ಷ್ಯಗಳನ್ನೂ ಗಂಭೀರ ಅಪರಾಧ ಎಂದು ಪರಿಗಣಿಸಿ, ಹೆಚ್ಚಿನ ದಂಡಗಳನ್ನು ವಿಧಿಸಲಾಯಿತು. ಪ್ರಾಣಿಗಳ ಹಕ್ಕುಗಳ ಸಂರಕ್ಷಣೆಗೆ ವಿಶೇಷ ಪೊಲೀಸ್ ಪಡೆಗಳನ್ನು ರಚಿಸಲಾಯಿತು. ಎಲ್ಲಾ ನಾಯಿಗಳ ನೋಂದಣಿಯನ್ನು ಕಡ್ಡಾಯಗೊಳಿಸಲಾಯಿತು ಮತ್ತು ಅವುಗಳಿಗೆ ಮೈಕ್ರೋ ಚಿಪ್ ಅಳವಡಿಸಲಾಯಿತು. ಪ್ರಾಣಿಗಳ ದತ್ತು ಪಡೆಯುವುದಕ್ಕೆ ಪ್ರೋತ್ಸಾಹಿಸುವುದರ ಜತೆಗೆ ಸಾರ್ವಜನಿಕರ ಜವಾಬ್ದಾರಿ ಕುರಿತ ಜಾಗೃತಿ ಕಾರ್ಯಕ್ರಮಗಳನ್ನು ಸತತವಾಗಿ ಆಯೋಜಿಸಲಾಯಿತು. ಈ ಎಲ್ಲಾ ಪರಿಶ್ರಮದ ಕಾರಣ ಹತ್ತು ಲಕ್ಷಕ್ಕೂ ಹೆಚ್ಚು ನಾಯಿಗಳು ತಮ್ಮ ಮನೆಯನ್ನು ಕಂಡುಕೊಂಡು ನೆದರ್ಲ್ಯಾಂಡ್ಸ್ ಬೀದಿನಾಯಿಗಳಿಂದ ಮುಕ್ತವಾಯಿತು.

ಇನ್ನು ಸಿಂಗಾಪುರ್ ಬಹಳ ಹಿಂದಿನಿಂದಲೇ ಹಲವು ಕ್ರಮಗಳನ್ನು ಜಾರಿಗೆ ತಂದಿದ್ದರ ಪರಿಣಾಮವಾಗಿ 1953ರಿಂದ ಇಡೀ ದೇಶ ರೇಬಿಸ್ ಮುಕ್ತವಾಗಿದೆ. ಆದಾಗ್ಯೂ, ಅಲ್ಲಿನ ಸರಕಾರ ತನ್ನ ಪ್ರಯತ್ನವನ್ನು ನಿಲ್ಲಿಸಿಲ್ಲ. 2018ರಿಂದ ವೈಜ್ಞಾನಿಕ ಮತ್ತು ದತ್ತಾಂಶ ಆಧಾರಿತ ಮಾದರಿಯನ್ನು ಜಾರಿಗೆ ತಂದಿದೆ. ಬೀದಿನಾಯಿಗಳ ಸಂತಾನಶಕ್ತಿಹರಣ, ಚಿಪ್ ಅಳವಡಿಕೆ, ಲಸಿಕೀಕರಣಗಳ ಜತೆಗೆ ಆಕ್ರಮಣಕಾರಿ ವರ್ತನೆ ಇರುವ ನಾಯಿಗಳನ್ನು ತಹಬದಿಗೆ ತಂದು, ತರಬೇತಿ ನೀಡಿ ಅವುಗಳನ್ನು ಮನೆಗಳಿಗೆ ಸೇರಿಸಲು ಅರ್ಹ ಪ್ರಾಣಿಗಳಾಗಿ ಪರಿವರ್ತಿಸಿದೆ.

ಇನ್ನು ಭೂತಾನ್ ಸಹ ಎಲ್ಲಾ ಬೀದಿನಾಯಿಗಳನ್ನು ಸಂತಾನಶಕ್ತಿಹರಣ ಶಸ್ತ್ರಚಿಕಿತ್ಸೆಗೆ ಒಳಪಡಿಸಿ, ಜತೆಗೆ ಲಸಿಕೆಯನ್ನು ನೀಡುವ ಕಾರ್ಯವನ್ನು 2023ಕ್ಕೆ ಪೂರ್ಣಗೊಳಿಸಿತು. 14 ವರ್ಷಗಳ ಕಾಲ ಸತತವಾಗಿ ನಡೆದ ಈ ರಾಷ್ಟ್ರೀಯ ಕಾರ್ಯಕ್ರಮದಲ್ಲಿ ಸಾವಿರಾರು ಸ್ವಯಂಸೇವಕರು ಕೈಜೋಡಿಸಿದ್ದರು. ಇವೆಲ್ಲದರಿಂದ, ಭೂತಾನ್ ರೇಬಿಸ್‌ನಿಂದ ಬಹುಪಾಲು ಮುಕ್ತವಾಯಿತು. ಇಲ್ಲಿ ಅರ್ಥವಾಗುವ ಒಂದು ಮುಖ್ಯ ಅಂಶವೆಂದರೆ, ಇವೆಲ್ಲ ಕಾರ್ಯಗಳ ಅನುಷ್ಠಾನಕ್ಕೆ ಸತತ ಪರಿಶ್ರಮ, ದೀರ್ಘಕಾಲದ ಕಾರ್ಯಕ್ರಮ ಹಾಗೂ ಇದಕ್ಕೆ ನೆರವಾಗುವ ಸಹಸ್ರಾರು ಕೈಗಳು ಬೇಕಾಗುತ್ತವೆ ಎಂಬುದು. ದೆಹಲಿಯಲ್ಲಿನ 10 ಲಕ್ಷ ನಾಯಿಗಳ ತೆರವಿಗೆ ಮತ್ತು ನಮ್ಮ ದೇಶದಲ್ಲಿರುವ 6 ಕೋಟಿ ನಾಯಿಗಳ ನಿರ್ವಹಣೆಗೆ ಸಮಗ್ರ ಯೋಜನೆಯೊಂದರ ಅವಶ್ಯಕತೆಯಂತೂ ಇದೆ.

ಕಾನೂನು ಏನು ಹೇಳುತ್ತದೆ?: ಬೀದಿನಾಯಿಗಳು ಮತ್ತು ಸಾಕುನಾಯಿಗಳೆರಡಕ್ಕೂ ಭಾರತೀಯ ಕಾನೂನು ಬಲವಾದ ರಕ್ಷಣೆ ಮತ್ತು ನಿಯಂತ್ರಣವನ್ನು ಒದಗಿಸುತ್ತದೆ. ಮೊದಲಿಗೆ, ನಮ್ಮ ಸಂವಿಧಾನದ 51ಎ (ಜಿ) ವಿಧಿಯು ಪ್ರಾಣಿಗಳ ಬಗ್ಗೆ ಸಹಾನುಭೂತಿಯನ್ನು ಹೊಂದುವುದು ಪ್ರತಿಯೊಬ್ಬ ನಾಗರಿಕನ ಮೂಲಭೂತ ಕರ್ತವ್ಯವೆಂದು ಪ್ರತಿಪಾದಿಸುತ್ತದೆ. ಪ್ರಾಣಿಗಳ ಮೇಲಿನ ಕ್ರೌರ್ಯ ತಡೆ ಕಾಯ್ದೆ, 1960 (ಪಿಸಿಎ) ಸಾಕುಪ್ರಾಣಿ ಮತ್ತು ಬೀದಿನಾಯಿ ಸೇರಿದಂತೆ ಪ್ರಾಣಿಗಳ ಮೇಲಿನ ಕ್ರೌರ್ಯವನ್ನು ನಿಷೇಧಿಸುತ್ತದೆ ಮತ್ತು ನಿಂದನೆ, ನಿರ್ಲಕ್ಷ್ಯ ಅಥವಾ ಅನಗತ್ಯ ನೋವು ಉಂಟುಮಾಡುವುದಕ್ಕೆ ಶಿಕ್ಷೆಯನ್ನು ಕಡ್ಡಾಯಗೊಳಿಸುತ್ತದೆ. 2023ರ ಪಶುಜನ್ಮ ನಿಯಂತ್ರಣ ನಿಯಮಗಳ ಅನುಸಾರ ಪುರಸಭೆಗಳು ಬೀದಿನಾಯಿಗಳ ಸಂಖ್ಯೆಯನ್ನು ಮಾನವೀಯವಾಗಿ ನಿರ್ವಹಿಸಬೇಕಾಗುತ್ತದೆ. ಅಂದರೆ, ನಾಯಿಗಳನ್ನು ಸೆರೆಹಿಡಿದು, ಸಂತಾನಶಕ್ತಿಹರಣಗೊಳಿಸಿ, ರೇಬಿಸ್ ಲಸಿಕೆ ನೀಡಿ ಮತ್ತು ನಂತರ ಅವುಗಳ ಮೂಲಪ್ರದೇಶಕ್ಕೆ ಹಿಂದಿರುಗಿಸಬೇಕು. ಅವುಗಳು ಅನಾರೋಗ್ಯದಿಂದ ಕೂಡಿದ್ದರೆ ಮತ್ತು ಆಕ್ರಮಣಕಾರಿಯಾಗಿದ್ದರೆ ಸೂಕ್ತ ಚಿಕಿತ್ಸೆ ನೀಡಬೇಕಾಗುತ್ತದೆ. ಬೀದಿನಾಯಿಗಳನ್ನು ಕೊಲ್ಲುವುದನ್ನು ಈ ನಿಯಮಗಳು ಸ್ಪಷ್ಟವಾಗಿ ನಿಷೇಧಿಸುತ್ತವೆ.

ಆದರೆ, ಸಾರ್ವಜನಿಕ ಸುರಕ್ಷತೆಗಾಗಿ ನ್ಯಾಯಾಲಯ ಆಗಸ್ಟ್ 11ರಂದು ನೀಡಿದ ಆದೇಶವು ಪ್ರಸ್ತುತ ಅಸ್ತಿತ್ವದಲ್ಲಿರುವ ಪಶುಜನ್ಮ ನಿಯಂತ್ರಣ ನಿಯಮಗಳ ಅಗತ್ಯವನ್ನು ತಾತ್ಕಾಲಿಕವಾಗಿ ರದ್ದುಗೊಳಿಸುತ್ತದೆ. ಅಂದರೆ, ಲಸಿಕೀಕರಣ ಮತ್ತು ಸಂತಾನಶಕ್ತಿಹರಣವಾದ ನಾಯಿಗಳನ್ನು ಅವುಗಳ ಮೂಲಸ್ಥಾನಕ್ಕೆ ಸೇರಿಸಬೇಕು ಎಂದಿದ್ದ ಹಿಂದಿನ ನಿಯಮ ಈಗ ಇಲ್ಲದಂತಾಗಿದೆ.

ಮುಂದಿನ ದಾರಿ: ಗಂಭೀರ ಸಮಸ್ಯೆಗಳು ಶೀಘ್ರ ಮತ್ತು ಗಂಭೀರ ಕ್ರಮವನ್ನೇ ಬೇಡುತ್ತವೆ. ಅದೇ ಕಾರಣಕ್ಕೆ ನ್ಯಾಯಾಲಯವು 8 ವಾರಗಳ ಗಡುವು ವಿಧಿಸಿರುವಂಥದ್ದು. ಬೆಳೆಯಬೇಕಾದ ಪುಟ್ಟ ಕಂದಮ್ಮಗಳು, ಮನೆಯಲ್ಲಿನ ಹಿರಿಯರು ಬೀದಿನಾಯಿಯ ಆಕ್ರಮಣಕ್ಕೆ ತುತ್ತಾಗುವುದನ್ನು ಯಾರಿಗೂ ಸಹಿಸಲು ಸಾಧ್ಯವಿಲ್ಲ. ಹಾಗೆಂದು ತಕ್ಷಣದ ಪರಿಹಾರಕ್ಕೆ ಬೀದಿನಾಯಿಗಳ ಹರಣವಾದರೆ ಅದನ್ನೂ ಒಪ್ಪಲು ಸಾಧ್ಯವಿಲ್ಲ. ಹಂತ ಹಂತವಾಗಿ ಸಮರ್ಪಕ ಪಶು ವೈದ್ಯಕೀಯ ಸೌಲಭ್ಯಗಳಿರುವ ಆಶ್ರಯ ಕೇಂದ್ರಗಳನ್ನು ಅಭಿವೃದ್ಧಿಪಡಿಸಿ, ಎಲ್ಲಾ ಬೀದಿನಾಯಿಗಳಿಗೆ ಲಸಿಕೆಯಿತ್ತು, ಪ್ರಾಣಿದತ್ತು ಕ್ರಿಯೆಗೆ ನೆರವು ನೀಡಿ, ಜವಾಬ್ದಾರಿಯುತವಾಗಿಯೇ ಪ್ರಾಣಿಗಳನ್ನು ಬೀದಿಯಿಂದ ಅದರ 'ಮನೆ' ಸೇರಿಸುವ ಕಾರ್ಯ ನಡೆಯಬೇಕಾಗಿದೆ. ಇದು ದೀರ್ಘಕಾಲಿಕ ದೃಷ್ಟಿಕೋನದಿಂದ ಮಾತ್ರ ಬಗೆಹರಿಸಬಹುದಾದಂಥ ಒಂದು ಸಮಸ್ಯೆ. ಸಾರ್ವಜನಿಕ ಸುರಕ್ಷತೆ ಮತ್ತು ಪ್ರಾಣಿಹಿತಾಸಕ್ತಿ ಸಮತೋಲನ ಕಾಯುವ ರಾಷ್ಟ್ರೀಯ ನೀತಿಗೆ ಕಾರಣವಾಗುವಂಥ ವಿಷಯವಿದು. ಭಾರತದ ಮಕ್ಕಳು ಮತ್ತು ಅದರ ಪ್ರಾಣಿ-ಸಂಪತ್ತು, ಎರಡನ್ನೂ ಉಳಿಸುವ ಕ್ರಮ ಮಾತ್ರವೇ ನಿಜವಾದ ಪರಿಹಾರವಾಗಬಲ್ಲದು.

(ಲೇಖಕರು ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ ಗ್ರ್ಯಾಂಟ್ಸ್ ಮ್ಯಾನೇಜರ್)

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:10, Issue:220

ಸಮಾಚಾರ ಸಣ್ಣದಲ್ಲ

ನಾಲ್ವರು ಮಕ್ಕಳ ಸಾವು

ಮಹಾರಾಷ್ಟ್ರ: ರೈಲ್ವೆ ಬ್ರಿಡ್ಜ್ ನಿರ್ಮಾಣಕ್ಕೆಂದು ತೋಡಿದ್ದ ಗುಂಡಿಯಲ್ಲಿ ನಾಲ್ವರು ಮಕ್ಕಳು ಬಿದ್ದು ಪ್ರಾಣ ಕಳೆದುಕೊಂಡಿರುವ ಘಟನೆ ಮಹಾರಾಷ್ಟ್ರದಲ್ಲಿ ನಡೆದಿದೆ. ದರ್ವಾ ಪಟ್ಟಣದಲ್ಲಿ ರೈಲ್ವೆ ಮೇಲ್ಸೇತುವೆ ನಿರ್ಮಾಣ ಯೋಜನೆಗಾಗಿ ಅಗೆದಿದ್ದ ನೀರು ತುಂಬಿದ ಗುಂಡಿಯಲ್ಲಿ ನಾಲ್ವರು ಅಪ್ರಾಪ್ತ ಬಾಲಕರು ಮುಳುಗಿ ಸಾವನ್ನಪ್ಪಿರುವ ಆಘಾತಕಾರಿ ಘಟನೆ ವರದಿಯಾಗಿದೆ. ವರದಿಗಳ ಪ್ರಕಾರ, ಕಳೆದ ಕೆಲವು ದಿನಗಳಿಂದ ನಿರಂತರವಾಗಿ ಸುರಿಯುತ್ತಿರುವ ಮಳೆಯಿಂದಾಗಿ ನಿರ್ಮಾಣ ಸ್ಥಳದಲ್ಲಿನ ಗುಂಡಿ ನೀರಿನಿಂದ ತುಂಬಿತ್ತು. ನಾಲ್ವರು ಮಕ್ಕಳು ರೆಹಾನ್ ಅಸ್ಲಾಂ ಖಾನ್ (13), ಗೋಲು ಪಾಂಡುರಂಗ್ ನರ್ನವಾರೆ (10), ಸೌಮ್ಯ ಸತೀಶ್ ಖಾಡ್ಸನ್ (10) ಮತ್ತು ವೈಭವ್ ಆಶಿಶ್ ಬೋಡ್ಲೆ (14) ಸ್ಥಳದ ಬಳಿ ಆಟವಾಡಲು ಹೋಗಿ ಉತ್ಸಾಹದಲ್ಲಿ ಅವರೇ ಗುಂಡಿಗೆ ಹಾರಿದ್ದರು. ಆಳದ ಅರಿವಿಲ್ಲದ ಹುಡುಗರು ಉಸಿರುಗಟ್ಟಿ ಪ್ರಾಣ ಕಳೆದುಕೊಂಡಿದ್ದಾರೆ. ಸಹಾಯ ಮಾಡಲು ಸುತ್ತಲೂ ಯಾರೂ ಇಲ್ಲದ ಕಾರಣ, ನಾಲ್ವರೂ ದುರಂತವಾಗಿ ಮುಳುಗಿ ಸಾವನ್ನಪ್ಪಿದ್ದಾರೆ.

ಮಾತುಕತೆಗೆ ಪುಟಿನ್ -ಝುಲೆನ್ಸ್ಕಿ ಒಪ್ಪಿಗೆ

ವಾಷಿಂಗ್ಟನ್: ಕೊನೆಗೂ ಶಾಂತಿ ಮಾತುಕತೆಗೆ ಪುಟಿನ್ ಹಾಗೂ ಝುಲೆನ್ಸ್ಕಿ ಒಪ್ಪಿಕೊಂಡಿದ್ದು, ನಾಲ್ಕು ವರ್ಷಗಳ ರಷ್ಯಾ-ಉಕ್ರೇನ್ ಯುದ್ಧಕ್ಕೆ ಪೂರ್ಣವಿರಾಮ ಸಿಗುವ ಸಾಧ್ಯತೆ ದಟ್ಟವಾಗಿದೆ. ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಹಾಗೂ ಉಕ್ರೇನ್ ಅಧ್ಯಕ್ಷ ವಾಲ್ದಿಡಿಮಿರ್ ಝುಲೆನ್ಸ್ಕಿ ಅವರ ನಡುವೆ ಶೀಘ್ರ, ಶಾಂತಿ ಮಾತುಕತೆ ನಡೆಯಲಿದೆ, ಆದರೆ ಸ್ಥಳ ಇನ್ನೂ ನಿಗದಿಯಾಗಿಲ್ಲ. ಟ್ರಂಪ್ ರಷ್ಯಾದ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರೊಂದಿಗೆ ದೂರವಾಣಿಯಲ್ಲಿ ಮಾತನಾಡಿದ್ದಾರೆ. ಮಾಧ್ಯಮಗಳೊಂದಿಗೆ ಮಾತನಾಡಿದ ಟ್ರಂಪ್, ರಷ್ಯಾ ಮತ್ತು ಉಕ್ರೇನ್ ಎರಡೂ ಪರಸ್ಪರ ಮಾತನಾಡಲು ಸಿದ್ಧವಾಗಿವೆ ಎಂದು ಹೇಳಿದ್ದಾರೆ. ಪುಟಿನ್ ಮತ್ತು ಝುಲೆನ್ಸ್ಕಿ ಇಬ್ಬರೂ ಯುದ್ಧವನ್ನು ಕೊನೆಗೊಳಿಸಲು ಬಯಸುತ್ತಾರೆ. ಝುಲೆನ್ಸ್ಕಿ ಪುಟಿನ್ ಜೊತೆ ಮಾತನಾಡಲು ಸಿದ್ಧರಿದ್ದಾರೆ ಎಂದರು.

ದೆಹಲಿ ಸಿಎಂ ಗುಪ್ತಾಗೆ ಝಡ್ ಶ್ರೇಣಿ ಭದ್ರತೆ

ದೆಹಲಿ: ಮುಖ್ಯಮಂತ್ರಿ ರೇಖಾ ಗುಪ್ತಾ ಅವರ ಮೇಲೆ ವ್ಯಕ್ತಿಯೊಬ್ಬ ಹಲ್ಲೆ ನಡೆಸಿದ ನಂತರ ಕೇಂದ್ರ ಸರ್ಕಾರ ಅವರಿಗೆ 'ಝಡ್' ಶ್ರೇಣಿಯ ವಿಐಪಿ ಭದ್ರತೆಯನ್ನು ಒದಗಿಸಿದೆ ಎಂದು ಅಧಿಕೃತ ಮೂಲಗಳು ಗುರುವಾರ ತಿಳಿಸಿವೆ. ರೇಖಾ ಗುಪ್ತಾ, ಅವರ ಅಧಿಕೃತ ನಿವಾಸ ಮತ್ತು ರಾಷ್ಟ್ರ ರಾಜಧಾನಿಯ ಸಿವಿಲ್ ಲೈನ್ಸ್ ಪ್ರದೇಶದ ರಾಜ್ ನಿವಾಸ್ ಮಾರ್ಗದಲ್ಲಿರುವ ಕ್ಯಾಂಪ್ ಆಫೀಸ್‌ನಲ್ಲಿ ಅರೆಸೈನಿಕ ಪಡೆಯ ವಿಐಪಿ ಸೆಕ್ಯುರಿಟಿ ಗ್ರೂಪ್‌ನ (ವಿಎಸ್‌ಜಿ) ಭದ್ರತೆಯನ್ನು ಒದಗಿಸಲಾಗಿದೆ. ಇದು ಕೇಂದ್ರ ಗೃಹ ಸಚಿವ ಅಮಿತ್ ಶಾ ಮತ್ತು ಕಾಂಗ್ರೆಸ್‌ನ ಗಾಂಧಿ ಕುಟುಂಬದ ಭದ್ರತೆಯನ್ನು ನೋಡಿಕೊಳ್ಳುತ್ತದೆ. ಕೇಂದ್ರ ಗೃಹ ಸಚಿವಾಲಯದ ನಿರ್ದೇಶನದ ಮೇರೆಗೆ ಗುರುವಾರ ದೆಹಲಿ ಮುಖ್ಯಮಂತ್ರಿಯ ಭದ್ರತೆಯನ್ನು ಕೇಂದ್ರ ಮೀಸಲು ಪೊಲೀಸ್ ಪಡೆ ವಹಿಸಿಕೊಂಡಿದೆ. ಕೇಂದ್ರ ಗುಪ್ತಚರ ಸಂಸ್ಥೆಗಳ ವರದಿ ನಂತರ ಗುಪ್ತಾ ಅವರಿಗೆ 'ಝಡ್' ಶ್ರೇಣಿಯ ಭದ್ರತೆಯನ್ನು ನೀಡಲಾಗಿದೆ ಎಂದು ಮೂಲಗಳು ತಿಳಿಸಿವೆ. ದಿನದ 24 ಗಂಟೆಯೂ 22ರಿಂದ 25 ಶಸ್ತ್ರಸಜ್ಜಿತ ಕಮಾಂಡೋಗಳ ತಂಡವು ಮುಖ್ಯಮಂತ್ರಿಯವರಿಗೆ ಭದ್ರತೆ ಒದಗಿಸುವ ಕಾರ್ಯದಲ್ಲಿ ನಿರತವಾಗಿರಲಿದೆ.

ವಿಪಕ್ಷಗಳ ನಿರಂತರ ಪ್ರತಿಭಟನೆ | ಕೇವಲ 37 ಗಂಟೆಗಳ ಕಾಲ ಮಾತ್ರ ಚರ್ಚೆ | 55 ಪ್ರಶ್ನೆಗಳಿಗೆ ಮೌಖಿಕ ಉತ್ತರ

ಪ್ರಲಾಪದಲ್ಲೇ ಮುಂಗಾರು ಕಲಾಪ ಅಂತ್ಯ

ದೆಹಲಿ: ಸಂಸತ್‌ನ ಉಭಯ ಸದನಗಳನ್ನು ಗುರುವಾರ ಅನಿರ್ದಿಷ್ಟಾವಧಿಗೆ ಮುಂದೂಡಲಾಯಿತು. ಒಂದು ತಿಂಗಳ ಕಾಲ ನಡೆದ ಮುಂಗಾರು ಅಧಿವೇಶನವನ್ನು ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರು ಅನಿರ್ದಿಷ್ಟಾವಧಿಗೆ ಮುಂದೂಡಿದರು. ರಾಜ್ಯಸಭೆಯ ಅಧಿವೇಶನವನ್ನು ಕೂಡ ಅನಿರ್ದಿಷ್ಟಾವಧಿಗೆ ಮುಂದೂಡಲಾಗಿದೆ.



'ಇಡೀ ಅಧಿವೇಶನದಲ್ಲಿ ಪದೇ ಪದೇ ಕಲಾಪಕ್ಕೆ ಅಡ್ಡಿಪಡಿಸಲು ಪ್ರಯತ್ನಗಳು ನಡೆದಿವೆ. ಒಂದು ತಿಂಗಳ ಕಾಲ ನಡೆದ ಅಧಿವೇಶನದಲ್ಲಿ ಹೆಚ್ಚಿನ ಚರ್ಚೆ ನಡೆಯಲು ಸಾಧ್ಯವಾಗದ ಕಾರಣ ಎಲ್ಲರೂ ಆತ್ಮಾವಲೋಕನ ಮಾಡಿಕೊಳ್ಳಬೇಕು' ಎಂದು ಓಂ ಬಿರ್ಲಾ ಅವರು ವಿರೋಧ ಪಕ್ಷಗಳ ವಿರುದ್ಧ ಬೇಸರ ಹೊರಹಾಕಿದ್ದಾರೆ.

'ಈ ಬಾರಿ ಅಧಿವೇಶನದಲ್ಲಿ 120 ಗಂಟೆಗಳ ಕಾಲ ಚರ್ಚೆ ನಡೆಸಬೇಕೆಂದು ನಾವೆಲ್ಲರೂ ಅಧಿವೇಶನದ ಆರಂಭದಲ್ಲಿಯೇ ನಿರ್ಧರಿಸಿದ್ದೆವು. ಸಂಸದೀಯ ವ್ಯವಹಾರ ಸಲಹಾ ಸಮಿತಿಯೂ ಇದಕ್ಕೆ ಒಪ್ಪಿಕೊಂಡಿತ್ತು. ಆದರೆ ವಿಪಕ್ಷಗಳ ನಿರಂತರ ಪ್ರತಿಭಟನೆಯಿಂದಾಗಿ ಕೇವಲ 37 ಗಂಟೆಗಳ ಕಾಲ ಮಾತ್ರ ಚರ್ಚೆ ನಡೆಸಲಾಯಿತು' ಎಂದು ಬಿರ್ಲಾ ವಿವರಿಸಿದ್ದಾರೆ.

'ಈ ಬಾರಿ ಅಧಿವೇಶನದಲ್ಲಿ 419 ಪ್ರಶ್ನೆಗಳನ್ನು ಕಾರ್ಯಸೂಚಿಯಲ್ಲಿ ಸೇರಿಸಲಾಗಿತ್ತು, ಆದರೆ ವಿಪಕ್ಷಗಳ ಅಡಚಣೆಯಿಂದಾಗಿ ಮೌಖಿಕ ಉತ್ತರಕ್ಕಾಗಿ ಕೇವಲ 55 ಪ್ರಶ್ನೆಗಳನ್ನು ಮಾತ್ರ ತೆಗೆದುಕೊಳ್ಳಲು ಸಾಧ್ಯವಾಯಿತು. ಸಂಸತ್ತಿನ ಸದಸ್ಯರ ನಡವಳಿಕೆ ಮತ್ತು ಕಾರ್ಯವೈಖರಿಯನ್ನು ಇಡೀ ದೇಶ ಗಮನಿಸುತ್ತದೆ' ಎಂದು ಬಿರ್ಲಾ ಹೇಳಿದರು.

ಜುಲೈ 21ರಿಂದ ಮುಂಗಾರು ಅಧಿವೇಶನ ಆರಂಭವಾಗಿತ್ತು, ಆದರೆ ಬಿಹಾರದ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಕುರಿತು ಚರ್ಚೆಗೆ ಅವಕಾಶ ನೀಡುವಂತೆ ಕೋರಿ ವಿರೋಧ ಪಕ್ಷಗಳು ಪ್ರತಿಭಟನೆ ನಡೆಸಿದ್ದರಿಂದ ಕಲಾಪಕ್ಕೆ ಅಡ್ಡಿಯಾಗಿತ್ತು.

ವಿರೋಧ ಪಕ್ಷಗಳು ನಡೆಸುತ್ತಿರುವ ಪ್ರತಿಭಟನೆ, ಕಲಾಪಕ್ಕೆ ಅಡ್ಡಿ, ಸಭಾತ್ಯಾಗಗಳ ನಡುವೆಯೇ ಕೇಂದ್ರ ಸರಕಾರವು ಲೋಕಸಭೆಯಲ್ಲಿ 12 ಹಾಗೂ ರಾಜ್ಯಸಭೆಯಲ್ಲಿ 14 ಮಸೂದೆಗಳನ್ನು ಮಂಡಿಸಿ ಅನುಮೋದನೆ ಪಡೆಯಿತು.

'ಈ ಬಾರಿ ಸಂಸತ್ ಅಧಿವೇಶನದಲ್ಲಿ ವಿರೋಧ ಪಕ್ಷಗಳು ನಿರಂತರ ಪ್ರತಿಭಟನೆಯಲ್ಲಿ ತೊಡಗಿದ್ದರಿಂದಾಗಿ ಹಲವು ಮಸೂದೆಗಳ ಕುರಿತು ನಡೆಯಬೇಕಾಗಿದ್ದ ಚರ್ಚೆಯಲ್ಲಿ ಪಾಲ್ಗೊಂಡಿಲ್ಲ. ಅವರ ಹಠಮಾರಿ ಧೋರಣೆಯಿಂದಾಗಿ ಚರ್ಚೆಯೇ ಇಲ್ಲದೆ, ಹಲವು ಮಸೂದೆಗಳು ಮಂಡನೆಯಾದವು' ಎಂದು ಅಧಿಕಾರಿಯೊಬ್ಬರು ಹೇಳಿದ್ದಾರೆ.



ಲೋಕಸಭೆಯಲ್ಲಿ ಮಂಡಿಸಲಾದ ಮಸೂದೆಗಳು

- ಆದಾಯ ತೆರಿಗೆ-2025
- ಮರ್ಚೆಂಟ್ ಶಿಪ್ಪಿಂಗ್ ಬಿಲ್-2025
- ಭಾರತೀಯ ಬಂದರು ಮಸೂದೆ-2025
- ತೆರಿಗೆ ಕಾನೂನುಗಳ (ತಿದ್ದುಪಡಿ) ಮಸೂದೆ
- ರಾಷ್ಟ್ರೀಯ ಕ್ರೀಡಾ ಆಡಳಿತ ಮಸೂದೆ-2025
- ಮಣಿಪುರ ವಿನಿಯೋಗ (ಸಂಖ್ಯೆ 2) ಮಸೂದೆ-2025
- ರಾಷ್ಟ್ರೀಯ ಉದ್ದೀಪನ ವಿರೋಧಿ (ತಿದ್ದುಪಡಿ) ಮಸೂದೆ-2025
- ಮಣಿಪುರ ಸರಕು ಮತ್ತು ಸೇವಾ ತೆರಿಗೆ (ತಿದ್ದುಪಡಿ) ಮಸೂದೆ-2025
- ಆನ್‌ಲೈನ್ ಗೇಮಿಂಗ್ (ಉತ್ತೇಜನ ಮತ್ತು ನಿಯಂತ್ರಣ) ಮಸೂದೆ-2025
- ಗಣಿ ಮತ್ತು ಖನಿಜ (ಅಭಿವೃದ್ಧಿ ಮತ್ತು ನಿಯಂತ್ರಣ) ತಿದ್ದುಪಡಿ ಮಸೂದೆ-2025
- ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ತಿದ್ದುಪಡಿ ಮಸೂದೆ 2025
- ಗೋವಾ ವಿಧಾನಸಭಾ ಕ್ಷೇತ್ರಗಳಲ್ಲಿ ಪರಿಶಿಷ್ಟ ಪಂಗಡಗಳ ಪ್ರಾತಿನಿಧ್ಯದ ಮರುಹೊಂದಾಣಿಕೆ ಮಸೂದೆ-2025

ರಾಜ್ಯಸಭೆಯಲ್ಲಿ ಮಂಡನೆಯಾದ ಮಸೂದೆಗಳು

- ಆದಾಯ ತೆರಿಗೆ-2025
- ಮರ್ಚೆಂಟ್ ಶಿಪ್ಪಿಂಗ್ ಬಿಲ್-2025
- ಭಾರತೀಯ ಬಂದರು ಮಸೂದೆ-2025
- ಕರಾವಳಿ ಸರಕು ಸಾಗಣೆ ಮಸೂದೆ-2025
- ತೆರಿಗೆ ಕಾನೂನುಗಳ (ತಿದ್ದುಪಡಿ) ಮಸೂದೆ
- ರಾಷ್ಟ್ರೀಯ ಕ್ರೀಡಾ ಆಡಳಿತ ಮಸೂದೆ-2025
- ಸಮುದ್ರ ಮೂಲಕ ಸರಕು ಸಾಗಣೆ ಮಸೂದೆ-2025
- ಮಣಿಪುರ ವಿನಿಯೋಗ (ಸಂಖ್ಯೆ 2) ಮಸೂದೆ-2025
- ಹಡಗುಗಳಿಗೆ ಸರಕು ತುಂಬುವ ಶುಲ್ಕಗಳ ಮಸೂದೆ-2025
- ರಾಷ್ಟ್ರೀಯ ಉದ್ದೀಪನ ವಿರೋಧಿ (ತಿದ್ದುಪಡಿ) ಮಸೂದೆ-2025
- ಮಣಿಪುರ ಸರಕು ಮತ್ತು ಸೇವಾ ತೆರಿಗೆ (ತಿದ್ದುಪಡಿ) ಮಸೂದೆ-2025
- ಗಣಿ ಮತ್ತು ಖನಿಜ (ಅಭಿವೃದ್ಧಿ ಮತ್ತು ನಿಯಂತ್ರಣ) ತಿದ್ದುಪಡಿ ಮಸೂದೆ-2025
- ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ತಿದ್ದುಪಡಿ ಮಸೂದೆ-2025
- ಗೋವಾ ವಿಧಾನಸಭಾ ಕ್ಷೇತ್ರಗಳಲ್ಲಿ ಪರಿಶಿಷ್ಟ ಪಂಗಡಗಳ ಪ್ರಾತಿನಿಧ್ಯದ ಮರುಹೊಂದಾಣಿಕೆ ಮಸೂದೆ-2025

ನಟಿಗೆ ಕಿರುಕುಳ: ಕೈ ನಾಯಕ ರಾಜೀನಾಮೆ

ತಿರುವನಂತಪುರ: ತಮ್ಮ ವಿರುದ್ಧ ಕೇಳಿಬಂದಿರುವ ಗಂಭೀರ ಆರೋಪ ಹಿನ್ನೆಲೆಯಲ್ಲಿ ಯುವ ಕಾಂಗ್ರೆಸ್ ರಾಜ್ಯ ಅಧ್ಯಕ್ಷ ರಾಹುಲ್ ಮಾಂಕೂಟತ್ತಿಲ್ ತಮ್ಮ ಸ್ಥಾನಕ್ಕೆ ಗುರುವಾರ ರಾಜೀನಾಮೆ ನೀಡಿದ್ದಾರೆ.

ಮಾಧ್ಯಮಗಳನ್ನುದ್ದೇಶಿಸಿ ಮಾತನಾಡಿದ ರಾಹುಲ್ ಮಾಂಕೂಟತ್ತಿಲ್, ಪಕ್ಷವು ತಮ್ಮ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳುವ ವರದಿಗಳನ್ನು ನಿರಾಕರಿಸಿದ್ದಾರೆ. ಮೂಲಗಳ ಪ್ರಕಾರ, ರಾಹುಲ್ ತಮ್ಮ ರಾಜೀನಾಮೆ ಪತ್ರವನ್ನು ಕಾಂಗ್ರೆಸ್ ರಾಷ್ಟ್ರೀಯ ನಾಯಕರಿಗೆ ಕಳುಹಿಸಿ, ತಮ್ಮ ನಿರ್ಧಾರವನ್ನು ಕೆಪಿಸಿಸಿ ಅಧ್ಯಕ್ಷ ಸನ್ನಿ ಜೋಸೆಫ್ ಅವರಿಗೆ ದೂರವಾಣಿ ಮೂಲಕ ತಿಳಿಸಿದ್ದಾರೆ.

ಮಾಜಿ ಯುವ ಕಾಂಗ್ರೆಸ್ ನಾಯಕ ಕೆ.ಎಂ. ಅಭಿಜಿತ್ ಅವರಿಗೆ ರಾಜ್ಯ ಘಟಕದ ತಾತ್ಕಾಲಿಕ ಉಸ್ತುವಾರಿ ನೀಡಲಾಗುತ್ತದೆ ಎಂಬ ಮಾತುಗಳು ಕೇಳಿಬರುತ್ತಿವೆ.

ಈ ಮಧ್ಯೆ, ಕೇರಳದ ಉಸ್ತುವಾರಿ ವಹಿಸಿರುವ ಎಐಸಿಸಿ ಪ್ರಧಾನ ಕಾರ್ಯದರ್ಶಿ ದೀಪಾ ದಾಸ್ ಮುನ್ಷಿ ಅವರಿಗೆ ಮಹಿಳಾ ಮುಖಂಡರು ರಾಹುಲ್ ವಿರುದ್ಧ ಹಲವಾರು ದೂರುಗಳನ್ನು ಸಲ್ಲಿಸಿದ್ದಾರೆ ಎಂದು ಪಕ್ಷದ ಮೂಲಗಳು ದೃಢಪಡಿಸಿವೆ.

ಮಲಯಾಳಂ ನಟಿ ಹಾಗೂ ಮಾಜಿ ಪತ್ರಕರ್ತೆ ರಿನಿ ಆನ್ ಜಾರ್ಜ್ ರಾಜ್ಯದ ಪ್ರಮುಖ ರಾಜಕೀಯ ಪಕ್ಷದ ಯುವ ನಾಯಕ ತನಗೆ ಹಲವು ಬಾರಿ ಆಕ್ಷೇಪಾರ್ಹ ಸಂದೇಶಗಳನ್ನು ಕಳುಹಿಸುತ್ತಿದ್ದರು. ಆ ನಾಯಕ ತನ್ನನ್ನು ಹೋಟೆಲ್‌ಗೆ ಆಹ್ವಾನಿಸಿದ್ದರು, ಬಾರದಿದ್ದರೆ ವಿಷಯವನ್ನು ಪಕ್ಷಕ್ಕೆ ತಿಳಿಸುವುದಾಗಿ ಹೇಳಿದ್ದರು, ಪಕ್ಷದ ಹೆಸರು ಅಥವಾ ಭಾಗಿಯಾಗಿರುವ ರಾಜಕಾರಣಿಯ ಹೆಸರನ್ನು ರಿನಿ ಬಹಿರಂಗ ಪಡಿಸಿರಲಿಲ್ಲ.

13.6 ಕಿ.ಮೀ ಉದ್ದದ ಮೆಟ್ರೋ ಮಾರ್ಗ | ಸಬ್ ವೇ ಉದ್ಘಾಟಿಸಲಿರುವ ಪ್ರಧಾನಿ

ಕೊಲ್ಕತ್ತಾದ ಮೂರು ಮೆಟ್ರೋ ಮಾರ್ಗಕ್ಕೆ ಇಂದು ಮೋದಿ ಚಾಲನೆ

ಕೊಲ್ಕೊತ್ತಾ: ಪ್ರಧಾನಿ ನರೇಂದ್ರ ಮೋದಿ ಶುಕ್ರವಾರ ಕೊಲ್ಕತ್ತಾದಲ್ಲಿ ಮೂರು ಹೊಸ ಮೆಟ್ರೋ ಮಾರ್ಗಗಳನ್ನು ಉದ್ಘಾಟಿಸಲಿದ್ದಾರೆ. ಇದು ನಗರದ ಸಾರಿಗೆ ಸಂಪರ್ಕ ವ್ಯವಸ್ಥೆಯ ಪ್ರಮುಖ ಅಭಿವೃದ್ಧಿಯಾಗಿದೆ. ಪಶ್ಚಿಮ ಬಂಗಾಳದಲ್ಲಿ ದುರ್ಗಾ ಪೂಜೆ ಸಮೀಪಿಸುತ್ತಿರುವುದರಿಂದ ಮೆಟ್ರೋದ ವಿಸ್ತೃತ ವ್ಯಾಪ್ತಿಯು ದಟ್ಟಣೆಯ ಪ್ರಯಾಣವನ್ನು ಹೆಚ್ಚು ಸುಲಭವಾಗಿಸುತ್ತದೆ ಎಂದು ನಿರೀಕ್ಷಿಸಲಾಗಿದೆ

13.61 ಕಿ.ಮೀ. ಉದ್ದದ ಹೊಸ ಮೆಟ್ರೋ ಮಾರ್ಗವು ನಗರದ ಸಂಪರ್ಕಕ್ಕೆ ಪ್ರಮುಖ ಉತ್ತೇಜನ ನೀಡಲಿದೆ. ಹೊಸ ಮಾರ್ಗಗಳಲ್ಲಿ ನೊಪಾರ-ಜೈ ಹಿಂದ್ ಬಿಮನ್‌ಬಂದರ್ (ವಿಮಾನ ನಿಲ್ದಾಣ) ಕಾರಿಡಾರ್, ಸೀಲ್ಡಾ-ಎಸ್ಪ್ಲನೇಡ್ ವಿಭಾಗ ಮತ್ತು ಬೆಲೆಘಾಟ-ಹೇಮಂತ ಮುಖೋಪಾಧ್ಯಾಯ ಮಾರ್ಗವೂ ಸೇರಿವೆ. ಉದ್ಘಾಟನೆಯ ವೇಳೆ ಹೌರಾ ಮೆಟ್ರೋ ನಿಲ್ದಾಣದಲ್ಲಿ ಹೊಸದಾಗಿ ನಿರ್ಮಿಸಲಾದ ಸುರಂಗಮಾರ್ಗವನ್ನೂ ತೆರೆಯಲಾಗುವುದು.

ಕೊಲ್ಕತ್ತಾದಲ್ಲಿ ಪ್ರಧಾನಿ ಮೋದಿ ಜೆಸ್ಸೋರ್ ರಸ್ತೆ ಮೆಟ್ರೋ ನಿಲ್ದಾಣದಲ್ಲಿ ನೊಪಾರ-ಜೈ ಹಿಂದ್ ಬಿಮನ್‌ಬಂದರ್ ಸೇವೆಗೆ ಚಾಲನೆ ನೀಡಲಿದ್ದಾರೆ. ಹೌರಾ ಮೆಟ್ರೋ ನಿಲ್ದಾಣದಲ್ಲಿ ಹೊಸದಾಗಿ ನಿರ್ಮಿಸಲಾದ ಸಬ್‌ವೇಯನ್ನೂ ಅವರು ಉದ್ಘಾಟಿಸಲಿದ್ದು, 6-ಲೇನ್‌ಗಳ ಕೋನಾ ಎಕ್ಸ್‌ಪ್ರೆಸ್‌ವೇಗೆ (ರೂ. 1,200 ಕೋಟಿ) ಅಡಿಪಾಯ ಹಾಕಲಿದ್ದಾರೆ. ಇದು ಹೌರಾ- ಕೋಲ್ಕತ್ತಾ ಮತ್ತು ಸುತ್ತಮುತ್ತಲಿನ ಪಟ್ಟಣಗಳ ನಡುವಿನ ಸಂಪರ್ಕವನ್ನು ಸುಧಾರಿಸುವ ನಿರೀಕ್ಷೆಯಿದೆ.

5 ರೂ.ನಿಂದ ಪ್ರಾರಂಭವಾಗುವ ಮತ್ತು 70 ರೂ.ಗೆ ಸೀಮಿತವಾದ ದರಗಳನ್ನು ನೀಡುವ ಹೊಸ ಮೆಟ್ರೋ ಸೇವೆಗಳು ಸಂಚಾರ ದಟ್ಟಣೆಗೆ ಕುಖ್ಯಾತಿಯಾದ ಕೊಲ್ಕತ್ತಾ ನಗರದಲ್ಲಿ ಪ್ರಯಾಣಿಸಲು ಸುಲಭವಾಗಿ ಕೈಗೆಟುಕುವ ಮತ್ತು ಪರಿಣಾಮಕಾರಿ ಮಾರ್ಗವನ್ನು ಒದಗಿಸುವ ಗುರಿಯನ್ನು ಹೊಂದಿವೆ.

ಮೊದಲ ಗಗನಯಾನ ಪರೀಕ್ಷಾ ಕಾರ್ಯಾಚರಣೆಗೆ ಸಿದ್ಧತೆ

ಡಿಸೆಂಬರ್‌ನಲ್ಲಿ ಇಸ್ರೊ ಮಿಷನ್

ದೆಹಲಿ: ಇದೇ ವರ್ಷ ಡಿಸೆಂಬರ್‌ನಲ್ಲಿ ಇಸ್ರೊ ತನ್ನ ಮೊದಲ ಗಗನಯಾನ ಪರೀಕ್ಷಾ ಕಾರ್ಯಾಚರಣೆಯನ್ನು ಪ್ರಾರಂಭಿಸಲಿದೆ ಎಂದು ಇಸ್ರೊ ಮುಖ್ಯಸ್ಥ ವಿ. ನಾರಾಯಣನ್ ದೃಢಪಡಿಸಿದ್ದಾರೆ. ಪತ್ರಿಕಾಗೋಷ್ಠಿಯಲ್ಲಿ ಈ ವಿಷಯವನ್ನು ಹಂಚಿಕೊಂಡ ಅವರು, ಈ ಕಾರ್ಯಾಚರಣೆಯು ಭಾರತದ ಮೊದಲ ಯೋಜಿತ ಮಾನವ ಬಾಹ್ಯಾಕಾಶ ಹಾರಾಟ ಕಾರ್ಯಾಚರಣೆಯಾದ ಗಗನಯಾನ 2025ರ ಭಾಗವಾಗಿದೆ ಎಂದರು.

'ಕಳೆದ 10 ವರ್ಷಗಳಲ್ಲಿ ಬಾಹ್ಯಾಕಾಶ ಪ್ರಯೋಗ ಗಳಲ್ಲಿ ಸಾಕಷ್ಟು ಪ್ರಗತಿ ಉಂಟಾಗಿದೆ. 2015ರಿಂದ 2025ರವರೆಗೆ ಪೂರ್ಣಗೊಂಡ ಕಾರ್ಯಾಚರಣೆ ಗಳು 2005ರಿಂದ 2015ರವರೆಗಿನ ಕಾರ್ಯಾಚರಣೆ ಗಳಿಗಿಂತ ಎರಡು ಪಟ್ಟು ಹೆಚ್ಚಿನದ್ದಾಗಿದೆ. ಕಳೆದ 6 ತಿಂಗಳಲ್ಲಿ 3 ಪ್ರಮುಖ ಕಾರ್ಯಾಚರಣೆಗಳನ್ನು ಸಾಧಿಸಲಾಗಿದೆ. ಆಕ್ಸಿಯಮ್ -4 ಮಿಷನ್ ಒಂದು ಪ್ರತಿಷ್ಠಿತ ಕಾರ್ಯಾಚರಣೆಯಾಗಿದೆ. ಮೊದಲ ಭಾರತೀಯನಾದ ಶುಭಾಂಶು ಶುಕ್ಲಾ ಅವರನ್ನು ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ ಕರೆದೊಯ್ಯಲಾಯಿತು ಮತ್ತು ಅವರನ್ನು ಸುರಕ್ಷಿತವಾಗಿ ಮರಳಿ ಕರೆತರಲಾಯಿತು' ಎಂದಿದ್ದಾರೆ.

'ನರೇಂದ್ರ ಮೋದಿ ಪ್ರಧಾನಿಯಾಗಿ ಅಧಿಕಾರ ವಹಿಸಿಕೊಂಡ ನಂತರ ದಕ್ಷಿಣ ಏಷ್ಯಾದ ಉಪಗ್ರಹವನ್ನು ನಿರ್ಮಿಸಿ, ಉಡಾವಣೆ ಮಾಡಲಾಯಿತು. ಜೆಪಿಎಲ್ ನಾಸಾ ಮತ್ತು ಇಸ್ರೊ ಜಂಟಿಯಾಗಿ ಬಿಡುಗಡೆ ಮಾಡಿದ ಉಪಗ್ರಹ ಸಂಪೂರ್ಣವಾಗಿ ಪರಿಪೂರ್ಣವಾಗಿದೆ. ಇನ್ನೂ 2-3 ತಿಂಗಳಲ್ಲಿ ನಾವು ಅಮೆರಿಕದ 6500 ಕೆ.ಜಿ ಸಂವಹನ ಉಪಗ್ರಹವನ್ನು ಉಡಾವಣೆ ಮಾಡುತ್ತೇವೆ, ಇದನ್ನು ನಮ್ಮ ಉಡಾವಣಾ ವಾಹನವನ್ನು ಬಳಸಿಕೊಂಡು ಉಡಾವಣೆ ಮಾಡಲಾಗುವುದು' ಎಂದೂ ಇಸ್ರೊ ಮುಖ್ಯಸ್ಥರು ತಿಳಿಸಿದ್ದಾರೆ.

ನಮ್ಮವರು ಅತೀ ಶೀಘ್ರದಲ್ಲಿ ಬಾಹ್ಯಾಕಾಶಕ್ಕೆ: ಶುಕ್ಲಾ

'ನಮ್ಮ ನೆಲದಿಂದಲೇ ಒಬ್ಬರು ನಾವೇ ತಯಾರಿಸಿದ ಕ್ಯಾಪ್ಸೂಲ್‌ನಲ್ಲಿ ಕುಳಿತು, ನಮ್ಮದೇ ರಾಕೆಟ್ ಮೂಲಕ ಬಾಹ್ಯಾಕಾಶಕ್ಕೆ ಪ್ರಯಾಣಿಸುವ ದಿನ ಅತ್ಯಂತ ಸನಿಹದಲ್ಲಿದೆ' ಎಂದು ಶುಭಾಂಶು ಶುಕ್ಲಾ ಗುರುವಾರ ಹೇಳಿದ್ದಾರೆ. ನಾಸಾ ಜತೆಗೂಡಿ ಇಸ್ರೊ ನಡೆಸಿದ ಆಕ್ಸಿಯಂ-4 ಬಾಹ್ಯಾಕಾಶ ಯಾನ ಯೋಜನೆಯಲ್ಲಿ ಶುಭಾಂಶು ಶುಕ್ಲಾ ಅವರು ಇತರ ಮೂವರು ಗಗನಯಾನಿಗಳೊಂದಿಗೆ ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣ ಪ್ರವಾಸ ಮಾಡಿ, ಕೆಲ ಸಂಶೋಧನೆಗಳನ್ನು ಕೈಗೊಂಡು ಯಶಸ್ವಿಯಾಗಿ ಇತ್ತೀಚೆಗೆ ಮರಳಿದ್ದರು. 'ಅಂತಾರಾಷ್ಟ್ರೀಯ ಬಾಹ್ಯಾಕಾಶ ಯೋಜನೆಯ ಅನುಭವಕ್ಕೆ ಬೆಲೆ ಕಟ್ಟಲಾಗದು. ಅದು ಇನ್ನಾವುದೇ ತರಬೇತಿಗಿಂತಲೂ ಉತ್ತಮವಾಗಿತ್ತು' ಎಂದೂ ಅವರು ತಮ್ಮ ಅನುಭವ ಹಂಚಿಕೊಂಡರು.



ಉಲ್ಫಾ ನಾಯಕರ ಖುಲಾಸೆ ಆದೇಶ

ಗುವಾಹಟಿ (ಅಸ್ಸಾಂ): ಮಹತ್ವದ ತೀರ್ಪಿನಲ್ಲಿ ಗುವಾಹಟಿಯ ವಿಶೇಷ ಟಾಡಾ ನ್ಯಾಯಾಲಯವು ನಿಷೇಧಿತ ಯುನೈಟೆಡ್ ಲಿಬರೇಷನ್ ಫ್ರಂಟ್ ಆಫ್ ಅಸೋಮ್‌ನ (ಉಲ್ಫಾ) 38 ಮಾಜಿ ನಾಯಕರು ಮತ್ತು ಸದಸ್ಯರನ್ನು ದೋಷಮುಕ್ತಗೊಳಿಸಿದೆ. ಅರಬಿಂದ ರಾಜ್‌ಖೋವಾ, ಅನುಪ್ ಚೇಟಿಯಾ, ಶಶಿಧರ್ ಚೌಧರಿ, ಕಲ್ಪಾಜಿಲ್ ನೌಗೊಯ್, ಪ್ರದೀಪ್ ಗೊಗೊಯ್, ಪ್ರದೀಪ್ ಗೊಗೊಯ್, ಕಲ್ಪಾಜಿಲ್ ನೌಗೊಯ್, ಕಲ್ಪಾಜ್ ನೌಗೊಯ್, ಕಲ್ಪಾಜಿಲ್ ನೌಗೊಯ್ ಸೇರಿದಂತೆ ಇತರರು ಖುಲಾಸೆಗೊಂಡವರಾಗಿದ್ದಾರೆ

1991ರಲ್ಲಿ ದಿಸ್ಪುರ್ ಪೊಲೀಸ್ ಠಾಣೆಯಲ್ಲಿ ಸುಲಿಗೆ, ಭಯೋತ್ಪಾದನೆ ಸೃಷ್ಟಿಸುವುದು ಮತ್ತು ಇತರ ಕಾನೂನು ಬಾಹಿರ ಚಟುವಟಿಕೆಗಳ ಆಧಾರದ ಮೇಲೆ ಇವರ ಮೇಲೆ ಪ್ರಕರಣ ದಾಖಲಾಗಿತ್ತು. ಬಳಿಕ 2001 ರಲ್ಲಿ ಟಾಡಾ ಪ್ರಕರಣವಾಗಿ ಇದರ ವಿಚಾರಣೆ ನಡೆದಿತ್ತು. 25 ವರ್ಷಗಳ ಕಾಲ ವಿಚಾರಣೆ ನಡೆಸಿದ ಬಳಿಕ ಈ ತೀರ್ಪು ಹೊರ ಬಂದಿದೆ.

ಪ್ರಕರಣದ 45 ಆರೋಪಿಗಳಲ್ಲಿ ಉಲ್ಫಾ (ಸ್ವತಂತ್ರ) ಮುಖ್ಯಸ್ಥ ಪರೇಶ್ ಬರುವಾ ಸೇರಿದಂತೆ ಮೂವರು ತಲೆಮರೆಸಿಕೊಂಡಿದ್ದು, ಇತರ ನಾಲ್ವರು ಇತ್ತೀಚಿನ ವರ್ಷಗಳಲ್ಲಿ ಸಾವನ್ನಪ್ಪಿದ್ದು, ಉಳಿದ 38 ಜನರನ್ನು ಖುಲಾಸೆ ಮಾಡಲಾಗಿದೆ.

ಈ ತೀರ್ಪು ಕುರಿತು ಮಾತನಾಡಿರುವ ಮಾಜಿ ಉಲ್ಫಾ ಪ್ರಧಾನ ಕಾರ್ಯದರ್ಶಿ ಅನೂಪ್ ಚೆಟಿಯಾ, ಸರಕಾರ ಅಗತ್ಯ ದಾಖಲೆಗಳನ್ನು ಪ್ರಸ್ತುತಪಡಿಸಿಲ್ಲ. ಈ ಹಿನ್ನೆಲೆ ನಾವು ಖುಲಾಸೆಗೊಂಡಿದ್ದೇವೆ. ನ್ಯಾಯಾಂಗ ವ್ಯವಸ್ಥೆ ಮೇಲೆ ನಮಗೆ ನಂಬಿಕೆ ಇದೆ. ಇಂದಿನ ತೀರ್ಪು ನಮಗೆ ಸಾಕಷ್ಟು ತೃಪ್ತಿ ತಂದಿದೆ. ದೇಶದ ಮತ್ತು ಜನರಿಗೆ ಪ್ರಜಾಪ್ರಭುತ್ವದ ಹಾದಿನಲ್ಲಿ ಸೇವೆ ಸಲ್ಲಿಸಲು ನಾವು ಬದ್ಧರಾಗಿದ್ದೇವೆ. ಮತ್ತೊಂದು ಟಾಡಾ ಪ್ರಕರಣ ಹಾಗೇ ಉಳಿದಿದ್ದು, ನಮ್ಮ 11-12 ಸದಸ್ಯರು ಭಾಗಿಯಾಗಿದ್ದಾರೆ ಎಂದರು.

ಏಕಾಂಗಿ ಹೋರಾಟ: ನಟ ವಿಜಯ್

ಮಧುರೈ: ಯಾರೊಂದಿಗೂ ಮೈತ್ರಿ ಮಾಡಿಕೊಳ್ಳುವುದಿಲ್ಲ ಎಂದು ಪುನರುಚ್ಚರಿಸಿದ ನಟ-ರಾಜಕಾರಣಿ ವಿಜಯ್ ಅವರು, ತಮಿಳುನಾಡಿನಲ್ಲಿ 2026ರ ಚುನಾವಣೆಯಲ್ಲಿ ಡಿಎಂಕೆ ಮತ್ತು ತಮಿಳಗ ವೆಟ್ರಿ ಕಳಗಂ(ಟಿವಿಕೆ) ನಡುವೆ ನೇರ ಹೋರಾಟ ನಡೆಯಲಿದೆ ಎಂದು ಗುರುವಾರ ಹೇಳಿದರು. ಮಧುರೈ ಜಿಲ್ಲೆಯ ಪರಪತಿಯಲ್ಲಿ ನಡೆದ ಪಕ್ಷದ ಎರಡನೇ ರಾಜ್ಯಮಟ್ಟದ ಸಮ್ಮೇಳನವನ್ನು ಉದ್ದೇಶಿಸಿ ಮಾತನಾಡಿದ ಟಿವಿಕೆ ಮುಖ್ಯಸ್ಥ, ತಮಿಳುನಾಡು ರಾಜಕೀಯದ ಮೂರು ಪ್ರಮುಖ ಪಕ್ಷಗಳಾದ ಡಿಎಂಕೆ, ಎಐಎಡಿಎಂಕೆ ಮತ್ತು ಬಿಜೆಪಿ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದರು. ಬಿಜೆಪಿಯನ್ನು ತಮ್ಮ ಪಕ್ಷದ ಸೈದ್ಧಾಂತಿಕ ಎದುರಾಳಿ ಎಂದು ಬಿಂಬಿಸಿದ ಟಿವಿಕೆ ನಾಯಕ, ಅದು ತಮಿಳುನಾಡಿನ ಹಿತಾಸಕ್ತಿಗಳನ್ನು ನಿರ್ಲಕ್ಷಿಸಿದೆ ಮತ್ತು ಆರ್‌ಎಸ್‌ಎಸ್‌ನೊಂದಿಗೆ ಹೊಂದಾಣಿಕೆ ಮಾಡಿಕೊಂಡಿದೆ ಎಂದರು.

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳ ಚರಂಡಿ ಮಂಡಳಿ
ಮುಖ್ಯ ಅಭಿಯಂತರರವರ ಕಾರ್ಯಾಲಯ, ಧಾರವಾಡ
ಸರ್.ಎಂ. ವಿಶ್ವೇಶ್ವರಯ್ಯ ರಸ್ತೆ, ಜಲಮಂಡಳಿ ಆವರಣ, ಧಾರವಾಡ-580001.
ದೂರವಾಣಿ: 0836-2447090 ಇ-ಮೇಲ್ : kwbcen@ gmail.com

ಅಲ್ಪಾವಧಿ ಟೆಂಡರ್ ಪ್ರಕಟಣೆ CALL-2 (ಎಲೆಕ್ಟ್ರಾನಿಕ್ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಈ ಕೆಳಗಿನ ಕಾಮಗಾರಿಗಳಿಗೆ ತಾಂತ್ರಿಕ ಮತ್ತು ಆರ್ಥಿಕ ಅರ್ಹತಾ ಅಗತ್ಯತೆಗಳನ್ನು ತೃಪ್ತಿಕರವಾಗಿ ಅರ್ಹರಿರುವ ಸಂಸ್ಥೆ/ಗುತ್ತಿಗೆದಾರರಿಂದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (https://kppp.karnataka.gov.in) ಮೂಲಕ (ದ್ವಿ-ಟೆಂಡರ್ ದಾಖಲೆ ಪದ್ಧತಿಯಲ್ಲಿ) ಟೆಂಡರ್ ಆಹ್ವಾನಿಸಲಾಗಿದೆ. ಈ ಕಚೇರಿ ಟೆಂಡರ್ ಪ್ರಕಟಣೆ ಸಂಖ್ಯೆ:1201 ದಿನಾಂಕ: 20-08-2025.
(1) ವಿಜಯಪುರ ನಗರದ ನೀರು ಸರಬರಾಜು ನಿರ್ವಹಣೆ ಮತ್ತು ದುರಸ್ತಿ ಅಡಿಯಲ್ಲಿ ವಿಜಯಪುರ ನಗರ ಸಗಟು ನೀರು ಸರಬರಾಜು ವ್ಯವಸ್ಥೆಯನ್ನು 12 ತಿಂಗಳ ಅವಧಿಯವರೆಗೆ ಕಾರ್ಯ ಮತ್ತು ಪಾಲನೆಗೆ ಹೊರಗುತ್ತಿಗೆ ಆಧಾರದ ಮೇಲೆ ಮಾನವ ಶಕ್ತಿ ಸೇವೆಯನ್ನು ಒದಗಿಸುವ ಟೆಂಡರ್ ಕಾಮಗಾರಿ. INDENT NO. KUWSDB/2025-26/WS/ WORK_INDENT356\CALL-2. (2) ವಿಜಯಪುರ ನಗರದ ನೀರು ಸರಬರಾಜು ನಿರ್ವಹಣೆ ಮತ್ತು ದುರಸ್ತಿ ಅಡಿಯಲ್ಲಿ ವಿಜಯಪುರ ನಗರ ವಿತರಣಾ ನೀರು ಸರಬರಾಜು ವ್ಯವಸ್ಥೆಯನ್ನು 12 ತಿಂಗಳ ಅವಧಿಯವರೆಗೆ ಕಾರ್ಯ ಮತ್ತು ಪಾಲನೆಗೆ ಹೊರಗುತ್ತಿಗೆ ಆಧಾರದ ಮೇಲೆ ಮಾನವ ಶಕ್ತಿ ಸೇವೆಯನ್ನು ಒದಗಿಸುವ ಟೆಂಡರ್ ಕಾಮಗಾರಿ. INDENT NO. KUWSDB/2025-26/WS/WORK_INDENT357\CALL-2. ಹೆಚ್ಚಿನ ವಿವರಗಳಿಗಾಗಿ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೋಡುವುದು ಅಥವಾ ಮುಖ್ಯ ಅಭಿಯಂತರರು, ಕನನೀಸ ಮತ್ತು ಒಚ ಮಂಡಳಿ, ಧಾರವಾಡ ಕಚೇರಿಯನ್ನು ಸಂಪರ್ಕಿಸಬಹುದು.

ಸಹಿ/- ಮುಖ್ಯ ಅಭಿಯಂತರರು,
ಕನನೀಸ ಮತ್ತು ಒಚ ಮಂಡಳಿ, ಧಾರವಾಡ.
ವಾ.ಸಾ.ಇ./ಧಾ/576/ದೇಶಪಾಂಡೆಪಬ್ಲಿಸಿಟಿ/2025-26

ರಾಯಚೂರು ನಗರಾಭಿವೃದ್ಧಿ ಪ್ರಾಧಿಕಾರ, ರಾಯಚೂರು
ಐ.ಡಿ.ಎಸ್.ಎಮ್.ಟಿ. ಲೇಔಟ್, ಮಂತ್ರಾಲಯ ರಸ್ತೆ, ರಾಯಚೂರು Email: rudaraichur@gmail.com
ಸಂಖ್ಯೆ: ನಪ್ರಾರಾ/ಆಡಳಿತ/ಮು.ಠೆ/2025-26/552 ದಿನಾಂಕ:16-08-2025

ಇ-ಟೆಂಡರ್ ಪ್ರಕಟಣೆ

ರಾಯಚೂರು ನಗರಾಭಿವೃದ್ಧಿ ಪ್ರಾಧಿಕಾರದ ವಿವಿಧ ಖಾತೆಗಳಲ್ಲಿರುವ ಮೊತ್ತವನ್ನು ಮುದ್ದತ್ತಿನ ಠೇವಣಿರೂಪದಲ್ಲಿ ಹೂಡಲು ಅಲ್ಪಾವಧಿಯ ಬ್ಯಾಂಕ್ ಸ್ಥಿರಾ ಠೇವಣಿಗಳಲ್ಲಿ ಹೆಚ್ಚುವರಿ ನಿಧಿಗಳ ಹೂಡಿಕೆಗಾಗಿರಾಷ್ಟ್ರೀಕೃತ ಬ್ಯಾಂಕಗಳಿಂದ ಬಡ್ಡಿದರ ಪಡೆಯಲು ಸರ್ಕಾರದ ಕೆಪಿಪಿಪಿ ಪೋರ್ಟಲ್‌ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಟೆಂಡರ್‌ನ ವಿವರ: ವಿವಿಧ ಖಾತೆಗಳಲ್ಲಿರುವ ಹೆಚ್ಚುವರಿ ಮೊತ್ತವನ್ನು ಮುದ್ದತ್ತಿನ ಠೇವಣಿ ರೂಪದಲ್ಲಿ ಹೂಡುವ ಕುರಿತು. **ಟೆಂಡರ್‌ನ ಸಂಖ್ಯೆ:** Number:RCRUDA/2025-26/AUCTION09. **ಅಂದಾಜು ವೆಚ್ಚ (ಕೋಟಿಗಳಲ್ಲಿ):** 11.00

1) ಟೆಂಡರಗಳನ್ನು ದಿನಾಂಕ: 16-08-2025 ರಿಂದ ಸರ್ಕಾರದ KPPP ಪೋರ್ಟಲ್‌ನಿಂದ ಡೌನ್‌ಲೋಡ್ ಮಾಡಬಹುದು. **2) ಪ್ರಶ್ನೆಗಳಿಗೆ ಕೊನೆಯ ದಿನಾಂಕ:** 20-08-2025 @ 05.00PM **3) ಹರಾಜುನಲ್ಲಿ ಭಾಗವಹಿಸುವಿಕೆಯನ್ನು ಖಚಿತಪಡಿಸಲು ದಿನಾಂಕ ಮತ್ತು ಸಮಯ:**22-08-2025 ರಂದು ಸಂಜೆ 05.00 ಗಂಟೆಯವರೆಗೆ **4) ಪ್ರಾರಂಭ ದಿನಾಂಕ ಮತ್ತು ಮೌಲ್ಯಮಾಪನದ ಸಮಯ:** ದಿನಾಂಕ: 25-08-2025 11.00AM. **5) ನೇರ ಹರಾಜಿನ ದಿನಾಂಕ ಮತ್ತು ಸಮಯ :** 26-08-2025: 10.00 AM ರಿಂದ 04.00 PM

ಟಿಪ್ಪಣಿ : 1) ಈ ಕೆಳಗೆ ಸಹಿ ಮಾಡಿರುವವರುಯಾವುದೆ ಕಾರಣಗಳನ್ನು ನೀಡದೆಟೆಂಡರ್ ಪ್ರಕ್ರಿಯೆಯನ್ನು ಮುಂದೂಡುವ / ಸಂಪೂರ್ಣವಾಗಿಟೆಂಡರ್ ರದ್ದುಗೊಳಿಸುವ/ ಟೆಂಡರ್ ನಿರಾಕರಿಸುವ ಹಕ್ಕನ್ನು ಹೊಂದಿರುತ್ತಾರೆ. 2) ಸದರಿ ಟೆಂಡರ್‌ಗಳ ಯಾವುದೆ ಬದಲಾವಣೆಗಳು ಇದ್ದಲ್ಲಿ ದಿನಪತ್ರಿಕೆಗಳಲ್ಲಿ ಪ್ರಕಟಿಸುಲಾಗುವುದಿಲ್ಲ, ಬದಲಾಗಿ ಕೆಪಿಪಿಪಿ ಪೋರ್ಟಲ್‌ನಲ್ಲಿ ಮಾತ್ರ ಬದಲಾವಣೆಗಳನ್ನು ಪ್ರಕಟಿಸಲಾಗುವುದು.

ಆಸಕ್ತಿವುಳ್ಳ ಟೆಂಡರ್‌ದಾರರು ಹೆಚ್ಚಿನ ಮಾಹಿತಿಗಾಗಿ ಮತ್ತುಟೆಂಡರ್‌ಗೆ ಸಂಬಂಧಪಟ್ಟ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಇ-ಸಂಗ್ರಹಣಾಕೋಶದ ವೆಬ್‌ಸೈಟ್ http://kppp.karnataka.gov.in ನಲ್ಲಿಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/- ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರ ರಾಯಚೂರು,
ಸಹಿ/- ಅಧ್ಯಕ್ಷರು, ನಗರಾಭಿವೃದ್ಧಿ ಪ್ರಾಧಿಕಾರ ರಾಯಚೂರು,
DIP/RCR/346/KSMCA/347/2025-26

ಸೆ.9ರಂದು ನಡೆಯಲಿರುವ ಉಪ ರಾಷ್ಟ್ರಪತಿ ಚುನಾವಣೆ

ರೆಡ್ಡಿ ನಾಮಪತ್ರ ಸಲ್ಲಿಕೆ

ದೆಹಲಿ: ಸುಪ್ರೀಂ ಕೋರ್ಟ್‌ನ ಮಾಜಿ ನ್ಯಾಯಾಧೀಶರಾದ ನ್ಯಾಯಮೂರ್ತಿ ಬಿ. ಸುದರ್ಶನ್ ರೆಡ್ಡಿ ಅವರು ಸೆಪ್ಟೆಂಬರ್ 9ರಂದು ನಡೆಯಲಿರುವ ಉಪ ರಾಷ್ಟ್ರಪತಿ ಚುನಾವಣೆಗೆ ಇಂಡಿ ಬಣದ ನಾಮನಿರ್ದೇಶಿತ ಅಭ್ಯರ್ಥಿಯಾಗಿ ಗುರುವಾರ ನಾಮಪತ್ರ ಸಲ್ಲಿಸಿದರು.

ಎನ್‌ಡಿಎ ಮೈತ್ರಿಕೂಟದಿಂದ ಸಿ.ಪಿ. ರಾಧಾಕೃಷ್ಣನ್ ವಿರುದ್ಧ ಇಂಡಿ ಬಣದಿಂದ ಉಪ ರಾಷ್ಟ್ರಪತಿ ಚುನಾವಣೆಗೆ ಔಪಚಾರಿಕ ಪ್ರವೇಶ ಇದಾಗಿದೆ. ವಿರೋಧ ಪಕ್ಷದ ಮೈತ್ರಿಕೂಟದ ಸಭೆಯ ನಂತರ ಕಾಂಗ್ರೆಸ್ ಅಧ್ಯಕ್ಷ ಮತ್ತು ರಾಜ್ಯಸಭೆಯ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರು ನ್ಯಾಯಮೂರ್ತಿ ರೆಡ್ಡಿ ಅವರ ಉಮೇದುವಾರಿಕೆಯನ್ನು ಘೋಷಿಸಿದ್ದರು.

ನ್ಯಾಯಮೂರ್ತಿ ಸುದರ್ಶನ್ ರೆಡ್ಡಿ ಅವರ ವೃತ್ತಿಜೀವನದ ಹೆಗ್ಗುರುತು ತೀರ್ಪುಗಳು, ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯಕ್ಕಾಗಿ ಅವರು ತೋರಿಸಿದ್ದ ದೃಢ ಸಮರ್ಪಣೆಗಾಗಿ ಅವರನ್ನು ಇಂಡಿ ಒಕ್ಕೂಟ ತನ್ನ ಸ್ಪರ್ಧಿಯನ್ನಾಗಿಸಿದೆ.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಸೋನಿಯಾ ಗಾಂಧಿ, ಶರದ್ ಪವಾರ್ ಸೇರಿದಂತೆ ಇಂಡಿ ಬಣದ ಇನ್ನಿತರ ನಾಯಕರು ನಾಮಪತ್ರಿಕೆ ಸಲ್ಲಿಕೆಯ ವೇಳೆ ಉಪಸ್ಥಿತರಿದ್ದರು.

ಉಪ ರಾಷ್ಟ್ರಪತಿ ಚುನಾವಣೆಗೆ ಲೋಕಸಭೆ ಹಾಗೂ ರಾಜ್ಯಸಭೆಯ ಸದಸ್ಯರು, ರಾಜ್ಯಸಭೆಯ ನಾಮ ನಿರ್ದೇಶಿತ ಸದಸ್ಯರು ಮತ ಚಲಾಯಿಸಬಹುದಾಗಿದೆ.

ಉಭಯ ಸದನಗಳಲ್ಲಿ ಒಟ್ಟು 781 ಸದಸ್ಯರ ಬಲ ಹೊಂದಿದ್ದು, ಬಹುಮತ ಪಡೆಯಲು 391 ಸದಸ್ಯರ ಬೆಂಬಲ ಅಗತ್ಯ. ಆಡಳಿತರೂಢ ಎನ್‌ಡಿಎ ಮೈತ್ರಿಕೂಟವು 422 ಸದಸ್ಯರ ಬಲ ಹೊಂದಿದೆ. ವೈಎಸ್‌ಆರ್‌ಸಿಪಿ ಪಕ್ಷವು ಕೂಡ ಈಗಾಗಲೇ ರಾಧಾಕೃಷ್ಣನ್ ಅವರಿಗೆ ಬೆಂಬಲ ಘೋಷಿಸಿದೆ.

ಭಾರತ-ರಷ್ಯಾ ಸಂಬಂಧ ವೃದ್ಧಿ

ಎಸ್. ಜೈಶಂಕರ್-ಡೆನಿಸ್ ಮಾಂಟುರೊಸ್ ಚರ್ಚೆ

ಮಾಸ್ಕೋ: ಭಾರತದ ವಿದೇಶಾಂಗ ಸಚಿವ ಎಸ್. ಜೈಶಂಕರ್ ಮೂರು ದಿನಗಳ ರಷ್ಯಾ ಪ್ರವಾಸ ಕೈಗೊಂಡಿದ್ದಾರೆ. ಅಲ್ಲಿನ ಉಪ ಪ್ರಧಾನಿ ಡೆನಿಸ್ ಮಾಂಟುರೊಸ್ ಅವರೊಂದಿಗೆ ಬುಧವಾರ ಸಭೆ ನಡೆಸಿ ಉಭಯ ರಾಷ್ಟ್ರಗಳ ದ್ವಿಪಕ್ಷೀಯ ಸಂಬಂಧವನ್ನು ಮತ್ತಷ್ಟು ವೃದ್ಧಿಸಲು, ಕಾರ್ಯಸೂಚಿಗಳನ್ನು ವಿಸ್ತರಿಸಲು ಚರ್ಚಿಸಿದ್ದಾರೆ.

ಉಭಯ ರಾಷ್ಟ್ರಗಳ ನಡುವೆ ಕಾರ್ಯತಂತ್ರಗಳನ್ನು ಬಲಪಡಿಸುವ ಅಗತ್ಯವನ್ನು ಪ್ರತಿಪಾದಿಸಿದರು. ಸಂಕೀರ್ಣ ಭೌಗೋಳಿಕ ರಾಜಕೀಯ ಸವಾಲುಗಳನ್ನು ಎದುರಿಸಲು ಭಾರತ ಮತ್ತು ರಷ್ಯಾ ಸೃಜನಶೀಲ ಮತ್ತು ನವೀನ ವಿಧಾನಗಳನ್ನು ಪಾಲಿಸಬೇಕು ಎಂದು ಜೈಶಂಕರ್ ಹೇಳಿದ್ದಾರೆ.

ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಭಾರತೀಯ ಸರಕುಗಳ ಮೇಲಿನ ಸುಂಕವನ್ನು ಶೇ.50ಕ್ಕೆ ಹೆಚ್ಚಿಸಿದ ನಂತರ ಭಾರತ ಮತ್ತು ಅಮೆರಿಕ ನಡುವಿನ ಸಂಬಂಧದಲ್ಲಿ ಬಿರುಕು ಬಿಟ್ಟಿರುವ ನಡುವೆ ಈ ಹೇಳಿಕೆ ಬಂದಿರುವುದು ಮಹತ್ವ ಪಡೆದುಕೊಂಡಿದೆ.

ಭಾರತ ಮತ್ತು ರಷ್ಯಾದ ನಡುವೆ ಅಂತರ್ ಸರಕಾರಿ ವಾಣಿಜ್ಯ, ಆರ್ಥಿಕ, ವೈಜ್ಞಾನಿಕ, ತಾಂತ್ರಿಕ ಮತ್ತು ಸಾಂಸ್ಕೃತಿಕ ಸಹಕಾರ ಆಯೋಗದ (ಐಆರ್‌ಐಜಿಸಿ-ಟಿಇಸಿ) ಚೌಕಟ್ಟಿನಡಿ ದ್ವಿಪಕ್ಷೀಯ ಮಾತುಕತೆಗಳು ನಡೆದವು. ಈ ವರ್ಷದ ಕೊನೆಯಲ್ಲಿ ರಷ್ಯಾದ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರು ಭಾರತ ಭೇಟಿಗೆ ವೇದಿಕೆ ಸಿದ್ಧಪಡಿಸುವ ಗುರಿಯನ್ನು ಈ ಸಭೆ ಹೊಂದಿತ್ತು.

ಜಾಗತಿಕ ರಾಜಕೀಯ ಘಟನೆಗಳ ಆಧಾರದ ಮೇಲೆ ಭಾರತ-ರಷ್ಯಾ ಸಂಬಂಧಗಳ ಪ್ರಾಮುಖ್ಯತೆಯನ್ನು ವಿವರಿಸಿದ ಜೈಶಂಕರ್ ಅವರು, ಉಭಯ ರಾಷ್ಟ್ರಗಳ ನಡುವಿನ ಸಂಬಂಧ ಮತ್ತು ವ್ಯಾಪಾರ, ವಿಶೇಷವಾಗಿ ಆರ್ಥಿಕ ಕ್ಷೇತ್ರದಲ್ಲಿ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಹಲವು ಸಲಹೆಗಳನ್ನು ನೀಡಿದರು.

ಸಮಾಚಾರ ಸಣ್ಣದಲ್ಲ

ದಸರಾ ಏರ್‌ಶೋಗೆ ಕೇಂದ್ರ ಅನುಮತಿ

ಬೆಂಗಳೂರು: ಐತಿಹಾಸಿಕ ಮೈಸೂರು ದಸರಾ ಸಮಯದಲ್ಲಿ ವಾಯುಸೇನೆಯಿಂದ ಏರ್‌ಶೋ ನಡೆಸಲು ಕೇಂದ್ರ ರಕ್ಷಣಾ ಇಲಾಖೆ ಅನುಮತಿ ನೀಡಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ದೆಹಲಿ ಪ್ರವಾಸದ ವೇಳೆ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರನ್ನು ಭೇಟಿಯಾಗಿ ಮೈಸೂರು ದಸರಾ ವೇಳೆ ವೈಮಾನಿಕ ಪ್ರದರ್ಶನವನ್ನು ಆಯೋಜಿಸಲು ಮನವಿ ಸಲ್ಲಿಸಿದ್ದರು. ಇದಕ್ಕೆ ಕೇಂದ್ರ ರಕ್ಷಣಾ ಇಲಾಖೆ ಅನುಮತಿ ನೀಡಿದ್ದು, ಸ್ಥಳ ಹಾಗೂ ದಿನಾಂಕವನ್ನು ಶೀಘ್ರದಲ್ಲಿಯೇ ಇತ್ಯರ್ಥಪಡಿಸಲಾಗುವುದು ಎಂದು ಸಿದ್ದರಾಮಯ್ಯ ಅವರು ತಿಳಿಸಿದ್ದಾರೆ. ಏರ್ ಶೋ ನಡೆಸಲು ಒಪ್ಪಿಗೆ ನೀಡಿರುವುದಕ್ಕೆ ರಾಜನಾಥ್ ಸಿಂಗ್ ಅವರಿಗೆ ಧನ್ಯವಾದ ಸಲ್ಲಿಸಿರುವ ಸಿಎಂ, ಐತಿಹಾಸಿಕ ಉತ್ಸವದ ಭವ್ಯತೆಗೆ ಹೆಚ್ಚಿನ ಮೆರುಗು ನೀಡುವುದಲ್ಲದೆ ದಸರಾ ವೀಕ್ಷಣೆಗೆ ಬರುವ ಲಕ್ಷಾಂತರ ಜನರಲ್ಲಿ ದೇಶಭಕ್ತಿಯ ಭಾವ ತುಂಬುತ್ತದೆ. ಈ ಕಾರ್ಯಕ್ರಮದಲ್ಲಿ ರಾಜನಾಥ್ ಸಿಂಗ್ ಅವರು ಪಾಲ್ಗೊಂಡರೆ ಅದಕ್ಕಿಂತ ದೊಡ್ಡ ಗೌರವ ಇನ್ನೊಂದಿಲ್ಲ. ನಿಮ್ಮ ಉಪಸ್ಥಿತಿ ಸಶಸ್ತ್ರ ಪಡೆಗಳ ಬಗ್ಗೆ ಹೊಂದಿರುವ ಗೌರವ ಮತ್ತು ಮೆಚ್ಚುಗೆಯನ್ನು ಮತ್ತಷ್ಟು ಬಲಪಡಿಸುತ್ತದೆ ಎಂದು ಹೇಳಿದ್ದಾರೆ.

ಅಡಕೆಗೆ ಜಿಎಸ್‌ಟಿ ವಿನಾಯಿತಿಗೆ ಮನವಿ

ದೆಹಲಿ: ಅಡಕೆ ಬೆಳೆಯನ್ನು ಜಿಎಸ್‌ಟಿ ವ್ಯಾಪ್ತಿಯಿಂದ ಹೊರಗಿಡಬೇಕು ಮತ್ತು ಹಳದಿ ಎಲೆ ರೋಗ ಬಂದ ತೋಟಕ್ಕೆ ಕೇಂದ್ರ ಸರಕಾರ ಒಮ್ಮೆ ನೀಡಬಹುದಾದ ಪರಿಹಾರ ನೀಡಬೇಕು ಎಂದು ರಾಜ್ಯ ಸಂಸದರ ನಿಯೋಗ ಕೇಂದ್ರ ಕೃಷಿ ಸಚಿವರಾದ ಶಿವರಾಜ್ ಸಿಂಗ್ ಚೌಹಾನ್ ಮತ್ತು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರಿಗೆ ಮನವಿ ಮಾಡಿದೆ. ಅಡಿಕೆ ಬೆಳೆಗಾರರ ಸಮಸ್ಯೆ ಕುರಿತು ಕೇಂದ್ರ ಸರಕಾರದ ಗಮನ ಸೆಳೆಯುವ ದೃಷ್ಟಿಯಿಂದ ಗುರುವಾರ ರಾಜ್ಯ ಸಂಸದರ ನಿಯೋಗ ಕೇಂದ್ರ ಸಚಿವರ ಭೇಟಿಯಾಗಿ ಚರ್ಚಿಸಿದೆ. ಭೇಟಿ ವೇಳೆ ಕರ್ನಾಟಕವೂ ಸೇರಿ ದೇಶದ ಅಡಿಕೆ ಬೆಳೆಗಾರರ ಸಮಸ್ಯೆಗಳ ಬಗ್ಗೆ ಚರ್ಚಿಸಿದರು.ಕರ್ನಾಟಕ ಭವನದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ, ವಿಶ್ವ ಆರೋಗ್ಯ ಸಂಸ್ಥೆಯು ಅಡಕೆ ಆರೋಗ್ಯಕ್ಕೆ ಹಾನಿಕಾರಕ, ಕ್ಯಾನ್ಸರ್‌ಗೆ ಕಾರಣ ಆಗುತ್ತದೆ ಎಂದು ಹೇಳಿದೆ. ಈ ಬಗ್ಗೆ ಸುಪ್ರೀಂಕೋರ್ಟ್‌ನಲ್ಲಿ ವಿಚಾರಣೆ ನಡೆಯುತ್ತಿದ್ದು, ಕೋರ್ಟ್ ಕೇಂದ್ರಕ್ಕೆ ವರದಿ ಕೇಳಿದೆ. ವರದಿ ವಿಳಂಬವಾಗುತ್ತಿರುವ ಹಿನ್ನಲೆ ಕೇಂದ್ರ ಸರಕಾರದ ಅಧ್ಯಯನ ವರದಿ ಶೀಘ್ರ ಕೋರ್ಟ್‌ಗೆ ಸಲ್ಲಿಸಬೇಕು ಮತ್ತು ಅಧ್ಯಯನ ಮಾಡುತ್ತಿರುವ ಉನ್ನತ ಸಮಿತಿ ಜೊತೆಗೆ ಒಂದು ಸಭೆ ಏರ್ಪಡಿಸಲು ಮನವಿ ಮಾಡಿದ್ದೇವೆ ಎಂದರು.

ತಕ್ಷಣದಿಂದಲೇ ಮೋಸದ ಜಾಹೀರಾತು ನಿಲ್ಲಿಸಲು ಆದೇಶ | ರ್ಯಾಪಿಡೋ ವಿರುದ್ಧ ಕೇಂದ್ರ ಗ್ರಾಹಕ ರಕ್ಷಣಾ ಪ್ರಾಧಿಕಾರಕ್ಕೆ 1,799 ದೂರು

5 ನಿಮಿಷದಲ್ಲಿ ಆಟೋ ಆಫರ್: ರ್ಯಾಪಿಡೋಗೆ ಭಾರೀ ದಂಡ

ಬೆಂಗಳೂರು/ದೆಹಲಿ: 'ಐದೇ ನಿಮಿಷದಲ್ಲಿ ಆಟೋ ಅಥವಾ ಪಡೆಯಿರಿ 50 ರು.' ಆಫರ್ ನೀಡಿ ಗ್ರಾಹಕರನ್ನು ವಂಚಿಸಿದ್ದ ರ್ಯಾಪಿಡೋ ಸಂಸ್ಥೆಗೆ ಕೇಂದ್ರ ಗ್ರಾಹಕ ರಕ್ಷಣಾ ಪ್ರಾಧಿಕಾರ ಬರೋಬ್ಬರಿ 10 ಲಕ್ಷ ರು. ದಂಡ ವಿಧಿಸುವ ಮೂಲಕ ಕಠಿಣ ಕ್ರಮ ಕೈಗೊಂಡಿದೆ. ಇಂತಹ ಮೋಸದ ಜಾಹೀರಾತು ನೀಡುವಂತಹ ಸಂಸ್ಥೆಗಳಿಗೆ ಈ ಮೂಲಕ ಚಾಟಿ ಬೀಸಿದೆ.

ಗ್ರಾಹಕರ ದಾರಿ ತಪ್ಪಿಸುವ ಜಾಹೀರಾತು ನೀಡಿ ವಂಚಿಸುತ್ತಿದ್ದ ಕಾರಣಕ್ಕೆ ರ್ಯಾಪಿಡೋ ಸಂಸ್ಥೆ ವಿರುದ್ಧ ಅತ್ಯಧಿಕ ದೂರುಗಳು ಬಂದಿದ್ದರಿಂದ ಕೇಂದ್ರ ಗ್ರಾಹಕ ವ್ಯವಹಾರಗಳ ಇಲಾಖೆ ಸಚಿವ ಪ್ರಲ್ಹಾದ ಜೋಶಿ ಕಟ್ಟುನಿಟ್ಟಿನ ಕ್ರಮಕ್ಕೆ ಸೂಚಿಸಿದ್ದರು. ಅದರಂತೆ ಕಾರ್ಯಾಚರಣೆಗಿಳಿದ ಸಿಸಿಪಿಎ ಪರಿಶೀಲನೆ ನಡೆಸಿ ಕ್ರಮ ಕೈಗೊಂಡಿದ್ದು, ತಕ್ಷಣದಿಂದಲೇ ಇಂತಹ ದಾರಿ ತಪ್ಪಿಸುವ ಜಾಹೀರಾತುಗಳನ್ನು ನಿಲ್ಲಿಸುವಂತೆ ಆದೇಶ ನೀಡಿದೆ. ಗ್ರಾಹಕರ ಹಕ್ಕುಗಳ ರಕ್ಷಣೆ ವಿಚಾರದಲ್ಲಿ ಒಂದು ಹೆಜ್ಜೆ ಮುಂದಿರುವ ಕೇಂದ್ರ ಗ್ರಾಹಕ ರಕ್ಷಣಾ ಪ್ರಾಧಿಕಾರ, ಜನರ ದಾರಿ ತಪ್ಪಿಸುವ ಜಾಹೀರಾತು ಹಾಗೂ ಅನ್ಯಾಯದ ವ್ಯಾಪಾರ ಪದ್ಧತಿ ಅನುಸರಿಸುತ್ತಿದ್ದ ಕಾರಣಕ್ಕೆ ಇಸ್ರೊಗೆ ದಂಡ ವಿಧಿಸಿದೆ.

ಮೋಸದ ಜಾಹೀರಾತು ನಿಲ್ಲಿಸಿ:

'5 ನಿಮಿಷದಲ್ಲಿ ಆಟೋ ಸೇವೆ ಅಥವಾ ₹50 ಪಡೆಯಿರಿ' ಹಾಗೂ 'ಗ್ಯಾರಂಟಿ ಆಟೋ' ಎಂದೆಲ್ಲಾ ಭರವಸೆ ನೀಡುತ್ತಿದ್ದ ರ್ಯಾಪಿಡೋ ಜಾಹೀರಾತು ಮತ್ತು ಸಂಬಂಧಿತ ದೂರುಗಳನ್ನು ಗಂಭೀರವಾಗಿ ಪರಿಗಣಿಸಿದ ಪ್ರಾಧಿಕಾರವು ಇದೊಂದು ಮೋಸದ ಜಾಹೀರಾತು ಎಂಬುದನ್ನು ಖಚಿತಪಡಿಸಿಕೊಂಡಿದೆ. ಈ ಜಾಹೀರಾತು ವಂಚನೆಯಿಂದ ಕೂಡಿದ್ದು, ಜನರ ದಾರಿ ತಪ್ಪಿಸುವುದಾಗಿದೆ. ಅಲ್ಲದೇ, ಗ್ರಾಹಕರನ್ನು ಮೋಸಗೊಳಿಸುವುದಾಗಿದೆ. ಹಾಗಾಗಿ ತಕ್ಷಣವೇ ಇದನ್ನು ನಿಲ್ಲಿಸುವಂತೆ ಇಸ್ರೊಗೆ ಸ್ಪಷ್ಟ ನಿರ್ದೇಶನ ನೀಡಿದೆ.

ಇಸ್ರೊ ಖಾಸಗಿ ಸಾರಿಗೆ ಸಂಸ್ಥೆ ದೇಶದ 120ಕ್ಕೂ ಹೆಚ್ಚು ನಗರಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದು, ಐದೇ ನಿಮಿಷದಲ್ಲಿ ಆಟೋ ಅಥವಾ ಪಡೆಯಿರಿ 50 ರು. ಆಫರ್ ನೀಡಿ ಗ್ರಾಹಕರನ್ನು ಮೋಸಗೊಳಿಸುತ್ತಿತ್ತು. ದೇಶಾದ್ಯಂತ ಆಯಾ ಪ್ರಾದೇಶಿಕ ಭಾಷೆಗಳಲ್ಲೇ 18 ತಿಂಗಳಿಂದ ಗ್ರಾಹಕರ ದಾರಿ ತಪ್ಪಿಸುವ ಜಾಹೀರಾತು ಬಿತ್ತರಿಸುತ್ತಿದೆ. ಆದರೆ ತಕ್ಕಂತೆ ಸೇವೆ ಒದಗಿಸಿಲ್ಲ. ಈ ಬಗ್ಗೆ ಗ್ರಾಹಕ ಇಲಾಖೆಗೆ ಅತ್ಯಧಿಕ ದೂರುಗಳು ಬಂದಿದ್ದವು. ಇದರ ಜಾಡು ಹಿಡಿದು ಪರಿಶೀಲಿಸಲು ಕೇಂದ್ರ ಗ್ರಾಹಕ ರಕ್ಷಣಾ ಪ್ರಾಧಿಕಾರಕ್ಕೆ ಸೂಚಿಸಿದ್ದೆ, ಅದರಂತೆ CCPA ಪರಿಶೀಲನೆ ನಡೆಸಿ ಇಸ್ರೊಗೆ 10 ಲಕ್ಷ ರು. ಮೊತ್ತದ ದಂಡ ವಿಧಿಸಿದೆ.

– ಪ್ರಲ್ಹಾದ ಜೋಶಿ
ಕೇಂದ್ರ ಗ್ರಾಹಕ ವ್ಯವಹಾರಗಳ ಇಲಾಖೆ ಸಚಿವರು

ಗ್ರಾಹಕರಿಂದ 1799 ದೂರುಗಳು

'5 ನಿಮಿಷದಲ್ಲಿ ಆಟೋ ಸೇವೆ ಅಥವಾ 50 ಪಡೆಯಿರಿ' ಎಂಬ ಇಸ್ರೊ ಸಂಸ್ಥೆಯ ಮೋಸದ ಜಾಹೀರಾತು ವಿರುದ್ಧ ರಾಷ್ಟ್ರೀಯ ಗ್ರಾಹಕ ಸಹಾಯವಾಣಿ ಮೂಲಕ ಅತ್ಯಧಿಕ ದೂರುಗಳು ದಾಖಲಾಗಿವೆ. 2023ರ ಏಪ್ರಿಲ್‌ನಿಂದ 2024ರ ಮೇ ವರೆಗೆ 575 ದೂರುಗಳು ಬಂದಿವೆ. 2024 ಜೂನ್‌ನಿಂದ 2025ರ ಜುಲೈ ವರೆಗೆ ಹಿಂದಿನಕ್ಕಿಂತ ದುಪ್ಪಟ್ಟು ಅಂದರೆ 1,224 ದೂರುಗಳು ಬಂದಿವೆ. ಹೀಗಾಗಿ ಸಚಿವ ಪ್ರಲ್ಹಾದ ಜೋಶಿ ಅವರು ಇದನ್ನು ಗಂಭೀರವಾಗಿ ಪರಿಗಣಿಸಿ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವಂತೆ ಕೇಂದ್ರ ಗ್ರಾಹಕ ರಕ್ಷಣಾ ಪ್ರಾಧಿಕಾರಕ್ಕೆ ಸೂಚನೆ ನೀಡಿದ್ದರು. ತನಿಖೆಯ ವೇಳೆ ಜಾಹೀರಾತುಗಳಲ್ಲಿ ಚಿಕ್ಕ ಗಾತ್ರದಲ್ಲಿ 'ಷರತ್ತು ಅನ್ವಯ' ಎಂದು ಬರೆಯಲಾಗಿತ್ತು. ಆದರೆ ಭರವಸೆ ನೀಡಿದಂತೆ 50 ಮೊತ್ತವೂ ಸಿಗುತ್ತಿರಲಿಲ್ಲ. ಬದಲಿಗೆ ರ್ಯಾಪಿಡೋ ಕಾಯಿನ್ ರೂಪದಲ್ಲಿ ನೀಡಿದ್ದು, ಅದೂ ಕೇವಲ ಏಳು ದಿನಗಳ ಮಾನ್ಯತೆ ಹೊಂದಿತ್ತು. ಇದಲ್ಲದೆ, ಈ ಆಫರ್ ಅನ್ನು 'ವೈಯಕ್ತಿಕ ಕ್ಯಾಪ್ಟನ್‌ಗಳು' ನೀಡುತ್ತಿದ್ದಾರೆಯೇ ಹೊರತು ಇಸ್ರೊಭಿ ಅಲ್ಲ ಎಂದು ಹೇಳಿ ಕಂಪನಿ ಹೊಣೆಗಾರಿಕೆಯಿಂದ ಜಾರಿಕೊಳ್ಳತೊಡಗಿತ್ತು.

ಮುಸುಕುಧಾರಿ ವಿರುದ್ಧ ಮೊದಲ ಪತ್ನಿ ಆಕ್ರೋಶ

ಆತ ಒಬ್ಬ ಮೋಸಗಾರ, ಸುಳ್ಳುಗಾರ ಎಂದು ಕಿಡಿ

ಮಂಡ್ಯ: ಶ್ರೀಕ್ಷೇತ್ರ ಧರ್ಮಸ್ಥಳದಲ್ಲಿ ಸಾವಿರಾರು ಹೆಣಗಳನ್ನು ಹೂತಿದ್ದೇನೆ ಎಂದು ಮಾಸ್ಕ್‌ಮ್ಯಾನ್ ಮಾಡುತ್ತಿರುವ ಆರೋಪಗಳು ಶುದ್ಧ ಸುಳ್ಳಾಗಿದ್ದು, ಹಣದ ಆಸೆಗಾಗಿ ಆತ ಈ ಕೃತ್ಯ ಎಸಗುತ್ತಿರಬಹುದು ಎಂದು ಆತನ ಮೊದಲ ಪತ್ನಿ ಸ್ಫೋಟಕ ಆರೋಪ ಮಾಡಿದ್ದಾರೆ.



ಮಾಸ್ಕ್‌ಮ್ಯಾನ್ ಮಂಡ್ಯ ಜಿಲ್ಲೆಯ ನಾಗಮಂಗಲ ತಾಲೂಕಿನ ಗ್ರಾಮವೊಂದರ ನಿವಾಸಿ.

ಮೊದಲ ಪತ್ನಿ ಈತನ ಬಗ್ಗೆ ಸುದ್ದಿಗಾರರೊಂದಿಗೆ ಮಾತನಾಡಿದರು. 1999ರಲ್ಲಿ ಆತನಿಗೂ ನನಗೂ ಮದುವೆಯಾಗಿದ್ದು, 7ವರ್ಷ ಸಂಸಾರ ಮಾಡಿದ್ದೆವು. ನಮಗೆ ಒಂದು ಹೆಣ್ಣು, ಒಂದು ಗಂಡು ಇದೆ. ಅವನ ಬಳಿ ಒಳ್ಳೆತನ ಇರಲಿಲ್ಲ. ಯಾವಾಗಲೂ ಬರೀ ಸುಳ್ಳು ಹೇಳುತ್ತಿದ್ದ ಎಂದು ದೂರಿದರು.

ನನಗೆ ಹಿಂಸೆ ನೀಡುತ್ತಿದ್ದ ಆತ ಹೊಡೆಯುವುದು, ಬಡಿಯುವುದು ಮಾಡುತ್ತಿದ್ದ. ವಿಚ್ಛೇದನ ವೇಳೆ ಜೀವನಾಂಶ ಕೊಡಲು ನ್ಯಾಯಾಲಯಕ್ಕೆ ಸುಳ್ಳು ಹೇಳಿದ್ದ. ಜೀವನಾಂಶ ಕೊಡಲು ತಾನು ಯಾವ ಕೆಲಸವನ್ನು ಮಾಡುತ್ತಿಲ್ಲ ಎಂದು ಕೋರ್ಟಿಗೆ ಹೇಳಿದ್ದ. ಅಲ್ಲೂ ನನಗೆ ನ್ಯಾಯ ಸಿಗಲಿಲ್ಲ. ನನ್ನ ತಾಯಿಯೇ ನನ್ನ ಮಕ್ಕಳನ್ನು ಸಾಕಿದರು ಎಂದು ನೋವು ತೋಡಿಕೊಂಡರು.

ಆತನ ಜತೆಯಲ್ಲಿ ಧರ್ಮಸ್ಥಳದಲ್ಲಿದ್ದೆ:

ನನಗೆ ಮದುವೆ ಆದ ಬಳಿಕ ಧರ್ಮಸ್ಥಳದ ನೇತ್ರಾವತಿಯಲ್ಲಿ 7 ವರ್ಷ ಅವನ ಜತೆಯಲ್ಲಿಯೇ ಇದ್ದೆ. ಅಲ್ಲಿ ಕಸ ಗುಡಿಸುವ, ಶೌಚಾಲಯ ತೊಳೆಯುವ ಕೆಲಸ ಮಾಡುತ್ತಿದ್ದೆವು. ಆದರೆ ಇದೀಗ ಧರ್ಮಸ್ಥಳದ ಬಗ್ಗೆ ಆತ ಹೇಳುತ್ತಿರುವುದು ಶುದ್ಧ ಸುಳ್ಳು. ದುಡ್ಡಿನ ಆಮಿಷಕ್ಕೆ ಹೀಗೆ ಮಾಡುತ್ತಿರಬಹುದು. ಧರ್ಮಸ್ಥಳ ಎಂದರೆ ನನಗೆ, ನಮ್ಮ ಮನೆಯವರಿಗೆ ಭಕ್ತಿ ಇದೆ ಎಂದು ತಿಳಿಸಿದರು.

ನಾನು ಅವನನ್ನು ಬಿಟ್ಟುಬಂದದ್ದು ಒಳ್ಳೆಯದಾಯಿತು. ಆತ ಅಕ್ರಮ ಸಂಬಂಧ ಇಟ್ಟುಕೊಂಡವಳ ಜತೆ ಮದುವೆ ಮಾಡಿಕೊಳ್ಳಲು ನನಗೆ ಚಿತ್ರಹಿಂಸೆ ಕೊಟ್ಟು ಓಡಿಸಿದ. ಕೆಲಸ ಕೊಟ್ಟ, ಅನ್ನ ಕೊಟ್ಟ ಜಾಗಕ್ಕೆ ಅನ್ಯಾಯ ಮಾಡಬಾರದು. ಆದರೆ ಮದುವೆ ಮಾಡಿಕೊಂಡ ನಂತರ ನಮಗೇನು ಮಾಡಿದೆ ಎಂದು ಆತನ ಎರಡನೇ ಪತ್ನಿ ಕೂಡ ಆತನನ್ನು ಪ್ರಶ್ನಿಸುತ್ತಿದ್ದಳು. ಅವಳ ಒತ್ತಡಕ್ಕೆ ಒಳಗಾಗಿ ಹಣಕ್ಕಾಗಿ ಹೀಗೆ ಮಾಡ್ತಿದ್ದಾನೆ ಎಂಬುದು ನನ್ನ ಅನುಮಾನ ಎಂದು ಆರೋಪಿಸಿದರು.

ಶವಗಳನ್ನು ಹೂತಿಟ್ಟ ಬಗ್ಗೆ ಯಾವತ್ತೂ ಹೇಳಿಲ್ಲ

ಧರ್ಮಸ್ಥಳದಲ್ಲಿ ಗುಂಡಿ ತೋಡಿದರೂ ಏನು ಸಿಕ್ಕಿಲ್ಲ ಅಂದ ಮೇಲೆ, ಏನೋ ಕಿತಾಪತಿಯನ್ನು ಮಾಡಿದ್ದಾನೆ. ಅತ್ಯಾಚಾರ, ಕೊಲೆಯಾದ ಶವಗಳನ್ನು ಹೂತ ಬಗ್ಗೆ ಯಾವತ್ತು ನನ್ನ ಜತೆ ಆತ ಹೇಳಿಲ್ಲ. ಯಾವಾಗಲೂ ಅಹಂಕಾರದಲ್ಲೇ ಮೆರೆಯುತ್ತಿದ್ದ. ಸ್ವಂತ ಅಣ್ಣ-ತಮ್ಮಂದಿರಿಗೂ ಬೈಯ್ಯುತ್ತಿದ್ದ. ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆಯವರು ತುಂಬಾ ಒಳ್ಳೆಯವರು. ಮುಸುಕುಧಾರಿಯಾಗಿ ಭೀಮ ಎಂಬ ಹೆಸರೇಳಿಕೊಂಡು ಬಂದು ಸುಳ್ಳು ಹೇಳುತ್ತಿದ್ದಾನೆ. ಆತ ಮೋಸಗಾರ, ಸುಳ್ಳುಗಾರ ಎಂದು ಮುಸುಕುಧಾರಿಯ ಮೊದಲ ಪತಿ ಕಿಡಿಕಾರಿದರು.

ಪದಚ್ಯುತಿ ಮಸೂದೆ ಮರು ಪರಿಶೀಲಿಸಿ: ಮಾಯಾವತಿ



ಲಖನೌ: ಗಂಭೀರ ಪ್ರಕರಣಗಳಲ್ಲಿ 30 ದಿನಗಳ ಕಾಲ ಜೈಲಿನಲ್ಲಿದ್ದರೆ ಪ್ರಧಾನಿ, ಮುಖ್ಯಮಂತ್ರಿ ಮತ್ತು ಸಚಿವರನ್ನು ಪದಚ್ಯುತಿಗೊಳಿಸಲು ಅವಕಾಶ ಕಲ್ಪಿಸುವ 130ನೇ ಸಾಂವಿಧಾನಿಕ ತಿದ್ದುಪಡಿ ಮಸೂದೆ ಪ್ರಜಾಪ್ರಭುತ್ವವನ್ನು ದುರ್ಬಲಗೊಳಿಸುತ್ತದೆ ಎಂದು ಬಿಎಸ್‌ಪಿ ನಾಯಕಿ ಮಾಯಾವತಿ ಗುರುವಾರ ಹೇಳಿದ್ದಾರೆ.

ಈ ಮಸೂದೆಯನ್ನು ಕೇಂದ್ರ ಸರಕಾರ ಮರು ಪರಿಶೀಲಿಸಬೇಕು ಎಂದು ಒತ್ತಾಯಿಸಿದ್ದಾರೆ.

ಕೇಂದ್ರ ಸರಕಾರ ಬುಧವಾರ ಸಂಸತ್ತಿನಲ್ಲಿ ತೀವ್ರ ಕೋಲಾಹಲದ ನಡುವೆ ಮಂಡಿಸಿದ 130ನೇ ಸಾಂವಿಧಾನಿಕ ತಿದ್ದುಪಡಿ ಮಸೂದೆಯು ದೇಶದ ಪ್ರಸ್ತುತ ರಾಜಕೀಯ ವಾತಾವರಣದಲ್ಲಿ ಪ್ರಜಾಪ್ರಭುತ್ವವನ್ನು ದುರ್ಬಲಗೊಳಿಸುವ ಮಸೂದೆಯಾಗಿ ಕಂಡುಬರುತ್ತಿದೆ ಎಂದು ಉತ್ತರ ಪ್ರದೇಶ ಮಾಜಿ ಮುಖ್ಯಮಂತ್ರಿ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

ಆಡಳಿತ ಪಕ್ಷಗಳು ಇದನ್ನು ಹೆಚ್ಚಾಗಿ ತಮ್ಮ ಲಾಭ, ಸ್ವಾರ್ಥ ಮತ್ತು ದ್ವೇಷಕ್ಕಾಗಿ ದುರುಪಯೋಗಪಡಿಸಿಕೊಳ್ಳುತ್ತವೆ ಎಂದು ಸಾರ್ವಜನಿಕರು ಆತಂಕಪಡುತ್ತಿದ್ದಾರೆ. ಆದ್ದರಿಂದ ನಮ್ಮ ಪಕ್ಷವು ಈ ಮಸೂದೆಯನ್ನು ಒಪ್ಪುವುದಿಲ್ಲ ಎಂದು ಮಾಯಾವತಿ ಹೇಳಿದ್ದಾರೆ.

ಸ್ವಾಧೀನ ಸೂಚನೆ
(ಸ್ಥಿರ ಆಸ್ತಿಗಾಗಿ)

ಈ ಕಾರಣದಿಂದ,

ಧನಿ ಲೋನ್ಸ್ ಆ್ಯಂಡ್ ಸರ್ವಿಸಸ್ ಲಿಮಿಟೆಡ್ (ಹಿಂದೆ ಐವಿಎಲ್ ಫೈನಾನ್ಸ್ ಲಿಮಿಟೆಡ್ ಮತ್ತು ಇಂಡಿಯಾಬುಲ್ಸ್ ಕನ್ಸ್ಯೂಮರ್ ಫೈನಾನ್ಸ್ ಲಿಮಿಟೆಡ್) (CIN:U74899DL1994PLC062407) ನ ಅಧಿಕಾರ ಕೊಟ್ಟಿರುವ ಅಧಿಕಾರಿಯ ಹಸ್ತಾಕ್ಷರವಿರುವ ಐಹಿಕತೆ ಮತ್ತು ಪುನರ್ ನಿರ್ಮಾಣ ಮತ್ತು ಫೈನಾನ್ಸ್‌ನ ಸಾಲ ತೀರಿಸಲು ಇರುವ ಸ್ವತ್ತು ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿಸ್ ಆಕ್ಟ್ 2002 ಮತ್ತು ಅಧಿಕಾರದ ಪ್ರಯೋಗ ಮಾಡುವಿಕೆಯ ಸೆಕ್ಷನ್ 13 (12) ನಿಯಮ 3 ರ ಸೆಕ್ಯೂರಿಟಿಸ್ (ಎನ್‌ಫೋರ್ಸ್‌ಮೆಂಟ್) ನಿಯಮ, 2002 ದೊಂದಿಗೆ ಓದಿರಿ. ಬೇಡಿಕೆಯ ಸೂಚನೆ ಮುಲಕ ಪ್ರಕಟಿಸಿದ ತಾರೀಖು **29.04.2025** ರಂದು ಕರೆದು ಸಾಲಗಾರ **ಮೀನಾಕ್ಷಿ ಯಾದವ್, ನಿರಂಜನ್ ನರೈನ್ ಅಲಿಯಾಸ್ ಎ. ಕೆ ನಿರಂಜನ್ ನರೈನ್ ಅಲಿಯಾಸ್ ಆರ್ಕಾಟ್ ಕೃಷ್ಣ ಮೂರ್ತಿ ನಿರಂಜನ್ ನರೈನ್ ಮತ್ತು ಯಾದವ್ ಕುಮಾರ್ ಗೋವಿಂದ ರಾಜನ್ ಅಲಿಯಾಸ್ ಯಾದವ್ ಜಿ ಕುಮಾರ್** ನೋಟಿಸಿನಲ್ಲಿ ಹೇಳಿರುವಂತೆ ಮರುಪಾವತಿಸಬೇಕಾದ **ರೂ. 3,30,46,418.43 (ಮೂರು ಕೋಟಿ ಮೂವತ್ತು ಲಕ್ಷದ ನಲವತ್ತಾರು ಸಾವಿರದ ನಾಲ್ಕುನೂರ ಹದಿನೆಂಟು ರೂಪಾಯಿಗಳು ಮತ್ತು ನಲವತ್ತೂರು ಪೈಸೆ ಮಾತ್ರ)** ಸಾಲ ಖಾತೆ ನಂ. **HILAMAL00452677** ಈ ಲೋನ್ ಅಕೌಂಟ್‌ಗೆ ಸಂಬಂಧಿಸಿದಂತ, ಹೇಳಲಾಗಿರುವ ನೋಟಿಸ್ ನಿಮ್ಮನ್ನು ತಲುಪಿ 60 ದಿನಗಳಾಗುವುದರೊಳಗೆ **23.04.2025** ರ ವರೆಗಿನ ಮೊತ್ತ ಮತ್ತು ಅದರ ಮೇಲಿನ ಬಡ್ಡಿ.

ಸಾಲಗಾರ (ರು) ಮೊತ್ತವನ್ನು ಮರುಪಾವತಿಸಲು ವಿಫಲರಾದ ಕಾರಣ, ಕೆಳಗೆ ಸಹಿ ಮಾಡಿದವರು ಉಪ-ಅಧಿಕಾರದ ಅಡಿಯಲ್ಲಿ ತನಗೆ ನೀಡಿರುವ ಅಧಿಕಾರವನ್ನು ಚಲಾಯಿಸುವ ಮೂಲಕ ಕೆಳಗೆ ವಿವರಿಸಿದ ಆಸ್ತಿಯ **ಸಾಂಕೇತಿಕ ಸ್ವಾಧೀನ** ವನ್ನು ತೆಗೆದುಕೊಂಡಿದ್ದಾರೆ ಎಂದು ಈ ಮೂಲಕ ಸಾಲಗಾರರಿಗೆ (ರು) ಮತ್ತು ಸಾರ್ವಜನಿಕರಿಗೆ ಸೂಚನೆಯನ್ನು ನೀಡಲಾಗಿದೆ. ಕಾಯಿದೆಯ ಸೆಕ್ಷನ್ 13 ರ ವಿಭಾಗ (4) ಅನ್ನು **19.08.2025** ರಂದು ಭದ್ರತಾ ಆಸಕ್ತಿ (ಎನ್ಫೋರ್ಸ್ಮೆಂಟ್) ನಿಯಮಗಳು, 2002 ರ ನಿಯಮ 8 ರೊಂದಿಗೆ ಓದಲಾಗಿದೆ.

ಪ್ರತ್ಯೇಕವಾಗಿ ಸಾಲಗಾರರಿಗೆ ಮತ್ತು ಸರ್ವಸಾಮಾನ್ಯವಾದ ಸಾರ್ವಜನಿಕರ ಎಚ್ಚರಿಕೆಗಾಗಿ ಯಾವುದೇ ತರಹದ ಅಸ್ತಿ ವ್ಯವಹಾರವು ಮಾಡದಿರಲು ಮತ್ತು ಆಸ್ತಿಯಲ್ಲಿನ ಯಾವುದೇ ವ್ಯವಹಾರವು **ಧನಿ ಲೋನ್ಸ್ ಆ್ಯಂಡ್ ಸರ್ವಿಸಸ್ ಲಿಮಿಟೆಡ್** ಬಾಕಿ ಇರುವ ಮೊತ್ತ **ರೂ. 3,30,46,418.43 (ಮೂರು ಕೋಟಿ ಮೂವತ್ತು ಲಕ್ಷದ ನಲವತ್ತಾರು ಸಾವಿರದ ನಾಲ್ಕುನೂರ ಹದಿನೆಂಟು ರೂಪಾಯಿಗಳು ಮತ್ತು ನಲವತ್ತೂರು ಪೈಸೆ ಮಾತ್ರ) 23.04.2025** ವರೆಗಿನ ಮೊತ್ತ ಮತ್ತು ಜೊತೆಗೆ ಅದರ ಮೇಲಿನ ಬಡ್ಡಿಗೆ ಒಳಪಟ್ಟಿದೆ.

ಸೆಕ್ಯೂರ್ಡ್ ಆಸ್ತಿಗಳನ್ನು ರಿಡೀಮ್ ಮಾಡಲು ಉಪಲಬ್ಧವಿರುವ ಸಮಯದ ಬಗ್ಗೆ ಸಾಲಗಾರರ ಗಮನವನ್ನು ಕಾಯ್ದೆಯ ಸೆಕ್ಷನ್ 13ರ ಉಪ-ಸೆಕ್ಷನ್ (8) ಪ್ರಾವಧಾನಗಳತ್ತ ಸೆಳೆಯಲಾಗುತ್ತದೆ.

ಸ್ಥಿರಾಸ್ತಿಯ ವರ್ಣನೆ

ಯುಕೆಎನ್ ನಿಂದ ಆರ್ಕಾಟ್ ನರೈನ್ ಸ್ಟ್ರೀಟ್ ಎಂದು ಕರೆಯಲ್ಪಡುವ ವಾಣಿಜ್ಯ ಕಟ್ಟಡದಲ್ಲಿ 1035 ಚದರ ಅಡಿ ಸೂಪರ್ ಬಿಲ್ಟ್-ಅಪ್ ಪ್ರದೇಶ, ಮೊದಲ ಮಹಡಿಯಲ್ಲಿ 1775 ಚದರ ಅಡಿ ಸೂಪರ್ ಬಿಲ್ಟ್-ಅಪ್ ಪ್ರದೇಶ, ಎರಡನೇ ಮಹಡಿಯಲ್ಲಿ 1274 ಚದರ ಅಡಿ ಸೂಪರ್ ಬಿಲ್ಟ್-ಅಪ್ ಪ್ರದೇಶ ಮತ್ತು ಮೂರನೇ ಮಹಡಿಯಲ್ಲಿ 1715 ಚದರ ಅಡಿ ಸೂಪರ್ ಬಿಲ್ಟ್-ಅಪ್ ಪ್ರದೇಶವನ್ನು ಹೊಂದಿರುವ ಆಸ್ತಿ ವಾಣಿಜ್ಯ ಘಟಕಗಳು / ಅಂಗಡಿಗಳ ಎಲ್ಲಾ ತುಣುಕು ಮತ್ತು ಪಾರ್ಸೆಲ್. ಒಟ್ಟು 19,560 ಚದರ ಅಡಿ ಕಾರ್ಪೆಟ್ ಪ್ರದೇಶವನ್ನು ಹೊಂದಿರುವ ಬೇಸ್ಮೆಂಟ್, ನೆಲ, ಮೊದಲ, ಎರಡನೇ ಮತ್ತು ಮೂರನೇ ಮಹಡಿಗಳನ್ನು ಒಳಗೊಂಡಿದೆ, ಪುರಸಭೆ ಸಂ 314 (ಹಳೆಯ ಸಂ 262ಇ) ಹೊಂದಿರುವ ಆಸ್ತಿಗಳ ಮೇಲೆ ನಿರ್ಮಿಸಲಾಗಿದೆ., ಬಿಬಿಎಂಪಿ ಪಿಐಡಿ ಸಂ 81-8-314 ಪರಸ್ಪರ ಪಕ್ಕದಲ್ಲಿ ಮತ್ತು ಒಂದೇ ಬ್ಲಾಕ್ ಅನ್ನು ರೂಪಿಸುತ್ತದೆ, ಪೂರ್ವದಿಂದ ಪಶ್ಚಿಮಕ್ಕೆ ಅಳತೆ ಮಾಡುತ್ತದೆ (148.1 ½ + 155.9.5) / 2 ಅಡಿ ಮತ್ತು ದಕ್ಷಿಣಕ್ಕೆ ಉತ್ತರಕ್ಕೆ (78.1+89) / 2 ಅಡಿ, 11,062 ಚದರ ಅಡಿ ಎತ್ತರದಲ್ಲಿದೆ, ಕಾಮರಾಜ ರಸ್ತೆ (ಹಿಂದೆ ಚಾವಲ್ರಿ ರಸ್ತೆ ಎಂದು ಕರೆಯಲಾಗುತ್ತಿತ್ತು), ಬೆಂಗಳೂರು-560005, ಕರ್ನಾಟಕದಲ್ಲಿ ಇದೆ.

ಎಸ್‌ಎಲ್ ನಂ.	ಮಹಡಿ	ಅಂಗಡಿ ನಂ.	ಸೂಪರ್ ಬಿಲ್ಟ್-ಅಪ್ ಪ್ರದೇಶ
1.	ನೆಲ	1	358 ಚದರ ಅಡಿ
2.	ನೆಲ	3	390 ಚದರ ಅಡಿ
3.	ನೆಲ	6	287 ಚದರ ಅಡಿ
4.	ಮೊದಲ	103	509 ಚದರ ಅಡಿ
5.	ಮೊದಲ	105	799 ಚದರ ಅಡಿ
6.	ಮೊದಲ	112	423 ಚದರ ಅಡಿ
7.	ಮೊದಲ	ಕ3	44 ಚದರ ಅಡಿ
8.	ಎರಡನೇ	201	483 ಚದರ ಅಡಿ
9.	ಎರಡನೇ	206	747 ಚದರ ಅಡಿ
10.	ಎರಡನೇ	ಕ6	44 ಚದರ ಅಡಿ
11.	ಮೂರನೇ	305	800 ಚದರ ಅಡಿ
12.	ಮೂರನೇ	307	406 ಚದರ ಅಡಿ
13.	ಮೂರನೇ	303	509 ಚದರ ಅಡಿ

ಅಧಿಕಾರವಿರುವ ಅಧಿಕಾರಿ
ಧನಿ ಲೋನ್ಸ್ ಆ್ಯಂಡ್ ಸರ್ವಿಸಸ್ ಲಿಮಿಟೆಡ್
(ಹಿಂದೆ ಐವಿಎಲ್ ಫೈನಾನ್ಸ್ ಲಿಮಿಟೆಡ್ ಮತ್ತು ಇಂಡಿಯಾಬುಲ್ಸ್ ಕನ್ಸ್ಯೂಮರ್ ಫೈನಾನ್ಸ್ ಲಿಮಿಟೆಡ್)

ದಿನಾಂಕ : 19.08.2025
ಸ್ಥಳ : ಬೆಂಗಳೂರು

ಉಕ್ರೇನ್ ಮತ್ತು ಪಶ್ಚಿಮ ಏಷ್ಯಾ ಸಂಘರ್ಷಗಳ ಶಾಂತಿ ಪರಿಹಾರಕ್ಕಾಗಿ ಪ್ರಯತ್ನ

ಫ್ರಾನ್ಸ್ ಅಧ್ಯಕ್ಷರ ಜೊತೆ ಪ್ರಧಾನಿ ಮೋದಿ ದೂರವಾಣಿ ಮಾತುಕತೆ

ದೆಹಲಿ: ಪ್ರಧಾನಿ ನರೇಂದ್ರ ಮೋದಿ ಗುರುವಾರ ಫ್ರಾನ್ಸ್ ಅಧ್ಯಕ್ಷ ಎಮ್ಯಾನುಯೆಲ್ ಮ್ಯಾಕ್ರನ್ ಅವರೊಂದಿಗೆ ಜಾಗತಿಕ ಶಾಂತಿ ಮತ್ತು ದ್ವಿಪಕ್ಷೀಯ ಸಂಬಂಧಗಳನ್ನು ಬಲಪಡಿಸುವ ಬಗ್ಗೆ ಮಾತುಕತೆ ನಡೆಸಿದ್ದಾರೆ. ಎಕ್ಸ್ ಪೋಸ್ಟ್‌ನಲ್ಲಿ ತಮ್ಮಿಬ್ಬರ ಸಂವಾದದ ವಿವರಗಳನ್ನು ಹಂಚಿಕೊಂಡ ಪ್ರಧಾನಿ ಮೋದಿ, 'ನನ್ನ ಸ್ನೇಹಿತರಾದ ಫ್ರೆಂಚ್ ಅಧ್ಯಕ್ಷ ಮ್ಯಾಕ್ರನ್ ಅವರೊಂದಿಗೆ ಉತ್ತಮ ಮಾತುಕತೆ ನಡೆಸಿದ್ದೇನೆ. ಉಕ್ರೇನ್ ಮತ್ತು ಪಶ್ಚಿಮ ಏಷ್ಯಾದಲ್ಲಿನ ಸಂಘರ್ಷಗಳ ಶಾಂತಿಯುತ ಪರಿಹಾರಕ್ಕಾಗಿ ಪ್ರಯತ್ನಗಳ ಕುರಿತು ನಾವು ಅಭಿಪ್ರಾಯಗಳನ್ನು ವಿನಿಮಯ ಮಾಡಿಕೊಂಡಿದ್ದೇವೆ'' ಎಂದು ಹೇಳಿದ್ದಾರೆ

ಉಕ್ರೇನ್‌ನಲ್ಲಿನ ಸಂಘರ್ಷ ಮತ್ತು ಪಶ್ಚಿಮ ಏಷ್ಯಾದಲ್ಲಿ ಹೆಚ್ಚುತ್ತಿರುವ ಉದ್ವಿಗ್ನತೆಗಳು ಅಂತಾರಾಷ್ಟ್ರೀಯ ಸ್ಥಿರತೆಗೆ ಬೆದರಿಕೆಯನ್ನುಂಟುಮಾಡುತ್ತಿರುವುದರಿಂದ, ಶಾಶ್ವತ ಶಾಂತಿಯನ್ನು ಸಾಧಿಸಲು ಸಂವಾದ ಮತ್ತು ರಾಜತಾಂತ್ರಿಕತೆ ಅತ್ಯಗತ್ಯ ಎಂದು ಪ್ರಧಾನಿ ಮೋದಿ ಮತ್ತು ಫ್ರೆಂಚ್ ಅಧ್ಯಕ್ಷ ಮ್ಯಾಕ್ರನ್ ಇಬ್ಬರೂ ಅಭಿಪ್ರಾಯಪಟ್ಟಿದ್ದಾರೆ. ಜಗತ್ತಿನಲ್ಲಿ ನಡೆಯುತ್ತಿರುವ ಭೌಗೋಳಿಕ ರಾಜಕೀಯ ಬಿಕ್ಕಟ್ಟುಗಳ ಬಗ್ಗೆ ಇಬ್ಬರೂ ನಾಯಕರ ಕಳವಳಗಳನ್ನು ವ್ಯಕ್ತಪಡಿಸಿದ್ದಾರೆ.

ತಮ್ಮ ದೀರ್ಘಕಾಲದ ಸಂಬಂಧಗಳನ್ನು ಪುನರುಚ್ಚರಿಸುತ್ತಾ, ಇಬ್ಬರೂ ನಾಯಕರು ಭಾರತ-ಫ್ರಾನ್ಸ್ ಕಾರ್ಯತಂತ್ರದ



ಪಾಲುದಾರಿಕೆಯನ್ನು ಗಾಢಗೊಳಿಸುವ ಬದ್ಧತೆಯನ್ನು ಪುನರುಚ್ಚರಿಸಿದರು. ರಕ್ಷಣೆ, ಬಾಹ್ಯಾಕಾಶ, ಇಂಧನ ಪರಿವರ್ತನೆ ಮತ್ತು ಜಾಗತಿಕ ಆಡಳಿತದಲ್ಲಿ ಸಹಕಾರವು ಈ ಸಂಬಂಧದ ಬೆನ್ನೆಲುಬಾಗಿ ಮುಂದುವರೆದಿದೆ. ಇದನ್ನು ಭಾರತ ಮತ್ತು ಫ್ರಾನ್ಸ್ ಎರಡೂ ದೇಶಗಳು ಮತ್ತಷ್ಟು ವಿಸ್ತರಿಸಲು ಸಿದ್ಧತೆಯನ್ನು ವ್ಯಕ್ತಪಡಿಸಿದ್ದಾರೆ.ಉಕ್ರೇನ್‌ನಲ್ಲಿನ ಯುದ್ಧ ಮತ್ತು ಪಶ್ಚಿಮ ಏಷ್ಯಾದಲ್ಲಿನ ಹೊಸ ಉದ್ವಿಗ್ನತೆಗಳು ಜಾಗತಿಕ ಸ್ಥಿರತೆಯ ಮೇಲೆ ಪರಿಣಾಮ ಬೀರುತ್ತಿರುವುದರಿಂದ, ಮೋದಿ ಮತ್ತು ಮ್ಯಾಕ್ರನ್ ಶಾಂತಿಯನ್ನು ಪುನಃಸ್ಥಾಪಿಸಲು ರಾಜತಾಂತ್ರಿಕ ಪರಿಹಾರಗಳು ಮತ್ತು ಸಂಭಾಷಣೆಯ ಮಹತ್ವವನ್ನು ಒತ್ತಿ ಹೇಳಿದರು.

ಟ್ರಾಫಿಕ್ ದಂಡ ಪಾವತಿಸಲು ಶೇ.50ರಷ್ಟು ರಿಯಾಯಿತಿ

ಬೆಂಗಳೂರು: ಸಿಗ್ನಲ್ ಜಂಪ್, ಝೀಬ್ರಾ ಲೈನ್ ಕ್ರಾಸಿಂಗ್, ಹೆಲ್ಮೆಟ್, ನಂಬರ್ ಪ್ಲೇಟ್ , ನೋ ಪಾರ್ಕಿಂಗ್ ಸೇರಿದಂತೆ ಸಂಚಾರ ನಿಯಮ ಉಲ್ಲಂಘಿಸಿದವರಿಗೆ ದಂಡ ಪಾವತಿಸಲು ಸಾರಿಗೆ ಇಲಾಖೆ ಮತ್ತೊಮ್ಮೆ ರಿಯಾಯಿತಿ ಘೋಷಿಸಿದೆ.

ಸಂಚಾರಿ ನಿಯಮ ಉಲ್ಲಂಘಿಸಿ ದಂಡ ಕಟ್ಟದ ವಾಹನ ಮಾಲೀಕರಿಗೆ ಬರೋಬ್ಬರಿ ಶೇ.50ರಷ್ಟು ರಿಯಾಯಿತಿ ನೀಡಲಾಗಿದ್ದು, ರಾಜ್ಯ ಸಾರಿಗೆ ಇಲಾಖೆ ಅಧೀನ ಕಾರ್ಯದರ್ಶಿ ಪುಷ್ಪ ವಿ.ಎಸ್ ಅಧಿಕೃತ ಆದೇಶ ಹೊರಡಿಸಿದ್ದಾರೆ. ದಂಡದ ಅರ್ಧದಷ್ಟು ಹಣ ತುಂಬಲು ವಾಹನ ಸವಾರರಿಗೆ ಅವಕಾಶ ಕಲ್ಪಿಸಲಾಗಿದ್ದು, ಶೇ.50ರಷ್ಟು ದಂಡ ಪಾವತಿ ಮಾಡಲು ಆ.23 ರಿಂದ ಸೆ.12ರವರೆಗೆ ಮಾತ್ರ ಅವಕಾಶ ನೀಡಲಾಗಿದೆ. ಶೇ.50ರ ರಿಯಾಯಿತಿ 2023ರ ಫೆಬ್ರವರಿ 11ರವರೆಗೆ ದಾಖಲಾದ ಪ್ರಕರಣಗಳಿಗೆ ಅನ್ವಯವಾಗಲಿದ್ದು, 2023ರ ಫೆಬ್ರವರಿ 12ರ ನಂತರದ ಪ್ರಕರಣಗಳಿಗೆ ಇದು ಅನ್ವಯವಾಗುವುದಿಲ್ಲ. ಬಹಳ ವರ್ಷಗಳಿಂದ ಟ್ರಾಫಿಕ್ ದಂಡ ಕಟ್ಟದೇ ಹಾಗೇ ಬಾಕಿ ಉಳಿಸಿಕೊಂಡವರಿಗೆ ಈ ಆಫರ್ ನೀಡಲಾಗಿದೆ. ಇನ್ನುಳಿದಂತೆ 2023ರ ಫೆಬ್ರವರಿ 12ರ ನಂತರದ ಕೇಸ್ ಗಳಿಗೆ ಮುಂದಿನ ವರ್ಷ ಆಫರ್ ನೀಡುವ ಸಾಧ್ಯತೆಗಳಿವೆ.

ಪಾವತಿಸುವ ವಿಧಾನ

ವಾಹನಗಳ ಮಾಲೀಕರು ತಮ್ಮ ವಾಹನದ ವಿರುದ್ಧ ಯಾವುದಾದರೂ ಸಂಚಾರ ನಿಯಮ ಉಲ್ಲಂಘನೆ ಪ್ರಕರಣ ದಾಖಲಾಗಿದೆಯೇ ಎಂದು ಆನ್‌ಲೈನ್‌ನಲ್ಲಿ ಪರಿಶೀಲಿಸಿ ದಂಡ ಪಾವತಿಸಬೇಕು.ಯಾವ ಸಂಚಾರ ನಿಯಮ ಉಲ್ಲಂಘಿಸಲಾಗಿದೆ, ದಿನಾಂಕ ಮತ್ತು ಸಮಯ, ಸಂಚಾರ ನಿಯಮ ಉಲ್ಲಂಘನೆಯಾದ ಸ್ಥಳದ ಫೋಟೊ ಸಮೇತ ಮಾಲೀಕರಿಗೆ ಆನ್‌ಲೈನ್ ನಲ್ಲೆ ಮಾಹಿತಿ ಲಭ್ಯವಾಗುತ್ತಿದೆ. ಇನ್ನು ಬಾಕಿ ದಂಡ ಪಾವತಿಗೆ ಪೊಲೀಸ್ ಇಲಾಖೆಯು ನಗರದಲ್ಲಿ ವಿಶೇಷ ವ್ಯವಸ್ಥೆ ಮಾಡಿದೆ. ಬೆಂಗಳೂರು ಒನ್ ಸೆಂಟರ್ ವೆಬ್‌ಸೈಟ್‌ನಲ್ಲಿ ಸಂಚಾರ ನಿಯಮ ಉಲ್ಲಂಘನೆ ಮತ್ತು ದಂಡ ಬಾಕಿ ಉಳಿಸಿಕೊಂಡಿರುವ ವಿವರ ಪಡೆದು ದಂಡ ಪಾವತಿಸಬಹುದು. ಪೇಟಿಎಂ ಆ್ಯಪ್ ಮೂಲಕವೂ ದಂಡ ಕಟ್ಟಬಹುದು. ಸಂಚಾರ ಪೊಲೀಸ್ ಠಾಣೆಗಳಿಗೆ ವಾಹನದ ನೋಂದಣಿ ಸಂಖ್ಯೆ ಒದಗಿಸಿ ವಿವರ ಪಡೆದು ಬಾಕಿ ದಂಡ ಪಾವತಿಸಿ ರಶೀದಿ ಪಡೆಯಬಹುದು.

ಸುರಕ್ಷತೆಗೆ ಫ್ಲಾಟ್‌ಫಾರ್ಮ್‌ನಲ್ಲಿ ಬ್ಯಾರಿಕೇಡ್ ಅಳವಡಿಸಿದ ಮೆಟ್ರೋ

ಬೆಂಗಳೂರು: ನಮ್ಮ ಮೆಟ್ರೋದ ಹಳದಿ ಮಾರ್ಗದಲ್ಲಿ ಸಂಚಾರ ಆರಂಭವಾಗುತ್ತಿದ್ದಂತೆ ಹಳಿಗಳ ಮೇಲೆ ಸಂಭವಿಸುವ ಅವಘಡವನ್ನು ತಪ್ಪಿಸಲು ಬಿಎಂಆರ್‌ಸಿಎಲ್ ಮುಂದಾಗಿದ್ದು, ಈ ನಿಟ್ಟಿನಲ್ಲಿ ಫ್ಲಾಟ್ ಫಾರ್ಮ್‌ಗಳಲ್ಲಿ ಉಕ್ಕಿನ ಬ್ಯಾರಿಕೇಡ್‌ಗಳನ್ನು ಅಳವಡಿಸಲಾಗಿದೆ.

ಸುರಕ್ಷಿತ ಮತ್ತು ಪ್ರಯಾಣಿಕರ ಪರಿಣಾಮಕಾರಿ ಚಲನೆಯನ್ನು ಖಚಿತಪಡಿಸಿಕೊಳ್ಳಲು ಬ್ಯಾರಿಕೇಡ್‌ಗಳನ್ನು ಅಳವಡಿಸಲಾಗುತ್ತಿದ್ದು, ಮುಖ್ಯವಾಗಿ ಭಾರೀ ಜನದಟ್ಟಣೆ ನಿರೀಕ್ಷೆ ಇರುವ ಇಂಟರ್ ಚೇಂಜ್ ಮಾರ್ಗದಲ್ಲಿ ಅಳವಡಿಸಲಾಗುತ್ತಿದೆ. ಸುರಕ್ಷಿತ ಮತ್ತು ಪ್ರಯಾಣಿಕರ ಪರಿಣಾಮಕಾರಿ ಚಲನೆಯನ್ನು ಖಚಿತಪಡಿಸಿಕೊಳ್ಳಲು ಬ್ಯಾರಿಕೇಡ್‌ಗಳನ್ನು ಅಳವಡಿಸಲಾಗುತ್ತಿದೆ, ಪ್ರಮುಖವಾಗಿ ಭಾರೀ ಜನದಟ್ಟಣೆ ನಿರೀಕ್ಷೆ ಇರುವ ಇಂಟರ್ ಚೇಂಜ್ ಮಾರ್ಗದಲ್ಲಿ ಅಳವಡಿಸಲಾಗುತ್ತಿದೆ. ಹಳದಿ ಮಾರ್ಗದ ರೈಲುಗಳಿಗೆ 25 ನಿಮಿಷಗಳ ಕಾಯಬೇಕಿದೆ. ಹೀಗಾಗಿ ಈ ಮಾರ್ಗದಲ್ಲಿ ಪ್ರಯಾಣಿಕರ ಸಂಖ್ಯೆ ಹೆಚ್ಚಾಗಿರುತ್ತದೆ. ಇದು ಜನದಟ್ಟಣೆಯ ಅಪಾಯವನ್ನು ಹೆಚ್ಚಿಸುತ್ತದೆ. ಹೀಗಾಗಿ ಪ್ರವೇಶ ಮತ್ತು ನಿರ್ಗಮನ ಬಿಂದುಗಳಲ್ಲಿ ಜನರನ್ನು ನಿಯಂತ್ರಿಸಲು ಉಕ್ಕಿನ ಬ್ಯಾರಿಕೇಡ್‌ಗಳನ್ನು ಹಾಕಲಾಗುತ್ತಿದೆ. ಈ ಮೂಲಕ ಪ್ರಯಾಣಿಕರಿಗೆ ಸುರಕ್ಷಿತ ಅನುಭವವನ್ನು ಒದಗಿಸುವ ಗುರಿಯನ್ನು ಹೊಂದಲಾಗಿದೆ ಎಂದು ತಿಳಿಸಿದ್ದಾರೆ.

ನಮ್ಮ ಮೆಟ್ರೋ ನಿಲ್ದಾಣಗಳಲ್ಲಿ ನಾಡಪ್ರಭು ಕೆಂಪೇಗೌಡ ಇಂಟರ್‌ಚೇಂಜ್ ನಂತರ ಉಕ್ಕಿನ ಬ್ಯಾರಿಕೇಡ್‌ಗಳನ್ನು ಹೊಂದಿರುವ ಎರಡನೇ ನಿಲ್ದಾಣ ಆರ್‌ವಿ ರಸ್ತೆ ನಿಲ್ದಾಣವಾಗಿದೆ. ಆರ್‌ವಿ ರಸ್ತೆಯನ್ನು ಬೊಮ್ಮಸಂದ್ರಕ್ಕೆ ಸಂಪರ್ಕಿಸುವ 19.5 ಕಿಮೀ ಹಳದಿ ಮಾರ್ಗವನ್ನು ಈ ತಿಂಗಳ ಆರಂಭದಲ್ಲಿ ಹಲವು ವಿಳಂಬಗಳ ನಂತರ ಪ್ರಾರಂಭಿಸಲಾಗಿತ್ತು. ಈ ಹಿಂದೆ ಸಂಸದ ತೇಜಸ್ವಿ ಸೂರ್ಯ ಅವರು, ಹಳದಿ ಮಾರ್ಗದಲ್ಲಿ ಪ್ರತಿ 25 ನಿಮಿಷಕ್ಕೊಮ್ಮೆ ರೈಲು ಸಂಚರಿಸುತ್ತಿರುವುದು ಆರ್ .ವಿ. ರಸ್ತೆ ಇಂಟರ್‌ಚೇಂಜ್ ನಿಲ್ದಾಣದಲ್ಲಿ ದಟ್ಟಣೆಗೆ ಕಾರಣವಾಗಿದೆ. ಇದರಿಂದ ಸಂಭವಿಸಬಹುದಾದ ಅಪಾಯ ತಡೆಗಟ್ಟಲು ತಕ್ಷಣವೇ ಪ್ಲಾಟ್‌ಫಾರ್ಮ್ ಸ್ಕ್ರೀನ್ ಡೋರ್ ಅಥವಾ ಬ್ಯಾರಿಕೇಡ್‌ಗಳನ್ನು ಅಳವಡಿಸಬೇಕು ಎಂದು ಮನವಿ ಮಾಡಿದ್ದರು.

2-3 ದಿನಗಳಲ್ಲಿ ಪೂರ್ಣ

ಇತ್ತೀಚೆಗೆ ಉದ್ಘಾಟನೆಯಾದ ಹಳದಿ ಮಾರ್ಗವು ಹಸಿರು ಮಾರ್ಗದೊಂದಿಗೆ ಸಂಪರ್ಕಿಸುತ್ತದೆ. ಆರ್.ವಿ ರಸ್ತೆ ಇಂಟರ್ ಚೇಂಜ್ ನಿಲ್ದಾಣದಲ್ಲಿ ಬ್ಯಾರಿಕೇಡ್‌ಗಳ ಅಳವಡಿಕೆ ಕಾರ್ಯ ನಡೆಯುತ್ತಿದೆ. ಒಂದು ಬದಿಯಲ್ಲಿ ಬ್ಯಾರಿಕೇಡ್ ಹಾಕುವ ಕಾರ್ಯ ಬಹುತೇಕ ಪೂರ್ಣಗೊಂಡಿದ್ದು, ಮತ್ತೊಂದು ಬದಿಗೆ ಬ್ಯಾರಿಕೇಡ್ ಅಳವಡಿಸುವ ಕಾರ್ಯ ಮುಂದಿನ ಎರಡು-ಮೂರು ದಿನಗಳಲ್ಲಿ ಪೂರ್ಣಗೊಳ್ಳುತ್ತದೆ ಎಂದು ನಮ್ಮ ಮೆಟ್ರೋ ಹಿರಿಯ ಅಧಿಕಾರಿ ಹೇಳಿದ್ದಾರೆ.

ಪಿಒಪಿ ಬಳಸಲ್ಲವೆಂದು ಮುಚ್ಚಳಿಗೆ ಬರೆಸಿಕೊಳ್ಳಿ

ಪರಿಸರ ಸ್ನೇಹಿ ಮಣ್ಣಿನ ಗಣಪತಿ ಮೂರ್ತಿಗಳನ್ನೇ ಪೂಜಿಸಿ: ಸಚಿವ ಈಶ್ವರ್ ಖಂಡ್ರೆ

ಬೆಂಗಳೂರು: ಸಾರ್ವಜನಿಕ ಗಣೇಶೋತ್ಸವಗಳಲ್ಲಿ ಪಿಒಪಿ ಗಣಪತಿ ಮೂರ್ತಿ ಬಳಸುವುದಿಲ್ಲ ಎಂದು ಪೆಂಡಾಲ್‌ಗೆ ಅನುಮತಿ ನೀಡುವ ಮುನ್ನ ಗಣೇಶೋತ್ಸವ ಸಮಿತಿಗಳಿಂದ ಮುಚ್ಚಳಿಕೆ ಬರೆಸಿಕೊಳ್ಳಲು ಸ್ಥಳೀಯ ಸಂಸ್ಥೆಗಳಿಗೆ ಸೂಚಿಸಲಾಗಿದೆ ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ತಿಳಿಸಿದ್ದಾರೆ.

ವಿಕಾಸಸೌಧದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಾವು ಶ್ರದ್ಧಾಭಕ್ತಿಯಿಂದ ಆಚರಿಸುವ ಗಣೇಶೋತ್ಸವದಿಂದ ಜಲಚರಗಳಿಗೆ ಮಾರಕವಾಗಬಾರದು. ಈ ನಿಟ್ಟಿನಲ್ಲಿ ಗಣೇಶೋತ್ಸವ ಸಮಿತಿಗಳು ಮತ್ತು ಸಾರ್ವಜನಿಕರು ಪಿಒಪಿ ಗಣಪತಿ ಮೂರ್ತಿಗಳನ್ನು ಖರೀದಿಸದೇ, ಪರಿಸರ ಸ್ನೇಹಿಯಾದ ಮಣ್ಣಿನ ಗಣಪತಿ ಮೂರ್ತಿಗಳನ್ನೇ ಪೂಜಿಸಿ, ವಿಸರ್ಜಿಸುವಂತೆ ಮನವಿ ಮಾಡಿದರು.

ಉಡುಪಿ, ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಶೇ.90ರಷ್ಟು ಮಣ್ಣಿನ ಗಣಪತಿಯನ್ನೇ ಪೂಜಿಸುತ್ತಾರೆ. ಆ ಮೂರು ಜಿಲ್ಲೆಗಳಲ್ಲಿ ಸಾಧ್ಯವಾಗುವುದಾದರೆ ಉಳಿದ ಜಿಲ್ಲೆಗಳಲ್ಲಿ ಏಕೆ ಆಗುವುದಿಲ್ಲ. ಈ ಬಗ್ಗೆ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಜಿಲ್ಲಾಡಳಿತ, ತಾಲೂಕು ಆಡಳಿತ ಮತ್ತು ಸ್ಥಳೀಯ ಸಂಸ್ಥೆಗಳು ಜಾಗೃತಿ ಮೂಡಿಸಬೇಕು. ಪಿಒಪಿ ಗೌರಿ ಗಣೇಶ ಮೂರ್ತಿಗಳು ನೀರಲ್ಲಿ ಕರಗುವುದಿಲ್ಲ. ಜತೆಗೆ ವಿಷಕಾರಕ ಅಂಶಗಳನ್ನು ನೀರಿನಲ್ಲಿ ಸೇರಿಸುತ್ತವೆ. ಇದರೊಂದಿಗೆ ಮೂರ್ತಿಗೆ ಲೇಪಿಸುವ ಭಾರಲೋಹ ಮಿಶ್ರಿತ ರಾಸಾಯನಿಕ ಬಣ್ಣಗಳು ನೀರಲ್ಲಿ ಕರಗಿ ಜಲಚರಗಳ ಸಾವಿಗೆ ಕಾರಣವಾಗುತ್ತವೆ ಎಂದು ಹೇಳಿದರು.

ಬೆಂಗಳೂರು ನಗರ ಸೇರಿದಂತೆ ರಾಜ್ಯದ ಅನೇಕ ಪಟ್ಟಣ, ನಗರಗಳಲ್ಲಿ ಸಮುಚ್ಚಯಗಳಿವೆ. ಇವುಗಳಲ್ಲಿ ಸಂಘಗಳು ಇರುತ್ತವೆ. ಅವರಿಗೆ ಮನವಿ ಮಾಡಿ ಮಣ್ಣಿನ ಗಣಪ ಪೂಜಿಸುವಂತೆ ಎಲ್ಲರಿಗೂ ಸಂದೇಶ ಕಳಿಸುವಂತೆ ಮತ್ತು ಶಾಲಾ, ಕಾಲೇಜು ಮಕ್ಕಳಲ್ಲಿ ಪರಿಸರ ಸ್ನೇಹಿ ಗಣಪನ ಮೂರ್ತಿ ಪೂಜಿಸುವ ಬಗ್ಗೆ ಅರಿವು ಮೂಡಿಸುವಂತೆ ಸೂಚಿಸಲಾಗಿದೆ ಎಂದು ಸ್ಪಷ್ಟಪಡಿಸಿದರು.

ಹಸಿರು ಪಟಾಕಿಗೆ ಮಾತ್ರ ಅವಕಾಶ

ಗಣೇಶೋತ್ಸವದ ಮೆರವಣಿಗೆಯಲ್ಲಿ ಪಟಾಕಿಯನ್ನೂ ಹಚ್ಚಲಾಗುತ್ತದೆ. ಸುಪ್ರೀಂಕೋರ್ಟ್ 125 ಡೆಸಿಬಲ್‌ಗಿಂತ ಹೆಚ್ಚು ಶಬ್ದ ಮಾಡುವ ಪಟಾಕಿ ಸಿಡಿಸದಂತೆ ಮತ್ತು ರಾತ್ರಿ 8ರಿಂದ 10 ಗಂಟೆಯೊಳಗೆ ಮಾತ್ರ ಪಟಾಕಿ ಸಿಡಿಸುವಂತೆ ಆದೇಶ ನೀಡಿದ್ದು, ಎಲ್ಲರೂ ಈ ನಿಯಮ ಪಾಲಿಸಬೇಕು. ಪರಿಸರಕ್ಕೆ ಮಾರಕವಾದ ಪಟಾಕಿ ಬಳಸದೇ ಹಸಿರು ಪಟಾಕಿ ಸಿಡಿಸಬೇಕು ಎಂದು ಸಚಿವರು ಮನವಿ ಮಾಡಿದರು. ಮಣ್ಣಲ್ಲಿ ಮಣ್ಣಾಗದ, ನೀರಲ್ಲಿ ಕರಗದ ಮತ್ತು ಸುಟ್ಟರೆ ಗಾಳಿಗೆ ವಿಷಕಾರಕ ಅಂಶ ಸೇರಿಸುವ ಏಕ ಬಳಕೆ ಪ್ಲಾಸ್ಟಿಕ್ ಉತ್ಪನ್ನಗಳನ್ನು ನಿಷೇಧಿಸಲಾಗಿದೆ. ಆದರೂ ಹಾದಿ ಬೀದಿಯಲ್ಲಿ ಪ್ಲಾಸ್ಟಿಕ್ ತ್ಯಾಜ್ಯ ನೋಡುತ್ತೇವೆ. ಈ ಬಗ್ಗೆ ಜಾಗೃತಿ ಅಗತ್ಯ. ಸ್ಥಳೀಯ ಸಂಸ್ಥೆಗಳು ಹೆಚ್ಚು ಪರಿಣಾಮಕಾರಿಯಾಗಿ ಈ ಸಮಸ್ಯೆ ಪರಿಹರಿಸಬೇಕು ಎಂದರು.

ಇಂದು ಇಡೀ ವಿಶ್ವ ಎದುರಿಸುತ್ತಿರುವ ದೊಡ್ಡ ಸವಾಲು ಜಾಗತಿಕ ತಾಪಮಾನ ಏರಿಕೆ ಮತ್ತು ಹವಾಮಾನ ಬದಲಾವಣೆ ಆಗಿದೆ. ತಾಪಮಾನ ಏರಿಕೆಯಿಂದ ಒಂದು ತಿಂಗಳಲ್ಲಿ ಬೀಳುವ ಮಳೆ ಒಂದು ವಾರದಲ್ಲಿ, ಒಂದು ವಾರದ ಮಳೆ ಒಂದೇ ದಿನ ಬೀಳುತ್ತಿದ್ದು, ಅತಿವೃಷ್ಟಿಯಿಂದ ಅನಾಹುತ ಸಂಭವಿಸುತ್ತಿದೆ. ಹೀಗಾಗಿ ಇರುವ ಒಂದು ಭೂಮಿಯನ್ನು ರಕ್ಷಿಸುವ ಹೊಣೆ ನಮ್ಮ ನಿಮ್ಮೆಲ್ಲರ ಮೇಲಿದೆ.

– ಈಶ್ವರ್ ಖಂಡ್ರೆ, ಅರಣ್ಯ ಸಚಿವ

2026ರ ಅಕ್ಟೋಬರ್‌ಗೆ ಕುಂಭಮೇಳ ಧ್ವಜಾರೋಹಣ | 2027 ಜು.17ಕ್ಕೆ ಆರಂಭ- ಅಕ್ಟೋಬರ್‌ವರೆಗೂ ಜಾರಿ | ಆಗಸ್ಟ್-ಸೆಪ್ಟೆಂಬರ್ ಅವಧಿ 4 ಪ್ರಮುಖ ಅಮೃತ ಸ್ನಾನ

ನಾಸಿಕ್ ಸಿಂಹಾಸ್ಥ ಕುಂಭಮೇಳ 2027

ಬಿ.ವಿ.ಮಹೇಶ್ ಚಂದ್ರ

ಭಾರತ ಉಪಖಂಡದಲ್ಲಿ 144 ವರ್ಷಗಳಿಗೊಮ್ಮೆ ಜರುಗುವ 'ಮಹಾ ಕುಂಭಮೇಳ' ಉತ್ತರ ಪ್ರದೇಶದ ಪ್ರಯಾಗ್‌ರಾಜ್‌ನಲ್ಲಿ ಇತ್ತೀಚೆಗಷ್ಟೇ ಬಲು ಯಶಸ್ವಿಯಾಗಿ ನಡೆದು ಪರಿಸಮಾಪ್ತಿಗೊಂಡಿದೆ. ಆ ದಿನಗಳ ನೆನಪು ಇನ್ನೂ ದೇಶ-ವಿದೇಶಗಳಲ್ಲಿನ ಭಾರತೀಯರು, ಸನಾತನ ಧರ್ಮದ ಅನುಯಾಯಿಗಳ ಸಮೇತ ಕೋಟ್ಯಂತರ ಜನರ ಮನಸ್ಸಿನಲ್ಲಿ ಇನ್ನೂ ಹಚ್ಚ ಹಸಿರಾಗಿದೆ.

2025ರ ಜನವರಿಯಿಂದ ಫೆಬ್ರವರಿವರೆಗೂ ನಡೆದ ಮಹಾ ಕುಂಭಮೇಳದಲ್ಲಿ 66 ಕೋಟಿಗೂ ಅಧಿಕ ಭಕ್ತರು ಭಾಗಿಯಾಗಿ ಗಂಗಾ-ಯಮುನಾ-ಸರಸ್ವತಿ ನದಿಗಳ ತ್ರಿವೇಣಿ ಸಂಗಮದಲ್ಲಿ ಪುಣ್ಯಸ್ನಾನ ಮಾಡಿ ಪುನೀತ ಭಾವ ಅನುಭವಿಸಿದರು. ಲಕ್ಷಾಂತರ ನಾಗಾ ಸಾಧುಗಳು, ಕೋಟ್ಯಂತರ ಸಂತರು-ಪ್ರವಾಸಿಗರನ್ನು ಆಕರ್ಷಿಸಿದ್ದ ಪ್ರಯಾಗರಾಜ್ ಮಹಾ ಕುಂಭಮೇಳ ನೆನಪನ್ನು ಈಗಲೂ ಮೆಲುಕು ಹಾಕುತ್ತಿದ್ದಾರೆ. ದೇಶ-ವಿದೇಶದ ಸನಾತನ ಧರ್ಮದ ಅನುಯಾಯಿಗಳಿಗೆ, ಧಾರ್ಮಿಕ ಮನೋಭಾವದ ಜನರಿಗೆ ಮತ್ತಷ್ಟು ಭಕ್ತಿಯ ಭಾವ ತುಂಬಲು ಮತ್ತೊಂದು ಕುಂಭ ಮೇಳಕ್ಕೆ ಸನಾತನ ಧರ್ಮದ ನೆಲವಾದ ಭಾರತ ಮತ್ತೊಮ್ಮೆ ಸಜ್ಜುಗೊಳ್ಳಲಾರಂಭಿಸಿದೆ.

ನಾಸಿಕ್‌ನಲ್ಲಿ 2027ರಲ್ಲಿ ನಡೆಯಲಿರುವ 'ಸಿಂಹಾಸ್ಥ ಕುಂಭಮೇಳ'ಕ್ಕೆ ಸಿದ್ಧತೆಗಳು ಮಹಾರಾಷ್ಟ್ರದಲ್ಲಿ ಶುರುವಾಗಿವೆ. 2027ರ ಜುಲೈ 17ರಂದು ಆರಂಭಗೊಂಡು ಅಕ್ಟೋಬರ್‌ವರೆಗೂ ಮಹಾರಾಷ್ಟ್ರ ರಾಜ್ಯದ ನಾಸಿಕ್ ನಗರದ ಗೋದಾವರಿ ನದಿ ದಂಡೆಯಲ್ಲಿ ಜರುಗಲಿದೆ.

4 ಅಮೃತ ಸ್ನಾನ: 2027ರ ಆಗಸ್ಟ್‌ನಿಂದ ಶುರುವಾಗಿ ಸೆಪ್ಟೆಂಬರ್ ನಡುವಿನ ಅವಧಿಯಲ್ಲಿ ನಾಲ್ಕು ಪ್ರಮುಖ ಅಮೃತ ಸ್ನಾನ ವಿಧಿಗಳು ಜರುಗುತ್ತವೆ. ಈ ದಿನಗಳಿಗೆ ಮುಂಚಿನ ದಿನಗಳಲ್ಲಿಯೇ ಏನಿಲ್ಲವೆಂದರೂ ಒಟ್ಟಾರೆ 5 ಕೋಟಿ ಭಕ್ತರು ಸಾಗರೋಪಾದಿಯಲ್ಲಿ ನಾಸಿಕ್‌ನತ್ತ ಹರಿದುಬರುವ ನಿರೀಕ್ಷೆ ಇದೆ.

ಭಾರತದಲ್ಲಿನ 12 ಜ್ಯೋತಿರ್ಲಿಂಗಗಳಲ್ಲಿ ಒಂದಾಗಿರುವ ಶ್ರೀ ತ್ರಯಂಬಕೇಶ್ವರ ಮಹಾಶಿವನ ದೇಗುಲವಿರುವ ನೆಲದಲ್ಲಿಯೇ ನಾಸಿಕ್ ಕುಂಭಮೇಳ ನಡೆಯಲಿದೆ.

ಗೋದಾವರಿ ನದಿ ದಂಡೆಯಲ್ಲಿರುವ ಶ್ರೀತ್ರಯಂಬಕೇಶ್ವರ ದೇಗುಲ ಮತ್ತು ರಾಮಕುಂಡ ಪ್ರದೇಶಗಳನ್ನು ಕುಂಭಮೇಳ ಸಂದರ್ಭ ಪುಣ್ಯಸ್ನಾನಕ್ಕೆ ಗುರುತಿಸಲಾಗಿದೆ. ಒಟ್ಟು 3-4 ತಿಂಗಳ ಕಾಲ ನಾಸಿಕ್ ಕುಂಭಮೇಳ ಜರುಗಲಿದೆ. ಈ ಕುಂಭಮೇಳಕ್ಕೂ ನಾಗಾಸಾಧುಗಳ ಆಗಮನವಾಗಲಿದೆ. ಅಖಾಡಾ ಸಾಧುಗಳೂ ಬರಲಿದ್ದಾರೆ. ಉಳಿದಂತೆ ಸಂತರ, ಸನ್ಯಾಸಿಗಳು, ವಿರಾಗಿಗಳು, ಸಂಸಾರಿಗಳು ಸೇರಿದಂತೆ ಕೋಟ್ಯಂತರ ಭಕ್ತರ ಆಗಮನ ನಿರೀಕ್ಷೆ ಇದೆ.

3 ವರ್ಷಕ್ಕೊಮ್ಮೆ ಕುಂಭ ಮೇಳ!: ಸನಾತನ ಧರ್ಮ ಉಗಮದ ಪುಣ್ಯ ನೆಲವಾದ ಭರತ ಖಂಡದಲ್ಲಿ ಪ್ರತಿ 3 ವರ್ಷಕ್ಕೊಮ್ಮೆ ಉತ್ತರ ಪ್ರದೇಶ ರಾಜ್ಯದ ಪ್ರಯಾಗ್ ರಾಜ್, ಮಹಾರಾಷ್ಟ್ರ ರಾಜ್ಯದ ನಾಸಿಕ್, ಉತ್ತರಾಖಂಡ ರಾಜ್ಯದ ಹರಿದ್ವಾರ ಮತ್ತು ಮಧ್ಯಪ್ರದೇಶ ರಾಜ್ಯದ ಉಜ್ಜೈನಿಯಲ್ಲಿ ನಡೆಯುತ್ತದೆ.

ರೊಟೇಷನ್ ಮಾದರಿಯಲ್ಲಿ ಪ್ರತಿ ಸ್ಥಳಕ್ಕೆ ಕುಂಭ ಮೇಳ ಆಯೋಜನೆಗೆ 12 ವರ್ಷಕ್ಕೊಮ್ಮೆ ಅವಕಾಶ ದೊರೆಯುತ್ತದೆ. 2015ರಲ್ಲಿ ಕುಂಭಮೇಳ ಆಯೋಜಿಸಿದ್ದ ನಾಸಿಕ್, ಈಗ 2027ರಲ್ಲಿ ಮತ್ತೊಮ್ಮೆ ಕುಂಭ ಮೇಳ ಕಾಣಲಿದೆ.

ನಾಸಿಕ್ ಕುಂಭಮೇಳಕ್ಕೂ ಕೋಟ್ಯಂತರ ಭಕ್ತರ ಆಗಮನವಾಗುವುದರಿಂದ ಯಾತ್ರಿಕರು ಮುಂಚಿತವಾಗಿಯೇ ನಾಸಿಕ್ ಕುಂಭಮೇಳ ಪ್ರವಾಸಕ್ಕೆ ಯೋಜನೆ ರೂಪಿಸಿಕೊಂಡು, ಹೋಟೆಲ್ ಕೊಠಡಿ, ವಿಮಾನ-ರೈಲು ಪ್ರಯಾಣದ ಟಿಕೆಟ್‌ಗಳನ್ನು

ನಾಲ್ಕು ಟೆಂಟ್ ಸಿಟಿಗೆ ಸಿದ್ಧತೆ

2027ರ ಜುಲೈನಲ್ಲಿ ನಡೆಯಲಿರುವ 'ಸಿಂಹಾಸ್ಥ ಕುಂಭಮೇಳ'ಕ್ಕೆ ಸಾಕ್ಷಿಯಾಗಲಿರುವ ನಾಸಿಕ್ ನಗರ ಅದಾಗಲೇ ಭಕ್ತರಿಗೆ ಮೂಲ ಸೌಕರ್ಯಗಳನ್ನು ಒದಗಿಸಲು ಸಜ್ಜಾಗುತ್ತಿದೆ. ಮೊದಲಿಗೆ ಗೋದಾವರಿ ನದಿ ದಂಡೆಗೆ ಸಮೀಪವಾಗಿ 4 'ಟೆಂಟ್ ಸಿಟಿ'ಗಳ ನಿರ್ಮಾಣಕ್ಕೆ ಸಿದ್ಧತೆ ನಡೆದಿದೆ.

ಈ ಟೆಂಟ್ ಸಿಟಿಗಳನ್ನು ನಿರ್ಮಿಸಿಕೊಡಲು ಮೂರು ಪ್ರತ್ಯೇಕ ಪ್ರಾಧಿಕಾರಗಳು ಮುಂದೆ ಬಂದಿವೆ. ರಾಜ್ಯದ ಪ್ರವಾಸೋದ್ಯಮ ಇಲಾಖೆ ನಾಸಿಕ್‌ನಲ್ಲಿ 2 ಕಡೆ ಟೆಂಟ್ ಸಿಟಿ ನಿರ್ಮಿಸಿಕೊಡಲಿದೆ. ರಾಜ್ಯ ಕೈಗಾರಿಕಾ ಇಲಾಖೆ ಕೈಗಾರಿಕೋದ್ಯಮಿಗಳಿಗಾಗಿಯೇ ವಿಶೇಷವಾದ 'ಟೆಂಟ್ ಸಿಟಿ'ಯನ್ನು ನಿರ್ಮಿಸುವುದಾಗಿ ಪ್ರಕಟಿಸಿದೆ. ಉಳಿದಂತೆ ಮರಾಠಿ ಭಾಷಾ ಅಭಿವೃದ್ಧಿ ಇಲಾಖೆಯು ಸಾಹಿತಿಗಳಿಗಾಗಿಯೇ ಪ್ರತ್ಯೇಕವಾದ 'ಟೆಂಟ್ ಸಿಟಿ' ನಿರ್ಮಾಣ ಮಾಡುವುದಾಗಿ ಹೇಳಿಕೊಂಡಿದೆ. ಪ್ರವಾಸೋದ್ಯಮ ಇಲಾಖೆಯ ಎರಡು ಟೆಂಟ್ ಸಿಟಿಗಳಲ್ಲಿ ಒಂದನೆಯದು ನಾಸಿಕ್ ನಗರದ ಹೊರವಲಯದಲ್ಲಿರುವ ಗಂಗಾಪುರ ಅಣೆಕಟ್ಟೆ ಬಳಿ ನಿರ್ಮಾಣಗೊಳ್ಳುವ ಸಾಧ್ಯತೆ ಇದೆ. ಈ ಟೆಂಟ್ ಸಿಟಿಯಲ್ಲಿ ಕನಿಷ್ಠ 200 ಟೆಂಟ್‌ಗಳಿಗೆ ವ್ಯವಸ್ಥೆ ಮಾಡಲು ಯೋಜಿಸಲಾಗಿದೆ. ಇದರಲ್ಲಿ ಹೆಚ್ಚಿನ ಟೆಂಟ್‌ಗಳನ್ನು ದೂರದೂರಿನ ಪ್ರವಾಸಿಗರಿಗೆ ಮೀಸಲಿಡಲು ನಿರ್ಧರಿಸಲಾಗಿದೆ. ಮತ್ತೊಂದು ಟೆಂಟ್ ಸಿಟಿ ನಾಸಿಕ್ ನಗರದ ತ್ರಯಂಬಕ ರಸ್ತೆಯಲ್ಲಿ ನಿರ್ಮಾಣಗೊಳ್ಳಲಿದೆ ಎಂದು ಪ್ರವಾಸೋದ್ಯಮ ಇಲಾಖೆ ಅಧಿಕಾರಿಗಳು ಹೇಳಿದ್ದಾರೆ.

ದೇಶಾದ್ಯಂತದಿಂದ ಕೈಗಾರಿಕೋದ್ಯಮಿಗಳು ಸಿಂಹಾಸ್ಥ ಕುಂಭಮೇಳದಲ್ಲಿ ಭಾಗಿಯಾಗಲು ಬರುವ ನಿರೀಕ್ಷೆ ಇರುವುದರಿಂದ ದೊಡ್ಡ ಮಟ್ಟದಲ್ಲೇ ಟೆಂಟ್ ಸಿಟಿಗೆ ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ. ಹೀಗೆ ನಾಸಿಕ್‌ಗೆ ಬರುವ ರಾಷ್ಟ್ರಮಟ್ಟದ ಕೈಗಾರಿಕೋದ್ಯಮಿಗಳಲ್ಲಿ ಕೆಲವರಾದರೂ ನಾಸಿಕ್‌ನಲ್ಲಿ ಹೂಡಿಕೆ ಮಾಡುವ ನಿರೀಕ್ಷೆಯನ್ನೂ ಇಟ್ಟುಕೊಳ್ಳಲಾಗಿದೆ ಎಂದು ರಾಜ್ಯ ಕೈಗಾರಿಕಾ ಇಲಾಖೆ ಹೇಳಿದೆ.

ನಾಸಿಕ್‌ಗೆ ಪ್ರಯಾಣ ಹೇಗೆ?

ನಾಸಿಕ್ ನಗರ ಮಹಾರಾಷ್ಟ್ರದಲ್ಲಿದೆ. ಶ್ರೀ ಶಿರಡಿ ಸಾಯಿಬಾಬಾ ಮಂದಿರ ಇರುವ ಶಿರಡಿ ನಗರಕ್ಕೆ ಸಮೀಪವಾಗಿದೆ. ಶಿರಡಿಯಿಂದ ಕೇವಲ 90 ಕಿಮೀ ಅಂತರದಲ್ಲಿದೆ.

ರಾಜ್ಯ ರಾಜಧಾನಿ ಮುಂಬೈನಿಂದ 165 ಕಿ.ಮೀ. ದೂರದಲ್ಲಿದೆ. ಪುಣೆಯಿಂದ 210 ಕಿಮೀ ದೂರದಲ್ಲಿದೆ. ಕರ್ನಾಟಕದಿಂದ ನಾಸಿಕ್‌ಗೆ ಕಾರು, ಬಸ್, ರೈಲು, ವಿಮಾನದ ಮೂಲಕ ಸಂಚರಿಸಬಹುದಾಗಿದೆ. ಬೆಂಗಳೂರಿನಿಂದ ನಾಸಿಕ್‌ಗೆ ರಸ್ತೆ ಮಾರ್ಗದಲ್ಲಿ 1000 ಕಿಮೀ ಅಂತರ. ಪ್ರಯಾಣದ ಅವಧಿ ಕಾರಿನಲ್ಲಿ 19ರಿಂದ 20 ತಾಸಿನವರೆಗೆ ತೆಗೆದುಕೊಳ್ಳುತ್ತದೆ. ರೈಲಿನಲ್ಲಿ 23 ಗಂಟೆಗಳ ಪಯಣ.

2026ರಿಂದ 2028ರವರೆಗೂ 'ಸಿಂಹಾಸ್ಥ ಕುಂಭಮೇಳ' ಸಂಭ್ರಮ

ಮಹಾರಾಷ್ಟ್ರದ ನಾಸಿಕ್‌ನಲ್ಲಿ 'ಸಿಂಹಾಸ್ಥ ಕುಂಭಮೇಳ' 2027ರ ಜುಲೈನಲ್ಲಿ ಆರಂಭಗೊಂಡು ಅಕ್ಟೋಬರ್‌ನಲ್ಲಿ ಕೊನೆಗೊಳ್ಳುವುದು ನಿಗದಿಯಾಗಿದ್ದರೂ ಅಪರೂಪದ ಈ ಕುಂಭಮೇಳಕ್ಕೆ ಸಿದ್ಧತೆಗಳು ಕಾರ್ಯ 2026ರಿಂದಲೇ ಜರುಗಲಾರಂಭಿಸುತ್ತದೆ. 'ಮಳೆ ನಿಂತರೂ ಮರದ ಹನಿ ನಿಂತಿಲ್ಲ' ಎನ್ನುವಂತೆ 2027ರ ಅಕ್ಟೋಬರ್‌ಗೆ ಕುಂಭಮೇಳ ಸಮಾಪನಗೊಂಡರೂ ಅದರ ಸಂಭ್ರಮದ ಛಾಯೆ 2028ರವರೆಗೂ ಮುಂದುವರಿಯಲಿದೆ. ಕುಂಭಮೇಳ ಆಯೋಜನೆಯ ಆರಂಭದ ಸಂಕೇತವಾಗಿ ಮೊದಲಿಗೆ 2026ರ ಅಕ್ಟೋಬರ್‌ನಲ್ಲಿ 'ಕುಂಭಮೇಳ ಧ್ವಜಾರೋಹಣ' ನಡೆಯುತ್ತದೆ.

ನಾಡ ಹಬ್ಬಕ್ಕೆ ಜಿಲ್ಲಾಡಳಿತದಿಂದ ಭರದ ಸಿದ್ಧತೆ | ಸೆ.22ರಿಂದ ದಸರಾ ಕ್ರೀಡೆ ಆಯೋಜನೆ

ಈ ಬಾರಿ 11 ದಿನ ದಸರಾ ಸಂಭ್ರಮ

ಕೆ.ಜೆ.ಲೋಕೇಶ್ ಬಾಬು, ಮೈಸೂರು

ನಾಡಹಬ್ಬ ದಸರಾ ಮಹೋತ್ಸವಕ್ಕೆ ದಿನಗಣನೆ ಆರಂಭವಾಗಿದ್ದು, ಜನಾಕರ್ಷಿಸುವಲ್ಲಿ ಪೂರಕವಾದ ಸಿದ್ಧತೆ ಭರದಿಂದ ನಡೆದಿದೆ. ಕಳೆದ ಒಂದೆರಡು ತಿಂಗಳಲ್ಲಿಯೇ ಮೇಲಿಂದ ಮೇಲೆ ಸಭೆ ನಡೆದು ಅನುಷ್ಠಾನಿತ ಕಾರ್ಯ ಯೋಜನೆಗಳ ಕುರಿತಾದ ರೂಪುರೇಷೆ ಹಾಗೂ ನೀಲನಕ್ಷೆ ಸಿದ್ದಪಡಿಸಿದ್ದ ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಜಿಲ್ಲಾಧಿಕಾರಿ ನೇತೃತ್ವದ ಹಿರಿಯ ಅಧಿಕಾರಿಗಳ ತಂಡದಿಂದ ಇವುಗಳ ಅನುಷ್ಠಾನ ಸಮರೋಪಾದಿ ಸಾಗಿದೆ.

ಪ್ರತ್ಯೇಕ ಉಪಸಮಿತಿ ರಚನೆ

ಪ್ರತಿ ಯೋಜನೆಗೂ ಪ್ರತ್ಯೇಕ ಉಪಸಮಿತಿ ರಚಿಸಿ, ಅದಕ್ಕೆ ಅಧ್ಯಕ್ಷರು, ಕಾರ್ಯಾಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯ ಕಾರ್ಯದರ್ಶಿ ಹಾಗೂ ಸದಸ್ಯರನ್ನೊಳಗೊಂಡ ಸಮಿತಿಯ ಮೂಲಕ ಉದ್ದೇಶಿತ ಯೋಜನೆಗಳ ಕಾರ್ಯಾರಂಭ ನಡೆದಿದೆ.ದಸರಾ ಕ್ರೀಡಾಕೂಟ, ಯುವ ದಸರಾ, ಜಂಬೂಸವಾರಿ, ವಸ್ತು ಪ್ರದರ್ಶನ, ದಸರಾ ಫಲಪುಷ್ಪ ಪ್ರದರ್ಶನ, ದಸರಾ ಕುಸ್ತಿ ಪಂದ್ಯಾವಳಿ, ಪಾರಂಪರಿಕ ನಡಿಗೆ, ಯೋಗ ದಸರಾ, ಆಹಾರ ಮೇಳ, ದಸರಾ ಸಂಗೀತೋತ್ಸವ, ದಸರಾ ಸಾಂಸ್ಕೃತಿಕ ಕಾರ್ಯಕ್ರಮಗಳು, ಏರ್ ಶೋ, ಪಂಜಿನ ಕವಾಯತು ಸೇರಿದಂತೆ ಏನುಂಟು, ಏನಿಲ್ಲ ಎಂಬ ವಿಚಾರವನ್ನು ಮುನ್ನೆಲೆಗೆ ತರುವ ದಿಕ್ಕಿನಲ್ಲಿ ಈ ಬಾರಿ 11 ದಿನಗಳ ಕಾಲ ನಡೆಯುವ ದಸರಾ ಮಹೋತ್ಸವ ಐತಿಹಾಸಿಕ ಕ್ಷಣಗಳಿಗೆ ಸಾಕ್ಷಿಯಾಗಲು ಅರಮನೆ ನಗರಿಯಲ್ಲಿ ಭರದ ತಯಾರಿ ನಡೆದಿದೆ.

ಸೆ.22ರಿಂದ ದಸರಾ ಕ್ರೀಡೆ

ದಸರಾ ಕ್ರೀಡಾಕೂಟ ಆಯೋಜನೆಗೆ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಾಗೂ ದಸರಾ ಕ್ರೀಡಾ ಉಪ ಸಮಿತಿ ಸಿದ್ಧತೆ ನಡೆಸಿದೆ. ಸೆಪ್ಟೆಂಬರ್ 22 ರಿಂದ 25 ರವರೆಗೆ ಮೈಸೂರಿನಲ್ಲಿ ರಾಜ್ಯ ಮಟ್ಟದ ದಸರಾ ಕ್ರೀಡಾಕೂಟ ನಡೆಯಲಿದೆ. 27 ಕ್ರೀಡೆಗಳು ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ವಿಜೃಂಭಿಸಲಿವೆ. ಎರಡು ವರ್ಷದ ಹಿಂದೆ ರಾಜ್ಯ ಮಟ್ಟದ ಪ್ರತಿಭಾನ್ವೇಷಣಾ ದಸರಾ ಕ್ರೀಡಾಕೂಟ ಸಿಎಂ ಕಪ್ ಹಾಗೂ ರಾಜ್ಯ ಮಟ್ಟದ ದಸರಾ ಕ್ರೀಡಾಕೂಟ ಸಿಎಂ ಕಪ್ ಎಂಬ ಎರಡು ಮಾದರಿಯಲ್ಲಿ ಕ್ರೀಡಾಕೂಟ ಆಯೋಜಿಸಲಾಗಿತ್ತು. ಆದರೆ, ಈ ಬಾರಿ ಕಳೆದ ವರ್ಷದಂತೆಯೇ ಒಂದು ಮಾದರಿಯ ಕ್ರೀಡಾಕೂಟ ಆಯೋಜಿಸಲು ತೀರ್ಮಾನಿಸಲಾಗಿದೆ.

ಫಲಪುಷ್ಪದಲ್ಲಿ ಸಬರಮತಿ ಆಶ್ರಮ

ಈ ಬಾರಿ ದಸರಾ ಫಲಪುಷ್ಪ ಪ್ರದರ್ಶನದ ಅಂದ ಹೆಚ್ಚಿಸಲು ವಿವಿಧ ಬಗೆಯ 1 ಲಕ್ಷ ಹೂವಿನ ಗಿಡ ಬೆಳೆಸಲಾಗಿದೆ. ಇದಕ್ಕಾಗಿ ಸಿದ್ಧತೆ ಭರದಿಂದ ಸಾಗಿದೆ. ಸಬರಮತಿ ಆಶ್ರಮ ಮಾದರಿ ಈ ಸಲದ ವಿಶೇಷವಾಗಿದೆ. ಜತೆಗೆ, ಹೊರ ರಾಜ್ಯದಿಂದ ತರುವ ಹೂವಿನ ಗಿಡಗಳು ಫಲಪುಷ್ಪ ಪ್ರದರ್ಶನಕ್ಕೆ ಮೆರುಗು ನೀಡಲಿದೆ. ಕಳೆದ ಬಾರಿಗಿಂತ ಇನ್ನಷ್ಟು ಆಕರ್ಷಕಗೊಳಿಸಲಾಗುತ್ತಿದೆ. ನಗರದ ಹಾರ್ಡಿಂಗ್ ವೃತ್ತದ ಬಳಿಯ ಕುಪ್ಪಣ್ಣ ಉದ್ಯಾನದಲ್ಲಿ ಸೆ.22ರಿಂದ ಅ.3ರವರೆಗೆ ದಸರಾ ಫಲಪುಷ್ಪ ಪ್ರದರ್ಶನ ನಡೆಯಲಿದೆ.

40 ಬಗೆ ಹೂವಿನ ತಳಿಗಳು

ಈ ಬಾರಿ 35 ರಿಂದ 40 ಬಗೆಯ ಹೂವಿನ ತಳಿಯ ಗಿಡಗಳನ್ನು ಬೆಳೆಸಲಾಗಿದೆ. ಜಿನ್ನಿಯಾ, ಸ್ನಾಪ್ ಡ್ರಾಗನ್, ಸಾಲ್ವಿಯಾ, ಜೆರೇನಿಯಂ, ಕಾಸ್ಮೋಸ್, ಮಾರಿಗೋಲ್ಡ್, ಗೈಲಾರ್ಡಿಯಾ, ಗಜೆನಿಯಾ,

ಕ್ಯಾಲೆಡುಲ, ಪೆಟುನಿಯಾ, ಪೆಂಟಾಸ್, ಥೋರೇನಿಯಂ, ಕಾಕ್ಸ್‌ಕಾಂಬ್, ಜೇಡ, ಚೀನಾ ಆಸ್ಟರ್, ಕೋಲಿಯಸ್, ಕ್ರೈಸಾಂಥೆಮಮ್ ಗಿಡಗಳು ಈ ಸಾಲಿನ ವಿಶೇಷವಾಗಿವೆ. ಫಲಪುಷ್ಪ ಪ್ರದರ್ಶನದಲ್ಲಿ ಈ ಬಾರಿ ವಿಶೇಷವಾಗಿ ಸಬರಮತಿ ಆಶ್ರಮ ಮಾದರಿಯಾಗಲಿದೆ. ಕುಪ್ಪಣ್ಣ ಪಾರ್ಕ್‌ನಲ್ಲಿರುವ ಗಾಜಿನ ಮನೆಯಲ್ಲಿ ಲಕ್ಷಾಂತರ ಹೂವುಗಳಿಂದ ನಿರ್ಮಿಸಲು ಉದ್ದೇಶಿಸಲಾಗಿದೆ. ಅದಕ್ಕಾಗಿ ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದ್ದು, ಅದಕ್ಕಾಗಿ ಅಲಂಕಾರಿಕಾ ಸಂಸ್ಥೆಗಳನ್ನು ಆಹ್ವಾನಿಸಲಾಗಿದೆ.

ಅರಮನೆ ಆಸನಗಳ ಕಡಿತ

ಜಂಬೂ ಸವಾರಿ ವೀಕ್ಷಣೆಗಾಗಿ ಅರಮನೆ ಆವರಣದಲ್ಲಿ ಹಾಕಲಾಗುತ್ತಿದ್ದ ಆಸನಗಳ ಸಂಖ್ಯೆಯನ್ನು ಕಡಿಮೆ ಮಾಡಲು ನಿರ್ಧರಿಸಿದೆ. 2023ರಲ್ಲಿ 38 ಸಾವಿರ ಆಸನಗಳು, 2024ರಲ್ಲಿ 59,600 ಆಸನ ಹಾಕಲಾಗಿತ್ತು. ಆದರೆ, ಈ ಬಾರಿ 48,000 ಆಸನ ವ್ಯವಸ್ಥೆ ಮಾಡಲು ತೀರ್ಮಾನಿಸಲಾಗಿದೆ. 11,600 ಆಸನಗಳು ಕಡಿತವಾಗಲಿವೆ. ಅರಮನೆ ಆವರಣದಲ್ಲಿ ಆಸನ ಸಂಖ್ಯೆ ಕಡಿಮೆ ಮಾಡಿರುವುದರಿಂದ ಹೆಚ್ಚಿನ ಜನರಿಗೆ ಅವಕಾಶ ದೊರೆಯುವುದಿಲ್ಲ.

ಆರ್‌ಸಿಬಿ ಸೈಡ್ ಎಫೆಕ್ಟ್

ಆರ್‌ಸಿಬಿ ವಿಜಯೋತ್ಸವ ಸಂದರ್ಭದಲ್ಲಿ ಬೆಂಗಳೂರಿನಲ್ಲಿ ಸಂಭವಿಸಿದ ಕಾಲ್ತುಳಿತ ಘಟನೆಯ ಬಳಿಕ ಪೊಲೀಸ್ ಇಲಾಖೆ ರೂಪಿಸಿರುವ ಪ್ರಮಾಣೀಕೃತ ಕಾರ್ಯಾಚರಣೆ ವಿಧಾನವನ್ನು ನಾಡಹಬ್ಬದಲ್ಲೂ ಪಾಲಿಸಲು ಕ್ರಮ ತೆಗೆದುಕೊಂಡಿದ್ದು, ಇದರಿಂದ ಆಸನಗಳ ಸಂಖ್ಯೆಯಲ್ಲಿ ಇಳಿಕೆಯಾಗಿದೆ. ಅಲ್ಲದೆ ಬೆಂಗಳೂರಿನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ನಡೆದ ದಸರಾ ಉನ್ನತಮಟ್ಟದ ಸಮಿತಿ ಸಭೆಯಲ್ಲಿ ಈ ಸಲ ಆಸನಗಳ ಸಂಖ್ಯೆ ಕಡಿಮೆಗೆ ನಿರ್ಣಯ ತೆಗೆದುಕೊಂಡಿದ್ದು, 48 ಸಾವಿರ ಆಸನ ವ್ಯವಸ್ಥೆ ಸಾಕೆಂದು ಸೂಚಿಸಲಾಗಿದೆ. ಅಷ್ಟೇ ಪ್ರಮಾಣದಲ್ಲಿ ಪಾಸ್, ಟಿಕೆಟ್, ಕಾರ್ಡ್ ವಿತರಣೆ ಮಾಡಲಿದೆ. ಇದರಿಂದಾಗಿ ವಿವಿಐಪಿ, ವಿಐಪಿಗಳಿಗೆ ಸಹ ಒಂದು ಸಾವಿರ ಆಸನ ಕಡಿತವಾಗಲಿದೆ. ಪ್ರತಿ ವಿಭಾಗದಲ್ಲೂ ತಲಾ ಸರಾಸರಿ 500 ರಿಂದ ಸಾವಿರ ಆಸನಗಳು ಕಡಿಮೆಯಾಗಲಿವೆ.

ಮೂರು ಹೊಸ ಆನೆಗಳು

ಒಟ್ಟು 14 ಆನೆಗಳು ಈ ದಸರಾದಲ್ಲಿ ಭಾಗವಹಿಸಲಿದ್ದು, ಆ ಪೈಕಿ ಮೊದಲ ತಂಡದಲ್ಲಿ 9 ಆನೆಗಳು ಆಗಮಿಸಿದ್ದು ತಾಲೀಮಿನಲ್ಲಿ ತೊಡಗಿಕೊಂಡಿವೆ. ಎರಡನೇ ತಂಡದ 5 ಆನೆಗಳು ಆ.25ರಂದು ನಗರಕ್ಕೆ ಆಗಮಿಸಲಿವೆ. ಎರಡು ಹೆಣ್ಣಾನೆ ಸೇರಿದಂತೆ ಮೂರು ಹೊಸ ಆನೆಗಳೊಂದಿಗೆ ಗಜಪಡೆಯ 2ನೇ ತಂಡ ನಗರಕ್ಕೆ ಆಗಮಿಸಲಿದೆ. ಶ್ರೀಕಂಠ, ರೂಪಾ ಮತ್ತು ಹೇಮಾವತಿ ಆನೆಗಳು ಇದೇ ಮೊದಲ ಬಾರಿಗೆ ದಸರಾದಲ್ಲಿ ಭಾಗವಹಿಸುತ್ತಿವೆ. ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ಮತ್ತಿಗೋಡು ಆನೆ ಶಿಬಿರದಿಂದ ಶ್ರೀಕಂಠ (56), ಭೀಮನಕಟ್ಟೆ ಆನೆ ಶಿಬಿರದಿಂದ ರೂಪಾ (44), ಮಡಿಕೇರಿ ವಿಭಾಗದ ದುಬಾರೆ ಆನೆ ಶಿಬಿರದಿಂದ ಗೋಪಿ(42), ಸುಗ್ರೀವ(43), ಹೇಮಾವತಿ(11) ಆನೆಗಳು ಇರಲಿವೆ. ಸೆ.25ರಂದು ಸಂಜೆ 4ಕ್ಕೆ ಪೂಜೆ ಸಲ್ಲಿಸಿ ಮೈಸೂರು ಅರಮನೆ ಆವರಣಕ್ಕೆ ಬರಮಾಡಿಕೊಳ್ಳಲಾಗುತ್ತಿದೆ.

ಬೀದರ್‌ನಲ್ಲಿ ವರುಣನ ಆರ್ಭಟ | ಒಂದು ವಾರದಿಂದ ನಿರಂತರ ಮಳೆ

ಬಿಸಿಲ ನಾಡಿನಲ್ಲಿ ಮಳೆಯ ಅಬ್ಬರ

ಜಿಲ್ಲಾ ನೋಟ

ಚನ್ನಬಸವ ಮೋಕ್ತೆದಾರ, ಬೀದರ

ಕಳೆದ ಒಂದು ವಾರದಿಂದ ಜಿಲ್ಲೆಯಲ್ಲಿ ಸುರಿಯುತ್ತಿರುವ ಮಳೆಯಿಂದಾಗಿ ಜನ ಜೀವನ ಸಂಪೂರ್ಣ ಅಸ್ತವ್ಯಸ್ತಗೊಂಡಿದೆ. ಜಿಲ್ಲೆಯ ವಿವಿಧ ಕಡೆ ಸೇತುವೆ ಮೇಲಿನಿಂದ ನೀರು ಹರಿಯುತ್ತಿವೆ. ಸೇತುವೆ ಕುಸಿತದಿಂದ ಸಂಚಾರ ಸ್ಥಗಿತವಾಗಿದೆ. ರೈತರ ಜಮೀನುಗಳಿಗೆ ನೀರು ನುಗ್ಗಿವೆ. ಜಿಲ್ಲೆಯಲ್ಲಿ ಒಟ್ಟು 7680 ಹೆಕ್ಟರ್ ಬೆಳೆ ನಾಶವಾಗಿದೆ. ಅತಿ ಹೆಚ್ಚು ಕಮಲನಗರ ತಾಲೂಕಿನಲ್ಲಿ 3500 ಹೆಕ್ಟೇರ್ ಬೆಳೆ ನಾಶವಾಗಿದೆ ಎಂದು ಕೃಷಿ ಇಲಾಖೆ ಅಧಿಕಾರಿಗಳಿಂದ ಮಾಹಿತಿ ಲಭ್ಯವಾಗಿದೆ.

ಹಳ್ಳ ಕೊಳ್ಳಗಳು ಭರ್ತಿ

ಜಿಲ್ಲೆಯ ಕಮಲನಗರ ತಾಲೂಕಿನ ಬೋಂತಿಯಲ್ಲಿ ಸಣ್ಣ ನೀರಾವರಿ ಇಲಾಖೆಯ ಅಧೀನದಲ್ಲಿ ಬರುವ ಕೆರೆ ಒಡೆದ ಪರಿಣಾಮ ಅಪಾರ ಪ್ರಮಾಣದ ನೀರು ಜಮೀನುಗಳಿಗೆ ನುಗ್ಗಿ ಅನ್ನದಾತ ಬೆಳೆದ ಬೆಳೆಗಳು ನಾಶವಾಗುವ ಭೀತಿ ಅವರಿಸಿದೆ. ಕೆರೆ ಹಳ್ಳಕೊಳ್ಳಗಳು ಭರ್ತಿಯಾಗಿ ಮಾಂಜ್ರಾ ನದಿಯು ತುಂಬಿ ಹರಿಯುತ್ತಿದೆ.ನದಿ ದಡದಲ್ಲಿರುವ ಬೆಳೆಗಳು ಸಂಪೂರ್ಣ ಜಲಾವೃತವಾಗಿವೆ. ಮಾಂಜ್ರಾ ನದಿಯ ಹಿನ್ನೀರಿನಿಂದ ಕೌಠಾ ಇಸ್ಲಾಂಪೂರ ಗ್ರಾಮದ ಸಂಪರ್ಕ ಸ್ಥಗಿತವಾಗಿದೆ.

ದಾಬಕಾನಲ್ಲಿ ಹೆಚ್ಚು ಮಳೆ

ಕಮಲನಗರ ತಾಲೂಕಿನ ದಾಬಕಾ ಹೋಬಳಿಯಲ್ಲಿ ಅತಿ ಹೆಚ್ಚು ಮಳೆ ಸುರಿದಿದೆ. ಅ.1 ರಿಂದ 17 ರ ವರೆಗೆ ವಾಡಿಕೆಗಿಂತ ಹೆಚ್ಚು ಮಳೆಯಾಗಿದೆ. ಭಾನುವಾರ ಒಂದೇ ದಿನ 300 ಮೀ.ಮೀ. ಮಳೆಯಾಗಿದೆ. ಸಂತಪೂರ ಹೋಬಳಿಯಲ್ಲಿ 45 ಮೀ.ಮೀ. ಅತಿ ಕಡಿಮೆ ಮಳೆಯಾಗಿದೆ. ಠಾಣಾಕುಶನೂರ 71.ಚಿಂತಾಕಿ 81. ಔರಾದ 87 ಮೀ.ಮೀ. ಮಳೆಯಾಗಿದೆ. ಜನ ಜೀವನ ಸಂಕಷ್ಟಕ್ಕೀಡಾದ ಸ್ಥಳಕ್ಕೆ ಜಿಪಂ ಸಿಇಒ ಗಿರೀಶ್ ಬದೋಲೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಹೆಸರು ಬೆಳೆಗೆ ಭಾರೀ ಎಫೆಕ್ಟ್

ಬೀದರ ಜಿಲ್ಲೆಯಾದ್ಯಂತ ಗ್ರಾಮೀಣ ಭಾಗದಲ್ಲಿ ಸದ್ಯ ಹೆಸರು ಬೆಳೆ ರಾಶಿ ಹಂತದಲ್ಲಿದೆ. ಮಳೆಯಿಂದ ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಕಟಾವು ಹಂತದಲ್ಲಿ ಬೆಳೆದ ಹೆಸರು ಬೆಳೆ ನೀರು ಪಾಲಾಗಿ ಕೈಗೆ ಬಂದ ತುತ್ತು ಬಾಯಿಗೆ ಬಾರದಂತಾಗಿ ಹೆಸರು ಕಾಳು ಮೊಳಕೆಯೊಡೆಯುವ ಹಂತಕ್ಕೆ ತಲುಪಿದೆ. ಈ ವರ್ಷ ಉತ್ತಮ ಫಸಲು ಬಂದಿದ್ದು. ಮಳೆ ಹೆಚ್ಚಾಗುತ್ತಿರುವುದರಿಂದ ಬೆಳೆ ನಾಶವಾಗುವ ಅತಂಕ ಎದುರಾಗಿದೆ. ಈ ಬಗ್ಗೆ ಜಿಲ್ಲಾಡಳಿತ ಗಮನಹರಿಸಬೇಕು ಕೂಡಲೇ ರೈತರ ನೆರವಿಗೆ ಬರಬೇಕು ಎಂದು ರೈತರು ಒತ್ತಾಯಿಸಿದ್ದಾರೆ.

ಮಳೆಯಿಂದ ಅಪಾರ ಪ್ರಮಾಣದ ಬೆಳೆ ಹಾನಿಯಾಗಿದೆ. ಔರಾದ ಮತ್ತು ಕಮಲನಗರ ತಾಲೂಕು ಅತೀವೃಷ್ಟಿ ಪ್ರದೇಶಗಳೆಂದು ಘೋಷಿಸಲು ಈಗಾಗಲೇ ಮುಖ್ಯಮಂತ್ರಿ ಅವರಿಗೆ ಮನವಿ ಮಾಡಿದ್ದೇನೆ.ಸಕಾರಾತ್ಮಕವಾಗಿ ಸ್ಪಂದಿಸಿದ್ದು ಅತೀವೃಷ್ಟಿ ಘೋಷಿಸುವ ಭರವಸೆಯಿದೆ.

-ಪ್ರಭು ಚವ್ಹಾಣ, ಔರಾದ್ ಕ್ಷೇತ್ರದ ಶಾಸಕ

ಬೀದರ್ ಜಿಲ್ಲೆಯಲ್ಲಿ ಧಾರಾಕಾರವಾಗಿ ಸುರಿದ ಮಳೆಗೆ ಬೆಳೆ ಹಾಗೂ ಜಾನುವಾರುಗಳು ಸಾವಾಗಿರುವ ಬಗ್ಗೆ ಪರಿಹಾರ ಮತ್ತು ರಕ್ಷಣಾ ಕಾರ್ಯ ಕೈಗೊಳ್ಳಲು ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಗಿದೆ. ಈಗಾಗಲೇ ಸಂಬಂಧಪಟ್ಟ ಅಧಿಕಾರಿಗಳ ಜತೆ ವಿಡಿಯೋ ಕಾನ್ಫರೆನ್ಸ್ ಮೂಲಕ ಸಭೆ ನಡೆಸಲಾಗಿದೆ. ಎಲ್ಲ ಕಡೆ ಪರಿಹಾರ ನೀಡಲು ಕ್ರಮ ಕೈಗೊಳ್ಳಲಾಗುವುದು.

-ಈಶ್ವರ ಖಂಡ್ರೆ
ಜಿಲ್ಲಾ ಉಸ್ತುವಾರಿ ಸಚಿವ

» ಜಿಲ್ಲೆಯ 7680 ಹೆಕ್ಟರ್ ಬೆಳೆಗಳ ನಾಶ

» ಕೆರೆ ಹಳ್ಳಕೊಳ್ಳ ಭರ್ತಿ, ತುಂಬಿದ ಮಾಂಜ್ರಾ

ಡಿಸಿ, ಜಿಪಂ ಸಿಇಒ ಭೇಟಿ

ಮಳೆ ಹಾನಿ ಪ್ರದೇಶಗಳಿಗೆ ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ, ಜಿಪಂ ಸಿಇಒ ಗಿರೀಶ್ ಬದೋಲೆ ಅವರು ಭೇಟಿ ನೀಡಿ ಪರಿಶೀಲಿಸಿದರು. ಬಾವಲಗಾಂವ್ ಹಾಗೂ ಬೋಂತಿ ಗ್ರಾಮಕ್ಕೆ ಭೇಟಿ ನೀಡಿ ಹಾನಿಯಾಗಿರುವ ಕುರಿತು ಮಾಹಿತಿ ಪಡೆದು ಕೊಂಡರು. ಹಂಗರಗಾ ಬೋಂತಿ ನಡುವಿನ ಕುಸಿದು ಹೋದ ಸೇತುವೆ ಪರಿಶೀಲಿಸಿದರು. ಕೆರೆ ಒಡೆದು ಹೊಲಗಳಲ್ಲಿ ನೀರು ನುಗ್ಗಿ ಹಾನಿಯಾಗಿದ್ದು. ರಾಜ್ಯ ಸರಕಾರದಿಂದ ಪರಿಹಾರ ಕೊಡಲಾಗುತ್ತದೆ. ಈ ಭಾಗದಲ್ಲಿ 500 ಎಕರೆ ಬೆಳೆ ಹಾನಿಯಾಗಿರುವ ಸಾಧ್ಯತೆ ಇದೆ ಎಂದು ತಿಳಿಸಿದ್ದಾರೆ.

ಶಾಸಕ ಚವ್ಹಾಣ ಸಿಎಂಗೆ ಮನವಿ

ಜಿಲ್ಲೆಯ ಔರಾದ ಹಾಗೂ ಕಮಲನಗರ ತಾಲೂಕು ಗಳಲ್ಲಿ ಮಳೆಯಿಂದ ಅಪಾರ ಪ್ರಮಾಣದ ಹಾನಿಯಾಗಿದೆ. ಅತೀವೃಷ್ಟಿ ಪ್ರದೇಶಗಳೆಂದು ಘೋಷಿಸಿ ಹಾನಿಗೊಳಗಾದ ಜನತೆಗೆ ತಕ್ಷಣವೇ ಪರಿಹಾರ ಕ್ರಮಕೈಗೊಳ್ಳಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಶಾಸಕ ಪ್ರಭು ಚವ್ಹಾಣ ಭೇಟಿ ಮಾಡಿ ಮನವಿಪತ್ರ ಸಲ್ಲಿಸಿದ್ದಾರೆ. ರೈತರು ಬೆಳೆದ ಬೆಳೆಗಳು ನೀರು ಪಾಲಾಗಿವೆ. ಜಾನುವಾರುಗಳು ಹಾಗೂ 50ಕ್ಕೂ ಹೆಚ್ಚು ಮನೆಗಳು ಕುಸಿದಿವೆ. ರೈತರು ಬಡವರು ಸಂಕಷ್ಟಕ್ಕೆ ಸಿಲುಕಿದ್ದಾರೆ ಎಂದು ಮನವರಿಕೆ ಮಾಡಿದ್ದಾರೆ. ಶೀಘ್ರದಲ್ಲೇ ಪರಿಹಾರ ಒದಗಿಸಬೇಕು ಎಂದು ಮನವಿ ಮಾಡಿದ್ದಾರೆ.

ಹಣಕಾಸಿನ ಕೊರತೆ ಎಂದು ನಿಮ್ಮ ಕನಸುಗಳನ್ನು ತ್ಯಜಿಸಬೇಡಿ. ನಿಮ್ಮ ಕನಸುಗಳಿಗೆ ರೆಕ್ಕೆ ಇರಲಿ, ಅವುಗಳನ್ನು ಹಾರಲು ಬಿಡಿ. ಏಕೆಂದರೆ, ಕನಸುಗಳು ಜೀವಂತವಾದಾಗ, ಬದುಕು ಒಂದು ಸುಂದರ ಪ್ರಯಾಣವಾಗುತ್ತದೆ.

ವಿಶ್ವವಾಣಿ @vishwavaninews
ಬೆಂಗಳೂರು 22-08-2025 ಶುಕ್ರವಾರ

ಅನುದಿನವೂ ವಿರಾಮಕ್ಕೆ ಒಂದು ನೆಪ

ಆರಾಮ

ಚಿತ್ತವಿಹಾರ

ಪ್ರವಾಹದ ವಿರುದ್ಧ ಈಜಲು ಸಿದ್ಧರಾಗಿ

ಬದುಕಿನ ಬಹುತೇಕ ಸಂದರ್ಭದಲ್ಲಿ ನಾವು ಸಾಮಾಜಿಕ ಒತ್ತಡಗಳಿಗೆ ಬಾಗಿಬಿಡುತ್ತೇವೆ. ಬೇರೆಯವರು ನಮ್ಮ ಕುರಿತಾಗಿ ಏನನ್ನು ಯೋಚಿಸುತ್ತಾರೆಯೋ ಎಂಬ ಭಯ ನಮ್ಮನ್ನು ಬಂಧಿಸಿದಾಗ ನಿಂತಲ್ಲಿಯೇ ನಿಂತು ಬಿಡುತ್ತೇವೆ. ಆತಂಕ, ಸಂಕೋಚ ನಮ್ಮನ್ನು ಎದ್ದು ನಿಲ್ಲದಂತೆ ಗಟ್ಟಿಯಾಗಿ ಹಿಡಿದು ಬಿಡುತ್ತದೆ. ಹೃದಯದ ಮಾತು ಒಳಕಿವಿಗೆ ಅಪ್ಪಳಿಸುತ್ತಿದ್ದರೂ ಅದರತ್ತ ದಿವ್ಯ ನಿರ್ಲಕ್ಷವನ್ನು ತೋರುತ್ತೇವೆ. ನಾವು ನಂಬಿಕೊಂಡು ಬಂದ ಸಂಪ್ರದಾಯ, ಆಚರಣೆಗೆ ವಿರುದ್ಧವಾದ ದಾರಿಯಲ್ಲಿ ಸಾಗಲು ನಮ್ಮ ಮನಸ್ಸು ಒಪ್ಪಿಗೆಯನ್ನು ನೀಡಲು ಹಿಂದೇಟು ಹಾಕುತ್ತದೆ. ಶಿಷ್ಟಾಚಾರದ ನೆಪದಲ್ಲಿ, ಸೌಜನ್ಯವೆನ್ನುವ ಸೆರಗಿನಲ್ಲಿ ಸಿಲುಕಿ ಬಹುತೇಕ ಬಾರಿ ಸುಮ್ಮನಾಗಿ ಬಿಡುತ್ತೇವೆ. ವಾಸ್ತವದಲ್ಲಿ ಸದಾ ಸರ್ವಾನುಮತದ ಭಾಗವಾಗಿ ಇರುವುದರಲ್ಲಿಯೇ ಸುರಕ್ಷತೆಯಿಂದ ಭ್ರಾಮಕತೆ ನಮ್ಮನ್ನು ವಾಸ್ತವದಲ್ಲಿ ನಮ್ಮ ಹಿನ್ನಡೆಗೆ ಕಾರಣವಾಗುತ್ತದೆ ಎಂಬುದನ್ನು ಅಲ್ಲಗಳೆಯಲಾಗುವುದಿಲ್ಲ. ಮಹಾಭಾರತದ ಕಥೆಯಲ್ಲಿ ಶಕುನಿಯ ಕುತಂತ್ರಕ್ಕೆ ಒಳಗಾಗಿ ಪಾಂಡವರು ಪಟ್ಟ ಕಷ್ಟ ನಷ್ಟ ಅವಮಾನ ಅಷ್ಟಿಷ್ಟಲ್ಲ. ಒಮ್ಮೆ ಉಪಾಯದಿಂದ ಪಾಂಡವರನ್ನು ಪಗಡೆಯಾಡಲು ಧುರ್ಯೋಧನನ ಮೂಲಕ ಆಹ್ವಾನಿಸುತ್ತಾನೆ. ಶಕುನಿ ಬಹಳಷ್ಟು ಉಪಾಯದಿಂದ ರೂಪಿಸಿದ ಕುತಂತ್ರದ ಆಟದಲ್ಲಿ ಪಾಂಡವರಿಗೆ ಸೋಲು ಉಂಟಾಗುತ್ತಲೇ ಹೋಗುತ್ತದೆ. ಹಣ, ವಸ್ತ್ರ ಒಡವೆ, ರಾಜ್ಯ ಸೇರಿದಂತೆ ಎಲ್ಲವನ್ನೂ ಪಣಕ್ಕಿಟ್ಟು ಸೋಲುತ್ತ ಎಲ್ಲವನ್ನೂ ಕಳೆದುಕೊಳ್ಳುತ್ತಾರೆ. ಒಂದೊಮ್ಮೆ ಪಾಂಡವರು ಎಲ್ಲವನ್ನೂ ಸೋತು ಹೋದ ಮೇಲೆ ಅಲ್ಲಿಂದ ಎದ್ದು ಹೋಗಿದ್ದರೆ ಅವರು ತಮ್ಮ ಪತ್ನಿ ದ್ರೌಪದಿಯನ್ನು ಪಣಕ್ಕಿಡುವ ಪ್ರಮೇಯವೇ ಬರುತ್ತಿರಲಿಲ್ಲ. ಒಪ್ಪಿತ ಮಾತನ್ನು ಮೀರುವ ಆ ಕ್ಷಣಕ್ಕೆ ಸಲ್ಲದ ನಂಬಿಕೆಯಿಂದ ದ್ರೌಪದಿಯನ್ನೂ ಪಣಕ್ಕಿಟ್ಟು ಸೋಲುತ್ತಾರೆ. ನಂತರ ದ್ರೌಪದಿಯನ್ನು ರಾಜಸಭೆಗೆ ಎಳೆದು ತರುತ್ತಾರೆ. ಅವಳ ವಸ್ತ್ರಾಪಹರಣಕ್ಕೆ ದುಶ್ಯಾಸನ ಮುಂದಾಗುತ್ತಾನೆ. ಭೀಷ್ಮ, ದ್ರೋಣ, ಧೃತರಾಷ್ಟ್ರ ಸೇರಿದಂತೆ ಅಲ್ಲಿದ್ದ ಹಿರಿಯರು ಕೂಡ ಸಂಪ್ರದಾಯ ಎಂದು ಸುಮ್ಮನಾಗುತ್ತಾರೆ. ಒಂದಷ್ಟು ಅವರಲ್ಲಿ ಯಾರಾದರೂ ಆ ಕ್ಷಣಕ್ಕೆ ಅಸಂಪ್ರದಾಯಕರಾಗಿದ್ದರೆ, ಅಲ್ಲಿ ನಡೆಯುತ್ತಿದ್ದ ಅನ್ಯಾಯವನ್ನು ಖಂಡಿಸಿದ್ದರೆ ದ್ರೌಪದಿಯ ವಸ್ತ್ರಾಪಹರಣವಾಗುತ್ತಿರಲಿಲ್ಲ. ಕುರುಕ್ಷೇತ್ರದ ಯುದ್ಧವೂ ಸಂಭವಿಸುತ್ತಿರಲಿಲ್ಲ. ಸಂಪ್ರದಾಯ, ರಾಜಸಭೆಯ ರೀತಿ-ನೀತಿ ನಿಯಮಗಳ ಉಲ್ಲಂಘನೆ ಸಂಪ್ರದಾಯವಲ್ಲ ಎನ್ನುವ ಅಸಂಗತಿ ನಂಬಿಕೆ ಎಲ್ಲ ರಾದ್ಧಾಂತಕ್ಕೂ, ಅವಘಡಕ್ಕೂ ಕಾರಣವಾಗಿತ್ತು. ರೂಸೋ ಅವರ ಮಾತಿನಂತೆ ಆಚರಣೆಗೆ ವಿರುದ್ಧವಾದ ದಾರಿಯನ್ನು ನಾವು ಕೆಲವೊಮ್ಮೆ ತೆಗೆದುಕೊಳ್ಳುವ ಧೈರ್ಯ ತೋರಿದರೆ ಅದು ಯಾವಾಗಲೂ ಅತ್ಯುತ್ತಮವಾದುದ್ದನ್ನೆ ನಮಗೆ ಪ್ರತಿಫಲವನ್ನಾಗಿ ನೀಡುತ್ತದೆ ಎಂಬುದು ಒಪ್ಪಿತ ಸಂಗತಿಯಾಗಿದೆ. ನಮ್ಮ ಹೃದಯದ ಮಾತುಗಳಿಗೆ ನಾವು ಕೆಲವು ಬಾರಿ ಕಿವಿಯಾದಾಗ ಸಕಾರಾತ್ಮಕ ಸಂಗತಿಗಳು ಘಟಿಸುತ್ತವೆ. ನಾವು ನಮ್ಮ ಅನನ್ಯತೆಯನ್ನು ತೊರೆದು ಒಂದಷ್ಟು ಆಚೆ ನಿಲ್ಲುವುದುನ್ನು ರೂಢಿಸಿಕೊಳ್ಳಬೇಕು. ಗುಂಪಿನಲ್ಲಿ ಗೋವಿಂದ ಎನ್ನುವ ನಮ್ಮ ನಡೆ ನಮ್ಮನ್ನು ಅಧೋಗತಿಗೆ ತಳ್ಳಿಬಿಡುತ್ತದೆ. ಇನ್ನಿಲ್ಲದ ಸಂಕಟಗಳಿಗೆ ದಾರಿ ಮಾಡಿಕೊಡುತ್ತದೆ. ಮನಸ್ಸು ಬೇಡವೆಂದರೂ ಎದೆಯ ದನಿಯನ್ನು ಅನುಸರಿಸಬೇಕು. ಪರಿಮಿತಿಗಳ ನಡುವೆಯೂ ನಮ್ಮತನದ ವೈಶಿಷ್ಟ್ಯಗಳನ್ನು ಬೆಳೆಸಿಕೊಳ್ಳುತ್ತ, ಅವುಗಳನ್ನು ವ್ಯಕ್ತಗೊಳಿಸಬೇಕು. ಯಾವುದೋ ಸೆಳೆಗಳಿಗೆ ಸಿಲುಕಿ ನಿಃಸಹಾಯಕರಾಗಿ ನಿಲ್ಲದೇ ಪರಿಶುದ್ಧ ಭಾವದಿಂದ ಪರಿಸ್ಥಿತಿಯನ್ನು ತೂಗಿನೋಡಬೇಕು. ನಮಗೊದಗಿಬಂದ ಸವಾಲುಗಳನ್ನು ಮೆಟ್ಟಿ ನಿಲ್ಲಬೇಕು. ನಮಗೆ ನಾವೆ ಮುಖಾಮುಖಿಯಾಗಬೇಕು.

● ಮಹಾದೇವ ಬಸರಕೋಡ

ಕನಸು ಕಾಣಬೇಕು ಯಶಸ್ಸು ಗಳಿಸಬೇಕು!

● ಲಕ್ಷ್ಮೀಕಾಂತ್ ಎಲ್ ವಿ ತುಮಕೂರು

ಕನಸುಗಳು ಮನಸ್ಸಿನೊಳಗೆ ಅರಳುವ ಸುಂದರ ಹೂವಿನಂತೆ. ಅವು ಯಾವುದೇ ಜಾತಿ, ಧರ್ಮ, ಬಡವ, ಸಿರಿವಂತ ಎಂಬ ತಾರತಮ್ಯವನ್ನು ಮಾಡುವುದಿಲ್ಲ. ಪ್ರತಿಯೊಬ್ಬರಿಗೂ ತಮ್ಮದೇ ಆದ ಕನಸುಗಳನ್ನು ಕಟ್ಟಿಕೊಳ್ಳುವ ಸ್ವಾತಂತ್ರ್ಯವಿದೆ. ಆದರೆ, ಕೇವಲ ಕನಸು ಕಾಣುವುದು ಮಾತ್ರವಲ್ಲ, ಅವುಗಳನ್ನು ನನಸಾಗಿಸುವ ದಾರಿಯಲ್ಲಿ ಹಣಕಾಸಿನ ಸವಾಲುಗಳನ್ನು ಎದುರಿಸುವುದು ಇಂದಿಗೂ ಒಂದು ವಾಸ್ತವ. ಕನಸುಗಳು ನಮ್ಮ ಆಸೆ, ಗುರಿ ಮತ್ತು ಭವಿಷ್ಯದ ಆಕಾಂಕ್ಷೆಗಳ ಪ್ರತೀಕ. ಒಬ್ಬ ವೈದ್ಯನಾಗಬೇಕೆಂಬ ಕನಸು, ಒಬ್ಬ ವಿಜ್ಞಾನಿಯಾಗಬೇಕೆಂಬ ಹಂಬಲ, ಒಬ್ಬ ಯಶಸ್ವಿ ಉದ್ಯಮಿಯಾಗಬೇಕೆಂಬ ಛಲ ಇವೆಲ್ಲವೂ ನಮ್ಮನ್ನು ಮುನ್ನಡೆಸುವ ಶಕ್ತಿಗಳು. ಇವುಗಳನ್ನು ಕೇವಲ ಮನಸ್ಸಿನ ಕಲ್ಪನೆಗಳೆಂದು ಭಾವಿಸಬಾರದು. ಅವು ಒಂದು ದಾರಿಯ ನಕ್ಷೆ ಇದ್ದಂತೆ. ಒಂದು ಕನಸು ಹುಟ್ಟಿದಾಗ, ಅದಕ್ಕೆ ಬಂಡವಾಳ ಬೇಕಿಲ್ಲ. ಆದರೆ, ಆ ಕನಸನ್ನು ನನಸಾಗಿಸಲು ಶಿಕ್ಷಣ, ಸಂಪನ್ಮೂಲ, ಮತ್ತು ಪರಿಶ್ರಮ ಬೇಕು.

ಆಧುನಿಕ ಯುಗದಲ್ಲಿ, ಶಿಕ್ಷಣವು ಕೇವಲ ಶಾಲೆ ಮತ್ತು ಕಾಲೇಜುಗಳಿಗೆ ಸೀಮಿತವಾಗಿಲ್ಲ. ಅಂತರ್ಜಾಲವು ಜ್ಞಾನದ ಒಂದು ದೊಡ್ಡ ಸಾಗರವಿದ್ದಂತೆ. ಉಚಿತ ಆನ್‌ಲೈನ್ ಕೋರ್ಸ್‌ಗಳು, ಇ-ಪುಸ್ತಕಗಳು, ಮತ್ತು ವಿಡಿಯೋ ಟ್ಯುಟೋರಿಯಲ್‌ಗಳು ಎಲ್ಲರಿಗೂ ಲಭ್ಯವಿವೆ. ಇದರ ಮೂಲಕ, ಯಾವುದೇ ಹಿನ್ನೆಲೆ ಇಲ್ಲದ ವ್ಯಕ್ತಿಯೂ ತಮಗೆ ಬೇಕಾದ ಕೌಶಲ್ಯಗಳನ್ನು ಕಲಿಯಬಹುದು. ಹಣವಿಲ್ಲದಿದ್ದರೂ ಕಲಿಕೆ ಸಾಧ್ಯ ಎಂಬುದನ್ನು ಇದು ತೋರಿಸುತ್ತದೆ. ಉದಾಹರಣೆಗೆ, ಒಬ್ಬ ವಿಡಿಯೋ ಎಡಿಟರ್ ಆಗಬೇಕೆಂಬ ಕನಸು ಕಂಡರೆ, ಸಾವಿರಾರು ಉಚಿತ ಸಾಫ್ಟ್‌ವೇರ್‌ಗಳು ಮತ್ತು ಆನ್‌ಲೈನ್ ಪಾಠಗಳು ಲಭ್ಯವಿವೆ. ಇದರಿಂದ, ಹಣದ ಕೊರತೆ ಕಲಿಕೆಗೆ ಅಡ್ಡಿಯಾಗುವುದಿಲ್ಲ.

ಸವಾಲುಗಳು

ಆದರೆ, ಕೇವಲ ಕಲಿಯುವುದು ಮಾತ್ರವಲ್ಲ, ಕಲಿತಿದ್ದನ್ನು ಕಾರ್ಯರೂಪಕ್ಕೆ ತರಲು ಹಣ ಬೇಕಾಗಬಹುದು. ವೈದ್ಯಕೀಯ ಶಿಕ್ಷಣಕ್ಕೆ ಲಕ್ಷಾಂತರ ರೂಪಾಯಿಗಳ ಶುಲ್ಕ, ಉದ್ಯಮ ಪ್ರಾರಂಭಿಸಲು ಹೂಡಿಕೆ, ಸಂಶೋಧನೆ ಮಾಡಲು ಪ್ರಯೋಗಾಲಯದ ಅವಶ್ಯಕತೆ ಇವೆಲ್ಲವೂ ಹಣವಿಲ್ಲದವರಿಗೆ ದೊಡ್ಡ ಸವಾಲುಗಳು. ಆದರೆ, ಈ ಸವಾಲುಗಳನ್ನು ಮೀರಿ ನಿಲ್ಲುವ ಮಾರ್ಗಗಳನ್ನು ಇಂದಿನ ಸಮಾಜವು ಒದಗಿಸುತ್ತಿದೆ. ವಿದ್ಯಾರ್ಥಿ ವೇತನಗಳು, ಕಡಿಮೆ ಬಡ್ಡಿ ದರದಲ್ಲಿ ಸಾಲಗಳು, ಮತ್ತು ಸರ್ಕಾರಿ ಯೋಜನೆಗಳು ಕನಸುಗಳನ್ನು ನನಸಾಗಿಸಲು ಸಹಾಯ ಮಾಡುತ್ತಿವೆ. ಇವುಗಳು ಹಣಕಾಸಿನ ಅಡೆತಡೆಗಳನ್ನು ಸ್ವಲ್ಪ ಮಟ್ಟಿಗೆ ಕಡಿಮೆ ಮಾಡುತ್ತವೆ.

ಇಂದಿನ ಸ್ಪರ್ಧಾತ್ಮಕ ಜಗತ್ತಿನಲ್ಲಿ, ಕನಸುಗಳನ್ನು ನನಸಾಗಿಸುವುದು ಸುಲಭವಲ್ಲ. ಕನಸು ಕಾಣುವುದು ಉಚಿತವಾಗಿದ್ದರೂ, ಅವುಗಳನ್ನು ಕಾರ್ಯರೂಪಕ್ಕೆ ತರಲು ಬೇಕಾದ ಸಂಪನ್ಮೂಲಗಳನ್ನು ಗಳಿಸುವುದು ಒಂದು ದೊಡ್ಡ ಸವಾಲು. ಕನಸನ್ನು ನನಸಾಗಿಸಲು ಅಗತ್ಯವಾದ ಬಂಡವಾಳ ಸಂಗ್ರಹಕ್ಕೆ ಕೆಲವು ದಾರಿಗಳಿವೆ.

1 ಬೂಟ್‌ಸ್ಟ್ರ್ಯಾಪಿಂಗ್ ಎಂಬ ಪರಿಕಲ್ಪನೆ. ಅಂದರೆ, ಬೇರೆ ಹೂಡಿಕೆದಾರರ ನೆರವು ಪಡೆಯದೆ ಸ್ವಂತ ಸಂಪನ್ಮೂಲಗಳಿಂದಲೇ ಉದ್ಯಮವನ್ನು ಪ್ರಾರಂಭಿಸು ವುದು. ಇದು ಕಡಿಮೆ ಅಪಾಯ ಮತ್ತು ಹೆಚ್ಚಿನ ನಿಯಂತ್ರಣವನ್ನು ನೀಡುತ್ತದೆ. ಪ್ರಾರಂಭದಲ್ಲಿ ಸಣ್ಣ ಪ್ರಮಾಣದಲ್ಲಿ ಆರಂಭಿಸಿ, ಗಳಿಸಿದ ಹಣವನ್ನೇ ಮತ್ತೆ ಹೂಡಿಕೆ ಮಾಡುವುದರ ಮೂಲಕ ಉದ್ಯಮವನ್ನು ಬೆಳೆಸಬಹುದು.

2 ಕ್ರೌಡ್‌ಫಂಡಿಂಗ್ ಎಂಬುದು ಹೊಸ ಆವಿಷ್ಕಾರ. ಇದು ಸಾರ್ವಜನಿಕರಿಂದ ಸಣ್ಣ ಪ್ರಮಾಣದಲ್ಲಿ ದೇಣಿಗೆ ಅಥವಾ ಹೂಡಿಕೆ ಸಂಗ್ರಹಿಸುವ ವಿಧಾನ. ನಿಮ್ಮ ಕನಸು ಅಥವಾ ಯೋಜನೆಯ ಕುರಿತು ಆನ್‌ಲೈನ್ ವೇದಿಕೆಗಳಲ್ಲಿ ವಿವರಿಸಿದರೆ, ನಿಮ್ಮ ಯೋಜನೆಯಲ್ಲಿ ನಂಬಿಕೆ ಇಟ್ಟವರು ಹಣ ಹೂಡಿಕೆ ಮಾಡುತ್ತಾರೆ. ಇದರ ಮೂಲಕ, ದೊಡ್ಡ ಪ್ರಮಾಣದ ಬಂಡವಾಳವನ್ನು ಸಂಗ್ರಹಿಸಬಹುದು. ಅನೇಕ ಸಣ್ಣ ಉದ್ದಿಮೆಗಳು ಮತ್ತು ವೈಯಕ್ತಿಕ ಪ್ರಾಜೆಕ್ಟ್‌ಗಳು ಈ ವಿಧಾನವನ್ನು ಯಶಸ್ವಿಯಾಗಿ ಬಳಸಿಕೊಂಡಿವೆ.

3 ಸಮಯ ಮತ್ತು ಶ್ರಮವೇ ಪ್ರಮುಖ ಬಂಡವಾಳ. ಹಣ ಇಲ್ಲದಿದ್ದರೆ, ನಮ್ಮ ಸಮಯ ಮತ್ತು ಶ್ರಮವನ್ನೇ ಬಂಡವಾಳವನ್ನಾಗಿ ಪರಿವರ್ತಿಸಬೇಕು. ಉದಾಹರಣೆಗೆ, ಕೋಡಿಂಗ್ ಕಲಿಯಬೇಕೆಂದರೆ, ಮೊಬೈಲ್‌ನಲ್ಲಿಯೇ ಕೆಲವು ಆ್ಯಪ್‌ಗಳನ್ನು ಬಳಸಿ ಅಭ್ಯಾಸ ಮಾಡಬಹುದು. ಯೂಟ್ಯೂಬ್‌ನಿಂದ ಕೌಶಲ್ಯಗಳನ್ನು ಕಲಿತು, ಸಣ್ಣ ಸಣ್ಣ ಫ್ರೀಲ್ಯಾನ್ಸ್ ಕೆಲಸಗಳನ್ನು ಮಾಡುವ ಮೂಲಕ ಹಣ ಗಳಿಸಬಹುದು. ಇದರಿಂದ, ಭವಿಷ್ಯದಲ್ಲಿ ದೊಡ್ಡ ಯೋಜನೆಗಳಿಗೆ ಬಂಡವಾಳ ಸಂಗ್ರಹಿಸಬಹುದು.

ಸಂಕಲ್ಪ ಸಹನೆ ತಾಳ್ಮೆ

ಕನಸುಗಳು ನನಸಾಗಲು ಹಣಕ್ಕಿಂತ ಹೆಚ್ಚಾಗಿ ಬೇಕಾಗಿರುವುದು ದೃಢ ಸಂಕಲ್ಪ ಮತ್ತು ಸಹನೆ. ಜಗತ್ತಿನಲ್ಲಿ ಅನೇಕ ಯಶಸ್ವಿ ವ್ಯಕ್ತಿಗಳು ಹಣಕಾಸಿನ ಹಿನ್ನೆಲೆ ಇಲ್ಲದೆ ಸಾಧನೆ ಮಾಡಿದ್ದಾರೆ. ಸವಾಲುಗಳನ್ನು ಮೆಟ್ಟಿ ನಿಂತು, ತಮ್ಮ ಕನಸುಗಳ ಮೇಲೆ ದೃಢ ವಿಶ್ವಾಸವಿಟ್ಟು ಮುಂದೆ ಸಾಗಿದರೆ ಯಶಸ್ಸು ಸಿಕ್ಕೇ ಸಿಗುತ್ತದೆ.

ಭವಿಷ್ಯದಲ್ಲಿ, ಕೃತಕ ಬುದ್ಧಿಮತ್ತೆ ಮತ್ತು ತಂತ್ರಜ್ಞಾನವು ಹೆಚ್ಚು ಪ್ರಗತಿ ಸಾಧಿಸಿದಾಗ, ಹೊಸ ಉದ್ಯೋಗಾವಕಾಶಗಳು ಮತ್ತು ಸ್ವ-ಉದ್ಯೋಗದ ಮಾರ್ಗಗಳು ತೆರೆದುಕೊಳ್ಳುತ್ತವೆ. ಹಣವಿಲ್ಲದಿದ್ದರೂ, ಸೃಜನಶೀಲತೆ ಮತ್ತು ನಾವೀನ್ಯತೆಯ ಮೂಲಕ ನಮ್ಮ ಕನಸುಗಳನ್ನು ನನಸಾಗಿಸಬಹುದು. ಉದಾಹರಣೆಗೆ, ಒಂದು ಕಲ್ಪನಾಶೀಲ ವಿಚಾರವನ್ನು ಹೊಂದಿದ್ದರೆ, ಎಐ ಸಹಾಯದಿಂದ ಒಂದು ಅಪ್ಲಿಕೇಶನ್ ಅಥವಾ ವೆಬ್ ಸೈಟ್ ವಿನ್ಯಾಸ ಮಾಡಬಹುದು. ಇದಕ್ಕೆ ಹೆಚ್ಚಿನ ಹಣ ಹೂಡಿಕೆ ಮಾಡಬೇಕಾಗಿಲ್ಲ. ಕನಸುಗಳನ್ನು ಕಾಣುವುದಕ್ಕೆ ರೊಕ್ಕ ಕೊಡಬೇಕಾಗಿಲ್ಲ. ಆದರೆ, ಆ ಕನಸುಗಳನ್ನು ಕಾರ್ಯರೂಪಕ್ಕೆ ತರಲು, ಹಣಕ್ಕಿಂತ ಹೆಚ್ಚು ಬೆಲೆ ಬಾಳುವ ಸಂಪನ್ಮೂಲಗಳು ಇವೆ; ಅವುಗಳೆಂದರೆ, ಪರಿಶ್ರಮ, ದೃಢಸಂಕಲ್ಪ ಮತ್ತು ಜ್ಞಾನ. ಹಣದ ಕೊರತೆ ನಮ್ಮ ಕನಸುಗಳಿಗೆ ಅಡ್ಡಿಯಾಗ ಬಾರದು. ನಾವು ನಮ್ಮ ಕನಸುಗಳನ್ನು ನನಸಾಗಿಸುವ ದಾರಿಯಲ್ಲಿ ಹಣಕಾಸಿನ ಸಮಸ್ಯೆಗಳನ್ನು ಒಂದು ಸವಾಲಾಗಿ ಪರಿಗಣಿಸಬೇಕು, ಅದು ನಮ್ಮನ್ನು ಇನ್ನಷ್ಟು ಗಟ್ಟಿಗೊಳಿಸುತ್ತದೆ.

ಕಾಡು ನಾಡುಗಳ ಜೀವ ಜಂಜಾಟ



● ಭಾರತಿ ಎ. ಕೊಪ್ಪ

ಆನೆ ಬಂತೊಂದಾನೆ ಯಾವೂರ ಆನೆ?
ಬಿಜಾಪುರ ಆನೆ ಇಲ್ಲಿಗ್ಯಾಕ ಬಂತು ?
ಹಾದಿ ತಪ್ಪಿ ಬಂತು
ಹಾದಿಗೊಂದು ಕೊಬ್ರಿ
ಬೀದಿಗೊಂದು ಕೊಬ್ರಿ
ಲಟ ಲಟ ಮುರಿತು ಪಟ ಪಟ ತಿಂತು॥

ಬಾಲ್ಯದಲ್ಲಿ ಈ ಹಾಡನ್ನು ಕೇಳುತ್ತಾ ತಲೆದೂಗದವರಿಲ್ಲ. ಆನೆಗಳನ್ನು ನೋಡುವುದೆಂದರೆ ಬಹಳ ಅಪರೂಪದ ವಿಷಯ. ದೇವಾಲಯಗಳಲ್ಲೋ, ದಸರಾ ಗಜ ಪಡೆಗಳ ಮೆರವಣಿಗೆಯಲ್ಲೋ, ಪ್ರಾಣಿ ಸಂಗ್ರಹಾಲಯ ಅಥವಾ ಆನೆ ಬಿಡಾರಗಳಲ್ಲೋ ಆನೆಗಳನ್ನು ನೋಡಿ ಖುಷಿಪಟ್ಟ ದಿನಗಳವು. ಆದರೆ ದಶಕಗಳು ಉರುಳಿವೆ. ಆನೆಯ ಬಗ್ಗೆ ಇದ್ದಂತಹ ಕಲ್ಪನೆ ಬದಲಾಗತೊಡಗಿದೆ. ಕಾಡಿನಲ್ಲಿರುವ ಆನೆಗಳು ನಾಡಿನತ್ತ ಪಯಣ ಬೆಳೆಸುತ್ತಿವೆ. ಜನರು ಆನೆಗಳನ್ನು ನೋಡಿ ಸಂಭ್ರಮಿಸುವ ಬದಲು ಭಯಭೀತಿಗೊಳಗಾಗುವ ದಿನಗಳು ಬಂದಿವೆ. ಮಲೆನಾಡಿನಲ್ಲಿ ಬಿಟ್ಟು ಬಿಡದೆ ಸುರಿಯುತ್ತಿರುವ ಮಳೆ ಒಂದೆಡೆಯಾದರೆ ಮನುಷ್ಯ ಮತ್ತು ಕಾಡುಪ್ರಾಣಿಗಳ ಸಂಘರ್ಷ ಎಂಬಂತೆ ಕಾಡಾನೆಯ ದಾಳಿ ಆಗುತ್ತದೆ ಎಂಬ ಭಯದಲ್ಲಿ ಶಾಲಾ-ಕಾಲೇಜುಗಳಿಗೆ ರಜೆ ಘೋಷಿಸುವ ಪರಿಸ್ಥಿತಿ ಇನ್ನೊಂದೆಡೆ. ಅನೇಕ ಜಿಲ್ಲೆಗಳಲ್ಲಿ ಕಾಡುಪ್ರಾಣಿಗಳು ನಾಡನ್ನು ಪ್ರವೇಶಿಸಿ ಮನುಷ್ಯ ಮತ್ತು ಕಾಡುಪ್ರಾಣಿಗಳ ನಡುವಿನ ಘರ್ಷಣೆಯಿಂದ ಅಪಾರ ಹಾನಿ ಆಗುತ್ತಿರುವುದು ಸಾಮಾನ್ಯವಾಗಿದೆ. ವನ್ಯ ಜೀವಿಗಳ ಮೇಲೆ ಅತಿಯಾದ ದಯೆ ತೋರುವ ಮನುಷ್ಯರು ನೀಡುವ ಆಹಾರದ ಆಸೆಗೆ ನಾಡಿನತ್ತ ಮುಖ ಮಾಡುವ ಪ್ರಾಣಿಗಳು ಒಂದಿಷ್ಟು ಎಂತಾದರೆ, ಒಂದಿಷ್ಟು ಕಾಡನ್ನು ಮಾನವ ಅತಿಕ್ರಮಣ ಮಾಡಿರುವುದರಿಂದ ತಮ್ಮ ನೆಲೆ ಕಳೆದುಕೊಂಡು ನಾಡಿನತ್ತ ಮುಖ ಮಾಡಿರುವುದು ಕೂಡ ಸತ್ಯ.

ಅನೇಕ ಘಾಟಿಗಳ ರಸ್ತೆಯ ಇಕ್ಕೆಲಗಳಲ್ಲಿ ಪ್ರಯಾಣಿಕರು ಕೋತಿಗಳಿಗೆ ಆಹಾರವನ್ನು ಕೊಡುವುದು ಸಾಮಾನ್ಯವಾಗಿದೆ. ಆಗುಂಬೆ ಘಾಟಿಯಂತಹ ಪ್ರದೇಶದಲ್ಲಿ ಈ ಆಹಾರಗಳಿಗೆ ಕೋತಿಗಳು ಕಾಯುತ್ತಾ ಕುಳಿತಿರುವುದು ಮಾತ್ರವಲ್ಲದೆ ಯಾವುದೇ ವಾಹನಗಳು ನಿಂತರೂ ಸಾದಾಸೀದ ಮನುಷ್ಯರಂತೆ ಬ್ಯಾಗ್‌ಗಳನ್ನು ಹುಡುಕಿ ಆಹಾರವನ್ನು ಹುಡುಕುವಂತಹ ತಿಂಡಿಪೋತರಾಗಿದ್ದಾವೆ. ದೇವಾಲಯಗಳು, ಪ್ರವಾಸಿ ಸ್ಥಳಗಳಲ್ಲೂ ಕೂಡ ಕೋತಿಗಳ ಕಾಟ ಹೇಳತೀರದು.

ಕಾಡಾನೆಗಳು ಊರಿಗೆ ಬಂದಾಗ ಅವು ದಾಳಿ ಮಾಡಿ ಸತ್ತವರ ಸಂಖ್ಯೆ ದಿನೇ ದಿನೇ ಏರುತ್ತಿದೆ. ಚಿಕ್ಕಮಗಳೂರು ಜಿಲ್ಲೆ ಒಂದರಲ್ಲಿ ಕಳೆದ 8 ತಿಂಗಳಲ್ಲಿ ಐವರು ಪ್ರಾಣ ಬಿಟ್ಟಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲೂ ಕೂಡ ಇಂತಹ ದಾಳಿಗಳು ಆಗಾಗ ನಡೆಯುತ್ತಿರುತ್ತದೆ. ರಾಜ್ಯದಲ್ಲಿ ಕಳೆದ ಆರು ವರ್ಷದಲ್ಲಿ ಆನೆ ದಾಳಿಯಿಂದ 198 ಜನ ಪ್ರಾಣ ಕಳೆದುಕೊಂಡಿದ್ದಾರೆ. ಚಾಮರಾಜನಗರ, ಕೊಡಗು, ಹಾಸನ,ಚಿಕ್ಕಮಗಳೂರು, ದಕ್ಷಿಣ ಕನ್ನಡ ಹೀಗೆ ಅರಣ್ಯ ಪ್ರದೇಶಗಳು ಹೆಚ್ಚಾಗಿ ನಾಡಿಗೆ ಹೊಂದಿಕೊಂಡಿರುವಲ್ಲಿ ಇಂತಹ ಘಟನೆಗಳು ನಡೆದಿವೆ.. ಮನುಷ್ಯ ಮತ್ತು ಪ್ರಾಣಿಗಳ ಸಂಘರ್ಷದಲ್ಲಿ ಎರಡೂ ಜೀವಗಳಿಗೆ ಅಪಾಯ ಕಟ್ಟಿಟ್ಟ ಬುತ್ತಿ. ಅದಲ್ಲದೆ ಕೆಲವರ ಸೆಲ್ಫಿ ಗೀಳು ಕೂಡ ಈ ಕಾಡುಪ್ರಾಣಿಗಳನ್ನು ರೊಚ್ಚಿಗೆಬ್ಬಿಸಿ ದಾಳಿ ಮಾಡುವಂತೆ ಮಾಡುತ್ತವೆ.

ಪ್ರಕೃತಿಯ ನೈಸರ್ಗಿಕ ಆಹಾರ ಸರಪಣಿಯಲ್ಲಿ ಕಾಡಿನ ಪ್ರಾಣಿಗಳು ಕಾಡಿನಲ್ಲಿ ಉಳಿದು ತಮ್ಮ ಆಹಾರ ಕಂಡುಕೊಳ್ಳುವಂತೆ ಬಿಡಬೇಕಾದದ್ದು ಮನುಷ್ಯರಾದವರ ಜವಾಬ್ದಾರಿ ಆಗಿರುತ್ತದೆ. ಅದಕ್ಕಾಗಿ ಕಾಡಿನ ರಕ್ಷಣೆ ಹಾಗೂ ಅತಿರೇಕದ ಪ್ರಾಣಿ ಪ್ರೀತಿಯಿಂದ ಆಹಾರವನ್ನು ನೇರವಾಗಿ ಪ್ರಾಣಿಗಳಿಗೆ ಕೊಡುವುದನ್ನು ತಪ್ಪಿಸಬೇಕಿದೆ. ಪ್ರಕೃತಿಯ ನೈಸರ್ಗಿಕ ನಿಯಮಗಳನ್ನು ಎಲ್ಲರೂ ಪಾಲಿಸಬೇಕಿದೆ.

ಅಜ್ಜಿ ಎಂಬ ಆಕಾರ

ಅಜ್ಜಿಯರ ಜಗತ್ತು ಬಹು ಸ್ವಾರಸ್ಯಕರ; ಅಜ್ಜಿಯರ ಜಗತ್ತಿನ ಅನಾವರಣ ವನ್ನು ಈ ಪುಸ್ತಕದಲ್ಲಿ ಮಾಡಲಾಗಿದೆ; ಬೆಂಗಳೂರಿನ ಅಭಿನವ ಪ್ರಕಾಶನ ಸಂಸ್ಥೆಯು (9448804905) ಹೊರತರುತ್ತಿರುವ 'ಅಭಿನವ ಚಾತುರ್ಮಾಸಿಕ'ದ ಒಂದು ಸಂಚಿಕೆಯಾಗಿ ಹೊರ ಬಂದಿರುವ ಈ ಪುಸ್ತಕವು, ಅಜ್ಜಿಯರ ಕುರಿತು ಎಂಟು ಮಹಿಳಾ ಸಾಹಿತಿಗಳು ಬರೆದ ಲೇಖನ ಗಳನ್ನು ಹೊಂದಿದ್ದು, ಅಜ್ಜಿಯರ ಜಗತ್ತನ್ನು ವಿಶೇಷವಾಗಿ ಪರಿಚಯಿಸುತ್ತದೆ.



ಸಾಹಿತ್ಯ ಪತ್ರಿಕೆಯೊಂದು ಅಜ್ಜಿಯರ ಜಗತ್ತನ್ನು ಅನಾವರಣಗೊಳಿಸಿದ ಪರಿಯು, ಉತ್ತಮ ಓದಿನ ಅನುಭವ ನೀಡುವುದಂತೂ ನಿಜ.

ಪದಬಂಧ

● ಸಿ.ರವಿಶಂಕರ ಶಾಸ್ತ್ರಿ, ದಂಬೆ

1		2	■	3	■	4		5
■	■	6			■		■	
7	■		■	8	9		■	
10	11		12	■		■	13	
■		■	14			■		■
15		■		■	16	17		18
	■	19		20	■		■	
	■		■	21			■	■
22			■		■	23		

ಎಡದಿಂದ ಬಲಕ್ಕೆ

1. ಉತ್ಸಾಹ (3)
4. ಹಿಮಾಲಯದ ಪವಿತ್ರ ಸರೋವರ (3)
6. ಹೆಂಡತಿಯೂ, ಚೆಲುವೆಯೂ (3)
8. ಅಸ್ತವ್ಯಸ್ತವಾದ ಬಲಿಷ್ಠ ಮದ್ದಾನೆ (3)
10. ಅವನಿಗೆ ಸರ ತರುವಾಗಿನ ಗಡಿಬಿಡಿ (4)
13. ಮಾಲೆ, ಹಾರ (2)
14. ಒಂದು ಜಾತಿಯ ಜಿಂಕೆ (3)
15. ಮೈಗೆ ಮತ್ತೊಂದು ಹೆಸರು (2)
16. ದುಂಬಿಯು ಸಂಗ್ರಹಿಸುವ ಹೂವಿನ ರಸ (4)
19. ರಕ್ಷಿಸು ಅಥವಾ ಕಾಪಾಡು (3)
21. ಹಳೆಯ ಕಾಲದ ಕಡಿಮೆ ಮೌಲ್ಯದ ನಾಣ್ಯ (3)
22. ಮಾಡಬೇಕಾದ ಕಾರ್ಯ (3)
23. ಕಡಿಮೆ ದರ್ಜೆಯ ಎಂದರ್ಥ (3)

ಮೇಲಿಂದ ಕೆಳಕ್ಕೆ

2. ಕೆಟ್ಟ ಚಾಳಿ (4)
3. ಎಣ್ಣೆಯನ್ನು ತಯಾರಿಸುವವನು (3)
4. ಸೋದರಮಾವನಿಗೆ ಹೀಗೆನ್ನಬಹುದು (3)
5. ಹಾರದೊಂದಿಗೆ ಬಂದಿರುವ ಮುಖ್ಯ ಅಧಿಕಾರಿ (4)
7. ಕಣ್ಣೀರು ತಲೆಕೆಳಗಾಗಿದೆ (2)
9. ಸೇರುವಿಕೆ, ಭೇಟಿ (4)
11. ತೂಕಕ್ಕೆ ಮತ್ತೊಂದು ಪದ (3)
12. ಭೂಮಿಯ ಕೆಳಗಿರುವ ಸಪ್ತ ಲೋಕಗಳಲ್ಲಿ ಒಂದು (4)
13. ಸಲುಗೆ ಇಲ್ಲಿ ಕೊನೆಗೆ ಅನುಸ್ವಾರದೊಂದಿಗೆ ಬಂದಿದೆ (3)
15. ಆಕೆ ಸಿದ್ಧಪಡಿಸುವಿಕೆಯಲ್ಲಿ ಇದ್ದಾಳೆ (4)
17. ಲೆಕ್ಕ ಬರೆಯುವವನು (4)
18. ಹೆಮ್ಮೆ, ಗರ್ವಕ್ಕೆ ಮತ್ತೊಂದು ಹೆಸರು (2)
19. ವಿನೋದ ಅಥವಾ ಪ್ರೀತಿಯಿಂದ ಕೂಡಿದ ಎಂದರ್ಥ (3)
20. ಅಡಗು, ಒಳ ಸೇರು ಎಂದರ್ಥ (3)

ಸರಿಯುತ್ತರಗಳು

ಎಡದಿಂದ ಬಲಕ್ಕೆ: [illegible]

ಮೇಲಿಂದ ಕೆಳಕ್ಕೆ: [illegible]

ಸುರಸಳ ಶಕ್ತಿಯ ಮುಂದೆ ಯುಕ್ತಿ ಪ್ರದರ್ಶಿಸಿದ ಹನುಮಂತ

ಸೀತಾಮಾತೆಯನ್ನು ಅನ್ವೇಷಿಸುತ್ತಾ ಸಾಗರವನ್ನು ದಾಟುವ ಸಂದರ್ಭದಲ್ಲಿ ವೀರ ಹನುಮನು ಎತ್ತರದ ಮೈನಾಕ ಪರ್ವತಕ್ಕೆ ನಮಿಸಿ ಸಾಗರೋಲ್ಲಂಘನಕ್ಕೆ ಎತ್ತರಕ್ಕೆ ಹಾರುತ್ತಾನೆ. ಹನುಮಂತನ ಭಕ್ತಿ ವಿಧೇಯತೆಯನ್ನು ಕಂಡು ದೇವಾನುದೇವತೆಗಳು, ಗಂಧರ್ವರು, ಸಿದ್ದರು ಋಷಿ ಮುನಿಗಳು ಎಲ್ಲರೂ ಅತ್ಯಂತ ಸಂತೋಷಗೊಂಡರು. ಆದರೂ ಅವರಿಗೆ ಹನುಮಂತನನ್ನು ಪರೀಕ್ಷಿಸುವ ಮನಸಾಯಿತು.

ದೇವತೆಗಳಿಗೆ ಹನುಮಂತನ ಶಕ್ತಿಯು ಅದಮ್ಯವಾದುದೆಂದು ಮೊದಲೇ ಮನವರಿಕೆಯಿತ್ತು. ಆದರೂ, ಹನುಮನನ್ನು ಪೂರ್ಣವಾಗಿ ಪರೀಕ್ಷಿಸಿ ಆತನ ಸಾಮರ್ಥ್ಯವನ್ನು ಸಮಗ್ರ ರೀತಿಯಲ್ಲಿ ಕಂಡುಕೊಳ್ಳುವ ದೇವತೆಗಳ ಆಸೆಯಿನ್ನೂ ಇಂಗಿರಲಿಲ್ಲ. ಹೀಗಾಗಿ ದೇವತೆಗಳು ನಾಗಮಾತೆಯಾದ ಸುರಸಾಳನ್ನು ಸಂಪರ್ಕಿಸಿ ಸಾಗರೋಲ್ಲಂಘನಗೈಯ್ಯುತ್ತಿರುವ ಹನುಮನನ್ನು ಮಾರ್ಗಮಧ್ಯದಲ್ಲಿಯೇ ತಡೆಹಿಡಿಯುವಂತೆ ಕೇಳಿಕೊಳ್ಳುತ್ತಾರೆ. ದೇವತೆಗಳ ಕೋರಿಕೆಯನ್ನು ಮನ್ನಿಸಿದ ನಾಗಮಾತೆಯು ಹನುಮನ ಪ್ರಯಾಣಕ್ಕೆ ಅಡಚಣೆಯನ್ನುಂಟು ಮಾಡುವ ಉದ್ದೇಶದಿಂದ ಎತ್ತರೆತ್ತರಕ್ಕೆ ರಾಕ್ಷಸೀ ಸ್ವರೂಪದ ಸ್ತ್ರೀಯ ಹಾಗೆ ಬೆಳೆಯುತ್ತಾಳೆ ಹಾಗೂ ಹನುಮನ ಮಾರ್ಗಕ್ಕೆ ಅಡ್ಡಲಾಗಿ ನಿಂತುಕೊಳ್ಳುತ್ತಾಳೆ.

ತನ್ನ ಮಾರ್ಗದಲ್ಲಿ ಸ್ತ್ರೀರೂಪದ ದೈತ್ಯೆಯೋರ್ವಳು ಅಡಚಣೆಯಾಗಿ ನಿಂತಿರುವುದನ್ನು ಕಂಡ ಹನುಮನು, ಸೀತಾನ್ವೇಷಣೆಯ ಮಹತ್ಕಾರ್ಯದಲ್ಲಿ ತೊಡಗಿರುವ ತನಗೆ, ತನ್ನ ಮಾರ್ಗದಿಂದ ಪಕ್ಕಕ್ಕೆ ಸರಿದು ಅನುಕೂಲ ಮಾಡಿಕೊಡುವಂತೆ ಹನುಮನು ಸುರಸಾಳಲ್ಲಿ ವಿನಂತಿಸಿಕೊಳ್ಳುವನು. ಅದಕ್ಕುತ್ತರವಾಗಿ ನಾಗಮಾತೆಯು, 'ನನ್ನ ಬಾಯಿಯ ಮಾರ್ಗದ ಮೂಲಕ ಸಾಗದೇ ಯಾರಿಂದಲೂ ಮಹಾಸಾಗರವನ್ನು ದಾಟಲು ಸಾಧ್ಯವಿಲ್ಲ'. ನನಗೆ ಬ್ರಹ್ಮನಿಂದ ವರವಿದೆ ಇದನ್ನು ಮೀರಲು ಯಾರಿಗೂ ಸಾಧ್ಯವಿಲ್ಲ ಎಂದು ಎಂದು ಹನುಮನಿಗೆ ಪಂಥಾಹ್ವಾನ ನೀಡುವಳು. ಹನುಮಂತ ಎಷ್ಟೇ ಪರಿಪರಿಯಾಗಿ ವಿನಂತಿಸಿಕೊಂಡರು ಸುರಸ ತನ್ನ ಹಠಕ್ಕೆ ಬದ್ಧಳಾಗಿ ನಿಂತಳು. ಸೀತಾನ್ವೇಷಣೆಯ ಕಾರ್ಯ ಅತ್ಯಂತ ಮಹತ್ವದ್ದಾದರೂ ಎದುರುಗಿರುವ ಸುರಸೆಯನ್ನು ಹನುಮಂತ ನಿಭಾಯಿಸಲೇ ಬೇಕಿತ್ತು. ಹನುಮಂತ ಬೃಹದಾಕಾರವಾಗಿ ಬೆಳೆಯಲಾರಂಭಿಸಿದ. ಅವನನ್ನು ಕಂಡು ಸುರಸೆಯೂ ದೈತ್ಯಳಾಗಿ ವಿಕಾರ ರೂಪವಾಗಿ ಬಾಯಿ ತೆರೆಯುತ್ತಾ ಬೆಳೆಯಲಾರಂಭಿಸಿದಳು.

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ಒಂದೊಳ್ಳೆ ಮಾತು
Vishwavani TV Special ಯೂಟ್ಯೂಬ್ ಚಾನೆಲ್‌ನಲ್ಲಿ

ಹನುಮನು ಕೈಮುಗಿದು 'ನಾನು ನಿನ್ನ ಬಾಯಿಯೊಳಗೆ ಪ್ರವೇಶಿಸಲು ಸಾಧ್ಯವಾಗುವಷ್ಟರ ಮಟ್ಟಿಗೆ ನೀನು ನಿನ್ನ ಬಾಯಿಯನ್ನು ತೆರೆ' ಎಂದು ಆಕೆಯಲ್ಲಿ ಕೇಳಿಕೊಳ್ಳುವನು. ಇದನ್ನು ಕೇಳಿ ಸಂತುಷ್ಟಳಾದ ಸುರಸಳು ತನ್ನ ಬಾಯಿಯನ್ನು ಅಗಲಗಲವಾಗಿ ತೆರೆಯಲಾರಂಭಿಸುತ್ತಾಳೆ. ಹನುಮನ ದೈತ್ಯ ರೂಪವನ್ನು ನುಂಗಲು ಈ ವೇಳೆಗಾಗಲೇ, ಸುರಸಾಳ ಬಾಯಿಯು ಹನುಮಾನನ ಶರೀರದ ಗಾತ್ರಕ್ಕಿಂತಲೂ ಹೆಚ್ಚು ಪಟ್ಟು ದೊಡ್ಡದಾಗಿ ತೆರೆದಿರುತ್ತದೆ. ಮಹಾಚತುರನಾದ ಹನುಮಂತನು ಇದೇ ಸಂದರ್ಭಕ್ಕಾಗಿ ಕಾಯುತ್ತಿದ್ದವನು, ಒಡನೆಯೇ ತನ್ನ ಶರೀರವನ್ನು ಇದ್ದಕ್ಕಿದ್ದಂತೆ ಕುಗ್ಗಿಸಿ ಒಂದು ಸೊಳ್ಳೆಯ ಗಾತ್ರದಷ್ಟು ಕಿರಿದಾಗಿಸಿಕೊಂಡನು, ಸುರಸಳು ತನ್ನ ಬಾಯಿಯನ್ನು ಹನುಮನ ಈಗಿನ ಗಾತ್ರಕ್ಕೆ ಕುಗ್ಗಿಸಿಕೊಳ್ಳಲು ಸಾಧ್ಯವಾಗುವುದಕ್ಕೆ ಮುಂಚೆಯೇ, ಅಗಲವಾಗಿ ತೆರೆದುಕೊಂಡಿರುವ ಆಕೆಯ ಕುರೂಪವಾದ ಬಾಯಿಯೊಳಗೆ ತನ್ನ ಸೂಕ್ಷ್ಮ ರೂಪದ ಶರೀರದೊಡನೆ ಹನುಮನು ಕಣ್ಣು ಮಿಟುಕುವಷ್ಟರಲ್ಲಿ ಪ್ರವೇಶಿಸಿ ಹೊರಬಂದು ಬಿಡುತ್ತಾನೆ.

ನಂತರ ಹನುಮಂತ ಸುರಸಳಿಗೆ ವಿನಮ್ರತೆಯಿಂದ ಕೈ ಮುಗಿಯುತ್ತಾ, ತಾಯಿ ದಾಕ್ಷಾಯಿಣಿ (ದಕ್ಷನ ಮಗಳು) ನಿನಗೆ ಸಿಕ್ಕ ವರದಂತೆ ನಾನು ನಿನ್ನ ಬಾಯಿಯೊಳಗೆ ಪ್ರವೇಶಿಸಿ ಹೊರ ಬಂದಿದ್ದೇನೆ. ಇನ್ನು ನಾನು ಹೊರಡಲು ಅನುಮತಿ ನೀಡು ಎಂದು ಕೇಳುತ್ತಾನೆ. ಹನುಮನ ಈ ಚುರುಕು ಬುದ್ಧಿಯು ಸುರ್ರಸಳಿಗೆ ಅತ್ಯಂತ ಸಂತಸವನ್ನುಂಟುಮಾಡುತ್ತದೆ. ಹನು

ಮನ ಧೈರ್ಯ, ಸ್ಥೈರ್ಯ, ಸಾಹಸ, ಹಾಗೂ ಬುದ್ಧಿವಂತಿಕೆಗಳನ್ನು ಕಂಡು ಅತೀ ಸಂತುಷ್ಟಳಾದ ಸುರಸ ತನ್ನ ಸುಂದರ ನಿಜರೂಪದ ದರ್ಶನವನ್ನು ಹನುಮನಿಗಿತ್ತು, ಹನುಮನಿಗೆ ಅಂದುಕೊಂಡದ್ದನ್ನು ಸಾಧಿಸಲು ಅಪರಿಮಿತ ಶಕ್ತಿ ಮತ್ತು ವಿಜಯ ಪ್ರಾಪ್ತಿಯಾಗಲಿ ಎಂದು ಹರಸುತ್ತಾಳೆ.

ಬದುಕಿನಲ್ಲಿ ಎಲ್ಲರನ್ನೂ ಹಣ, ಅಧಿಕಾರ ಶಕ್ತಿಯಿಂದ ಎದುರಿಸಲು ಸಾಧ್ಯವಿಲ್ಲ. ಅನೇಕ ಬಾರಿ ಅವೆಲ್ಲಾ ಇದ್ದರೂ ಪ್ರಯೋಜನವಾಗುವುದಿಲ್ಲ. ಕೆಲವೊಮ್ಮೆ ಅತೀ ಶಕ್ತಿವಂತರ ಮುಂದೆ ನಾವು ಶಕ್ತಿ ಪ್ರದರ್ಶನಕ್ಕೆ ನಿಲ್ಲುವುದಕ್ಕಿಂತ, ಯುಕ್ತಿಯಿಂದ ಆ ಸಂದರ್ಭವನ್ನು ನಿಭಾಯಿಸಬೇಕು. ಆಗ ಅನಗತ್ಯ ಸಂಕಟ, ನೋವುಗಳಿಂದ ಪಾರಾಗಿ ನಮ್ಮ ಕೆಲಸವನ್ನು ಕೂಡ ಜಾಣತನದಿಂದ ನೆರವೇರಿಸಿಕೊಳ್ಳಬಹುದು. ಅದಕ್ಕೆ ಹಿರಿಯರು ಹೇಳುವುದು ಶಕ್ತಿಗಿಂತ ಯುಕ್ತಿ ಮೇಲು ಎಂದು.

ಅನಿರೀಕ್ಷಿತ ಕಷ್ಟಗಳು ಏಕೆ ಬರುತ್ತವೆ?

ಸುರಪಸಭೆಯಲಿ ಗಾಧಿಸುತ ವಸಿಷ್ಟ ಸ್ಪರ್ಧೆ ।
ಧರೆಯೊಳದರಿಂ ಹರಿಶ್ಚಂದ್ರಂಗೆ ತಪನೆ ॥
ಬರುವುದಿಂತೆತ್ತಣಿನೊ ಬೇಡದ ಪ್ರಾರಬ್ಧ ।
ಕರುಮಗತಿ ಕೃತ್ರಿಮವೊ - ಮಂಕುತಿಮ್ಮ

ನಮ್ಮ ಜೀವನದಲ್ಲಿ ಹಲವಾರು ಬಾರಿ ಆಕಸ್ಮಿಕ ಘಟನೆಗಳು ಅನೀರಿಕ್ಷಿತವಾಗಿ ಹಾಗೂ ಅನಪೇಕ್ಷಿತವಾಗಿ ನಡೆಯುತ್ತವೆ. ತಾನೊಂದು ಬಗೆದರೆ ದೈವವೊಂದು ಬಗೆಯಿತು ಎಂಬಂತಾಗುತ್ತದೆ. ಹರಿಶ್ಚಂದ್ರನು ಅವನ ಪಾಡಿಗೆ ಅವನು ಅವನ ಹೆಂಡತಿ ಚಂದ್ರಮತಿ ಹಾಗೂ ಮಗನೊಂದಿಗೆ ಇದ್ದರೆ ದೇವೇಂದ್ರನ ಸಭೆಯಲ್ಲಿ ವಸಿಷ್ಠರಿಗೂ ಹಾಗೂ ವಿಶ್ವಾಮಿತ್ರರಿಗೂ ನಡೆದ ಸಂವಾದದಲ್ಲಿ ಹರಿಶ್ಚಂದ್ರನ ಹೆಸರು ಬಂದು ಹರಿಶ್ಚಂದ್ರನಿಗೆ ಕಷ್ಟ ಕಾರ್ಪಣ್ಯ ಎದುರಾಗಲಿಲ್ಲವೇ? ಹರಿಶ್ಚಂದ್ರನು ಮಾಡಿದ ತಪ್ಪಾದರೂ ಏನು? ಅದೇ ರೀತಿಯಲ್ಲಿ ಕೆಲವು ಸಮಯದಲ್ಲಿ ನಮಗರಿವಿರದೆ ನಮ್ಮ ಪಾಲಿನ ವಿಧಿ, ಸಮಯ, ಸಂಧರ್ಭಗಳು ನಮ್ಮ ಪಾಲಿಗೆ ಕ್ರೂರವಾಗಿ ನಮ್ಮನ್ನು ಕಾಡು ತ್ತವೆ. ಇದಕ್ಕೆ ಯಾವ ನರನೂ ಹೊರತಲ್ಲ ಎಂಬ ಸತ್ಯವನ್ನು ಈ ಕಗ್ಗದಲ್ಲಿ ಹೇಳಿದ್ದಾರೆ.

ಶುಭೋದಯಕ್ಕೊಂದು ಕಗ್ಗ

ರವೀ ಚಿಕ್ಕನಾಯಕನಹಳ್ಳಿ

ಮನುಷ್ಯನ ಜೀವನ ಎಂಬುದು ಅನಿರೀಕ್ಷಿತ ಹಾಗೂ ಅನಪೇಕ್ಷಿತ ಘಟನೆಗಳ ಆಗರ, ತನ್ನ ಜೀವನದಲ್ಲಿ ಮನುಷ್ಯ ಅಂದುಕೊಳ್ಳುವುದೇ ಒಂದಾದರೆ ಘಟಿಸುವುದೇ ಮತ್ತೊಂದಾಗಿರುತ್ತದೆ. ಈತನ ನಿರೀಕ್ಷೆಗಳೇ ಒಂದಾದರೆ ಜರುಗುವುದೇ ಮತ್ತೊಂದಾಗಿರುತ್ತದೆ. ಯಾವುದೋ ಒಂದು ಶುಭ ಕಾರ್ಯ ಎಂದು ತೆರಳಿದವರು ಮಸಣಕ್ಕೆ ತೆರಳಿದ ಹಾಗೆ, ತಾನೇ ಬೆಳೆಸಿರುವ ಮರಗಳು ಬಿರುಗಾಳಿಗೆ ಸಿಕ್ಕಿ ಈತನ ತಲೆಯ ಮೇಲೆಯೇ ಬೀಳುವ ಹಾಗೆ, ತಾನೇ ಬೆಳೆಸಿದ ತಮ್ಮವರೇ ತನಗೆ ನೋವನಿಕ್ಕುವ ಹಾಗೆ, ಈ ಜೀವನದಲ್ಲಿ ಹಲವಾರು ಅನೀರೀಕ್ಷ ಘಟನೆಗಳು ಜರುಗುತ್ತಲೇ ಇರುತ್ತವೆ.

ಇಂತಹ ಸಂಧರ್ಭದಲ್ಲಿ ಮನಸ್ಸಿಗೆ ಕಸಿವಿಸಿ ಆಗುವುದೂ ಉಂಟು. ಇಂಥಹ ಅನಪೇಕ್ಷಿತ, ಅನಿರೀಕ್ಷಿತ ಘಟನೆಗಳು ನಮ್ಮ ನಮ್ಮ ಕರುಮದ, ವಿಧಿಯ ಲೀಲೆಯ, ಸಂಧರ್ಭಾನುಸಾರದ, ಪೂರ್ವಜನ್ಮದ ಬುತ್ತಿಯೇ ಆಗಿರುತ್ತದೆ. ಈ ಪೂರ್ವಜನ್ಮದ ಕರುಮದ ಬುತ್ತಿಯನ್ನು ನಾವುಣ್ಣ ಲಲ್ಲದೆ ಬೇರೆಯವರಿಗೆ ಉಣಿಸಲಾದೀತೆ! ಇದಕ್ಕಾ ಗಿಯೇ 'ತಾನೊಂದು ಬಗೆದರೆ ದೈವವೊಂದು ಬಗೇದೀತು' ಎಂದು ಹೇಳಿರುವುದು. ಹರಿಶ್ಚಂದ್ರ ಮಹಾರಾಜನು ತನ್ನ ಪಾಡಿಗೆ ತಾನು ತನ್ನ ಪತ್ನಿ ಚಂದ್ರಮತಿ ಹಾಗೂ ಮಗ ಲೋಹಿತಾಶ್ವನೊಂದಿಗೆ ತನ್ನ ಪಾಡಿಗೆ ತಾನು ಜನಾನುರಾಗಿಯಾದ ರಾಜನಾಗಿ ಸತ್ಯ, ಧರ್ಮ, ನ್ಯಾಯ, ನಿಷ್ಠೆಯಿಂದ ರಾಜ್ಯಭಾರವನ್ನು ಮಾಡುತ್ತಾ ಪ್ರಜಾ ಸೇವೆಯೇ ಈಶ ಸೇವೆ ಎಂದು ಜೀವಿಸುತ್ತಲಿರುವಾಗ, ಸುರಸಭೆಯಾದ ಇಂದ್ರನ ಒಡೋಲಗದಲ್ಲಿ ಮಹರ್ಷಿ ವಸಿಷ್ಠರಿಗೂ ಹಾಗೂ ವಿಶ್ವಾಮಿತ್ರರಿಗೂ ಮಾತಿನ ಪಂದ್ಯ ಜರುಗುತ್ತದೆ.

ಆ ಸಮಯದಲ್ಲಿ ಹರಿಶ್ಚಂದ್ರನು ಸತ್ಯವಂತ ಎಂದು ಸಾಕ್ಷೀಕರಿಸಲು ವಿವಿಧ ಕಷ್ಟ ಕಾರ್ಪಣ್ಯ ಕೊಡುವೆನೆಂದು ವಿಶ್ವಾಮಿತ್ರ ಶಪಥ ಗೈಯ್ಯುತ್ತಾನೆ. ನಿಷ್ಪಾಪಿ ಹರಿ ಶ್ಚಂದ್ರನಿಗೆ ಇದರ ಬಗೆಗೆ ಅರಿವೆಯೇ ಇರುವುದಿಲ್ಲ. ನಂತರದಲ್ಲಿ ವಿಶ್ವಾಮಿತ್ರನು ಹರಿಶ್ಚಂದ್ರನನ್ನು ಇನ್ನಿಲ್ಲದಂತೆ ಕಾಡುತ್ತಾನೆ. ಇಲ್ಲಿ ಹರಿ ಶ್ಚಂದ್ರನು ಮಾಡಿದ ತಪ್ಪಾದರೂ ಏನಿತ್ತು? ವಸಿಷ್ಠರು ಹಾಗೂ ವಿಶ್ವಾಮಿತ್ರರ ಹಠಕ್ಕೆ ಹರಿ ಶ್ಚಂದ್ರನು ಪಡಬಾರದ ಕಷ್ಟ ಗಳನ್ನು ಬಿದ್ದಿರುವುದನ್ನು ನಾವು ಕೇಳಿದ್ದೇವೆ. ಇಲ್ಲಿ ಹರಿಶ್ಚಂದ್ರ ಅವನ ಪಾಡಿಗೆ ಅವನು ಸುಮ್ಮನೆ ಇದ್ದರೂ ಸಹ ಅವನ ಪಾಲಿನ ವಿಧಿಯು ವಿಶ್ವಾ ಮಿತ್ರನ ರೂಪದಲ್ಲಿ ಕಾಡಿತ್ತು. ಸಮಯ ಸಂದರ್ಭಗಳು ಈ ಕಷ್ಟಗಳಿಗೆ ಸಹಕರಿಸಿದವು. ಹರಿಶ್ಚಂದ್ರನ ಪಾಲಿನ ದೈವವು ನಿರುಮ್ಮಳವಾಗಿ ಬಿಟ್ಟಿತು. ಹೀಗೆ ನಾವುಗಳು ನಮ್ಮ ಪಾಡಿಗೆ ನಾವು ಇದ್ದರೂ, ನಾವು ಬೇರೆ ಆಲೋಚನೆಗಳನ್ನು ಮಾಡದೇ ಇದ್ದರೂ ಸಹ ಕೆಲವು ಸಮಯ ಸಂಧರ್ಭ ಗಳಲ್ಲಿ ಆ ದೈವದ ಎಣಿಕೆಯೋ, ಸಂದರ್ಭದ ಶಿಶುವಾಗಿಯೋ, ವಿಧಿಯೆಣಿಕೆಯೋ, ಪೂರ್ವ ಜನ್ಮದ ಕರ್ಮವೋ ನಮಗೆ ಕಷ್ಟ ಕಾರ್ಪಣ್ಯ ಗಳನ್ನು ತಂದು ನಮ್ಮ ಜೀವನದಲ್ಲಿ ಆಡಿಸುತ್ತದೆ. ಆದುದ ರಿಂದ ಬರುವ ಕಷ್ಟನಷ್ಟಗಳು ನಮ್ಮ ಕೃತಿಯಿಂದಲೇ ಆಗಬೇಕೆಂದೇನಿಲ್ಲ, ಅದು ಆಯಾ ಸಮಯ, ಸಂಧರ್ಭಗಳಲ್ಲು ನಮ್ಮಗಳ ತಪ್ಪುಗಳು ಇಲ್ಲದಿದ್ದರೂ ನಮ್ಮ ಬಾಳಿಗೆ ಬಂದೊದಗುತ್ತವೆ ಎಂದು ಈ ಪದ್ಯದಲ್ಲಿ ಹೇಳಿದ್ದಾರೆ.

ನೀವೂ ಬರೆಯಬಹುದು | ನಮ್ಮ ವಿಳಾಸ | ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098 | e-mail: vishwavanimagazine@gmail.com

ಸಮಾಚಾರ ಸಣ್ಣದಲ್ಲ

ರಣಜಿ ಆಡಲು ಪೂಜಾರ ಒಲವು

ದೆಹಲಿ: ಭಾರತದ ಹಿರಿಯ ಬ್ಯಾಟ್ಸ್‌ಮನ್ ಚೇತೇಶ್ವರ್ ಪೂಜಾರ ಅವರು 2025-26ರ ಸಾಲಿನ ರಣಜಿ ಟ್ರೋಫಿ ಟೂರ್ನಿಯಲ್ಲಿ ಆಡುವ ಒಲವನ್ನು ವ್ಯಕ್ತಪಡಿಸಿದ್ದಾರೆ. ಅಕ್ಟೋಬರ್ ತಿಂಗಳಲ್ಲಿ ರಣಜಿ ಟ್ರೋಫಿ ಆರಂಭವಾಗಲಿದ್ದು, ಪೂಜಾರ ಅವರು

ಕಳೆದ ಫೆಬ್ರವರಿಯಲ್ಲಿ ಕೊನೆಯ ಬಾರಿ ರಣಜಿ ಟ್ರೋಫಿಯಲ್ಲಿ ಆಡಿದ್ದರು. ಹಾಗಾಗಿ ಈ ರಣಜಿ ಟ್ರೋಫಿ ಟೂರ್ನಿಯಲ್ಲಿ ಭಾಗವಹಿಸುವ ಇಂಗಿತವನ್ನು ವ್ಯಕ್ತಪಡಿಸಿದ್ದಾರೆ ಎಂದು ಸೌರಾಷ್ಟ್ರ ಕ್ರಿಕೆಟ್ ಅಸೋಸಿಯೇಷನ್ ದೃಢಪಡಿಸಿದೆ. ಎಸ್‌ಸಿಎಯ ಹಿರಿಯ ಅಧಿಕಾರಿಯೊಬ್ಬರು ಈ ನಿರ್ಧಾರವನ್ನು ಸ್ವಾಗತಿಸಿದ್ದು, ಪೂಜಾರ ಅವರ ಅನುಭವ ತಂಡಕ್ಕೆ ಅಮೂಲ್ಯವಾಗಿರುತ್ತದೆ ಎಂದು ತಿಳಿಸಿದ್ದಾರೆ. ಅಜಿಂಕ್ಯ ರಹಾನೆ ಅವರು ಮುಂಬೈ ತಂಡದ ನಾಯಕತ್ವವನ್ನು ತೊರೆದ ಕೆಲವೇ ಗಂಟೆಗಳಲ್ಲಿ ಗುರುವಾರದಂದು ಚೇತೇಶ್ವರ್ ಪೂಜಾರ ಅವರು ರಣಜಿ ಟ್ರೋಫಿ ಟೂರ್ನಿಯಲ್ಲಿ ಆಡುವ ಇಂಗಿತವನ್ನು ವ್ಯಕ್ತಪಡಿಸಿದ್ದಾರೆ. ಅಜಿಂಕ್ಯ ರಹಾನೆ ಮುಂಬೈ ತಂಡವನ್ನು ಮುನ್ನಡೆಸಿದ್ದರು. ಪೂಜಾರ ಕೊನೆಯ ಬಾರಿ 2023ರ ಜೂನ್‌ನಲ್ಲಿ ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್ ಫೈನಲ್‌ನಲ್ಲಿ ಭಾರತವನ್ನು ಪ್ರತಿನಿಧಿಸಿದ್ದರೆ, ರಹಾನೆ ಕೊನೆಯ ಬಾರಿ 2023ರ ಜುಲೈನಲ್ಲಿ ವೆಸ್ಟ್ ಇಂಡೀಸ್‌ನಲ್ಲಿ ನಡೆದಿದ್ದ ಟೆಸ್ಟ್ ಸರಣಿಯಲ್ಲಿ ಕಾಣಿಸಿಕೊಂಡಿದ್ದರು.

ಅಥ್ಲೆಟಿಕ್ಸ್: ವಿಶಾಲ್ ರಾಷ್ಟ್ರೀಯ ದಾಖಲೆ

ಚೆನ್ನೈ: ರಾಷ್ಟ್ರೀಯ ಅಂತರ-ರಾಜ್ಯ ಸೀನಿಯರ್ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್‌ನ ಪುರುಷರ 400 ಮೀಟರ್ ಓಟದಲ್ಲಿ ತಮಿಳುನಾಡಿನ ವಿಶಾಲ್ ಟಿ.ಕೆ



45.12 ಸೆಕೆಂಡುಗಳ ಸಮಯದೊಂದಿಗೆ ರಾಷ್ಟ್ರೀಯ ದಾಖಲೆಯನ್ನು ಸ್ಥಾಪಿಸಿದ್ದಾರೆ. 21ರ ವಯಸ್ಸಿನ ವಿಶಾಲ್ ತಮ್ಮ ಸ್ಪರ್ಧಿಗಳನ್ನು ದೊಡ್ಡ ಅಂತರ ಕಾಯ್ದುಕೊಂಡು ದೇಶದ ಅತ್ಯುತ್ತಮ 400 ಮೀಟರ್ ಓಟಗಾರ ಎಂಬ ನೂತನ ಮೈಲುಗಲ್ಲು ತಲುಪಿದ್ದಾರೆ. 2019ರಲ್ಲಿ ಮೊಹಮ್ಮದ್ ಅನಸ್ ಸ್ಥಾಪಿಸಿದ್ದ 45.21 ಸೆಕೆಂಡುಗಳ ಹಿಂದಿನ ರಾಷ್ಟ್ರೀಯ ದಾಖಲೆಯನ್ನು ಅವರು ಮುರಿದಿದ್ದಾರೆ. ತಮಿಳುನಾಡಿನ ಅನುಭವಿ ರಾಜೇಶ್ ರಮೇಶ್ 46.04ರ ಸೆಕೆಂಡುಗಳ ಸಮಯದೊಂದಿಗೆ ಎರಡನೇ ಸ್ಥಾನ ಪಡೆದರೆ, ಹರಿಯಾಣದ ವಿಕ್ರಾಂತ್ ಪಾಂಚಲ್ 46.17 ಸೆಕೆಂಡುಗಳ ಸಮಯದೊಂದಿಗೆ ಮೂರನೇ ಸ್ಥಾನ ಪಡೆದರು.

ಸೆ.14ರಂದು ದುಬೈನಲ್ಲಿ ಹೈ ವೋಲ್ಟೇಜ್ ಏಷ್ಯಾ ಕಪ್ ಪಂದ್ಯ

ಭಾರತ-ಪಾಕಿಸ್ತಾನ ಪಂದ್ಯಕ್ಕೆ ಗ್ರೀನ್ ಸಿಗ್ನಲ್

ದೆಹಲಿ: ಅಂತಾರಾಷ್ಟ್ರೀಯ ಸ್ಪರ್ಧೆಗಳಿಗೆ ಸಂಬಂಧಿಸಿದಂತೆ ಭಾರತದ ಹೊಸ ನೀತಿಯನ್ನು ಕ್ರೀಡಾ ಸಚಿವಾಲಯ ಗುರುವಾರ ಬಿಡುಗಡೆಗೊಳಿಸಿದ್ದು, ಈ ನೀತಿ ತಕ್ಷಣದಿಂದ ಜಾರಿಗೆ ಬಂದಿದೆ ಎಂದು ಮೂಲಗಳು ತಿಳಿಸಿವೆ. ಸಚಿವಾಲಯದ ಈ ನೀತಿಯ ಪ್ರಕಾರ, ಭಾರತ ಹಾಗೂ ಪಾಕಿಸ್ತಾನ ತಂಡಗಳು ಯಾವುದೇ ದ್ವಿಪಕ್ಷೀಯ ಸರಣಿಗಳಲ್ಲಿ ಆಡಲು ಅನುಮತಿ ಇರುವುದಿಲ್ಲ, ಆದರೆ ಐಸಿಸಿ, ಏಷ್ಯಾ ಅಥವಾ ಒಲಿಂಪಿಕ್ಸ್‌ನಂತಹ ಟೂರ್ನಿಗಳಲ್ಲಿ ಮಾತ್ರ ಈ ಎರಡೂ ದೇಶಗಳು ಮುಖಾಮುಖಿಯಾಗಬಹುದು ಎಂದು ತಿಳಿಸಿದೆ.

'ಏಷ್ಯಾ ಕಪ್ ಬಹುಪಕ್ಷೀಯ ಟೂರ್ನಿಯಾಗಿರುವ ಹಿನ್ನೆಲೆಯಲ್ಲಿ ನಾವು ಆ ಟೂರ್ನಿಯಲ್ಲಿ ಭಾರತ ತಂಡ ಆಡುವುದನ್ನು ತಡೆಯುವುದಿಲ್ಲ. ಆದರೆ ಪಾಕಿಸ್ತಾನ ತಂಡ ದ್ವಿಪಕ್ಷೀಯ ಸರಣಿಯನ್ನು ಆಡಲು ಭಾರತದ ನೆಲಕ್ಕೆ ಬರಲು ಅನುಮತಿಸುವುದಿಲ್ಲ, ನಾವು ಒಲಿಂಪಿಕ್ ಚಾರ್ಟರ್ ಅನ್ನು ಅನುಸರಿಸುವುದರಿಂದ ಬಹುಪಕ್ಷೀಯ ಟೂರ್ನಿಗಳಲ್ಲಿ ಆಡುವುದನ್ನು ನಾವು ಎಂದಿಗೂ ತಡೆಯುವುದಿಲ್ಲ' ಎಂದು ಕ್ರೀಡಾ ಸಚಿವಾಲಯ ಹೇಳಿದೆ.

ಈ ನಿಯಮದ ಪ್ರಕಾರ, ಭಾರತ ತಂಡಗಳು ಮತ್ತು ವೈಯಕ್ತಿಕ ಆಟಗಾರರು, ಪಾಕಿಸ್ತಾನದ ತಂಡಗಳು ಅಥವಾ ಆಟಗಾರರನ್ನು ಒಳಗೊಂಡ ಅಂತಾರಾಷ್ಟ್ರೀಯ ಟೂರ್ನಿಗಳಲ್ಲಿ ಭಾಗವಹಿಸಲಿದ್ದಾರೆ. ಅದೇ ರೀತಿ ಭಾರತ ಆಯೋಜಿಸುವ ಇಂತಹ ಬಹುಪಕ್ಷೀಯ ಟೂರ್ನಿಗಳಲ್ಲಿ ಪಾಕಿಸ್ತಾನಿ ಆಟಗಾರರು ಮತ್ತು ತಂಡಗಳು ಭಾಗವಹಿಸಲು ಅವಕಾಶವಿರುತ್ತದೆ ಎಂದು ತಿಳಿಸಿದೆ.

ಭಾರತ ಹಾಗೂ ಪಾಕಿಸ್ತಾನ ತಂಡಗಳು ಏಷ್ಯಾ ಕಪ್ ಕ್ರಿಕೆಟ್‌ನ ಲೀಗ್ ಪಂದ್ಯದಲ್ಲಿ ಸೆಪ್ಟೆಂಬರ್ 14ರಂದು ದುಬೈ ಇಂಟರ್‌ನ್ಯಾಷನಲ್ ಕ್ರೀಡಾಂಗಣದಲ್ಲಿ ಪರಸ್ಪರ ಕಾದಾಟ ನಡೆಸಲಿವೆ.

ಏಷ್ಯಾ ಕಪ್ ಟೂರ್ನಿಯ ಬಳಿಕ ಮುಂದಿನ ವರ್ಷ 2026ರ ಐಸಿಸಿ ಟಿ20 ವಿಶ್ವಕಪ್ ಟೂರ್ನಿಯಲ್ಲೂ ಈ ಎರಡೂ ತಂಡಗಳು ಮುಖಾಮುಖಿಯಾಗಲಿವೆ.

ಭಾರತದ ಲೀಗ್ ಪಂದ್ಯಗಳು

- **ಸೆ.10: ಭಾರತ-ಯುಎಇ**
- **ಸೆ.14: ಭಾರತ-ಪಾಕಿಸ್ತಾನ**
- **ಸೆ.19: ಭಾರತ-ಒಮಾನ್**

ಮುಂಬೈ ತಂಡಕ್ಕೆ ಹೊಸ ನಾಯಕನನ್ನು ಆರಿಸಲು ಅಜಿಂಕ್ಯಾ ರಹಾನೆ ಮನವಿ

ಮುಂಬೈ ತಂಡ ತ್ಯಜಿಸಿದ ರಹಾನೆ

ಮುಂಬಯಿ: ಭಾರತದ ಅನುಭವಿ ಬ್ಯಾಟ್ಸ್‌ಮನ್ ಅಜಿಂಕ್ಯ ರಹಾನೆ ಮುಂಬರುವ ದೇಶೀಯ ಋತುವಿಗೆ ಮುಂಚಿತವಾಗಿ ಮುಂಬೈ ತಂಡದ ನಾಯಕತ್ವದಿಂದ ಕೆಳಗಿಳಿಯುವುದಾಗಿ ಗುರುವಾರ ಘೋಷಿಸಿದ್ದಾರೆ. ಭವಿಷ್ಯದ ತಂಡಕ್ಕೆ ಹೊಸ ನಾಯಕನನ್ನು ರೂಪಿಸುವ ಅಗತ್ಯವನ್ನು ಉಲ್ಲೇಖಿಸಿ ರಹಾನೆ ಸಾಮಾಜಿಕ ಜಾಲತಾಣದಲ್ಲಿ ತಮ್ಮ ನಿರ್ಧಾರವನ್ನು ಬಹಿರಂಗಪಡಿಸಿದ್ದಾರೆ.

'ಮುಂಬೈ ತಂಡದೊಂದಿಗೆ ನಾಯಕತ್ವ ವಹಿಸಿಕೊಂಡು ಚಾಂಪಿಯನ್‌ಶಿಪ್‌ಗಳನ್ನು ಗೆದ್ದಿರುವುದು ಸಂಪೂರ್ಣ ಗೌರವ ಎನಿಸಿದೆ. ಹೊಸ ದೇಶೀಯ ಋತುವಿನಲ್ಲಿ, ಹೊಸ ನಾಯಕನನ್ನು ಸಿದ್ಧಪಡಿಸಲು ಇದು ಸರಿಯಾದ ಸಮಯ ಎಂದು ನಾನು ನಂಬುತ್ತೇನೆ. ಆದ್ದರಿಂದ ನಾನು ನಾಯಕತ್ವದ ಪಾತ್ರದಲ್ಲಿ ಮುಂದುವರಿಯದೆ ಇರಲು ನಿರ್ಧರಿಸಿದ್ದೇನೆ' ಎಂದು ರಹಾನೆ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ. 'ಒಬ್ಬ ಆಟಗಾರನಾಗಿ ನನ್ನ ಅತ್ಯುತ್ತಮ ಪ್ರದರ್ಶನ ನೀಡಲು ನಾನು ಸಂಪೂರ್ಣವಾಗಿ ಬದ್ಧನಾಗಿರುತ್ತೇನೆ ಮತ್ತು ಹೆಚ್ಚಿನ ಟ್ರೋಫಿಗಳನ್ನು ಗೆಲ್ಲಲು ಮುಂಬೈ ತಂಡದೊಂದಿಗೆ ನನ್ನ ಪ್ರಯಾಣವನ್ನು ಮುಂದುವರಿಸುತ್ತೇನೆ. ಈ ಋತುವಿನ ಟೂರ್ನಿಗಾಗಿ ಎದುರು ನೋಡುತ್ತಿದ್ದೇನೆ' ಎಂದೂ ಹೇಳಿದ್ದಾರೆ.

ರಹಾನೆ ನಾಯಕತ್ವದಲ್ಲಿ, ಮುಂಬೈ ತಂಡವು 2023-24ರ ಋತುವಿನಲ್ಲಿ ರಣಜಿ ಟ್ರೋಫಿಯನ್ನು ಗೆಲ್ಲುವ ಮೂಲಕ 7 ವರ್ಷಗಳ ಅಂತ್ಯವನ್ನು ಕೊನೆಗೊಳಿಸಿತ್ತು. ತಂಡವು 2024-25ರ ಇರಾನಿ ಟ್ರೋಫಿಯನ್ನು ಕೂಡ ಗೆದ್ದಿತ್ತು. ನಾಯಕತ್ವದಿಂದ ಕೆಳಗಿಳಿದರೂ, 37 ವರ್ಷದ ರಹಾನೆ ನಿವೃತ್ತಿ ಹೊಂದುವ ಉದ್ದೇಶವಿಲ್ಲ ಮತ್ತು ಎಲ್ಲಾ ಸ್ವರೂಪಗಳಲ್ಲಿ ಬ್ಯಾಟ್ಸ್ ಮನ್ ಆಗಿ ಮುಂಬೈಗೆ ಸೇವೆ ಸಲ್ಲಿಸುವುದನ್ನು ಮುಂದುವರಿಸುತ್ತೇನೆ ಎಂದು ಅವರೇ ಸ್ಪಷ್ಟಪಡಿಸಿದ್ದಾರೆ.

ಹುದ್ದೆಯಲ್ಲಿ ಜೂನ್‌ವರೆಗೆ ಮುಂದುವರಿಯುವ ಸಾಧ್ಯತೆ

ಅಗರ್ಕರ್ ಅವಧಿ ವಿಸ್ತರಣೆ?

ದೆಹಲಿ: ಭಾರತ ಕ್ರಿಕೆಟ್ ತಂಡದ ಆಯ್ಕೆ ಸಮಿತಿಯ ಅಧ್ಯಕ್ಷರಾಗಿರುವ ಅಜಿತ್ ಅಗರ್ಕರ್ ಅವರ ಅಧಿಕಾರಾವಧಿಯನ್ನು ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿಯು ಮುಂದಿನ ವರ್ಷ ಜೂನ್ ವರೆಗೆ ವಿಸ್ತರಿಸಿದೆ ಎಂದು ವರದಿಯಾಗಿದೆ. 2023ರಲ್ಲಿ ಅಜಿತ್ ಅಗರ್ಕರ್ 2 ವರ್ಷಗಳ ಅವಧಿಗೆ ನೇಮಕಗೊಂಡಿದ್ದರು. ಬಿಸಿಸಿಐ ಮೂಲಗಳ ಪ್ರಕಾರ, 2026ರ ತವರಿನ ಟಿ20 ವಿಶ್ವಕಪ್‌ಗೆ ಭಾರತ ತಂಡವನ್ನು ಆಯ್ಕೆ ಮಾಡುವವರೆಗೂ ಅಜಿತ್ ಅಗರ್ಕರ್ ತಮ್ಮ ಹುದ್ದೆಯಲ್ಲಿ ಮುಂದುವರಿಯಲಿದ್ದಾರೆ ಎನ್ನಲಾಗುತ್ತಿದೆ.

ಎರಡು ಐಸಿಸಿ ಟ್ರೋಫಿ ವಿಜೇತ (ಟಿ20 ವಿಶ್ವಕಪ್, ಚಾಂಪಿಯನ್ಸ್ ಟ್ರೋಫಿ) ತಂಡವನ್ನು ಮತ್ತು ರೋಹಿತ್ ಶರ್ಮ, ವಿರಾಟ್ ಕೊಹ್ಲಿ (ಟೆಸ್ಟ್, ಟಿ20), ಆರ್. ಅಶ್ವಿನ್ (ಅಂತಾರಾಷ್ಟ್ರೀಯ ಕ್ರಿಕೆಟ್) ನಿವೃತ್ತಿಯಂತಹ ದಿಟ್ಟ ನಿರ್ಧಾರ ಕೈಗೊಂಡರೂ, ಇತ್ತೀಚೆಗೆ ಇಂಗ್ಲೆಂಡ್ ಟೆಸ್ಟ್ ಸರಣಿಯ ತಂಡ ಆಯ್ಕೆಯಲ್ಲಿ ಅಗರ್ಕರ್ ಯೋಜನೆಗಳು ಸಫಲವಾಗಿದ್ದವು. ಈ ಎಲ್ಲಾ ಕಾರಣದಿಂದ ಅವರನ್ನು ಮತ್ತೆ ಎರಡು ವರ್ಷಗಳ ಅವಧಿಗೆ ಈ ಸ್ಥಾನದಲ್ಲಿ ಮುಂದುವರಿಸಲು ಬಿಸಿಸಿಐ ನಿರ್ಧರಿಸಿದೆ.

ಪ್ರಸ್ತುತ ಆಯ್ಕೆ ಸಮಿತಿಯಲ್ಲಿ ಎಸ್.ಎಸ್. ದಾಸ್, ಸುಬ್ರೋತೊ ಬ್ಯಾನರ್ಜಿ, ಅಜಯ್ ರಾತ್ರ ಮತ್ತು ಎಸ್. ಶರತ್ ಅವರೊಂದಿಗೆ ಅಜಿತ್ ಅಗರ್ಕರ್ ಕೂಡ ಇದ್ದಾರೆ. ಸೆಪ್ಟೆಂಬರ್‌ನಲ್ಲಿ ನಡೆಯಲಿರುವ ಬಿಸಿಸಿಐ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಸಮಿತಿಯಲ್ಲಿ ಕೆಲವು ಬದಲಾವಣೆಗಳನ್ನು ಪರಿಗಣಿಸುವ ಸಾಧ್ಯತೆ ಇದೆ. ಶರತ್ ಅವರನ್ನು ಬದಲಾಯಿಸುವ ಸಾಧ್ಯತೆಯಿದ್ದರೂ, ದಾಸ್ ಮತ್ತು ಬ್ಯಾನರ್ಜಿ ಅವರ ಸ್ಥಾನಗಳು ಬಗ್ಗೆ ಇನ್ನೂ ನಿರ್ಧಾರವಾಗಿಲ್ಲ. ಸಭೆಯ ನಂತರ ಆಯ್ಕೆ ಸಮಿತಿ ಖಾಲಿ ಉಳಿಯುವ ಹೊಸ ನೇಮಕಾತಿಗಳಿಗಾಗಿ ಮಂಡಳಿಯು ಅರ್ಜಿಗಳನ್ನು ಆಹ್ವಾನಿಸುವ ಸಾಧ್ಯತೆ ಇದೆ.

ಚೀನಾದಲ್ಲಿ ಸೆ. 5ರಿಂದ 14ರ ವರೆಗೆ ಪಂದ್ಯಾವಳಿ | ಸಲಿಮಾ ಟೆಟೆ ನಾಯಕಿ

ಏಷ್ಯಾ ಕಪ್: ಮಹಿಳಾ ಹಾಕಿ ತಂಡ ಪ್ರಕಟ

ದೆಹಲಿ: ಚೀನಾದ ಹಾಂಗ್‌ಝೌನಲ್ಲಿ ಸೆಪ್ಟೆಂಬರ್ 5ರಿಂದ 14ರ ವರೆಗೆ ನಡೆಯಲಿರುವ ಮಹಿಳಾ ಏಷ್ಯಾಕಪ್ ಟೂರ್ನಿಗೆ ಹಾಕಿ ಇಂಡಿಯಾ ಗುರುವಾರ 20 ಸದಸ್ಯರ ತಂಡವನ್ನು ಪ್ರಕಟಿಸಿದೆ. ಸಲಿಮಾ ಟೆಟೆ ಭಾರತವನ್ನು ಮುನ್ನಡೆಸಲಿದ್ದಾರೆ. ಭಾರತ ತಂಡವು ಬಿ ಗುಂಪಿನಲ್ಲಿದ್ದು, ಥಾಯ್ಲೆಂಡ್, ಜಪಾನ್ ಮತ್ತು ಸಿಂಗಾಪುರ ಸಹ ಇದೇ ಗುಂಪಿನಲ್ಲಿವೆ. ಆತಿಥೇಯ ಚೀನಾ, ಕೊರಿಯಾ, ಮಲೇಷ್ಯಾ ಮತ್ತು ಚೀನಾ ತೈಪೆ ತಂಡಗಳು ಎ ಗುಂಪಿನಲ್ಲಿವೆ. ಈ ಟೂರ್ನಿಯಲ್ಲಿ ಗೆದ್ದ ತಂಡವು 2026ರ ವಿಶ್ವಕಪ್‌ಗೆ ನೇರ ಅರ್ಹತೆ ಪಡೆಯಲಿದೆ. ಟೂರ್ನಿಯಲ್ಲಿ ಭಾರತ ತಂಡ ಥಾಯ್ಲೆಂಡ್ ತಂಡವನ್ನು ಎದುರಿಸುವ ಮೂಲಕ ತನ್ನ ಅಭಿಯಾನ ಆರಂಭಿಸಲಿದೆ. ಈ ಪಂದ್ಯ ಸೆಪ್ಟೆಂಬರ್ 5ರಂದು ನಡೆಯಲಿದೆ. ಸೆ. 6ರಂದು ಹಾಲಿ ಚಾಂಪಿಯನ್ ಜಪಾನ್ ತಂಡವನ್ನು ಎದುರಿಸಲಿದ್ದು, 8ರಂದು ಕೊನೆಯ ಲೀಗ್ ಪಂದ್ಯದಲ್ಲಿ ಸಿಂಗಾಪುರ ವಿರುದ್ಧ ಆಡಲಿದೆ. ಶಿಸ್ತುಬದ್ಧ ಆಟವಾಡಿ ಟ್ರೋಫಿ ಗೆದ್ದು 2026ರ ಎಫ್‌ಐಎಚ್ ಮಹಿಳಾ ವಿಶ್ವಕಪ್ ಹಾಕಿಗೆ ನೇರ ಅರ್ಹತೆ ಪಡೆಯುವುದು ನಮ್ಮ ಅಂತಿಮ ಗುರಿ ಎಂದು ನಾಯಕಿ ಸಲಿಮಾ ಟೆಟೆ ಹೇಳಿದರು.

ಭಾರತದ ಲೀಗ್ ಪಂದ್ಯಗಳು

- **ಸೆಪ್ಟೆಂಬರ್ 5: ಭಾರತ-ಥಾಯ್ಲೆಂಡ್**
- **ಸೆಪ್ಟೆಂಬರ್ 6: ಭಾರತ-ಜಪಾನ್**
- **ಸೆಪ್ಟೆಂಬರ್ 8: ಭಾರತ-ಸಿಂಗಾಪುರ**

ಮಹಿಳಾ ಏಕದಿನ ವಿಶ್ವಕಪ್ ಆಂಗ್ಲರ ತಂಡಕ್ಕೆ ನ್ಯಾಟ್ ಸಿವರ್ ಬ್ರಂಟ್ ನಾಯಕಿ

ಇಂಗ್ಲೆಂಡ್ ಮಹಿಳಾ ಕ್ರಿಕೆಟ್ ತಂಡ ಪ್ರಕಟ

ಲಂಡನ್: ಐಸಿಸಿ ಮಹಿಳಾ ಏಕದಿನ ವಿಶ್ವಕಪ್ ಸೆಪ್ಟೆಂಬರ್ 30ರಿಂದ ಪ್ರಾರಂಭವಾಗುತ್ತಿದ್ದು, ಇದೀಗ ಈ ಪಂದ್ಯಾವಳಿಗೆ ಇಂಗ್ಲೆಂಡ್ ತನ್ನ ತಂಡವನ್ನು ಪ್ರಕಟಿಸಿದೆ. ನ್ಯಾಟ್ ಸಿವರ್ ಬ್ರಂಟ್ ಇಂಗ್ಲೆಂಡ್ ತಂಡದ ನಾಯಕತ್ವ ವಹಿಸಲಿದ್ದಾರೆ. ಉಳಿದಂತೆ ತಂಡದಲ್ಲಿ ಅನುಭವಿ ಆಟಗಾರ್ತಿಯರ ಜೊತೆಗೆ, ಯುವ ಆಟಗಾರ್ತಿಯರೂ ಸಹ ಸೇರಿದ್ದಾರೆ.

ತಂಡದ ನಾಯಕಿ ನ್ಯಾಟ್ ಸಿವರ್ ಬ್ರಂಟ್ ಹೊರತುಪಡಿಸಿ, ಹೀದರ್ ನೈಟ್ ಮತ್ತು ಡ್ಯಾನಿ ವ್ಯಾಟ್-ಹಾಡ್ಜ್ ಬ್ಯಾಟಿಂಗ್‌ನಲ್ಲಿ ಪ್ರಮುಖ ಪಾತ್ರ ವಹಿಸಲಿದ್ದಾರೆ. ಸಾರಾ ಗ್ಲೆನ್ ಮತ್ತು ಸೋಫಿ ಎಕ್ಲೆಸ್ಟೋನ್ ಅವರನ್ನು ಸ್ಪಿನ್ನರ್‌ಗಳಾಗಿ ತಂಡಕ್ಕೆ ಆಯ್ಕೆ ಮಾಡಲಾಗಿದೆ. ಈ ಪಂದ್ಯಾವಳಿ ಭಾರತ ಮತ್ತು ಶ್ರೀಲಂಕಾದಲ್ಲಿ ನಡೆಯಲಿದ್ದು, ಈ ಇಬ್ಬರೂ ಆಟಗಾರ್ತಿಯರು ಇಲ್ಲಿ ಪ್ರಮುಖ ಪಾತ್ರ ವಹಿಸಲಿದ್ದಾರೆ. ತಂಡವು ಉತ್ತಮ ಆಲ್ ರೌಂಡರ್‌ಗಳನ್ನು ಸಹ ಹೊಂದಿದ್ದು, ಎಮ್ಮಾ ಜೋನ್ಸ್ ಅವರನ್ನು ವಿಕೆಟ್ ಕೀಪರ್ ಆಗಿ ಆಯ್ಕೆ ಮಾಡಲಾಗಿದೆ.

ಭಾರತ ಮತ್ತು ಇಂಗ್ಲೆಂಡ್ ತಂಡಗಳು ಮಾತ್ರ ಈ ಪಂದ್ಯಾವಳಿಗೆ ತಮ್ಮ ತಂಡವನ್ನು ಘೋಷಿಸಿವೆ. ಭಾರತ ಮತ್ತು ಇಂಗ್ಲೆಂಡ್ ನಡುವಿನ ಪಂದ್ಯವು ಅಕ್ಟೋಬರ್ 19ರಂದು ಇಂದೋರ್‌ನಲ್ಲಿ ನಡೆಯಲಿದೆ. ಈ ಪಂದ್ಯಾವಳಿಯ ಫೈನಲ್ ಪಂದ್ಯವು ನವೆಂಬರ್ 2ರಂದು ನಡೆಯಲಿದೆ.

ಇಂಗ್ಲೆಂಡ್ ತಂಡ: ನ್ಯಾಟ್ ಸಿವರ್ ಬ್ರಂಟ್ (ನಾಯಕಿ), ಎಂ ಆರ್ಲಾಟ್, ಟ್ಯಾಮಿ ಬ್ಯೂಮಾಂಟ್, ಲಾರೆನ್ ಬೆಲ್, ಆಲಿಸ್ ಕ್ಯಾಪ್ಸೆ, ಚಾರ್ಲಿ ಡೀನ್, ಸೋಫಿಯಾ ಡಂಕ್ಲಿ, ಸೋಫಿ ಎಕ್ಲೆಸ್ಟೋನ್, ಲಾರೆನ್ ಫೈಲರ್, ಸಾರಾ ಗ್ಲೆನ್, ಆಮಿ ಜೋನ್ಸ್ (ವಿಕೆಟ್ ಕೀಪರ್), ಹೀದರ್ ನೈಟ್, ಎಮ್ಮಾ ಲ್ಯಾಂಬ್, ಲಿನ್ಸೆ ಸ್ಮಿತ್ ಮತ್ತು ಡ್ಯಾನಿ ವ್ಯಾಟ್ ಹಾಡ್ಜ್.

ಚಿನ್ನಾರಿ ಮುತ್ತನ ರಿಪ್ಪನ್ ಅವತಾರ

ವಿಟಾಕೀಸ್

ವಿಜಯ್ ರಾಘವೇಂದ್ರ, ಹೊಸತನದ ಕಥೆಗಳನ್ನು ಆಯ್ದುಕೊಳ್ಳುತ್ತಿದ್ದಾರೆ. ಈ ಹಿಂದೆ ಮಾಲ್ಗುಡಿ ಡೇಸ್ ಚಿತ್ರದಲ್ಲಿ ಎಮೋಷನ್ ಆಗಿ ಗಮನಸೆಳೆದಿದ್ದ ಚಿನ್ನಾರಿ ಮುತ್ತ, ಈಗ ಅದೇ ತಂಡದೊಂದಿಗೆ ಸೇರಿ ರಿಪ್ಪನ್ ಸ್ವಾಮಿಯಾಗಿ ಅಬ್ಬರಿಸಲು ಸಿದ್ಧವಾಗಿದ್ದಾರೆ. ರಿಪ್ಪನ್ ಸ್ವಾಮಿ ಸಿನಿಮಾದ ಟ್ರೇಲರ್ ರಿಲೀಸ್ ಆಗಿದ್ದು ಭರ್ಜರಿ ಸದ್ದು ಮಾಡುತ್ತಿದೆ. ವಿಜಯ್ ಈ ಹಿಂದೆಂದೂ ಕಾಣದ ರಗಡ್ ಲುಕ್‌ನಲ್ಲಿ ಮಿಂಚಿದ್ದಾರೆ. ಕಾಡು ನಾಡಿನ ಧರ್ಮದ ನಡುವೆ ಸಿನಿಮಾದ ಕಥೆ ಸಾಗಲಿದೆ ಎಂಬ ಚಿಕ್ಕ ಸುಳಿವು ಟ್ರೇಲರ್ ನಲ್ಲಿದೆ. ಕೊಂದು ತಿನ್ನೋದು ಕಾಡಿನ ಧರ್ಮ, ಕೊಟ್ಟು ತಿನ್ನೋದು ನಾಡಿನ ಧರ್ಮ... ಕಾಡಲ್ಲಿ ಒಬ್ಬ ರಾಕ್ಷಸ, ಅವನಿಗೆ ಎರಡು ಕೊಂಬು ಒಂದ್ರಲ್ಲಿ, ಜಯ ಮತ್ತೊಂದ್ರಲ್ಲಿ ಪ್ರಾಣ. ಈ ಡೈಲಾಗ್‌ಗಳು ಗಮನಸೆಳೆಯುತ್ತವೆ.

ರಿಪ್ಪನ್ ಸ್ವಾಮಿ ಮಲೆನಾಡಿನ ಮಡಿಲಲ್ಲಿ ನಡೆಯುವ ಸ್ಟೋರಿಯಾಗಿದ್ದು, ಸಸ್ಪೆನ್ಸ್, ಥ್ರಿಲ್ಲರ್ ಜತೆಗೆ ಆ್ಯಕ್ಷನ್ ಕೂಡ ಬೆರೆತಿದೆ. ವಿಜಯ್ ರಾಘವೇಂದ್ರ ಹಿಂದೆಂದೂ ಕಾಣದ ಗೆಟಪ್‌ನಲ್ಲಿ ಮಿಂಚಿದ್ದಾರೆ. ಹಾಗಾಗಿ ರಿಪ್ಪನ್ ಸ್ವಾಮಿ ಚಿನ್ನಾರಿ ಮುತ್ತನ ಸಿನಿ ಜರ್ನಿಯಲ್ಲಿ ಸ್ಪೆಷಲ್ ಸಿನಿಮಾವಾಗಲಿದೆ. ಅಶ್ವಿನಿ ಚಂದ್ರಶೇಖರ್ ನಾಯಕಿಯಾಗಿ ಬಣ್ಣಹಚ್ಚಿದ್ದು, ಪ್ರಕಾಶ್ ತುಮ್ಮಿನಾಡು, ಕೃಷ್ಣಮೂರ್ತಿ ಕವತಾರ್ ಸೇರಿದಂತೆ ಹಲವರು ತಾರಾಗಣದಲ್ಲಿದ್ದಾರೆ. ಕಿಶೋರ್ ಮೂಡುಬಿದ್ರೆ ಚಿತ್ರದ ಕಥೆ ಬರೆದು ನಿರ್ದೇಶನ ಮಾಡಿದ್ದಾರೆ. ಪಂಚಾನನ ಬ್ಯಾನರ್‌ನಲ್ಲಿ ಸಿನಿಮಾ ನಿರ್ಮಾಣವಾಗಿದೆ.

> ಈ ಚಿತ್ರಕ್ಕಾಗಿ ನಿರ್ದೇಶಕರು ತುಂಬಾ ಶ್ರಮವಹಿಸಿದ್ದಾರೆ. ಸಿನಿಮಾದ ಮೇಲಿನ ಪ್ರೀತಿಯಿಂದ ಹಠತೊಟ್ಟು ಸಿನಿಮಾ ಮಾಡಿದ್ದಾರೆ. ಮಾಲ್ಗುಡಿ ಡೇಸ್ ಸಿನಿಮಾದಲ್ಲಿ ನಟಿಸುವ ಸಮಯದಲ್ಲಿಯೇ ವಿಭಿನ್ನ ಪಾತ್ರದಲ್ಲಿ ಕಾಣಿಸಿಕೊಳ್ಳಬೇಕು ಎಂಬ ಆಸೆಯಿತ್ತು. ಅದಕ್ಕೆ ತಕ್ಕಂತೆ ನಿರ್ದೇಶಕರು ಕಥೆ ಹೆಣೆದಿದ್ದಾರೆ, ಇದು ನೆಗೆಟಿವ್ ರೋಲ್‌ನಂತೆ ಕಾಣಿಸಬಹುದು. ಪರಿಸ್ಥಿತಿಗೆ ಸಿಲುಕಿ ನಾಯಕ ಯಾಕೆ ಹೀಗಾದ ಎನ್ನುವುದನ್ನು ಸಿನಿಮಾ ನೋಡಿಯೇ ತಿಳಿಯಬೇಕು.
>
> -ವಿಜಯ್ ರಾಘವೇಂದ್ರ, ನಟ

> ಮಾಲ್ಗುಡಿ ಡೇಸ್ ಸಿನಿಮಾ ಮಾಡುವಾಗ ಡಿಫರೆಂಟ್ ಸ್ಟೋರಿಯ ಚಿತ್ರ ಮಾಡಬೇಕು ಅಂದುಕೊಂಡಿದ್ದೆ. ಆಗ ಈ ಸಿನಿಮಾದ ಕಥೆ ಹೊಳೆಯಿತು. ಎಲ್ಲರಿಗೂ ಹಿಡಿಸುವ ಮತ್ತು ಕಾಡುವ ಕಥೆ ಇದಾಗಿದ್ದು, ಸಿನಿಮಾದ ಬಗ್ಗೆ ಅಪಾರ ನಿರೀಕ್ಷೆಯಿದೆ. ರಾಜ್ಯದ ಹಲವೆಡೆ ಪ್ರೀಮಿಯರ್ ಪ್ರದರ್ಶನ ಇಟ್ಟುಕೊಂಡಿದ್ದು ಎಲ್ಲಾ ಕಡೆ ಉತ್ತಮ ಸ್ಪಂದನೆ ವ್ಯಕ್ತವಾಗುತ್ತಿದೆ.
>
> -ಕಿಶೋರ್ ಮೂಡುಬಿದ್ರೆ, ನಿರ್ದೇಶಕ

ಕಂಠೀರವ ಸ್ಟುಡಿಯೊದಲ್ಲಿ 666 ಆಪರೇಷನ್

ಕವಲು ದಾರಿ, ಗೋಧಿಬಣ್ಣ ಸಾಧಾರಣ ಮೈಕಟ್ಟು ಸಿನಿಮಾಗಳನ್ನು ನಿರ್ದೇಶನ ಮಾಡಿ ಪ್ರಸಿದ್ಧಿ ಪಡೆದ ನಿರ್ದೇಶಕ ಹೇಮಂತ್.ಎಂ.ರಾವ್, 666 ಆಪರೇಷನ್ ಡ್ರೀಮ್ ಥಿಯೇಟರ್ ಚಿತ್ರವನ್ನು ನಿರ್ದೇಶಿಸುತ್ತಿದ್ದಾರೆ. ಈಗಾಗಲೇ ಈ ಚಿತ್ರ ಪೋಸ್ಟರ್‌ಗಳ ಮೂಲಕ ಕುತೂಹಲ ಹೆಚ್ಚಿಸಿದೆ. ಹ್ಯಾಟ್ರಿಕ್ ಹೀರೊ ಶಿವರಾಜ್ ಕುಮಾರ್ ಹಾಗೂ ಧನಂಜಯ್ ಚಿತ್ರದಲ್ಲಿ ಒಟ್ಟಿಗೆ ನಟಿಸುತ್ತಿದ್ದಾರೆ. ಹಾಗಾಗಿಯೇ ಈ ಸಿನಿಮಾ ಸಹಜವಾಗಿಯೇ ನಿರೀಕ್ಷೆ ಹೆಚ್ಚಿಸಿದೆ. ಸದ್ಯ ಚಿತ್ರತಂಡ ಶೂಟಿಂಗ್‌ನಲ್ಲಿ ಬ್ಯುಸಿಯಾಗಿದ್ದು, ಬೆಂಗಳೂರಿನ ಕಂಠೀರವ ಸ್ಟುಡಿಯೊದಲ್ಲಿ ಅದ್ಧೂರಿ ಸೆಟ್ ಹಾಕಿ ಚಿತ್ರೀಕರಣ ನಡೆಸುತ್ತಿದೆ. ಶಿವಣ್ಣ ಹಾಗೂ ಧನಂಜಯ್ ಇಬ್ಬರು ಶೂಟಿಂಗ್‌ನಲ್ಲಿ ಭಾಗಿಯಾಗಿದ್ದಾರೆ.

ಡಾಲಿ ಹೊಸ ಲುಕ್: 666 ಆಪರೇಷನ್ ಡ್ರೀಮ್ ಥಿಯೇಟರ್ ಶೂಟಿಂಗ್ ಭರದಿಂದ ಸಾಗುತ್ತಿದೆ. ಈ ನಡುವೆ ಚಿತ್ರತಂಡ ಹೊಸ ಪೋಸ್ಟರ್ ಬಿಡುಗಡೆ ಮಾಡಿದೆ. ಧನಂಜಯ್ ಹುಟ್ಟುಹಬ್ಬದ ವಿಶೇಷವಾಗಿ 666 ಆಪರೇಷನ್ ಡ್ರೀಮ್ ಥಿಯೇಟರ್ ಹೊಸ ಲುಕ್ ಬಿಡುಗಡೆ ಮಾಡಲಾಗಿದೆ. ರೆಟ್ರೋ ಗೆಟಪ್‌ನಲ್ಲಿ ಧನಂಜಯ್ ಕಾಣಿಸಿಕೊಂಡಿದ್ದು, ಕೈಯಲ್ಲಿ ಗನ್ ಹಿಡಿದು ಕಾರಿನಲ್ಲಿ ಕನಸು ಕಾಣುತ್ತಾ ಸಖತ್ ಸ್ಟೈಲಿಶ್ ಆಗಿ ಕಂಗೊಳಿಸಿದ್ದಾರೆ. ಸಿನಿಮಾದ ಕಥೆ ರೆಟ್ರೋ ಲುಕ್‌ನಲ್ಲಿ ಸಾಗಲಿದ್ದು, ಹೇಮಂತ್ ರಾವ್ ಇದನ್ನು ತೆರೆಯಲ್ಲಿ ಅದ್ಧೂರಿಯಾಗಿ ಕಟ್ಟಿಕೊಡಲಿದ್ದಾರೆ. ವೈಶಾಕ್ ಫಿಲಂಸ್ ಬ್ಯಾನರ್‌ನಲ್ಲಿ ವೈಶಾಕ್.ಜೆ.ಗೌಡ ಚಿತ್ರ ನಿರ್ಮಾಣ ಮಾಡುತ್ತಿದ್ದಾರೆ. ಚರಣ್ ರಾಜ್ ಸಂಗೀತ ನಿರ್ದೇಶನ, ಅದ್ವೈತ ಗುರುಮೂರ್ತಿ ಛಾಯಾಗ್ರಹಣ ಈ ಸಿನಿಮಾಗಿದೆ.

ಭಾನುವಾರ ಡೆವಿಲ್ ಸಾಂಗ್

ನಟ ದರ್ಶನ್, ಡೆವಿಲ್ ಸಿನಿಮಾದಲ್ಲಿ ನಟಿಸುತ್ತಿದ್ದರು. ಈ ಸಿನಿಮಾದ ಬಹುತೇಕ ಶೂಟಿಂಗ್ ಮುಕ್ತಾಯವಾಗಿತ್ತು, ಆಗಸ್ಟ್ 15ರಂದು ಚಿತ್ರದ ಇದ್ರೇ ನೆಮ್ದಿಯಾಗಿ ಇರ್ಬೇಕು.. ಎಂಬ ಹಾಡು ಬಿಡುಗಡೆಯಾಗಲಿತ್ತು. ಅಷ್ಟರಲ್ಲೇ ದರ್ಶನ್, ರೇಣುಕಾಸ್ವಾಮಿ ಕೊಲೆ ಆರೋಪದಲ್ಲಿ ಮತ್ತೆ ಜೈಲು ಸೇರಿದ್ದರು. ಇದರಿಂದ ಅವರ

ನೆಮ್ಮದಿಯೇ ಹಾಳಿಗಿದ್ದು, ಹಾಡಿನ ಬಿಡುಗಡೆಯನ್ನು ಮುಂದೂಡಲಾಗಿತ್ತು.

ಈಗ ಹಾಡಿನ ಬಿಡುಗಡೆ ದಿನಾಂಖ ನಿಗಧಿಯಾಗಿದ್ದು, ಭಾನುವಾರ ಬೆಳಗ್ಗೆ ಹತ್ತು ಗಂಟೆ ಐದು ನಿಮಿಷಕ್ಕೆ ಈ ಹಾಡು ರಿಲೀಸ್ ಆಗಲಿದೆ. ಈ ಬಗ್ಗೆ ದರ್ಶನ್ ಪತ್ನಿ ವಿಜಯಲಕ್ಷ್ಮಿ ಸೋಷಿಯಲ್ ಮೀಡಿಯಾದಲ್ಲಿ ಹಂಚಿಕೊಂಡಿದ್ದಾರೆ. ಪ್ರಕಾಶ್ ವೀರ್ ನಿರ್ದೇಶನದಲ್ಲಿ ಡೆವಿಲ್ ಮೂಡಿಬರುತ್ತಿದ್ದು, ಚಿತ್ರದ ಹಾಡುಗಳಿಗೆ ಅಜನೀಶ್ ಲೋಕನಾಥ್ ಸಂಗೀತ ಸಂಯೋಜಿಸಿದ್ದಾರೆ. ಡೆವಿಲ್ ಈ ವರ್ಷಾಂತ್ಯಕ್ಕೆ ರಿಲೀಸ್ ಆಗುವ ನಿರೀಕ್ಷೆ ಇದೆ.